TIGHT BINDING BOOK

brown book

THE BOOK WAS DRENCHED


TEXT LITE WITHIN THE BOOK ONLY

UNIVERSAL
LIBRARY
OU_198391
UNIVERSAL
LIBRARY

ಶಾ ಗ್ರಂ ಥ ಮಾ ಲಾ

ಸಂಕಲನ

ಸಬ್ಬಲೋಧನಾ ಪುಸ್ತಕ ಭಂಡಾರ
ಬೆಂಗಳೂರು ನಗರ



"ಸರಸ್ವತಿ" ಯಿಂದ ಆರಿಸಿದುದು

ಪ್ರಕಾಶಕರು
ಶಾರದಾ ಗ್ರಂಥಮಾಲಾ,
ಚಾಮರಾಜಪೇಟೆ, ಬೆಂಗಳೂರು ಸಿಟಿ.



ಬೆಲೆ ಆಣೆ ೦—೮—೦

ಶಾರದಾ ಗ್ರಂಥಮಾಲಾ

ಪ್ರಿಯಂವದೆ (ಸಾಮಾಜಿಕ ನಾಟಕ)	೦-
ಇಂದಿರೆ (ಕಾದಂಬರಿ)	೦-೧
ಹಿಂದೂ ಭಾಗ್ಯೋದರ (ಮಕ್ಕಳ ನಾಟಕ)	೦-
ಸ್ನೇಹಲತೆ (ಸಾಮಾಜಿಕ ನಾಟಕ)	೦-೧
ನಿರ್ಮಲೆ (ಕಾದಂಬರಿ)	೦-
ಸತಿ ಪದ್ಮಿನಿ (ಐತಿಹಾಸಿಕ ನಾಟಕ)	೧-
ಷಾಜಹಾನ್ ,,	೦-೧
ಬ್ಯಾರಿಷ್ಟರ್ ರಾಮಚಂದ್ರನ್ (ಸಾಮಾಜಿಕ ಪ್ರಹಸನ)	೦-
ಸಂಕಲನ	೦-
ರಣಕೇಸರಿ (ಅಚ್ಚಿನಲ್ಲಿದೆ)	

ಓಂ

ಸರಸ್ವತಿ

ಂಪುಟ ೫ } ಕ್ರೋಧನ ವರ್ಷ—ವೈಶಾಖ ಮಾಸ { ಸಂಚಿಕೆ ೧

ಸ್ವಿಷಯ

ತನಗೊದಗಿದ್ದ ನಾನಾವಿಧವಾದ ತೊಡರುಗಳನ್ನು ಬಿಡಿಸಿಕೊಂಡು ುದಾರಚಿತ್ತವುಳ್ಳ ಸೋದರಸೋದರಿಯರ ಪೋಷಕತ್ವದ ಪರಪೂರ್ಣಯು ಂದ "ಸರಸ್ವತಿ"ಯು ತನ್ನ ಸೋದರವೃಂದದ ಸೇವೆಗೈಯಲು ಕ್ರೋಧನ ವರ್ಷದಿಂದ ಸೋದರಸೋದರಿಯರಿಗೆ ನೂತನ ವರ್ಷಾಶೀರ್ವಾದವನ್ನು ೀರುತ್ತ ಮತ್ತೆ ಹೊರಟಿರುವಳು. ದೇಶಬಾಂಧವರೂ ಕರ್ನಾಟಕಾಭಿ ಮಾನಿಗಳೂ ದೇಶಭೂಷಾಧುರಂದರರೂ ತನಗೆ ಬಜೆಬೆಣ್ಣೆಯನ್ನಿತ್ತು ರಕ್ಷಿಸಬೇಕೆಂದು ಪುತ್ರನಿರ್ವಿಶೇಷವಾತ್ಸಲ್ಯದಿಂದ ಪ್ರಾರ್ಥಿಸುವಳು.

ಈ ಕ್ರೋಧನವರ್ಷವು ಸಮಸ್ತ ಪ್ರಜಾಕೋಟಿಗೂ ಸರಸ್ವತಿಯ
ಪೋಷಕರಿಗೂ ಲೇಖಕರಿಗೂ ಚಂದಾದಾರರಿಗೂ
ಸಕಲ ಸನ್ಮಂಗಳವನ್ನುಂಟುಮಾಡಲಿ.
ಓಂ ಶಾಂತಿಶ್ಶಾಂತಿಶ್ಶಾಂತಿಃ.

ಹೊಸವರುಷ

ದಿವಸಗಳಮೇಲೆ ದಿವಸಗಳೂ, ವಾರಗಳಮೇಲೆ ವಾರಗಳೂ, ಮಾಸಗಳಮೇಲೆ ಮಾಸಗಳೂ, ಉರುಳಿ ಹೋಗುತ್ತಲಿವೆ. ಹೀಗೆ ಎಷ್ಟೋ ದಿನಗಳು ಹೋಗಿರುತ್ತವೆ. ಮುಂದೆ ಎಷ್ಟೋ ಅಸಂಖ್ಯಾತವಾದ ದಿನಗಳು ಹೋಗಲು ಸಿದ್ಧವಿರುತ್ತವೆ. ಹೋದವೇಳೆಯು ಬೇರೆ ಹಿಂತಿರುಗಿ ಬರುವಂತಿಲ್ಲ; ಅಥವಾ ಮುಂದೆಬರುವ ವೇಳೆಯನ್ನು ತಡೆದು ನಿಲ್ಲಿಸುವಂತಿಲ್ಲ. ಭಗವಂತನ ಅಗಾಧವಾದ ಲೀಲೆಯ ಪ್ರಭಾವವಿದು ! ಇರಲಿ.

ಈ ಚಿಕ್ಕಲೇಖನದ ಉದ್ದೇಶವೇನೆಂದರೆ, ನಮ್ಮ ಕನ್ನಡದ ಬಂಧುಗಳೆದುರಿಗೆ, ಹೊಸವರುಷದ ಮಹತ್ವವನ್ನು ಸಂಕ್ಷೇಪವಾಗಿ ಇರಿಸಿ ಹೊಸವರುಷದ ಅಭಿನಂದನಗಳನ್ನರ್ಪಿಸುವದಾಗಿರುತ್ತದೆ. "ಹೊಸವರುಷದ ಮಹತ್ವವೆಂದರೇನು ?" ಎಂಬ ಪ್ರಶ್ನೆಯು ನಮ್ಮ ವಾಚಕವೃಂದದಿಂದ ಹೊರಡಬಹುದು. ಇದರ ಅರ್ಥವನ್ನು ವಾಚಕರೇ ಊಹಿಸಲಿ.

ನಮ್ಮ ಪ್ರಾಜ್ಞೇನ ಕನ್ನಡಿಗರು ಕೂಡ ಎಷ್ಟೋ ಹೊಸವರುಷಗಳನ್ನು ನಮ್ಮಂತೆ ಬರಮಾಡಿಕೊಂಡರು. ಈಗ ನಾವುಗಳು ಕೂಡ ಬರಮಾಡಿಕೊಳ್ಳುತ್ತಲಿರುವೆವು. ಆದರೆ, ನಮಗೂ ಅವರಿಗೂ ಇಷ್ಟೇ ವ್ಯತ್ಯಾಸವಿರುವದು.

ಅವರು ಹೊಸವರುಷಗಳನ್ನು ಬರಮಾಡಿಕೊಂಡಂತೆ, ಹೊಸ ಉತ್ಸಾಹದಿಂದಲೂ, ಹೊಸ ಹುರುಪಿನಿಂದಲೂ, ಹೊಸ ಹೊಸ ಮಹಾಕಾರ್ಯಗಳನ್ನು ಪ್ರಾರಂಭಿಸಿ ಪ್ರಪಂಚದಲ್ಲಿ ಕರ್ನಾಟಕವೆಂಬದೊಂದು ಪ್ರದೇಶವು ಇರುವದೆಂಬುದನ್ನು ಇಡೀಜನಾಂಗಕ್ಕೆಲ್ಲ ಪ್ರಕಟಿಸಿದರು. ಇದಕ್ಕೆ ಸಾಕ್ಷಿಯಾಗಿ, ಕರ್ನಾಟಕದಲ್ಲಿಯು ವಿಲಕ್ಷಣವಾದ ಕಟ್ಟಡಗಳೂ, ಅಸಮಾನವಾದ ಗ್ರಂಥಗಳೂ ನಿಂತಿರುತ್ತವೆ. ನಮ್ಮ ಪ್ರಾಜ್ಞೇನ ಕನ್ನಡಿಗರು, ಪ್ರಗತಿಯಮಾರ್ಗದಲ್ಲಿ ಹೇಗೆ ಕ್ಷಣೇ ಕ್ಷಣೇ ಪ್ರವರ್ಧಮಾನರಾದರೆಂಬುದನ್ನು ಸ್ವಲ್ಪ ವಿಚಾರದಲ್ಲಿ ತಂದರೆ, ಈಗಿನ ಕನ್ನಡಿಗನು ತಲೆ

ಯನ್ನು ತಗ್ಗಿಸಿ, ಮುಖವನ್ನು ಮುಚ್ಚಿಕೊಳ್ಳದೆ ಇರಲಾರನು. ಬಂದು ವೇಳೆ, ಹೇಗೋ ಒಂದುಬಗೆಯಿಂದ ಕೆಲವು ಪ್ರಾಜ್ಞೇಸಕನ್ನಡಿಗರು ಬಂದು, ಈಗಿನ ಈ ಕನ್ನಡನಾಡನ್ನು ನೋಡಿದರೆ ಅವರು ಇದು ಕೆಲವು ಕಾಲದಕೆಳಗೆ ತಾವು ನಿವಸಿಸಿ ನಿರ್ಮಿಸಿದ ಕರ್ನಾಟಕವೆಂದು ಎಂದಿಗೂ ಗುರ್ತಿಸಲಾರರೆಂದು ಉಲ್ಲೇಖಿಸಿದರೆ ಅತಿಶಯೋಕ್ತಿಯಾಗಲಾರದು. ಅವರು "ಅಯ್ಯಾ! ನಮ್ಮ ಕರ್ನಾಟಕವೆಲ್ಲಿ" ? ಎಂದು ಪ್ರಶ್ನಿಸಿದರೆ, ಆಗ ನಾವು ಏನೆಂದು ಉತ್ತರವನ್ನು ಕೊಡಬೇಕು ? ಆಗಿನ ಧನವೆಲ್ಲಿ ! ಆಗಿನ ಧೈರ್ಯವೆಲ್ಲಿ ! ಆಗಿನ ಸಾಹಸವೆಲ್ಲಿ ! ಆಗಿನ ಸಹಿಷ್ಣುತೆಯೆಲ್ಲಿ ! ಆಗಿನ ಆ ಸ್ವಾಭಿಮಾನ, ಕರ್ತವ್ಯದಕ್ಷತೆಗಳೀಗೆಲ್ಲಿ ! ಇವುಗಳೆಲ್ಲವನ್ನೂ ನಾವು ತೋರಿಸದಿದ್ದರೆ ಅವರು ಇದು ತಮ್ಮ ಕರ್ನಾಟಕವೆಂದು ಹೇಗೆ ನಂಬುವರು ? ನಾವು ತಮ್ಮ ಸಹೋದರರೆಂದು ಹೇಗೆ ಒಪ್ಪುವರು ?

ಆಗಿನವರ ಆ ಹೊಸ ವರುಷಗಳಿಗೂ, ಈಗಿರುವವರಾದ ನಮ್ಮ ಈ ಹೊಸವರುಷಗಳಿಗೂ ಇದೇ ವ್ಯತ್ಯಾಸ. ಅವರು ನವೀನ ವರ್ಷಗಳು ಬಂದಂತೆಲ್ಲ ಪ್ರವರ್ಧಮಾನರಾದರು. ನಾವು ನಮ್ಮ ಹೊಸ ವರುಷಗಳು ಬಂದಂತೆಲ್ಲ, ಹೊಸ ಹೊಸ ನಾಗರೀಕತೆಗೆ ಮರುಳಾಗಿ, ಹೊಸ ಹೊಸ ಬಗೆಯಿಂದ ಕ್ಷೀಣರಾಗಹತ್ತಿದೆವು. ಇದರಿಂದ ಸತ್ಯಹಾನಿ, ಕೊನೆಗೆ ಮಾನಹಾನಿಯೂಕೂಡ ಉಂಟಾದೀತು. ಇನ್ನಾದರೂ ನಮ್ಮ ಕನ್ನಡಿಗರು ಕಣ್ದೆರೆದು, ತಮ್ಮ ಆದ್ಯಂತಕರ್ತವ್ಯಗಳನ್ನರಿತು, ಹೊಸ ವರುಷವನ್ನು ಯೋಗ್ಯರೀತಿಯಿಂದ ಬರಮಾಡಿಕೊಳ್ಳಲರೇನು ? ಯುಗಾದಿಯ ಹಬ್ಬದ ಮೂಲತತ್ವವಾದರೂ ಇದೇ ಇರುವುದು.

ಇದರಿಂದ ಆಧುನಿಕ ಕನ್ನಡಿಗರಲ್ಲಿ ಪ್ರಾಜ್ಞೇನ ಕನ್ನಡಿಗರಲ್ಲಿ ನೆಲೆಸಿದ್ದ ಸುಗುಣಗಳಿಲ್ಲವೇ ಇಲ್ಲವೆಂದು ನಾವು ಅಭಿಪ್ರಾಯಪಟ್ಟಂತಾಗುವುದಿಲ್ಲ; ಆದರೆ, ಅಂಥವರು ಅತಿವಿರಳ. ಅಲ್ಪಸ್ವಲ್ಪವಿದ್ದವರೂಕೂಡ ಕೈ ಮುಚ್ಚಿಕೊಂಡು ಎಲ್ಲೋ ಮೂಲೆಯಲ್ಲಿ ಕುಳಿತಿರುವರೆಂದರೆ ತಪ್ಪಾಗಲಿಕ್ಕಿಲ್ಲ. ಅವರೆಲ್ಲರೂ ಮನಸ್ಸುಮಾಡಿದರೆ ಕರ್ನಾಟಕದ ಗತವೈಭವವು ಪುನುರುದ್ಧಾರವಾಗುವದೆಂದು ಧಾರಾಳವಾಗಿ ಹೇಳಬಹುದು. ಈ ಸಂದರ್ಭದಲ್ಲಿ ಥಾಮಸ್ ಗ್ರೇ ಎಂಬ ಪಾಶ್ಚಾತ್ಯಕವಿಯ ಉದ್ಗಾರ

"Full many a gem, of purest ray serene,
The dark unfathomed caves of ocean bear:
Full many a flower is born to blush unseen,
And waste its sweetness on the desert air."

ಇವೆಲ್ಲಕ್ಕೂನೂ ನಾವು ಮೊದಲು ಲೇಖಾರಂಭದಲ್ಲಿ ಹೊಸ ವರುಷದ ಮಹತ್ವವೆಂದು ಹೇಳಿದೆವು. ಈ ವಿಷಯಗಳೆಲ್ಲವನ್ನೂ ಗಮನಿಸಿ, ಚೆನ್ನಾಗಿ ಮನನಮಾಡಿಕೊಂಡು, ಈಗ ಬಂದಿರುವ ಹೊಸ ವರುಷವನ್ನು ಬರಮಾಡಿಕೊಂಡರೆ ಹೊಸ ವರುಷದ ಮಹತ್ವವನ್ನು ಅರಿತಂತಾಗುವುದು.

ಇದೇಸಂದರ್ಭದಲ್ಲಿ ಈ ಪತ್ರಿಕಾಕರ್ತರಾದ ಶ್ರೀಮತಿ ಕಲ್ಯಾಣಮ್ಮನವರನ್ನು ಮನಃಪೂರ್ವಕವಾಗಿ ಅಭಿನಂದಿಸದೆ ನಾವೆಂದಿಗೂ ಇರಲಾರೆವು. ಯಾಕಂದರೆ ಆವರು ಈಗ ನಾಲ್ಕಾರು ವರುಷಗಳ ಹಿಂದೆಯೇ ಹೊಸ ವರುಷದ ಮಹತ್ವವನ್ನರಿತು, ತಮ್ಮ ಆದ್ಯಂತ ಕರ್ತವ್ಯವನ್ನು ಲಕ್ಷ್ಯಕ್ಕೆತಂದು, ಭಗಿನೀಮಂಡಲದ ಸೇವೆಗಾಗಿಯೇ ಈ ಉತ್ತಮ ಮನೋಹರ ಮತ್ತು ನೀತಿದಾಯಕವಾದ "ಸರಸ್ವತಿ" ಮಾಸಿಕವನ್ನು ಹೊರಡಿಸಿ ಅತಿಕಷ್ಟದಿಂದ ಇದನ್ನು ನಡಿಸುತ್ತಲಿರುವರು. ಆದುದರಿಂದ ಕರ್ನಾಟಕದ ಬಂಧು ಭಗಿನಿಯರೆಲ್ಲರೂ ಇವರಿಗೆ ಕೃತಜ್ಞರಾಗಿರಬೇಕಲ್ಲದೆ, ಇವರ ಈ ಕಾರ್ಯಕ್ಕೆ ಶಕ್ತಿಯಿಂದಾರಿ ಸಹಾಯಮಾಡತಕ್ಕುದೆಂದು ನಮ್ಮ ಅನುಗ್ರಹ ಪೂರ್ವಕವಾದ ವಿನಂತಿ ಇರುವುದು. ಇನ್ನು ಈ ಸರಸ್ವತಿಯ ಸರ್ವ ವಾಚಕ ಮತ್ತು ಲೇಖಕವೃಂದಕ್ಕೂ ಪೋಷಕ ಮತ್ತು ಸಹಾಯಕ ವೃಂದಕ್ಕೂ ಹೊಸವರುಷದ ಅಭಿನಂದನಗಳನ್ನರ್ಪಿಸಿ ಈ ಪುಟ್ಟ ಲೇಖನವನ್ನು ಮುಗಿಸುವೆವು. ಪತ್ರಿಕೆಗೂ, ಪತ್ರಿಕಾಕರ್ತರಿಗೂ ಆಯುರಾರೋಗ್ಯವನ್ನಿತ್ತು ಪರಮಾತ್ಮನು ಕಾಪಾಡಲಿ!

ಕನ್ನಡದ ನಾಡಿನಲಿ । ಕನ್ನಡಿಯ ಪೊಲ್ವವೀ ।
ಮುನ್ನಾದಸರಸ್ವತಿಯಪತ್ರಿಕೆಯನು ॥
ಸನ್ನುತಾಂಗನೆನೀನು । ಮನ್ನಿಸುತಲನವರತ ।
ಉನ್ನತಿಯಪೊಂದಲೊರವಿತ್ತು ಕಾಯ್ವೈ ॥

ಭಕ್ತ ಸುಮಾಂಜಲಿ.

Offerings of a Bhaktha.

ಭಾಗ—೧.

॥ ೞ ॥

ಹೇ ! ಮನಸೇ ! ನೀನು ಕೊಂಚಕಾಲದವಾದರೂ ದೇವ ಧ್ಯಾನ ದಲ್ಲಿ ಅನುರಕ್ತನಾಗು. ನಮಗೆ ಇಷ್ಟವಾಗುವ, ಅದು ಉಂಟಾದ ಹಾಗೆಲ್ಲಾ ಇಲ್ಲದ ಸಲ್ಲದ ವಿಷಯಗಳನ್ನು ಆಲೋಚಿಸಿ, ಅವಕ್ಕೆ ಗಮನಕೊಟ್ಟು, ಅವುಗಳು ಅಂಕೆಯಿಲ್ಲದೆ ನಡೆಯುವಂತೆ ಮಾಡುತ್ತಿರುವೆ. ಇದರ ದೆಸೆ ಯಿಂದ ದಿನದ ಜಾವಗಳೆಲ್ಲಾ ವ್ಯರ್ಥವಾಗಿ ಕಳೆದು ಹೋಗುತ್ತಲಿದೆ. ಆ ಸರ್ವಲೋಕರಕ್ಷಕನೂ, ಸರ್ವಾಂತರ್ಯಾಮಿಯೂ, ಸರ್ವತಾ್ರಣಿಯೂ, ಪಾಪದಿಂದ ವಿಮುಕ್ತನಾಡುವ ಸಾಯುಜ್ಯವನ್ನೀಯುವನೂ, ಸರ್ವೇ ಶ್ವರನೂ ಆದ ಭಗವಂತನನ್ನು ಕೊಂಚಕಾಲವಾದರೂ, ದಿವಸಕ್ಕೆ ಒಂದು ಸಾರಿಯಾದರೂ ನೆನೆಸು.

ಹೇ, ಮಾಯೇ ! ಆಧುನಿಕರಲ್ಲಿ ನೀನು ಸೇರಿಕೊಂಡು ವಿವಿಧ ಕೃತ್ಯಗಳನ್ನು ಅನುಸರಿಸುವಂತೆ ಮಾಡುವೆ. ನೀನು ಪೂರ್ವರಲ್ಲಿ ಬಳ್ಳೀತನ ದಿಂದಿದ್ದು ಇನ್ನೋರ್ವರಲ್ಲಿ ದುರ್ಬುದ್ಧಿಯಿಂದ ಮೋಹ್ಯ ಪಾಪಮಾರ್ಗ ಗಳನ್ನು ತೋರಿಸುತ್ತೀಯಲ್ಲವೆ? ಸಾಯುವಕಾಲದಲ್ಲಿ ಜೀವವನ್ನು ತೆಗೆದು ಕೊಂಡು ಹೋಗುವಾಗ ಆ ಬಂಧನಗಳಿಂದ ಬಿಡಿಸಿಕೊಳ್ಳುವ ಯೋಚನೆ ಗಳು ನಿನಗೆ ಇವೆಯೇ ? ಈ ಪ್ರಪಂಚದವರಲ್ಲಿ ನೀನೂ ಐಕ್ಯವಾಗಿ ವಿಧವಿಧವಾಗಿ ನೈತಿಕ, ಧಾರ್ಮಿಕ ಸಾಮಾಜಿಕಾದಿ ವಿಷಯಗಳಲ್ಲಿ ತರತರ ನಾದ ಅಭಿಪಾ್ರಯಗಳು ನಿನ್ನಿಂದಲೇ ಅಲ್ಲವೆ ಹುಟ್ಟುಸಲ್ಪಟ್ಟುರುವುವು ? ನಿನ್ನ ರೂಪುಗಳೆರಡಾದ ಸುಮತಿ, ಕುಮತಿ ವಿಮರ್ಶೆಯುಸುಲಭಸಾಧ್ಯವೆ?

ಸಂಸಾರಸಾಗರದಲ್ಲಿ ಮುಳುಗಿ ಭವಬಂಧನದಿಂದ ಬಿಡಿಸುವ ಪರ ಮಾತ್ಮನನ್ನಾದರೂ ಕೊಂಚ ಧ್ಯಾನಿಸಲಾರೆಯಾ ? ಸತ್ಯವಾದೀ ಪ್ರಪಂಚ

ದಲ್ಲಿ ಹುಟ್ಟಿ ಅಸ್ಥಿರವಾದ ದೇಹಾಯುರಾರೋಗ್ಯ ಐಶ್ವರ್ಯಾದಿಗಳನ್ನು ಹೊಂದಿರುವಾಗ ಅವೆಲ್ಲವೂ ಈಶ್ವರದತ್ತವಾದುದೆಂದು ತಿಳಿದು ಸುಖ ಸಂತೋಷಗಳನ್ನು ಅನುಭವಿಸುತ್ತಿರುವಾಗ ದೇವರ ಧ್ಯಾನವನ್ನಾದರೂ ಮಾಡು! ಹೇ ಮನವೇ! ಪ್ರಪಂಚದ ನಶ್ವರವಾದ ಸೌಖ್ಯಗಳಿಗೆ ನೀನು ಗಮನಕೊಟ್ಟು ಮಾಯೆಗೆ ಬಳಗವಾಗಿ ಮೋಸಹೋಗಬೇಡ.

ತತ್ಸತ್.

॥ ೮ ॥

ಪ್ರಪಂಚದ ಸುಖವನ್ನು ಅನುಭವಿಸಿದವರೇ ಬಲ್ಲರು. ಜೇನು ತುಪ್ಪದ ಸವಿಯು ಅದನ್ನು ತಿಂದವರಿಗೇಗೊತ್ತು. ಧ್ಯಾನಮಾಡುವವರಿಗೆ ದೈವಭಕ್ತಿಯ ಮಧುರರಸದ ಸವಿಯು ಗೊತ್ತೇಹೊರತು ಉಳಿದವರಿಗೇನುಗೊತ್ತು ?

ಹೇ, ದೈವಭಕ್ತಿಯೇ! ನಿನ್ನಂಥಾ ಸುಗುಣಮಣಿಯು ಈ ಪ್ರಪಂಚದಲ್ಲಿ ಯಾರು ಇರುವರು ? ಬರೀ ನಾಮಸಂಕೀರ್ತನೆಯಿಂದೆಮಗೆ ಕೈವಲ್ಯವನ್ನೀಯುವೆ. ನಿನ್ನಿಂದ ಪ್ರಹ್ಲಾದ, ವಿದುರ, ರಾಮದಾಸ, ಕನಕದಾಸ, ಪುರಂದರದಾಸ, ಕಬೀರದಾಸ, ತುಕಾರಾಮ, ಏಕನಾಥ ಮೊದಲಾದವರು ಸುಗುಣಿಗಳಾದ ಭಕ್ತಾಗ್ರೇಸರರೆಂದು ಶ್ರೇಯಸ್ಸು ಹೊಂದಿ ಅಜರಾಮರವಾದ ಭಕ್ತಿಯಿಂದ ತಮ್ಮ ಜೀವಗಳನ್ನು ಪಾವನಮಾಡಲಿಲ್ಲವೆ ? ನೀನು ಅಧುನಿಕರಲ್ಲಿ ನೆಲೆಗೊಳ್ಳದೆ ಎಲ್ಲಿರುವಿ ? ಏಕೆ ? ಪ್ರಾಜ್ಞೇಸರಿಗೇಕೆ ಪಕ್ಷಪಾತವನ್ನು ತೋರಿಸಿ ನವೀನರನ್ನು ಬಿಟ್ಟಿರುವಿ ?

ವರ್ತಕರು ತಮ್ಮ ವಿಕ್ರಯ ಸಾಮಗ್ರಿಗಳನ್ನು ಸ್ಥಳದಿಂದ ಸ್ಥಳಗಳಿಗೆ ಸಾಗಿಸಲು ಬಹು ಕಷ್ಟಪಡುವಂತೆ ನಿನ್ನನ್ನು ನಮ್ಮ ದೇಹದೊಳಕ್ಕೆ ಸಾಗಿಸಲು ಕಷ್ಟಪಡಜೇಕಾಗಿಲ್ಲ. ಮತ್ತು ನಿನ್ನನ್ನು ಇತರರಿಗೆ ವಿಕ್ರಯಿಸೆಲೂ ಆಗದು. ಅವರು (ವರ್ತಕರು) ಬುದ್ಧಿವಂತಿಕೆಯಿಂದ ಧಾನ್ಯಾದಿಗಳನ್ನು ಕೊಂಡುಕೊಳ್ಳುವಾಗಲೂ, ಮಾರುವಾಗಲೂ, ಹೆಚ್ಚು ಲಾಭ ಸಂಪಾದಿಸಲು ಬತ್ತೊತ್ತಿ ಆಳೆಯುತ್ತಲೂ ಇಲ್ಲವೇ ಸೇರು ತಲೆಕಳಕಾಗಿ ಅಳೆದು ಮಾರುವಂತೆಯೂ ಮಾಡುವ ಹಾಗೆ ಆಗುವುದೇ ಇಲ್ಲ. ಅವಕ್ಕೆ ಸ್ಥುಂಕ! ನಿನಗೆ ಮಾತ್ರ ಬಿಂಕ! ಬೇಕಾದಷ್ಟು ಬೆಲೆ ಕೊಟ್ಟು ಕೊಳ್ಳ

ಜೇಕಾಗಿಲ್ಲ. ವ್ಯಾಪಾರಸಾಹುಗ್ರಿಗಳು ಹುಗ್ಗಿ ಕೆಟ್ಟು ಹುಳುತು ಹೋಗುವಹಾಗೆ ನೀನು ಅಂಥಾ ರೀತಿಯನ್ನು ಹೊಂದುವುದಿಲ್ಲ. ನಿನ್ನನ್ನು ಅತಿಸುಲಭದಿಂದ ಎಲ್ಲರೂ ಹೊಂದಬಲ್ಲರು. ಆದುದರಿಂದ ಸಕಲರಲ್ಲಿಯೂ ಪಕ್ಷಪಾತವನ್ನಿಡದೆ ನೆಲಸು ! ನೆಲಸು !!

ತತ್ಸತ್.

॥ ೩ ॥

"ಜ್ಞಾನವನ್ನು ಸಂಪಾದಿಸಿದ ಮನುಜನು ಹೆಚ್ಚು ಕಾಲ ಬದುಕಲೇಕೆ ? ಮಾನವನ್ನು ಬಿಟ್ಟು ಜೀವಿಸುವ ಮನುಷ್ಯನು ಇನ್ನೂ ಈ ಲೋಕದಲ್ಲೇಕೆ ಇರಬೇಕು ? ಮಾಡಬಾರದ ಕೆಲಸವನ್ನುಮಾಡಿ ಆಗಬಾರದ ಫಲವನ್ನು ಅನುಭವಿಸುತ್ತಿರುವ ಅನುಭವಿಸುವ ಮನುಷ್ಯನೇಕೆ ? ನೀತಿಮಾರ್ಗವನ್ನು ಬಿಟ್ಟು ಅಧಮಪಾಪಮಾರ್ಗಗಳನ್ನು ಅನುಸರಿಸುವವನು ಏಕೆ ? ಅತನಿಂದೇನುಫಲ ? ಹಾಸೂ ತಿನ್ನದೆ, ಉಡದೆ, ತೊಡದೆ ಇರುವ ಧನಧಾನ್ಯಗಳಿದ್ದೇನುಫಲ ? ಯಜಮಾನನ ಆಜ್ಞೆಯಂತೆ ನಡೆಯದಿಹ ಭಂಟನಿದ್ದೇನುಫಲ ? ಆಂತರ್ಯವಾದ ಪ್ರೀತಿಯಿಲ್ಲದೆ ಬರೀ ಬಣಪ್ರೀತಿಯನ್ನು ತೋರಿಸುತ್ತಾ, ಪತಿಯ ಮನಸ್ಸನ್ನು ತಿಳಿದು ಅದರಂತೆ ನಡೆಯದೆ ಬರೀ ಬಾಯಿವಿಧೇಯತೆಯನ್ನು ತೋರಿಸುತ್ತಿಹ ಸತಿಯೇಕೆ ?

ತನ್ನಿನೆಯಳನ್ನು ಪ್ರೀತಿಸದೆ ಅಕೆಗಿಂತಲೂ ಕೀಳಾದವಳಲ್ಲಿ ತನ್ನ ಪ್ರೀತಿಯನ್ನು ತೋರಿಸುತ್ತಿಹ ಗಂಡನಿದ್ದೇನುಫಲ ? ತನ್ನ ಪ್ರಾಣವನ್ನಾದರೂ ಒಪ್ಪಿಸಿ ನ್ಯಾಯಮಾರ್ಗವನ್ನನುಸರಿಸಲು ಪ್ರಯತ್ನಪಡದಿಹನು ಇದ್ದೇನುಫಲ ? ಸ್ವದೇಶಾಭಿಮಾನಿಯೂ, ಸ್ವಭಾಷಾಭಿಮಾನಿಯೂ ಅಲ್ಲದಿಹನಾದೇನು ಈ ಮಾತೃಭೂಮಿಗೆ ಫಲ ? ದೈವಭಕ್ತಿಯಿಂದ ದೇವರನ್ನು ಸಂಕೀರ್ತನೆಮಾಡದೆ ಇರುವವನಿದ್ದೇನುಫಲ ? ದೇವರನ್ನು ಮನಸ್ಸಿನಲ್ಲಿಯೂ ಧ್ಯಾನಿಸದೆ, ದೇವನಾಮಾವೃತವನ್ನು ಕುಡಿಯದೆ, ಕಾಯಾ ವಾಚಾ ಮಾನಸೇಂದ್ರಿಯಪೂರ್ವಕವಾಗಿ ನಮಸ್ಕರಿಸದಿರುವವನು ಏಕೆ ? ಮೂಢ ಭಕ್ತಿಯಿಂದ ತಮ್ಮ ದೇವರು ಹೆಚ್ಚು, ತಮ್ಮ ದೇವರು ಹೆಚ್ಚು ಎಂದು ವಿವಿಧವಾಗಿ ನಾಸ್ತಿಕರಂತೆ ತಮಗೆ ತೋರುತ್ತಿರುವ, ತೋರುವ ಅಭಿಪ್ರಾಯಗಳಿಗಾಗಿ ವಾದವಿವಾದಗಳೇಕೆ ?"

ದೃಢಭಕ್ತಿಯಿಂದ ಹೇ ಮನಸ್ಸೇ ! ಸಕಲೇಂದ್ರಿಯಗಳೇ ! ಧ್ಯಾನಿಸಿ ! ಧ್ಯಾನಿಸಿ ! ಪರಮಾತ್ಮನನ್ನು ಧ್ಯಾನಿಸಿ !!

ಹೇ ! ದೇವಾದಿದೇವ ! ಪಾವನಮೂರ್ತಿ ! ಸರ್ವೇಶ್ವರಾ ! ನಿನ್ನ ಮೇಲೆ ಸಕಲರೂ ಏಕೈಕಭಕ್ತಿಯನ್ನಿಡುವಂತೆ ಎಲ್ಲರಿಗೂ ದಯಪಾಲಿಸೈ ! ಎಲ್ಲರಿಗೂ ಅನುಗ್ರಹಿಸು ಅನುಗ್ರಹಿಸು ! ತತ್ಸತ್

ಪಾತಿವ್ರತ್ಯ

(ಮು॥ ಅನವಟ್ಟಿ ರಾಮರಾಯರಿಂದ.)

ಮರೆಯದಿರುಮಾನಿನಿ ! ವಿವೇಕವ |
ನೊರೆದೆಸತ್ಯದಮಾರ್ಗಮುಳಿಯದೆ |
ಮಿರುಪನಿನ್ನಯಹೃದಯದೊಳಡೆವಿನೇಕದೋಧೆಗಳ ||
ಧರದೆನಿನ್ನಂಗಕವುಕಾಂತಿಯ |
ಪರಪಿಸೌಂದರ್ಯವನುಪೆಚ್ಚಿಸಿ |
ಶರಜದಂದದಿಗೈಸಿಮನ್ನಣೆಯಿತ್ತುಮೆರೆಯಿಪುವ ॥ ೧ ॥

ಎಲೌ ಸ್ತ್ರೀಯೆ ! ಸತ್ಯದ ಮಾರ್ಗವನ್ನು ಬಿಟ್ಟು ನಡೆಯದೆ ಹೇಳುವ ವಿವೇಕಗಳನ್ನು ನಿನ್ನ ಮನಸ್ಸಿಗೆ ತಂದುಕೊಂಡುದಾದರೆ, ಅವು ಕಮಲ ಪುಷ್ಪದಂತೆ ನಿನ್ನ ದೇಹಕ್ಕೆ ಸೌಂದರ್ಯವನ್ನುಂಟುಮಾಡಿ, ಮರ್ಯಾದೆಯನ್ನು ತರುವುವು.

ನಿರುಪಮಾನಂದಕರಮೆನಿಪಾ |
ಸುರಧಿಯೆಂಬಾಯೌವನದೆನೀ |
ಮೆರೆಯುತಿರೆಮಾನವರದಿಟ್ಟಿಗಳರ್ಥಮೇನೆನುತೆ ||
ಧರದೊಳರಿಯೌನಿನ್ನ ಚಿತ್ತಕೆ |
ಮರುಳಮೂಡಿಸುತಿರುವಮೋಹಾ |
ಕರದವಮಾತಿಗೆಹೃದಯವಂನೀಡದಲೆಕಾಯುತಿರು ॥ ೨ ॥

ತಾ॥ ಆಹ್ಲಾದಕರವಾದ ವಸಂತಋತುವೆಂಬ ನಿನ್ನ ಯೌವನದಲ್ಲಿ ವಿರಾಜಿಸುತ್ತಿದ್ದಾಗ್ಗೆ, ಪುರುಷರ ದೃಷ್ಟಿಗಳು ನಿನ್ನ ಕಡೆಗೆಳಸಿದಾಗ್ಗೆ

ಅವುಗಳ ಅರ್ಥವೇನೆಂಬುದನ್ನು ತಿಳಿದುಕೊಂಡು, ಮನಸ್ಸಿಗೆ ಮರುಳ ವನ್ನು ಹುಟ್ಟಿಸುವ ಮೋಹಕರವಾದ ಮಾತುಗಳಿಗೆ ಎಡೆಗೊಡದೆ ನಿನ್ನ ಮನಸ್ಸನ್ನು ನಿನ್ನ ಸ್ವಾಧೀನದಲ್ಲಿಟ್ಟುಕೊ.

ಪುರುಷನಿಗೆನಿಜಗೆಳತಿಯಲ್ಲದೆ |
ವಿರಹದಾಸನದಾಸ್ಯಳಲ್ಲವು |
ನಿರುತವಲ್ಲಭಗೊದಗಿದಳಲನುನೀನಿವಾರಿಸುತ ||
ಮರುಳದಿಂಸರಸೋಕ್ತಿಯಾಡುತ |
ಹರಿಸಿಯಾತನಕೋಟಲೆಯನಾ |
ತುರದೊಳಿನಿಯಗೆಧರ್ಮವಾರ್ಗದಬೋಧೆಯೊರೆಯುತಿರು ||೩||

ತಾ|| ಅಬಲೆಯಾದ ನೀನು ಪುರುಷನಿಗೆ ಸಮಾನಳಾದ ಸ್ನೇಹಿತಳೇ ಹೊರತು ವಿರಹಪುರುಷನ ದಾಸ್ಯಳಲ್ಲವೆಂಬ ಮರ್ಮವನ್ನು ತಿಳಿದುಕೊಂಡ ನಿನ್ನ ಪತಿಗೊದಗಿದ ದುಃಖಗಳನ್ನು ಸರಸಮಾತುಗಳಿಂದ ಪರಿಹರಿಸುತ್ತಾ ಕಷ್ಟಗಳನ್ನು ದೂರಮಾಡುತ್ತಾ, ಧರ್ಮದ ತತ್ವವನ್ನು ಮನಸ್ಸಿಗೆ ಬರ ವಂತೆ ಸಮಯೋಚಿತವಾಗಿ ಮಾತಾಡುತ್ತಿರು.

ನಿಜಸತಿಯಳಾದವಳುಪತಿಯಂ |
ಭಜಿಸುತವನಂತನ್ನೊಲುಮಿಗೆ ಸ |
ಹಜತನದೊಳೇವಶ್ಯಸೈರಿಸಿತನ್ನಹೃದಯದೊಳು ||
ಅಜನುತಾಸರಸಿಜದೊಳಿಹಪರಿ |
ನಿಜನುಮತಿಯಿಂತೋರಿನಿರ್ಜರ |
ಕಜದವೊಲುಪತಿಯಿಷ್ಟವನೆಲ್ಲಸಲ್ಲಿಸುತ್ತಿಹಳು ||೪||

ತಾ|| ನಿಜಸತಿಯು ಪತಿಯನ್ನು ಭಜಿಸುತ್ತಾ, ಆತನನ್ನು ಕಮಲದಲ್ಲಿ ಬ್ರಹ್ಮನಿರುವಂತೆ, ಪ್ರೀತಿಗೆ ತನ್ನಂತೆ ಮಾಡಿ ಮಾಡಿಕೊಳ್ಳುತ್ತಾ, ಪತಿಯ ಮನೋಗತಗಳನ್ನು ಕಲ್ಪವೃಕ್ಷದಂತೆ ಸಲ್ಲಿಸುತ್ತಿರುವಳು.

ಗಮನದಲಿ ಹಂಸೆಯನು ವೋಲುತೆ |
ವಿಮಲಮಾನಸಳಾಗಿ ಪದಪಿನೊ |
ಳಿಮಿರೆವನಿಗರ್ವವನುತೋರುತೆ ಗೃಹದಕಾರ್ಯಗಳ ||

ಸಮುಯುವಾತನೆಯುತಲಿಳಕರೆಯುವ |
ರಮನೆಸಂತಾಪೋಗದಲೆಪ್ರ |
ವಿಮಲಸುಗುಣಕಿರೀಟವಾಂತುರೆಸಂತಮೆರೆಯುವಳು || ೫ ||

ತಾ|| ಹಂಸಪಕ್ಷಿಯಂತೆ ನಡೆಯುತ್ತಾ, ನಿರ್ಮಲ ಮನಸ್ಸಿನಲ್ಲಿ ಗರ್ವವನ್ನುಳಿದು, ಗೃಹಕೃತ್ಯದ ಕಾರ್ಯಗಳನ್ನು ಸಮಯವನ್ನರಿತು ಮಾಡುತ್ತಾ ಅನ್ಯರ ಮನೆಗೆ ಕರೆಯದೆ ಹೋಗದೆ ಸದ್ಗುಣವೆಂಬ ಕಿರೀಟವನ್ನು ಧರಿಸಿಕೊಂಡು ಮೆರೆಯುತ್ತಿರುವಳು.

ಪತಿಯಸುಗುಣಾವಳಿಯುಪಠಿಸುತೆ |
ಸತಿಗೆಪತಿಯೇ ದೈವವೆನ್ನುತೆ |
ಹಿತವಚನಸುಧೆಯನು ಪಾನವಗೈದುಸಖ್ಯವನು ||
ನತಕಬಿಡದಂತಿರುತತಿವಿಧೇ |
ಯತೆಯತೋರುತೆಸಾಹ್ಯವೀಯುತೆ |
ಚತುರಕಲೆಗಳನರಿದ ಸಾಧ್ವೀಮಣಿಯುಮಾನ್ಯಳಲೆ ||೬||

ತಾ|| ಸತಿಯು ಪತಿಯ ಸದ್ಗುಣಗಳನ್ನು ಪಠನೆ ಮಾಡುತ್ತಾ, ಆತನನ್ನೇ ದೇವರೆಂದು ತಿಳಿದು ಹಿತವಾದ ಮಾತುಗಳೆಂಬ ಅಮೃತವನ್ನು ಪಾನಮಾಡಿಸಬೇಕು. ಪತಿಯನ್ನುಳಿದಿರದೆ ವಿಧೇಯಳಾಗಿದ್ದುಕೊಂಡು ಆತನಿಗೆ ಸಹಾಯಮಾಡುತ್ತಾ ಸಂಸಾರದ ವಿಷಯಗಳನ್ನು ತಿಳಿದಿರುವಳೇ ಪತಿವ್ರತಾಶಿರೋಮಣಿ!

ಪತಿಯಳಲತಾಮರಸಿಸುತರಿಗೆ |
ಹಿತದೆಬುದ್ಧಿಯನೊರೆಯುತಂ ಗೃಹ |
ಕೃತ್ಯದಮರ್ಮವಾರೊಳುಸಿರದೆ ತನ್ನಿರುವಿಕೆಯನು ||
ಸುತರುಕ್ರೀಡನುಸರಿಪತೆರದನು |
ಮುರೆಸಿನಡೆವಂತೆನಡೆದೊಡೆವನಾ |
ನಿತಿಯಿವಳೆಂಬತೆರದೊಳಿಹಳು ಸಾಧ್ವಿಪತಿಸುಖದೆ || ೭ ||

ತಾ|| ಬಂದುವೇಳೆ ಪತಿದುಃಖವನ್ನು ಮರೆಯಿಸಿ, ಮಕ್ಕಳಿಗೆ ಹಿತವಾದ ಸದ್ಬೋಧೆಗಳನ್ನು ಹೇಳುತ್ತಾ, ಗೃಹಕೃತ್ಯದ ಮರ್ಮವನ್ನು ಯಾರೊ

ಡನೆಯೂ ಹೇಳಿಕೊಳ್ಳದೆ, ತಾನು ನಡೆವ ರೀತಿಯನ್ನು ಮಕ್ಕಳು ನೋಡಿ ಕಲಿಯುವಂತೆ ನಡೆದುಕೊಳ್ಳುತ್ತಿರುತ್ತಾ, ಮಾನಿನಿಯೆಂದು ಹೆಸರುವಾಸಿ ಪಡೆದಿರುವಳೆ ಮಾನ್ಯಳೆನಿಸಿ ಗಂಡನ ಸುಪದಾಯಳೆಂದು ಹೇಳಿಸಿಕೊಳ್ಳುವಳು.

ಮಾಡೆಸನ್ನೆಯಚಾರನೋಡುವ |
ನೋಡೆಕಾರ್ಯವಜವದೆಮಾಡಲು |
ಮೂಡಿದಾನುಮತೆಯುದುಕಾರಣಮುಲ್ಲೆಮಾನಿನಿಗೆ ||

ನಾಡಿಗಚ್ಚರಿಯಾಗಿಪಾಡುತೆ |
ಬೇಡಿಕೊಂಬಳುಗ್ಯೆದತಪ್ಪಿಗೆ |
ಮಾಡುತಿರೆಹಾಸ್ಯವನುಶಾಂತದೆನೋಡಿನಗುತಿಹಳು ||೮||

ತಾ|| ಸ್ತ್ರೀಯು ತನ್ನ ಸೇವಕರಿಗೆ ತನ್ನ ಕರ ಸಂಜ್ಞೆಯಿಂದ ಮನೋಗತವನ್ನು ತಿಳಿಯಪಡಿಸಿ, ದೃಷ್ಟಿಯಿಂದ ಕಾರ್ಯಗಳನ್ನು ರಚಿಸುವಂತೆ ಮಾಡುವುದೇ ಭೃತ್ಯರಲ್ಲಿರುವ ಮಮತೆಯೇ ಕಾರಣವು. ಇಂಪಾಗಿ ಹಾಡುತ್ತಾ, ತಪ್ಪಿಗೆ ಕ್ಷಮಾಪಣೆಯನ್ನು ಬೇಡಿಕೊಳ್ಳುತ್ತಾ, ಹಾಸ್ಯಮಾಡಿದರೂ ಶಾಂತತೆಯನ್ನು ತಾಳಿ ನಗುತ್ತಿರುವಳು.

ಜನುಮಸಾರ್ಥಕಗೊಳಿಸೆನೀಸ |
ಜ್ಞನಕನುಸೇವಿಸುತವರಸದೊಬ್ಬೀ |
ಧನೆಯಹಮಧುವನೀಂಟಿಮನಕೆಶಾಂತಿಯನು ||
ಅನುಗೊಳಿಸುತಲಿ ವೇದಗೋಚರ |
ನೆನಿಸಿಧಕ್ತರಧೀಶ್ವಸಲ್ಲಿಸು |
ತನುಪಮಪದವನೀವದೇವನ ಕೃಪೆಯನಾರ್ಜಿಸರು || ೯ ||

ತಾ|| ಸ್ತ್ರೀಯೆ ! ನಿನ್ನ ಜನ್ಮವನ್ನು ಸಾರ್ಥಕಪಡಿಸಿಕೊಳ್ಳಲು ಸಜ್ಜನರನ್ನು ಸೇವೆಮಾಡಿ, ಅವರು ಹೇಳುವ ಸದೊಬ್ಬೀಧೆಯೆಂಬ ಅಮೃತವನ್ನು ಪಾನಮಾಡಿ, ಮನಸ್ಸಿಗೆ ಶಾಂತತೆಯನ್ನು ಹೊಂದಿ, ವೇದಗಳಿಗೂ ಅಗೋಚರನಾದ ಭಗವಂತನ ಭಕ್ತರ ಇಷ್ಟವನ್ನು ಪೂರ್ಣ ಮಾಡಿ ಶ್ರೇಷ್ಠ ಲೋಕಕ್ಕೆ ಪಾತ್ರಳಾಗು.

ಅವನಿಂತಪ್ಪಸುದತಿಯತಾ |
ನೋವದಲೆಸಂಸೃತಿಯನಾನುತೆ |
ಜೀವಿಸುತ್ತಲಿಭಾವಜಾರಿಯಪದವಪೂಜಿಸಲು ||
ಭೂವರರಿಗಿಂತಧಿಕಸೌಖ್ಯವ |
ಭಾವದೊಳು ತಾಳುವಗೆಜನನ |
ಸಾವುಗಳಿಲ್ಲದಾಪದದಪರಿಕಾಣ್ಬದಚ್ಚರಿಯೆ ||೧೦||

ತಾ|| ಯಾವ ಪುರುಷನು ಮೇಲೆ ಹೇಳಿದ ಗುಣವುಳ್ಳ ಸ್ತ್ರೀಯನ್ನು ಹೊಂದಿ, ಆಕೆಯನ್ನು ಕಾಪಾಡುತ್ತಾ ಸಂಸಾರಿಯಾಗಿದ್ದು ದೇವರನ್ನು ಭಜಿಸುತ್ತಿರುವನೋ ಅವನೇ ರಾಜನಿಗಿಂತಲೂ ವಿಶೇಷ ಸಂತೋಷವನ್ನು ಹೊಂದಿ ಮೋಕ್ಷವನ್ನು ಹೊಂದುವನು.

ವಿವಿಧ ವಿಷಯಗಳು.

ಕನ್ನಡ ವಾಙ್ಮಯ.

ಈಗ ಕೆಲವು ದಿವಸಗಳಿಂದಲೂ ಕನ್ನಡ ವಾಙ್ಮಯದಲ್ಲಿ ಒಂದು ದೊಡ್ಡ ಗಲಭೆ ಎದ್ದಿದೆ. ಕನ್ನಡಭಾಷಾ ಏಕೀಕರಣದ ಸಲುವಾಗಿ ಬಹಳ ಪ್ರಯತ್ನಗಳು ಅಲ್ಲಲ್ಲಿ ನಡೆದಿವೆ. ಅಂದರೆ, ಕನ್ನಡ ಗ್ರಂಥಗಳೆಲ್ಲೆಲ್ಲ ಒಂದೇ ತರದ ಭಾಷೆಯನ್ನು ಉಪಯೋಗಿಸಬೇಕೆಂಬ ಚಳವಳಿ. ಈಗ ಸದ್ಯದಲ್ಲಿ ಕನ್ನಡ ವಾಙ್ಮಯವು ಮೂರು ತರಹೆಯ ಭಾಷೆಗಳಿಂದ ಅಥವಾ ಶೈಲಿಗಳಿಂದ ಕೂಡಿದುದಾಗಿದೆ :

(1) ಮೈಸೂರು ಶೈಲಿ. (2) ಧಾರವಾಡ ಶೈಲಿ. (3) ಮಂಗಳೂರು ಶೈಲಿ.

ಮೈಸೂರಿನವರು ತಮ್ಮ ಶೈಲಿಯೇ ಉತ್ತಮವಾದುದೆಂದೂ, ಸರ್ಕಾರೂ ಅದನ್ನೇ ಉಪಯೋಗಿಸಬೇಕೆಂದೂ ವಾದಿಸುತ್ತಲಿರುವರು. ಧಾರವಾಡದವರು ತಮ್ಮ ಶೈಲಿಯೇ ಶ್ರೇಷ್ಠವೆಂದೂ, ಮೈಸೂರು ಶೈಲಿ ಕೇವಲ ಸಾರಹೀನವಾದು

ದೆಂದೂ ವಾದಿಸುವರು. ಇನ್ನು ಮುಂಗಳೂರವರಾದರೋ ತಮ್ಮ ಶೈಲಿಯೇ ಉತ್ತಮವೆಂದೂ ಅದು ಧಾರವಾಡ ಮತ್ತು ಬೆಳಗೂರು ಶೈಲಿಗಳ ಮಧ್ಯಮ ಸ್ಥಾನದಲ್ಲಿದ್ದು ಸ್ವಲ್ಪ ಹೆಚ್ಚು ಕಡಿಮೆ ಅವರಿಗೂ ಇವರಿಗೂ ಸಮತೂಕದಲ್ಲಿರುವ ದೆಂದೂ ಹೇಳುತ್ತಾರೆ. ಅಂತು ನಮ್ಮ ಶೈಲಿಯೇ ಯೋಗ್ಯವಾದುದೆಂಬ ಮುಹ ತ್ಕಾಂಕೆ ಯು ಅಲ್ಪಸ್ವಲ್ಪ ಆಯಾ ದೇಶದವರಲ್ಲಿ ತುಂಬಿ ತುಳಕುತ್ತಲಿದೆ.

ಯಾವದು ಹೇಗೆ ಏಕೆ, ಇರಲೊಲ್ಲದು. ಆದರೆ, ನಾವು ವಾಙ್ಮಯ ಸುಧಾರಕರಿಗೆ ಇಷ್ಟೇ ಪ್ರಾರ್ಥಿಸುವೆವು. ಮುಳ್ಳುಗಳಿಲ್ಲದ ಗುಲಾಬಿ ಪುಷ್ಪವಿಲ್ಲ. (There is no rose without its thorns) ಇದರಂತೆಯೇ ಈ ಮೂರು ತರದ ಶೈಲಿಗಳಲ್ಲಿಯೂ ನ್ಯೂನತೆಗಳು ಇದ್ದೇ ಇರುತ್ತವೆ. ಇದು ಸರ್ವರೂ ಒಪ್ಪತಕ್ಕದ್ದಾಗಿದೆ. ಇನ್ನು ಮುಳ್ಳುಗಳಿವೆಯೆಂದು ಪುಷ್ಪಗಳನ್ನೇ ಬಿಸಾಕಲು ಬರುವುದೆ? ನವಗೇನೋ ಒಂದೇ ಒಂದು ಉತ್ತಮ ಪುಷ್ಪದ ಅವಶ್ಯವಿರುವುದು. ಅಂದಮೇಲೆ, ನಮ್ಮ ಭಾಷಾಭಿಮಾನಿಗಳು, ಎಲ್ಲ ಪುಷ್ಪಗಳಿಗಿಂತಲೂ ಸ್ವಲ್ಪ ಕಡಿಮೆ ಮುಳ್ಳುಗಳಿದ್ದ ಒಂದು ಮನೋಹರ ಪುಷ್ಪವನ್ನು ಆರಿಸಿಕೊಳ್ಳಕೂಡದೇಕೆ! ಹೀಗೆ ಹುಡುಕುತ್ತ ಕುಳಿತರೆ ಅವರಿಗೆ ಉತ್ತಮ ಪುಷ್ಪವು ಸಿಗುವುದೆಂಕು!

ಕನ್ನಡದಲ್ಲಿ ಕಥಾಲೇಖನ.

ಚಿತ್ರಲೇಖನವು ಹೇಗೆ ಒಂದು ದೊಡ್ಡ ಕಲೆಯೋ, ಹಾಗೆಯೇ ಕಥಾ ಲೇಖನವೂ ಕೂಡ ಒಂದು ದೊಡ್ಡ ಕಲೆಯಾಗಿರುತ್ತದೆ. ಚಿತ್ರಲೇಖನವು ಹೇಗೆ ಸರ್ವರಿಗೂ ಸಾಮಾನ್ಯವಾಗಿ ಬರುವದಿಲ್ಲವೋ, ಹಾಗೆಯೇ ಕಥಾಲೇಖನವು ಸರ್ವರಿಗೂ ಸಾಮಾನ್ಯವಾಗಿ ಬರುವದಿಲ್ಲ. ಒಂದು ಜನಾಂಗಕ್ಕೆ ಚಿತ್ರಲೇಖನದ ಅವಶ್ಯಕತೆಯು ಎಷ್ಟಿರುವುದೋ ಅದರ ಹತ್ತರಷ್ಟು ಕಥಾಲೇಖನದ ಅವಶ್ಯಕತೆ ಇರುವದು. ಚಿತ್ರಗಾರನಿಗಿಂತಲೂ ಕೆಲವಂಶಗಳಲ್ಲಿ ಕಥೆಗಾರನೇ ಹೆಚ್ಚು ಪ್ರಾಶಸ್ತ್ಯವನ್ನು ಪಡೆಯುವನು. ಅವನು ಕೆಲವೆಡೆ ತನ್ನ ವಾಚಕರನ್ನು ನಗಿಸುವನು, ಕೆಲವೆಡೆ ಅಳಿಸುವನು, ಒಮ್ಮೆ ಆವೇಶಭರಿತರನ್ನಾಗಿ ಮಾಡುವನು, ಒಮ್ಮೆ ಕೇವಲ ನಿರಾಶರನ್ನಾಗಿ ಮಾಡಿಬಿಡುವನು. ಹೀಗೆ ಚಿತ್ರ ವಿಚಿತ್ರವಾಗಿ ವಾಚಕರ ಮನಸ್ಸನ್ನು ಅದಲು ಬದಲು ಮಾಡುತ್ತ ಕೊನೆಗೊನ್ನು ತನ್ನ ಉಚ್ಚತರವಾದ ನೀತಿಯನ್ನು ಅವರಲ್ಲಿ ತುಂಬಿಬಿಡುವನು. ಇಂಥ ಸಾಮರ್ಥ್ಯ

ಕರ್ನಾಟಕದಲ್ಲಿ ಇದುವರೆವಿಗೂ ಈ ಕಲೆಯು ಇದ್ದೇ ಇಲ್ಲವೆಂದರೆ ತಪ್ಪಾಗಲಿಕ್ಕಿಲ್ಲ. ಯಾಕೆಂದರೆ, ಕನ್ನಡ ವಾಙ್ಮಯದಲ್ಲಿ ಮೊನ್ನೆ ಮೊನ್ನಿನವರೆವಿಗೂ ದೊಡ್ಡ ದೊಡ್ಡ ಗ್ರಂಥಗಳೂ, ಕಾವ್ಯಗಳೂ ಗೋಚರಿಸುತ್ತಲಿದ್ದವು. ಆದರೆ ಕಥೆಗಳೇ ಇರಲಿಲ್ಲ. ಇನ್ನು ಕಥೆಗಳ ಮೂಲಕ ಹೇಗೆ ಮನಸ್ಸಿನಮೇಲೆ ಪಂಡಿತರಿಗೂ, ಪಾಮರರಿಗೂ ಉತ್ತಮ ಪರಿಣಾಮವಾಗುವಂತೆ ಮಾಡಬಹುದೆಂಬುದನ್ನು ಹೇಳುವುದೇ ಅನಾವಶ್ಯಕ. ಇತ್ತೀಚೆಗೆ ಕನ್ನಡ ವಾಙ್ಮಯದಲ್ಲಿ ಉತ್ತಮ ಚಿಕ್ಕ ಚಿಕ್ಕ ಕಥೆಗಳು ಸುಳಿದಾಡಹತ್ತಿವೆ ಮತ್ತು ಅವುಗಳಿಗೆ ತಕ್ಕಮಟ್ಟಿಗೆ ಉತ್ತೇಜನವು ಸಿಗಲು ಪ್ರಾರಂಭಿಸಿದೆ. ಇದು ನಮ್ಮ ಸುದೈವವೇ ಸರಿ.

ಪ್ರತಿಯೊಬ್ಬ ಕನ್ನಡಿಗನೂ ಈ ಕಥಾಲೇಖನವನ್ನು ಉತ್ತೇಜಿಸಬೇಕೆಂದು ನಮ್ಮ ವಿನಂತಿ ಇದೆ; ಮತ್ತು ಪ್ರತಿಯೊಬ್ಬ ಕನ್ನಡ ಸಂಪಾದಕನೂ ತನ್ನ ಪತ್ರಿಕೆಯಲ್ಲಿ ಉತ್ತಮ ಚಿಕ್ಕಕಥೆಗಳಿಗೆ ಅದಷ್ಟು ಹೆಚ್ಚು ಸ್ಥಳಕೊಡಬೇಕೆಂದು ನಮ್ಮ ಆಗ್ರಹ ಪೂರ್ವಕವಾದ ಪ್ರಾರ್ಥನೆ. ಬಂಗಾಲ ಮತ್ತು ಆಂಧ್ರದೇಶಗಳಲ್ಲಿರುವ ಕಥಾಲೇಖನದ ಪ್ರಾಬಲ್ಯವನ್ನು ನೋಡಿದರೆ ನಾವು ತಲೆಯನ್ನು ತಗ್ಗಿಸಬೇಕಾಗುವದು.

ದುರ್ದೈವ!

ಲೇಖಕರು:—ಶ್ರೀಯುತ ಪಂಡಿತ ಶಾರಾನಾಥರವರು

ಇದ್ದೊದು ವಿಚಿತ್ರ ಮೂಢರಿಗು ದುರ್ದೈವ. ವೇದ ಶಾಸ್ತ್ರ ಪುರಾಣೇತಿ ಹಾಸಗಳಲ್ಲೆಲ್ಲಿಯೂ ಇಲ್ಲ. ಇದು ಅನಾರೋಗ್ಯದಿಂದಾಗುವದಿಲ್ಲ. ಹೆಡ್ಡತನವು ಅದಲ್ಲ. ದುಡ್ಡು ಕಳಕೊಳ್ಳುವದು ಅದಲ್ಲ. ಶಾಸ್ತ್ರಗಳಿಗೂ ವಿವೇಕಕ್ಕೂ ಮೀರಿದ್ದು ದುರ್ದೈವವೆಂದು ತೋರಿಬರಿಯೋ ಅದಕ್ಕೂ ಮೀರಿದ ದುರ್ದೈವಕ್ಕೂ ಸಂಬಂಧವೇ ಇಲ್ಲ. ಜ್ಞಾನಶೂನ್ಯನಾಗುವದು ದುರ್ದೈವವಲ್ಲ. ಮಾನಹೀನನಾಗುವದು ದುರ್ದೈವವಲ್ಲ. ಧರ್ಮಭ್ರಷ್ಟನಾಗುವದೂ ಅದಲ್ಲ. ಕರ್ಮರಹಿತನಾದವನಿಗೂ ದುರ್ದೈವದ ಪೀಡೆಯಿಲ್ಲ. ಅದೊಂದು ವಿಚಿತ್ರ ಸ್ಥಾನವನ್ನು ಬಂದು ಸೇರಿಕೊಂಡಿದೆ. ರೂಢಿಭ್ರಮೆಯಿಂದ ಮುಂದವಾಗದ ಶುಭ್ರವಾದ ಕಣ್ಣುಳ್ಳವರು ಅದನ್ನು ಹುಡುಕಲಿಕ್ಕೆ ಕಷ್ಟಪಡಬೇಕಾದ್ದೇ ಇಲ್ಲ. ಬುದ್ಧಿವಂತರಿಗೆ ಅದು ಎಲ್ಲೆಲ್ಲಿಯೂ ತೋರಬರುತ್ತದೆ.

ಹಿಂದೂ ಸಮಾಜದಲ್ಲಿ ಹುಡುಗಿ ಹುಟ್ಟಿದ ಮನೆಯಲ್ಲಿರುವ ವಿತಂತುಗಾನವನ್ನು ಸ್ವಲ್ಪ ಕೇಳಬೇಕು—"ಅಯ್ಯೋ! ದುರ್ದೈವವೇ! ಹುಡುಗಿ ಹುಟ್ಟಿದಳೇ" ಎಂಬ ಪಲ್ಲವಿಯು ಅಲ್ಲಿ ಏಳೆಂಟು ವರ್ಷದ ಹುಡುಗಿಯರಿರುವ ಮನೆಗಳಲ್ಲಿಯೂ ಸ್ವಲ್ಪ ನೋಡಬೇಕು—"ಈ ಪಾಪಿ ನಮ್ಮ ದುರ್ದೈವಕ್ಕೆ ಯಾಕೆ ಹುಟ್ಟಿದಳೋ ನಮ್ಮ ಮನೆ ಹಾಳುಮಾಡಲಿಕ್ಕೆ" ಎಂಬ ಅಸ್ಥಾಯಿಯನ್ನು ಬಹು ಗಟ್ಟಿಯಾಗಿ ಕೇಳಬಹುದು. "ಸ್ತ್ರೀಜನ್ಮವೇ ದುರ್ದೈವ" ಆದರೆ ಇದು ದೇವರ ಏರ್ಪಾಡೋ ಅಥವಾ ಹಾಗೆನ್ನುವ ಜ್ಞಾನಿಗಳ ರೋದನವೋ? ಪಾಪ, ಆ ಸೃಷ್ಟಿಕರ್ತನಿಗೆ ಬುದ್ಧಿಯಿಲ್ಲದೆ ಹೆಣ್ಣು ಎಂಬ ಒಂದು ನಿರ್ಮಾಣವನ್ನು ಮಾಡಿ ತಪ್ಪಿಹೋದನು. ಅವನಿಗೆ ನಮ್ಮ ರೋದನ ಪ್ರಿಯಜ್ಞಾನಿಗಳಂಥ ಮಂತ್ರಿಗಳಿದ್ದಿಲ್ಲವೋ ಏನೋ. ಮೇಲೆ ಇವರ ಜ್ಞಾನಕ್ಕೆ ವೇದವೇ ಆಧಾರ ಮತ್ತು "ಮಾತೃದೇವೋಭವ" ಎಂಬ ಪೊದಲನೇ ಸ್ಥಾನ ತಾಯಿಗೆ. ಈ 'ದುರ್ದೈವಕ್ಕೆ' ಈಪದವಿಯನ್ನಾದರೂ ಕೊಟ್ಟವರು ಋಷಿಗಳೋ ಅಲ್ಲವೋ? ಅಥವಾ ವೇದದ ಕಾಲದಲ್ಲಿ ತಾಯಿ ಗಂಡಸೋ ಏನೋ! ಸ್ಮೃತಿಗಳಲ್ಲಿ ಮನುಧರ್ಮಶಾಸ್ತ್ರ ಮುಖ್ಯ. ಸಂಧ್ಯಾವಂದನೆಯಲ್ಲಿ ಅವನ ನಾಮೋಚ್ಚಾರಣ: "ಯತ್ರನಾರ್ಯಸ್ತುಪೂಜ್ಯಂತೇ ರಮಂತೇ ತತ್ರದೇವತಾಃ" ಎಂಬುದನ್ನು ಉಚ್ಚರಿಸಿ ತನ್ನ ಪಾಂಡಿತ್ಯವನ್ನು ಮೆರೆಯಿಸಲಿಕ್ಕೆ ಮಾತ್ರವೆಯೋ ಏನೋ. ಅಥವಾ "ನಾರಿ" ಎಂಬುದರ ಅರ್ಥ ಪುಲ್ಲಿಂಗಕ್ಕೆ ಸಂಬಂಧಪಟ್ಟದ್ದೇನಾದರೂ ಇದೆಯೋ!, ವಿದ್ಯೆಗೆ ನಮ್ಮ ಸಂಸ್ಕೃತಿಯಲ್ಲಿ ಬಹಳ

ಮಹತ್ವ ಮತ್ತು ವಿದ್ಯಾದೇವಿಯು ಹೆಂಗಸು. ಧನದೇವಿಯು ಹೆಂಗಸು. ಶಕ್ತಿ ದೇವಿಯು ಹೆಂಗಸು ರಾಮ, ಕೃಷ್ಣ ಎಂದು ಹೇಳುವಾಗ ಸೀತಾ..., ರಾಧಾಕೃಷ್ಣ ಎಂದು ಹೇಳುವದೇ ಕೇಳಬರುತ್ತದೆಯೇ ಹೊರತು [illegible]ತಾ, ಕೃಷ್ಣರಾಧಾ ಎಂಬುವದು ಎಲ್ಲಿಯೂ ಇಲ್ಲ. ಸದ್ಗ್ರಂಥಗಳ್ಳಲ್ಲಿ [illegible]ನಾಮೋಚ್ಚರಣದಲ್ಲಿ, ಮಾತುಕಥೆಗಳಲ್ಲಿ ಸ್ತ್ರೀಗೆ ಪ್ರಥಮಸ್ಥಾನ. [illegible]ಂಗದಲ್ಲಿ ಮಾತ್ರ (ಸಾಹ) ಸ್ತ್ರೀಯು ಒಂದು ದುರ್ದೈವ. ಪಾಪ. ಸ್ತ್ರೀಯು ಇದಕ್ಕಿಂತ ಹೆಚ್ಚು ಎಲ್ಲಿಯಾದರೂ ಇದ್ದೀತೇ ? ಅವಳಿಗೆ ವಿದ್ಯೆ ಬೇಡ, ಸಜ್ಜನಂಗ ಬೇಡ, ಸುಖ ಬೇಡ, ಸ್ವೇಹಿತರು ಬೇಡ. ಗಂಡನು ಹೇಳಿದಂತೆ ನಲಿದಾಡಿದರೆ ಸಾಕು, ಅವನ ಸನ್ಮಾರ್ಗಗಳಲ್ಲಿ ಮಾತ್ರವಲ್ಲ, ಅವನ ದುರ್ಮಾರ್ಗಗಳಲ್ಲಿಯೂ ಸಹಕಾರಿಯಾಗಿರುವದೇ ಅವಳ ಧರ್ಮ ! ಅದೇ ಪಾತಿವ್ರತ್ಯವಂತೆ. ಅವಳು ಹೆಂಡತಿಯಾಗಿ, ಗಂಡನ ವಿಷಯಭೋಗಗಳಿಗನುಕೂಲವಾಗುವಾಗ ಸರಿಸಮಾನಳೇ ಯೋಗ್ಯಳೇ. ಸಹಧರ್ಮಿಣಿಯಂಥವಳು. ಗಂಡನಿಗೆ ಧರ್ಮವಾಸನೆಯೇ ಇಲ್ಲದನೇಲೆ ಅವಳು ಹ್ಯಾಗೆ ಸಹಧರ್ಮಿಣಿಯಾಗಬೇಕು ? ವಿದ್ಯೆಯಿಂದ ದೂರೀಕರಿಸಲ್ಪಟ್ಟ ಅವಳಿಗೆ ಗಹನವಾದ ಸನಾತನವಾದ ಧರ್ಮವಾದರೂ ಹ್ಯಾಗೆ ತಿಳಿಯಬೇಕು? ಯಾರಾದರೂ ಒಬ್ಬ ಹೆಂಗಸು ಸ್ವತಂತ್ರ ಬುದ್ಧಿಯಿಂದ ನ್ಯಾಯವಾದ ವಿದ್ಯಾರ್ಜನೆಯನ್ನು ಮಾಡಲುದ್ಯುಕ್ತಳಾದರೆ ಅವಳ ಅಪಕೀರ್ತಿಯನ್ನಂತೂ ಇಡಲಿಕ್ಕೇ ಎಡೆಯಿಲ್ಲ ಅವಳಿಗೆ ತರ್ಜನಿಯನ್ನು ತೋರಿಸುವ ದುರ್ಜನರು ಸಾವಿರಾರು. ಹೆಂಗಸರೂ ಎಷ್ಟೋ ಮಂದಿ ಅವಳನ್ನು ಕಡ್ಡಿಗೆ ಕಟ್ಟುವವರು. ಗಾರ್ಗಿ, ಮೈತ್ರೇಯಿ, ಅಂಬಾಪಾಲಿ, ಸೀತಾ, ದ್ರೌಪದಿಯಂತಹ ದಿವ್ಯ ಲಲನಾವತಂಸಗಳು ಲೀಲೆಯನ್ನಾಡಿದ ಈ ಪುಣ್ಯ ಭೂಮಿಯು ಹೆಂಗಸರ ಈಗಿನ ಸ್ಥಿತಿಯು ಹ್ಯಾಗಿದೆ ! ಆಡುವ ಪುಸ್ತಕದ ಮಾತು ಒಂದಾದರೆ ಮಾಡುವ ಸ್ವಾರ್ಥಕರ್ಮವು ಇನ್ನೊಂದು. ಇದೀಗ ನಮ್ಮ ಜ್ಞಾನಿಗಳ ಸತ್ಕಾರ್ಯ: ಮತ್ತು ಅವರ ಕಾಮನಾಟಕ್ಕೆ ಒಳಪಟ್ಟ ಬಗ್ಗಿಸಲ್ಪಟ್ಟ ಕಗ್ಗಿಸಲ್ಪಟ್ಟ ಹೆಂಗಸರ ಹೊಟ್ಟೆಯಲ್ಲಿ ಹುಟ್ಟುವ ಸಂತಾನವಾದರೂ ಎಷ್ಟು ಧರ್ಮಾಭಿಮಾನಧರಿತವಾದ್ದೀತು? ಈಗಲಾದರೂ ಹೆಂಗಸರು ತಮ್ಮ ಪೂರ್ವಕಾಲದ ತಾಯಿಂದಿರಿಗಿದ್ದ ಉನ್ನತಸ್ಥಿತಿಯನ್ನು ವಿದ್ಯಾವತಿಯರಾಗಿ ನಿಂದಾಸ್ತುತಿಗಳನ್ನು ಲೆಕ್ಕಿಸದೆ ಪಡೆಯದಿದ್ದರೆ ಮುಂದೆ ದೇಶಧರ್ಮಗಳೆರಡೂ ಯಾವ ನೀಚಗತಿಯನ್ನೈದುವವು ಎಂದು ಹೇಳಬೇಕಾಗಿಯೇ ಇಲ್ಲ.

ನೂರ್‌ಜಹಾನ್ ಮಹಾರಾಣಿ

ಒನೇ ಅಧ್ಯಾಯ

ಹುಟ್ಟು ಚಿಕ್ಕತನವೂ.

ಈ ನಮ್ಮ ಭರತಭೂಮಿಯು ಎಷ್ಟೋಮಂದಿ ಪ್ರಸಿದ್ಧರಾದ ಸ್ತ್ರೀಪುರುಷರ ಮಾತೃಸ್ಥಾನವಾಗಿರುತ್ತದೆಂದು ನಾವೆಲ್ಲರೂ ನಲವಿನಿಂದ ಅಭಿಮಾನಪಡುತ್ತೇವಷ್ಟೆ. ಈ ಹೆಸರುವಾಸಿಯಾದ ಹೆಂಗಸರಲ್ಲಿ ಕೆಲವರು ತಮ್ಮ ವಿದ್ವತ್ತಿನಿಂದಲೂ, ಕೆಲವರು ತಮ್ಮ ಪಾತಿವ್ರತ್ಯಮಹಿಮೆಯಿಂದಲೂ ಮತ್ತೆ ಕೆಲವರು ತಮ್ಮ ಚಾತುರ್ಯ, ಶೌರ್ಯ, ಧೈರ್ಯ, ಸಾಹಸಾದಿ ಗುಣಗಳಿಂದಲೂ ಖ್ಯಾತಿಯನ್ನು ಹೊಂದಿದರು. ಈ ಮೂರನೆಯ ವರ್ಗದ ವನಿತೆಯರಲ್ಲಿ ದಶರಥಮಹಾರಾಜನ ಕಿರಿಹೆಂಡತಿಯಾದ ಕೈಕೆಯು ತನ್ನ ಗಂಡನಿಗೆ ನೆರವಾಗಿ ತನ್ನ ಕೆಚ್ಚೆದೆಯನ್ನು ತೋರಿಸಿದಳೆಂದು ರಾಮಾಯಣದಲ್ಲಿ ಬರೆದಿದೆ. ಆದರೆ ಇದು ಪ್ರಾಚೀನಕಾಲದ ವರ್ಣನೆಯಾಯಿತು. ಅರ್ವಾಚೀನಕಾಲದಲ್ಲಿ ಅಹಮ್ಮದನಗರದ ರಾಣಿಯಾದ ಚಾಂದಬೀಬಿಯೂ, ಝಾನ್‌ಸಿಯ ಮಹಾರಾಣಿಯಾದ ಲಕ್ಷ್ಮೀಬಾಯಿಯೂ, ತಮ್ಮತಮ್ಮ ಕಲಿತನವನ್ನೂ (ಎದೆಗಾರಿಕೆಯನ್ನು) ಸಾಹಸವನ್ನೂ ತೋರಿಸಿ ಎಷ್ಟೋಮಂದಿ ಮಾಸೆ ಹೊತ್ತ ಗಂಡಸರನ್ನು ನಾಚಿಸಿದ್ದು ನಮ್ಮ ವಾಚಕಮಹಾಶಯರಲ್ಲಿ ಅನೇಕರಿಗೆ ಗೊತ್ತಿರುವ ಸಂಗತಿಯೇ ಸರಿ. ಆದರೆ ಇವರೆಲ್ಲರೂ ಅರಸುಮನೆತನಕ್ಕೆ ಸೇರಿದವರು. ತೀರ ಬಡತನದಲ್ಲಿ ಹುಟ್ಟಿ ತನ್ನ ಗುಣಗಳಿಂದಲೇ ಮುಂದಕ್ಕೆ ಬಂದು ಕೊನೆಗೆ ಡಿಲ್ಲಿಯ ಸಾರ್ವಭೌಮನಾದ ಜಹಂಗೀರ ಬಾದಶಹನ ಪಟ್ಟದ ರಾಣಿಯಾಗಿ ಹೆಸರುವಾಸಿಯಾದವಳೆಂದರೆ ನಮ್ಮ ಚರಿತ್ರ ನಾಯಕಿಯಾದ ನೂರಜಹಾನ ಮಹಾರಾಣಿಯೇ ಸರಿ.

೧೬ನೆಯ ಶತಮಾನದ ಕೊನೆಯ ಭಾಗದಲ್ಲಿ ಇರಾಣದ ರಾಜ್ಯದಲ್ಲಿ ತಮ್ಮನೆಯಿದ್ದಿಲ್ಲ. ಹಿಂದೆ ಹುಮಾಯೂನನಿಗೆ ಭರತಖಂಡದ ರಾಜ್ಯವನ್ನು ದೊರಕಿಸಲಿಕ್ಕೆ ನೆರವಾದ ತಹಮಾಸ್ಪ ಬಾದಶಹನು ಅಳಿದು ಹೋಗಿದ್ದನು. ವಿಷಯಲಂಪಟನೂ, ದುಂದುಗಾರನೂ, ಹೇಡಿಯೂ ಆದ ಅವನ ಮೊಮ್ಮಗನು ಗಾದಿಯನ್ನು ಏರಲು ಹಳ್ಳಿಹಳ್ಳಿಗಳಲ್ಲಿ ಗದ್ದಲಗಳೂ, ರಾಜಧಾನಿಯಲ್ಲಿ ಒಳಸಂಚುಗಳೂ ನಡೆಯುತ್ತಿದ್ದವು. ಅಲ್ಲಲ್ಲಿ ಬಂಡುಗಾರರ ಪುಂಡಾಟವು ತಲೆ ದೋರುತ್ತಿತ್ತು. ಅಸ್ತಿ ಪ್ರಾಣ ಮಾನಗಳ ಸುರಕ್ಷತೆಯು ಕಡಮೆಯಾಗಿತ್ತು. ಆದ್ದರಿಂದ ಕೂರರಾದ ಸಾಹಸಿಕರು ತಮ್ಮ ಜನ್ಮಭೂಮಿಯಾದ ಇರಾಣದೇಶವನ್ನು ಬಿಟ್ಟು ಭರತಖಂಡದ ಹಾದಿಯನ್ನು ಹಿಡಿಯುತ್ತಿದ್ದರು. ಈ ಸಾಹಸಿಕರೊಳಗೆ ನೂರಜಹಾನಳ ತಂದೆಯಾದ ಖ್ವಾಜಾ ಅಯ್ಯಾಸನು ಒಬ್ಬನಾಗಿದ್ದನು. ಅವನು ತನ್ನ ತಾಯಿತಂದೆಗಳು ಒಪ್ಪದ ಹೆಣ್ಣನ್ನು ಮದುವೆಯಾದ್ದರಿಂದ ಅವನ ತಂದೆಯಾದ ಖ್ವಾಜಾ ಮಹಮ್ಮದ್‌ಷರೀಫನು ಕಡುಮುನಿದು ಅವನನ್ನು ಮನೆಯಿಂದ ಹೊರಗೆಹಾಕಿದನು ಆದಕಾರಣ ಅಯ್ಯಾಸನು ನಿರುಪಾಯನಾಗಿ ತನ್ನ ತುಂಬ ಬಸುರಿದ್ದ ಹೆಂಡತಿಯೊಡನೆ ಈ ದೇಶದ ಹಾದಿಯನ್ನು ಹಿಡಿದನು.

ಎಲ್ಲ ನಾಡುಗಳಲ್ಲಿ ಎಲ್ಲ ಕಾಲದಲ್ಲಿ ಎಲ್ಲ ಜನಾಂಗದವರಲ್ಲಿ ಎಲ್ಲ ಜಾತಿಯವರಲ್ಲಿ ಸರಿಕರೊಡನೆ ಶರೀರ ಸಂಬಂಧವನ್ನು ಮಾಡಬೇಕೆಂಬ ಭಯಕೆಯು ನೆಲೆಗೊಂಡಿರುತ್ತದಪ್ಪೆ. ಈ ಖ್ವಾಜಾ ಅಯ್ಯಾಸನ ತಂದೆಯು ತೆಹರಾನ ನಗರದಲ್ಲಿ ಒಬ್ಬ ಹೆಸರುವಾಸಿಯು ಸರದಾರನಾಗಿದ್ದರಿಂದ ಅವನ ಮನಸ್ಸಿನಲ್ಲಿ ತನ್ನ ಮಗನು ಸನಾನಸ್ಕಂಧರ ಹೆಣ್ಣನ್ನು ಮದುವೆಯಾಗಬೇಕೆಂಬ ಪಿರಿದಾಶೆಯಿತ್ತು. ಆದರೆ ಖ್ವಾಜಾ ಅಯ್ಯಾಸನು ಅಮಿನೆ ಎಂಬೊಬ್ಬ ಕಡಮೆ ದರ್ಜೆಯ ಹೆಣ್ಣಿನ ಚೆದಗಿಗೆ ಮೆಚ್ಚಿ ಮನಸೋತು ತನ್ನ ಮುಪ್ಪಿನ ತಂದೆಯನ್ನು ಭಗ್ನಮನೋರಥನನ್ನಾಗಿ ಮಾಡಿದನು. ಆದ್ದರಿಂದ ಕುಲಾಭಿಮಾನಿಯಾದ ಮುದುಕನು ನೆಟ್ಟಗೆದ್ದು ಕೆಂಡದಂತೆ ಕಣ್ಣು ಕೆಂಪಗೆ ಮಾಡಿಕೊಂಡು ಅಯ್ಯಾಸನನ್ನು ಕರೆದು—

"ಅಯ್ಯಾಸ, ನೀನು ಬಲು ದುರ್ದೈವಿಯು! ಎಷ್ಟೋಮಂದಿ ದೊಡ್ಡ ದೊಡ್ಡ ಸರದಾರರ ಚೆಲುವೆಯರಾದ ಹೆಣ್ಣುಮಕ್ಕಳು ನಿನ್ನನ್ನು ವರಿಸ

ಬಯಕೆಯನ್ನು ಪೂರ್ಣಮಾಡಿರೆಂದು ನೆರಗೊಡ್ಡಿ ಬೇಡಿಕೊಳ್ಳುತ್ತೇನೆ.

ಅಮಾನೆಯು ಹಠಹಿಡಿದುದರಿಂದ ನಿರುಪಾಯನಾಗಿ ಅಯ್ಯಾಸನು ಈಕೆಯನ್ನು ಸಂಗಡ ಕರೆದುಕೊಂಡು ಹೋಗಲಿಕ್ಕೆ ಒಡಂಬಟ್ಟನು. ತಾಯಿಯು ತಂದೆಗೆ ತಿಳಿಯದಂತೆ ಕೆಲವು ಹಣ ಕೊಟ್ಟಳು. ಉಳಿದ ನೆಂಟರು ಕೆಲಮಟ್ಟಿಗೆ ನೆರವಾದರು. ಅಯ್ಯಾಸನು ಬಂದು ಬಂಟೆಯನ್ನು ಕೊಂಡು ಅದರಮೇಲೆ ಅರಿವೆ ತಿಂಡಿಗಳು ತುಂಬಿದ ಬಂದು ಕಂಟಲಿಯನ್ನು ಹೇರಿ ಅದರಮೇಲೆ ತನ್ನ ತುಂಬ ಬಸುರಿನ ಹೆಂಡತಿಯನ್ನು ಕುಳ್ಳಿರಿಸಿ ತಾನು ಹಿಂದೆ ನಡೆಯುತ್ತ ತೆಹರೀನ ಪಟ್ಟಣವನ್ನು ಬಿಟ್ಟನು

ಈ ದಂಪತಿಗಳು ದಾರಿಯಲ್ಲಿ ಪಟ್ಟ ಕ್ರಮವನ್ನೂ, ಅನುಭವಿಸಿದ ಕಷ್ಟವನ್ನೂ ಹಸಿವೆ ನೀರಡಿಕೆಗಳ ಬಾಧೆಯನ್ನೂ ಬಣ್ಣಿಸಲಳವಲ್ಲ. ಉಸುಬಿನ ಕಾಡಿನಲ್ಲಿ ಬಿಸಲಿನ ಉರಿಯಿಂದ ಬಾಯಾರಿ ಬೆಂಡಾಗಿ ತೊಳಲಿ ಬಳಲಿದರು. ದುಷ್ಕಾಲದಲ್ಲಿ ಆಧಿಕವಾಸವೆಂಬ ಗಾದೆಯಂತೆ ದಾರಿಯಲ್ಲಿ ಅಮಾನೆಯು ನಕ್ಷತ್ರದಂತಹ ಹೆಣ್ಣುಕೂಸನ್ನು ಹೆತ್ತಳು (೧೫೭೭). ಆ ಮುದ್ದುಕೂಸನ್ನು ನೋಡಿ ಹಿಗ್ಗಬೇಕೋ ಅರಣ್ಯದ ತಾಪತ್ರಯಗಳಿಗೆ ಅಳಬೇಕೋ ಎಂಬುದು ಆ ದಂಪತಿಗಳಿಗೆ ತಿಳಿಯದಂತಾಯಿತು. ಅಷ್ಟರಲ್ಲಿ ಅವರು ತಂದ ಅನ್ನ ಸಾಮಗ್ರಿಗಳು ಮುಗಿಯಿತು. ನಾಲ್ಕೈದು ಹರದಾರಿಹೋದರೂ ಗುಟುಕು ನೀರು ದೊರೆಯಲೊಲ್ಲದು. ಗತ್ಯಂತರ ಕಾಣದೆ ಅವರು ತಾವು ತಂದ ಬಂಟೆಯನ್ನು ಕೊಂದು ಅದರ ಮಾಂಸದಿಂದ ಕೆಲವುದಿನ ಹೊಟ್ಟೆಹೊರಕೊಂಡರು. ಹತ್ತುವ ಬಂಟೆ ಹೋದ್ದರಿಂದಲೂ, ಅರಿವೆಯಂಚಡಿ ಹಾಸಿಗೆ ಹೊದಿಕೆಗಳನ್ನು ತಾವೇ ಹೊತ್ತುಕೊಂಡು ಹೋಗಬೇಕಾದ್ದರಿಂದಲೂ ದಾರಿಸಾಗದಂತಾಯಿತು. ಹೊಟ್ಟೆಗೆ ಸಾಕಾದಷ್ಟು ಹಾಲು ದೊರೆಯದ್ದರಿಂದ ಕೂಸು ಬಂದೇ ಸರನೆ ಅಳತೊಡಗಿತು. ಇಂತಹ ಸಂದರ್ಭದಲ್ಲಿ ಎಂತಹ ಕಲ್ಲೆದೆಯವನಾದರೂ ಎದೆಗುಂದ ಬಹುದು. ಅಯ್ಯಾಸನು ಎಲ್ಲ ಬಗೆಯಿಂದ ಅಳೆದು ಹಾಕಿದನು. ಅವನಿಗೆ ಪಾರಾಗುವ ಹಂಚಿಕೆಯೇ ತೋರಲೊಲ್ಲದು. ಕಟ್ಟಕಡೆಗೆ "ಕ್ಷೀಣಾ ನರಾ ನಿಷ್ಕರುಣಾಭವಂತಿ" ಎಂಬ ನ್ಯಾಯದಂತೆ ಕೂಸನ್ನು ಅಡವಿಯಲ್ಲಿ ಬಿಟ್ಟು ತಾವಿಬ್ಬರೇ ಮುಂದೆಸಾಗಬೇಕೆಂದು ನಿಶ್ಚಯಿಸಿ, ತನ್ನ ಅರ್ಧಾಂಗಿಯಮುಂದೆ ಆಕ್ರೂರವಿಚಾರವನ್ನು ಅಂಜುತ್ತ ಅಂಜುತ್ತ, ಮೆಲ್ಲಗೆ

ಉಸುರಿದನು. ಇಂತಹ ದುಷ್ಟವಿಚಾರಕ್ಕೆ ಹೆತ್ತತಾಯಿಯು ಎಂದಾದರೂ ಒಪ್ಪಬಹುದೇ ? ಆಕೆಯು ಸಿಟ್ಟು ಜಿಂಕೆಯಾಗಿ ಕಣ್ಣುಕೆಂಪಗೆ ಮಾಡಿ ಕೊಂಡು ಹಸಿದ ಹುಲಿಯಂತೆ ಅವನ ಮೇಲೆ ಪರಿದುಬಂದಳು. ಆಕೆಯ ಕೋಪಾಟೋಪವನ್ನು ನೋಡಿ ಅನನು ಹೆದರಿ ತನ್ನ ನಿಷ್ಕರ್ಣವಾದ ಎಣಿಕೆಯನ್ನು ಹಿಂದಕ್ಕೆ ತೆಗೆದುಕೊಂಡನು. ಮುಂದೆ ೪-೫ ದಿವಸ ಹಾಗೇ ಕಳೆದುಹೋದವು. ದಿನದಿನಕ್ಕೆ ತಾಪತ್ರಯಗಳು ಹೆಚ್ಚಾಗ ತೊಡಗಿದವು. ಹೆತ್ತಕರುಳಿಗಿಂತ ಪಡುವ ಕಷ್ಟವು ಮಿಗಿಲಾಯಿತು. ಅಮಾಯಿಗೆ ಏನೂ ತಿಳಿಯದಂತಾಯಿತು. ಗಂಡನು ಎಡೆಬಿಡದ ಉಸುರು ಸತಿಗೆ ಮಗಳ ಮೇಲಿನ ಮೋಹವು ತಗ್ಗಿತು. ಮಗಳ ಜೀವವನ್ನು ಉಳಿಸಿಕೊಳ್ಳಲಿಕ್ಕೆ ಹೆಣಗಾಡಿ ಗಂಡನ ಜೀವಕ್ಕೆ ಅಪಾಯ ತರುವುದು ಸರಿಯಲ್ಲವೆಂದು ಆಕೆಗೆ ಹೊಳೆಯಿತು. ಮಗಳ ಜೀವಕ್ಕಿಂತ ಗಂಡನ ಜೀವವು ಹೆಚ್ಚೆನದೆಂದು ಆಕೆಗೆ ಮನವರಿಕೆಯಾಯಿತು. ಆದ್ದರಿಂದ ಆಕೆಯು ಕೂಸನ್ನು ಬಿಟ್ಟುಹೋಗಲಿಕ್ಕೆ ಒಡಂಬಟ್ಟಳು. ಅವರಿಬ್ಬರೂ ಕೂಡಿ ಆ ಕೂಸನ್ನು ಬಂದು ಮರದ ಬುಡಕ್ಕೆ ಎಲೆಗಳನ್ನು ಹಾಸಿ ಮಲಗಿಸಿ, ಎಲೆಗಳನ್ನು ಅದರಮೇಲೆ ಹೊಚ್ಚಿ ಮುಂದಕ್ಕೆ ಸಾಗಿದರು. ನೂರಾರು ಮಾರು ಹೋಗುವಷ್ಟರೊಳಗೆ ತಾಯಿಗೆ ಪಶ್ಚಾತ್ತಾಪ ಹುಟ್ಟಿ ಹೆತ್ತಕರಳನ ನೋವು ಉಕ್ಕೇರಿತು. ದುಃಖದಿಂದ ಕುತ್ತಿಗೆಯ ನರಗಳು ಉಬ್ಬಿದವು. ಕಾಲು ಮುಂದಿಡಲಿಕ್ಕೆ ತನುವಿಲ್ಲದಾಯಿತು. ಆಗ ಆಕೆಯು ಗದ್ಗದಸ್ವರದಿಂದ, "ಪ್ರಿಯನೇ ! ಇನ್ನೊಮ್ಮೆ ನನ್ನ ಕಂದನನ್ನು ನೋಡಿಬರುವೆನು, ದಯವಿಟ್ಟು ಅಪ್ಪಣೆಕೊಡಿ " ಎಂದು ಅಂಗಲಾಚಿ ಬೇಡಿಕೊಂಡಳು. ಗಂಡಹೆಂಡರಿಬ್ಬರೂ ತಿರುಗಿಹೋಗಿ ನೋಡುತ್ತಾರೆ, "ಕೂಸು ಗಾಢವಾಗಿ ನಿದ್ದೆಮಾಡುತ್ತದೆ. ಬಂದು ದೊಡ್ಡ ಘಟಸರ್ಪವು ಆ ಕೂಸಿನ ತಲೆಯಮೇಲೆ ತನ್ನ ಹರವಾದ ಹೆಡೆಯನ್ನು ಕೊಡೆ ಯಾಗಿ ಹಿಡಿದು, ಅದನ್ನು ಅಲ್ಲಾಡಿಸಿ ಕೂಸಿಗೆ ಗಾಳಿಹಾಕುತ್ತದೆ. " ಈ ಅತ್ಯದ್ಭುತವಾದ ನೋಟವನ್ನು ನೋಡಿ ತಾಯಿತಂದೆಗಳಿಬ್ಬರೂ ದಿಗಿಲು ಬಡಿದು ಚಿತ್ರದೊಳಗಿನ ಗೊಂಬೆಗಳಂತೆ ಸುಮ್ಮನೆ ಸ್ತಬ್ಧರಾಗಿ ನಿಂತು ಕೊಂಡರು. ೪-೧೦ ನಿಮಿಷಗಳಾದ ಬಳಿಕ ಅಯ್ಯಾಸನಿಗೆ ಅರಿವು ಬಂದು ಗಟ್ಟಿಯಾಗಿ ಚಪ್ಪಳೆಯನ್ನು ಬಾರಿಸಿದನು. ಆ ಸಪ್ಪಳವನ್ನು ಕೇಳಿ

[ಸಶೇಷ]

ಓಂ
ಸರಸ್ವತಿ

ಸಂಪುಟ ೫ | ಕ್ರೋಧನ ವರ್ಷ—ಜ್ಯೇಷ್ಠ ಮಾಸ | ಸಂಚಿಕೆ ೨

ಶ್ರೀವಿದ್ಯಾರಣ್ಯರ ಜಯಂತಿ

ಪಾಶ್ಚಾತ್ಯ ನಾಗರಿಕತೆಯು ಹೆಚ್ಚುತ್ತ ಬಂದಂತೆಲ್ಲಾ ನಮ್ಮ ರಾಜ್ಯಸ್ಥಾಪಕರೂ, ಪಂಡಿತವರ್ಯರೂ, ಕವಿಚಕ್ರವರ್ತಿಗಳೂ ಆದಂಥವರ ದಿವ್ಯನಾಮವು ನಮ್ಮ ಸ್ಮೃತಿಪಥದಿಂದ ಅಳಿಸಿ ಹೋಗುತ್ತಿರುವುದೇನೂ ಆಶ್ಚರ್ಯವಲ್ಲ. ನಮ್ಮ ಪುಣ್ಯ ಭೂಮಿಯಾದ ಈ ಆರ್ಯಾವರ್ತದಲ್ಲಿ ಅವತರಿಸಿದಷ್ಟು ಪುಣ್ಯಪುರುಷರೂ, ಮಹಾತ್ಮರೂ ಮತ್ತೆಲ್ಲಿಯೂ ಜನಿಸಲಿಲ್ಲವೆಂದು ಧಾರಾಳವಾಗಿ ಹೇಳಬಹುದಾಗಿದೆ. ಅಂತಹ ಮಹಾನುಭಾವರ ಪವಿತ್ರನಾಮಗಳು ಕೂಡ ನಮ್ಮ ಸ್ಮೃತಿಗೆ ಬಾರದಿರುವುದು ನಮ್ಮಗಳ ದುರ್ದೈವವೇ ಹೊರತು ಮತ್ತೇನೂ ಇಲ್ಲ. ಈ ಕ್ಷಣದಲ್ಲಿ ನಾವು "ನಮ್ಮ ಕರ್ನಾಟಕ"ವೆಂದು ಯಾವ ಪುಣ್ಯಭೂಮಿಯನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಿರುವೆವೋ ಆ ಪುಣ್ಯಭೂಮಿಯನ್ನು ಸ್ಥಾಪಿಸಿದ ಮಹಾಪುರುಷನಾರು? ಎನ್ನುವುದನ್ನು ಕೂಡ ಸ್ಮರಿಸಲಾರದಷ್ಟು ಮತ್ತು ನಮ್ಮಲ್ಲಿ ನೆಲೆಗೊಂಡಿರುವುದು. ಮಹಾತ್ಮಾ ಗಾಂಧಿಗಳಂಥವರು ಈ ಭಾರತ ಭೂಮಿಯಲ್ಲಿ ಜನ್ಮವೆತ್ತಿ ಭಾರತೀಯರಿಗೆ ಅದರಲ್ಲೂ ಮುಖ್ಯವಾಗಿ ಕರ್ನಾಟಕರಿಗೆ ಜಾಗ್ರತೆಯನ್ನುಂಟುಮಾಡಿ ಸ್ವದೇಶ, ಸ್ವಜನ, ಸ್ವವಸ್ತು ಇವುಗಳಲ್ಲಿ ಆತ್ಮಾಭಿಮಾನವನ್ನು ಹೆಚ್ಚಿಸಿದನಂತರವಾದರೂ ಸುಮಾರು ಆರು ಶತಮಾನಗಳ ನಂತರವಾದರೂ ಅಂತಹ ಮಹಾಪುರುಷರ ಜನ್ಮದಿನವನ್ನು ಕೊಂಡಾಡುವ ಸುಬುದ್ಧಿಯನ್ನು ಭಗವಂತನು ನಮ್ಮಾ ಕರ್ನಾಟಕರಲ್ಲಿ ಉಂಟುಮಾಡಿದುದಕ್ಕಾಗಿ ಪರಮಾತ್ಮನನ್ನು ಎಷ್ಟು ವಂದಿಸಿದರೂ ಸಾಲದಾಗಿದೆ.

ಹದಿನಾಲ್ಕನೆಯ ಶತಮಾನದಲ್ಲಿ ದಕ್ಷಿಣ ಹಿಂದೂಸ್ಥಾನದ ಪೂರ್ವ ಸಮುದ್ರ ತೀರದ ಸಮೀಪದಲ್ಲಿ ಸ್ಥಾಪಿಸಲ್ಪಟ್ಟು ಈಗ ಬಹುಮಟ್ಟಿಗೆ ನಾಮಾವಶೇಷವಾಗಿರುವ ಪಶ್ಚಿಮ ಸಮುದ್ರತೀರದವರೆಗೆ ವ್ಯಾಪಿಸಿ ಅತ್ಯುನ್ನತ ವೈಭವಶಿಖರವನ್ನೇರಿದ್ದ ಕರ್ನಾಟಕ ಸಾಮ್ರಾಜ್ಯದ ಸಂಸ್ಥಾಪಕರಾದ ಅಮಾತ್ಯಮಾಧವಾಚಾರ್ಯರೇ ಈ ವಿದ್ಯಾರಣ್ಯರೆನ್ನುವವರು. ಈತನ ಜನ್ಮದಿನವು ಇದೇ ಜೂನ್ ತಿಂಗಳಲ್ಲಿ ನಡೆಯಿತು. ಇಂತಹ ಸುದಿನದಲ್ಲಿ ಆ ಮಹಾಪುರುಷರ ದಿವ್ಯಶಕ್ತಿಯು


ವಿಷಯವಾಗಿ ಸ್ವಲ್ಪಮಟ್ಟಿಗೆ ಇಲ್ಲಿ ವಿವರಿಸುವುದು ಅತ್ಯಾವಶ್ಯಕವಾಗಿರುವುದು. ವಿದ್ಯಾರಣ್ಯರಿಗೆ ಮಾಧವಾಚಾರ್ಯರೆಂದು ಪೂರ್ವಾಶ್ರಮದಲ್ಲಿ ಹೆಸರು. ಈ ಪುಣ್ಯಪುರುಷರ ಬಾಲ್ಯ ವೃತ್ತಾಂತವು ಅತಿ ವಿಚಿತ್ರವಾದುದು. ಈತನು ಬಾಲ್ಯದಲ್ಲಿ ಬಹಳ ದರಿದ್ರಾವಸ್ಥೆಯಲ್ಲಿದ್ದುದರಿಂದ ಬೇಸತ್ತು ವಿರಕ್ತನಾಗಿ ಹಂಪೆಯ ವಿರೂ ಪಾಕ್ಷನ ಮಂದಿರದಲ್ಲಿ ಎರಡು ಮೂರು ವರ್ಷಗಳು ತಪಸ್ಸುಮಾಡುತ್ತಿರಲು ಅಲ್ಲಿ ಆಳು ಮೇಯಿಸುತ್ತಿದ್ದ ಹುಡುಗನೊಬ್ಬನು ಈತನಿಗೆ ಪ್ರತಿದಿನವೂ ದೇವರ ಅಭಿಷೇಕಕ್ಕಾಗಿ ಹಾಲು ತಂದುಕೊಡುತ್ತಿದ್ದನೆಂದೂ, ಈ ಹಾಲಿನಿಂದ ಮಾಧವನು ವಿರೂಪಾಕ್ಷೇಶ್ವರನಿಗೂ ಭುವನೇಶ್ವರಿಗೂ ಅರ್ಚನೆ ಅಭಿಷೇಕಗಳನ್ನು ಮಾಡುತ್ತಿದ್ದನೆಂದೂ, ಈತನ ಭಕ್ತಿಗೆ ಮೆಚ್ಚಿ ಭುವನೇಶ್ವರಿಯು ಪ್ರತ್ಯಕ್ಷಳಾಗಿ ಏನು ವರ ಬೇಕೆಂದು ಕೇಳಿದಹಾಗೆಯೂ, ಆಗ ಮಾಧವನು ಸುವರ್ಣವೃಷ್ಟಿಯನ್ನು ತಾನಪೇಕ್ಷಿಸಿದಾಗ ಸುರಿಸಬೇಕೆಂದು ಕೇಳಿಕೊಂಡಂತೆಯೂ, ಭುವನೇಶ್ವರಿಯು ಹಾಗೆಯೇ ಆಗಲೆಂದು ಹೇಳಿ ಅಂತರ್ಧಾನವಾದಂತೆಯೂ, ಅಂದಿನಿಂದ ಮಾಧವನು 'ವಿದ್ಯಾರಣ್ಯ' ನೆಂಬ ಹೆಸರಿನಿಂದ ಪ್ರಸಿದ್ಧವಾದಹಾಗೆಯೂ ತಿಳಿದುಬರುವುದು. ಮೇಲೆ ಹೇಳಿದ ಬಾಲಕನೂ ಅವನ ಸಹೋದರನೂ ಸೈನ್ಯವನ್ನು ಸಜ್ಜುಗೊಳಿಸಲು ಅವರ ಸಹಾಯದಿಂದ ಅನೆಗೊಂದಿ ಮತ್ತು ಅಡರ ಸುತ್ತಮುತ್ತಲಿನ ರಾಜ್ಯಗಳನ್ನು ಜೈಸಿ, ಹಾಗೆ ತಾವು ಸಂಪಾದಿಸಿದ ರಾಜ್ಯಕ್ಕೆ ''ವಿಜಯನಗರ''ವೆಂದು ನಾಮಕರಣ ಮಾಡಿದರು. ಆ ಇಬ್ಬರು ಬಾಲಕರೇ ''ಹರಿಹರ ಮತ್ತು ಬುಕ್ಕ''ಎನ್ನುವವರು. ಇವರಲ್ಲಿ ಮೊದಲನೆಯವನಾದ ಹರಿಹರನಿಗೆ ರಾಜ್ಯಾಭಿಷೇಕಮಾಡಿ ವಿದ್ಯಾರಣ್ಯರು ತಾನವರಿಗೆ ಮಂತ್ರಿಯಾಗಿ ನಿಂತು, ಮೊದಲು ಭುವನೇಶ್ವರಿಯು ವಾಗ್ದಾನಮಾಡಿದಂತೆ ಸುವರ್ಣದಮಳೆಯನ್ನು ಸುರಿಸಿ,ಆ ದ್ರವ್ಯ ಸಹಾಯದಿಂದ ವಿಜಯನಗರವನ್ನು ಅತ್ಯುತ್ತಮ ರಾಜ್ಯವನ್ನಾಗಿ ಮಾಡಿ,ಮಂತ್ರಿಪದವಿಯಲ್ಲಿ ಸ್ವಲ್ಪ ಕಾಲಮಾತ್ರವಿದ್ದು ತನ್ನ ತಮ್ಮನಾದ ಸಾಯಣನಿಗೆ ಮಂತ್ರಿಪದವಿಯನ್ನಿತ್ತು ತಾನು ಸನ್ಯಾಸಾಶ್ರಮವನ್ನು ವಹಿಸಿ ಶೃಂಗೇರಿಯ ಮಠದ ಅಧಿಪತ್ಯವನ್ನು ಸ್ವೀಕರಿಸಿದರು. ಈಗ ಕರ್ನಾಟಕವೆಂದು ಎಂಗಡಿಸಿರುವ ಭಾಗದಲ್ಲಿ ಬಹುಭಾಗವು ವಿದ್ಯಾರಣ್ಯರಿಂದ ಸ್ಥಾಪಿಸಲ್ಪಟ್ಟಿದ್ದ ವಿಜಯನಗರವನ್ನು ಸೇರಿದ್ದಿತು. ಈ ಮೈಸೂರು ಸೀಮೆಯೂ ಕೂಡ ಸೇರಿದ್ದಿತು. ಈ ಕಾರಣದಿಂದಲೇ ಈ ಮಹಾತ್ಮರಿಗೆ ''ಕರ್ನಾಟಕ ಸಿಂಹಾಸನಸ್ಥಾಪನಾಚಾರ್ಯ'' ಎಂಬ ಪ್ರಶಸ್ತವಾದ ಬಿರುದು ದೊರೆಯಿತು. ವಿದ್ಯಾರಣ್ಯರು ಅಲ್ಪಕಾಲಮಾತ್ರವೇ ಮಂತ್ರಿಪದವಿಯಲ್ಲಿದ್ದರೂ ಆ ಅಲ್ಪಾವಧಿಯಲ್ಲಿ ಅನೇಕ ಮಹತ್ವವಾದ ರಾಜಕೀಯ ಕಾರ್ಯಗಳನ್ನು ಮಾಡಿರುವರೆಂದು ಅವರ ಚರಿತ್ರೆಯಿಂದ ತಿಳಿದುಬರುತ್ತದೆ. ಈ ಮಹಾತ್ಮರು ವಿರಕ್ತರಾಗಿ ಸನ್ಯಾಸಾಶ್ರಮವನ್ನು ವಹಿಸಿದ್ದಾಗ್ಯೂ, ಮಂತ್ರಿತ್ವದಿಂದ ಗುರುತ್ವದವರೆಗಿದಾಗ್ಯೂ ವಿಜಯನಗರದ ರಾಜ್ಯವಿಸ್ತಾರ, ಪ್ರಜಾಪಾಲನೆ ಇತ್ಯಾದಿ ರಾಜಕಾರ್ಯಗಳಲ್ಲಿ ತಮ್ಮ

ಅನುಭವವನ್ನು ರಾಜನಿಗೆ ತಿಳಿಸುತಿದ್ದರು. ಮೇಲ್ಕಂಡ ರೀತಿಯಲ್ಲಿ ಸ್ವರಾಜ್ಯವನ್ನು ಸ್ಥಾಪಿಸಿ ವಿದ್ಯಾರಣ್ಯ ಸ್ವಾಮಿಗಳು ತಮ್ಮ ಪೂರ್ವಾಶ್ರಮದಲ್ಲಿ ಹೇಗೆ ರಾಜನೀತಿ ವಿಶಾರದತ್ವವನ್ನು ಪ್ರಕಟಗೊಳಿಸಿದರೋ ಹಾಗೆಯೇ ಶೃಂಗೇರಿಯ ಗುರುಪೀಠವನ್ನಲಂಕರಿಸಿ ಧರ್ಮ ಸಾಮ್ರಾಜ್ಯದ ವ್ಯವಸ್ಥೆಯನ್ನು ಮಾಡಿದರೆಂದು ಹೇಳಬಹುದಾಗಿದೆ. ಇವರ ಅಧಿಪತ್ಯದಲ್ಲಿ ಮುಖ್ಯವಾಗಿ ನಾಲ್ಕು ಮಠಗಳನ್ನು ನಿರ್ಮಿಸಿ ಇಂತಿಂಥವರು ಇಲ್ಲಿಲ್ಲಿ ಆತಿಥ್ಯವನ್ನು ಸ್ವೀಕರಿಸಬೇಕೆಂದು ಗೊತ್ತುಮಾಡಿದರು. ಇವರು ಅನೇಕ ಕಾವ್ಯಗಳನ್ನು ರಚಿಸಿರುವುದರಿಂದ ಇವರ ಪಾಂಡಿತ್ಯದ ವಿಷಯವಾಗಿ ಹೆಚ್ಚು ಹೇಳಬೇಕಾಗಿಲ್ಲ. ಆದಿಶಂಕರಾಚಾರ್ಯರನಂತರ ಇವರಷ್ಟು ವಿದ್ಯಾವಂತರಾದ ಸ್ವಾಮಿಗಳು ಶೃಂಗೇರಿಯ ಗುರುಪೀಠವನ್ನಲಂಕರಿಸಿಲ್ಲವೆಂದು ಹೇಳಬಹುದಾಗಿದೆ.

ಮೇಲೆ ಹೇಳಿದಂತೆ ಧರ್ಮ, ಪಾಂಡಿತ್ಯ, ರಾಜ್ಯಾಡಳಿತ, ಇವುಗಳಲ್ಲಿ ಶ್ರೀ ವಿದ್ಯಾರಣ್ಯರು ಒಂದೇ ಸಮನಾಗಿ ಪ್ರಕಾಶಿತರಾಗಿದ್ದರು. ಇಂತಹ ಮಹಾ ಪುಣ್ಯ ಪುರುಷರ ಜನ್ಮದಿನವು ಬಹುಕಾಲಕ್ಕೆ ಹಿಂದೆಯೇ ನಮ್ಮ ಕರ್ಣಾಟಕದಲ್ಲಿ ಆಚರಿಸಲ್ಪಡಬೇಕಾಗಿತ್ತು; ಆದರೆ ನಮಗೆ ಅಂತಹ ಸುಯೋಗವು ದೊರೆತು ಅವರು ಸ್ಮೃತಿಗೆ ಬಂದದ್ದೇ ಈಗ. ಕರ್ಣಾಟಕವು ಜಾಗ್ರತೆಹೊಂದಿ ನಿದ್ರೆಯಿಂದೆಚ್ಚತ್ತು ಈಗತಾನೇ ನಾಲ್ಕೈದು ವರ್ಷಗಳು ಮಾತ್ರವೇ ಆಗಿದೆ. ಕರ್ಣಾಟಕವು ತನ್ನ ಐತಿಹಾಸಕಕಾಲದ ಉದರದಲ್ಲಿ ಯಾವ ಯಾವ ರತ್ನಗಳಿವೆಯೆಂಬುದನ್ನು ಮರೆತು ಈಗತಾನೇ ಸ್ವಲ್ಪ ಸ್ವಲ್ಪವಾಗಿ ನೋಡಲು ಮೊದಲುಮಾಡಿದೆ. ಇಂತಹ ಅಭ್ಯುದಯ ಸೂರ್ಯನು ದೇದೀಪ್ಯಮಾನವಾಗಿ ಬೆಳಗುವಸಮಯದಲ್ಲಿ ಕರ್ಣಾಟಕ ಸಾಮ್ರಾಜ್ಯಸ್ಥಾಪಕರಾದ ಶ್ರೀವಿದ್ಯಾರಣ್ಯರ ಪುಣ್ಯಸ್ಮೃತಿಯು ದೇಶಬಾಂಧವರಿಗೆ ಉಂಟಾದುದು ಕರ್ಣಾಟಕದ ಭಾಗ್ಯೋದಯವೇ ಸರಿ. ಧಾರ್ಮಿಕಸಾಮ್ರಾಜ್ಯದಲ್ಲಿ ವಿಕಸಿತರಾದವರು ಅನೇಕರಿರಬಹುದು, ವಿದ್ವತ್ಪ್ರದೇಶದಲ್ಲಿ ಪ್ರಕಾಶಿತರಾದವರು ಅನೇಕರಿರಬಹುದು, ರಾಜ್ಯಾಡಳಿತದಲ್ಲಿ ಪ್ರಖ್ಯಾತರಾಗಿ ಕೀರ್ತಿಸ್ತಂಭವನ್ನುನೆಟ್ಟ ಮಹನೀಯರು ಅನೇಕರಿರಬಹುದು; ಆದರೆ ಮೇಲೆ ಹೇಳಿದ ತ್ರಿಗುಣಗಳಲ್ಲಿಯೂ ಪ್ರಸಿದ್ಧರಾಗಿ ರಾಜ್ಯವನ್ನು ಸ್ಥಾಪಿಸಿದವರು ಈ ಕರ್ಣಾಟಕದ ಪ್ರಾಚೀನ ಇತಿಹಾಸದಲ್ಲಿ ಶ್ರೀವಿದ್ಯಾರಣ್ಯರೊಬ್ಬರೇ. ಶ್ರೀರಾಮಚಂದ್ರನಿಗೆ ವಸಿಷ್ಠ ಮಹರ್ಷಿಗಳಂತೆಯೂ, ಶಿವಾಜಿಗೆ ರಾಮದಾಸನಂತೆಯೂ, ಹರಿಹರಮಹಾರಾಜನಿಗೆ ವಿದ್ಯಾರಣ್ಯರು ಮಂತ್ರಿಗಳಾಗಿಯೂ ಗುರುಗಳಾಗಿಯೂ ಧರ್ಮ, ರಾಜನೀತಿಗಳೆರಡನ್ನೂ ಬೋಧಿಸಿ ಸ್ವರಾಜ್ಯವನ್ನು ಸ್ಥಾಪಿಸಿರುವರು. ಇಂತಹ ಕೀರ್ತಿಯುತ ಆದರ್ಶಸಂಭೂತರಾದ ಮಹಾಪುರುಷರ ಚರಿತ್ರದ ಸ್ಮರಣವು ಪ್ರಕೃತಕಾಲದಲ್ಲಿ ಅವಶ್ಯಕವೂ ಪುಣ್ಯಪ್ರದವೂ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಇಂತಹ ಸುಬುದ್ಧಿಯನ್ನು ಇಷ್ಟುದಿನಗಳ ಮೇಲಾದರೂ ಕರ್ಣಾಟಕರಿಗೆ ಅನುಗ್ರಹಿಸಿದುದಕ್ಕಾಗಿ ದೇವದೇವನನ್ನು ಎಷ್ಟು ಕೊಂಡಾಡಿದರೂ ಸ್ವಲ್ಪವೇ!

ಗತಿಸಿದ

ಶ್ರೀಯುತ ದೇಶಬಂದು ಚಿತ್ತರಂಜನ ದಾಸರವರು.



" ಬೆಣ್ಣೆ ಬರುವಾಗ ಮಡಕೆಯೊಡೆಯಿತು " ಎಂಬುದು ನಮ್ಮಲ್ಲಿ ವಿಶೇಷ ರೂಢಿಯಾದೊಂದುಗಾದೆ. ಇದರಂತೆಯೇ " ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ "ವೆನ್ನುವುದೂ ಕೂಡ. ಹೊತ್ತು ಹೋಗದವರ್ಯಾರೋ ಗಾದೆಗಳನ್ನು ಮಾಡಿದರೆಂದು ನಾವು ಹೇಳಿಕೊಳ್ಳುವೆವು. ದೀರ್ಘವಾಗಿ ಯೋಚಿಸಿ ನೋಡಿದರೆ ಪ್ರತಿಯೊಂದು ಗಾದೆಯೂ ಸದರ್ಥಗರ್ಭಿತವಾದುದಾಗಿರುವುದು. ದೇಶಬಂಧುಗಳ ಅಕಾಲಮರಣವು ನಮಗೀಗಾದೆಯ ನೆನಪನ್ನುಂಟುಮಾಡುತ್ತದೆ. ನನ್ನ ಪುಣ್ಯಭೂಮಿಯಾದ ಆಠ್ಯಾವರ್ತದ ಕಷ್ಟವು ನೀಗಿ ದೇಶಕ್ಕೆ ಸುಖಸಾಮ್ರಾಜ್ಯವೊದಗುವ ಕಾಲದಲ್ಲಿಂಟಾದ ಈ ವಂಗರಾಜನ ಮರಣವು ಪ್ರತಿಯೊಬ್ಬ ಭಾರತವಾಸಿಯ ಹೃದಯವನ್ನು ತಲ್ಲಣಿಸುವಂತೆ ಮಾಡಿತೆಂದರೂ ಅತಿಶಯೋಕ್ತಿಯಾಗಲಾರದು.

ದೇಶಬಂಧು ಚಿತ್ತರಂಜನದಾಸರವರು ಪರಲೋಕಗತರಾದರು. ಇಂತಹ ಮಹಾತ್ಮನ ಮರಣದಿಂದ ಭರತಖಂಡದ ಒಂದಮೂಲ್ಯರತ್ನವು ನಾಯಮಾಯಿತು, ಬಂಗಾಳದ ಪ್ರಜ್ಞಾಲ ಸೂರ್ಯನು ಅಸ್ತಂಗತನಾದನು. ಈ ಕರ್ಮಯೋಗಿಯ ಮರಣದಿಂದ ಹಿಂದೂಗಳು ಅತಿ ನಷ್ಟಹೊಂದಿದೆವು. ಅಮೂಲ್ಯವಸ್ತು

ಸ್ವತಂತ್ರವೀರನ! ಶಾಶ್ವತಶಾಂತಿಪ್ರಿಯನ ಮರಣದಿಂದ ಭಾರತಮಾತೆಯು ಶೋಕಸಾಗರದಲ್ಲಿ ಮುಳುಗಿರುವಳು. ಕರ್ಣನಂತಹ ದಾನಶೂರನ ಮರಣದಿಂದ ಪ್ರಪಂಚಕ್ಕೇ ನಷ್ಟ. ಭರತಖಂಡವನ್ನಾವರಿಸಿರುವ ದುರಾದೃಷ್ಟವನ್ನು ಎಷ್ಟೆಂದು ಹೇಳಲಿ! ದೇಶಬಂಧುವಿನ ಮರಣವನ್ನು ಕುರಿತು ಯಾವ ಮಾತುಗಳಿಂದ ಬರೆಯಲಿ! ಈ ಮಹಾತ್ಮನ ಮರಣವಾರ್ತೆಯು ಅಖಿಲ ಭರತಖಂಡದಲ್ಲೆಲ್ಲಾ ಸಿಡಿಲು ಬಿದ್ದಂತಾಗಿರುವುದು. ಕೆಲವು ದಿನಗಳ ಹಿಂದೆತಾನೇ ಮಹಾತ್ಮಾ ಗಾಂಧಿಯವರೊಡನೆ ಡಾರ್ಜಿಲಿಂಗಿನಲ್ಲಿ ಪ್ರಕೃತ ರಾಜಕೀಯ ವಿಷಯವಾಗಿ ಚರ್ಚಿಸುತ್ತಿರುವರೆಂಬ ವದಂತಿಯುಂಟಾಯಿತು. ಕೆಲವು ದಿನಗಳ ಹಿಂದೆತಾನೇ ಸಮಸ್ತ ಭಾರತವರ್ಷವನ್ನೆಲ್ಲಾ ಖಾದಿಯ ಮಯವಾಗಿ ಮಾಡಬೇಕೆಂದು ಗಾಂಧಿಯವರೊಡನೆ ತೀರ್ಮಾನ ಮಾಡಿಕೊಂಡರು. ಈತನ ಮರಣಕ್ಕೆ ಎರಡು ದಿನಗಳ ಮುಂಚೆ ಪ್ರಜೆಗಳೂ ಈತನೂ ವಂಗನಾಡಿನಲ್ಲಿ ದ್ವಿಮುಖರಾಜ್ಯಭಾರಕ್ರಮವು ಸತ್ತಿತೆಂಬ ವರ್ತಮಾನವನ್ನು ಅತ್ಯಾನಂದದಿಂದ ಕೇಳಿದರು. ಈ ಕರ್ಣಾವೃತವಾದ ವಾರ್ತೆಯೇ ದಾಸರಿಗೆ ವಿಷಮಯವಾಯಿತೇ! ಈ ದ್ವಿಮುಖ ರಾಜ್ಯಾಡಳಿತವು ನಾಶವಾಗಲು ತನುಮನಧನಗಳನ್ನು ಧಾರೆಯೆರೆದ ಮಹಾಪುರುಷನು ತನ್ನ ಹಟವು ಗೆದ್ದ ವರ್ತಮಾನವನ್ನರಿತು ಆನಂದದಿಂದ ಹಿಗ್ಗಿ ಬಹುಕಾಲ ಜೀವಿಸಿರಬಾರದಾಗಿತ್ತೇ! "ದೆಣ್ಣೆ ಬರುವಾಗ ಮಡಕೆ ಹೊಡೆಯಿತು" ಎನ್ನುವ ಗಾದೆಯು ನಮ್ಮ ವಿಷಯದಲ್ಲೇ ಫಲಿಸಬೇಕಾಯಿತೇ!

ದೇಶಬಂಧುದಾಸರವರು ಭಾರತಮಾತೆಯ ಪುತ್ರರಲ್ಲಗ್ರಗಣ್ಯರು. ಇವರು 1870 ನೆಯ ಇಸವಿ ನವಂಬರ್ ತಿಂಗಳಲ್ಲಿ ಕಲ್ಕತ್ತಾ ಪಟ್ಟಣದಲ್ಲಿ ಒಂದು ಗೌರವ ಕುಟುಂಬದಲ್ಲಿ ಜನ್ಮವೆತ್ತಿದರು. ಕಲ್ಕತ್ತೆಯಲ್ಲಿನ ವಿಶ್ವವಿದ್ಯಾನಿಲಯದ ಪರೀಕ್ಷೆಗಳೆಲ್ಲಾ ಉತ್ತೀರ್ಣರಾಗಿ ಇಂಗ್ಲೆಂಡಿಗೆ ಹೋಗಿ ನ್ಯಾಯಪರೀಕ್ಷೆಯಲ್ಲುತ್ತೀರ್ಣರಾಗಿ ಅಲ್ಲಿನವರಿಂದ ಗೌರವಿಸಲ್ಪಟ್ಟು ಮರಳಿ ಹಿಂತಿರುಗಿದರು. ಆಗ ಬಂಗಾಳವು ವಿಭಾಗಿಸಲ್ಪಟ್ಟು ಮಾಣಿಕತೊಲಾ ಬಾಂಬ್ ಕೇಸಿನ ವಿಚಾರಣೆಯಲ್ಲಿ ಪ್ರಸಿದ್ಧ ದೇಶಭಕ್ತರಾದ ಬಾಬು ಅರವಿಂದಘೋಷರಮೇಲೆ ಅಪರಾಧವು ಆರೋಪಿಸಲ್ಪಟ್ಟಾಗ ದೇಶಬಂಧುವು ಅತಿಪರಿಶ್ರಮದಿಂದ ವಾದಿಸಿ ಒಂದುಕಾಸು ಕೂಡ ತಗೆದುಕೊಳ್ಳದೆ ವಕಾಲತ್ತು ನಡೆಸಿ ಅರವಿಂದರು ನಿರಪರಾಧಿಯೆಂಬುದನ್ನು ಸ್ಥಿರಪಡಿಸಿದರು. ಅಂದಿನಿಂದ ಈ ಮಹಾಪುರುಷರ ಕೀರ್ತಿಲತೆಯು ದಶದಿಕ್ಕುಗಳಲ್ಲಿಯೂ ವ್ಯಾಪಿಸಲಾರಂಭಿಸಿತು. ವಕೀಲುವೃತ್ತಿಯಲ್ಲಿ ಲಕ್ಷಗಟ್ಟಲೆ ಸಂಪಾದಿಸಿದರು, ಇಷ್ಟು ಸಂಪಾದಿಸಿಯೂ ಕೇವಲ ದರಿದ್ರರಂತೆ ಕಾಲ ಕಳೆಯುತ್ತಿದ್ದರು. ತನ್ನ ಸ್ವಂತಕ್ಕಾಗಿ ಒಂದು ಬಿಡಿಕಾಸು ಕೂಡ ಖರ್ಚುಮಾಡದೆ ಸರ್ವವನ್ನೂ ಪರಾರ್ಥಕ್ಕಾಗಿ ಉಪಯೋಗಿಸಿದ ಮಹಾಪುರುಷರು. ಬಂಗಾಳದ ರಾಜಕೀಯ ಚಳವಳಿಯಲ್ಲಿ ಸಹಾಯಮಾಡಿದವರೆಲ್ಲರಿಗೂ ಉದಾರವಾಗಿ ಸಹಾಯ ಮಾಡಿದರು;

''ದೇಶಭಕ್ತಿಯ ಮಹಾಕವಿ'' ''ಸ್ವರಾಜ್ಯಭಕ್ತ'' ''ಮಾನವಕೋಟಿಯಭೃತ್ಯ'' ಎಂದು ಶ್ರೀಯುತ ಅರವಿಂದಘೋಷರನ್ನು ಇವರು ವರ್ಣಿಸಿದುದೆಲ್ಲವೂ ಇವರಿಗೆ ಅನ್ವಯಿಸುವುದು.

ದೇಶಬಂಧುವು ಈ ರೀತಿ ಹೇರಳವಾಗಿ ದ್ರವ್ಯಸಂಪಾದನೆ ಮಾಡುತ್ತಿದ್ದ ಕಾಲದಲ್ಲಿ ಅವರ ಘನತೆಯನ್ನು ಜಗತ್ತಿಗೆ ವಿಶದಪಡಿಸುವ ಸಂದರ್ಭವು ಪ್ರಾಪ್ತವಾಯಿತು. ಆ ವಿಷಯವನ್ನು ಎಂದೆಂದಿಗೂ ಭರತಖಂಡವು ಮರೆಯಲಾರದು. ಇವರ ತಂದೆಯು ಧರ್ಮಬುದ್ಧಿಯುಳ್ಳವರಾದ್ದರಿಂದ ತಮ್ಮ ಅಪಾರವಾದ ಆಸ್ತಿಯನ್ನೆಲ್ಲಾ ಖರ್ಚುಮಾಡಿ ಕೊನೆಗೆ ಸಾಲಮಾಡಿ ತೀರಿಸಲಾರದೆ ಪಾಪರ್‌ಚೀಟಿಯನ್ನು ಪಡೆದು ಕೆಲವು ದಿನಗಳ ನಂತರ ಮಡಿದರು. ಪಿತೃ ಋಣವನ್ನು ತೀರಿಸುವುದೇ ತನ್ನ ಪ್ರಥಮ ಕರ್ತವ್ಯವೆಂದರಿತ ದೇಶಬಂಧುವು ಸಾಲಪತ್ರಗಳ ವಾಯಿದೆಯು ಅತಿಕ್ರಮಿಸಿದ್ದರೂ ಬಿಡದೆ ಬಡ್ಡಿಗೆ ಕೂಡ ಬಡ್ಡಿಯನು ತೀರಿಸಿ ನ್ಯಾಯಸ್ಥಾನದಲ್ಲಿ ತಂದೆಯು ಹೆಸರಿನಲ್ಲಿದ್ದ ಸಾಲದ ಹೊರೆಯನ್ನು ತೀರಿಸಿದರು. ಆಗಿದ್ದ ನ್ಯಾಯಾಧಿಪತಿಯು ಪುತ್ರನು ಸುಪಾತ್ರನಿಸಿ ತಂದೆಯ ಪಾಪರ್ ಚೀಟಿಯನ್ನು ಕೋರ್ಟಿನ ಮೂಲಕ ಪುನಃ ಪಡೆಯುವುದನ್ನು ತಾನು ನೋಡಿದುದು ಇದೇ ಮೊದಲನೆಯಾವೃತ್ತಿಯೆಂದು ಹೇಳಿದರು. ಇಂತಹ ಮಹಾತ್ಮರನ್ನು ಈ ಕಾಲದಲ್ಲಿ ಕಾಣುವುದು ಬಹಳ ಅಪರೂಪವು. ದೇಶಬಂಧುವು ಪ್ರಸಿದ್ಧವಾದ ಕವಿತಾಶಕ್ತಿಯನ್ನು ಪಡೆದಿದ್ದರು. '' ಸಂಗೀತಸಾಗರ '' ವೆನ್ನುವ ಗ್ರಂಥವು ಅತ್ಯಮೂಲ್ಯವಾಗಿರುವುದು. ನ್ಯಾಯವಾದಿಯು ಉದ್ಯೋಗವನ್ನೂ, ರಾಜಕೀಯ ವಿಷಯವನ್ನೂ ಒಂದುಕಡೆ ಕಟ್ಟಿಟ್ಟು ಕವಿತ್ವವಾಡುವುದರಲ್ಲಿಯೇ ತಮ್ಮ ಕಾಲವೆಲ್ಲವನ್ನೂ ಕಳೆದಿದ್ದರೆ ಈತನೂಕೂಡ ಶ್ರೀ ರವೀಂದ್ರನಾಥಟಾಗೋರರಂತೆ ಪ್ರಸಿದ್ಧ ಕವಿಯಾಗುವುದರಲ್ಲಿ ಯಾವ ಸಂಶಯವೂ ಇರಲಿಲ್ಲ. ಆದರೆ ಭಾರತಮಾತೆಯ ಬಂಧನಯುದ್ಧವು ಇವರನ್ನು ಕರೆಯಲು ತನಗಿದ್ದ ಕಾರ್ಯಗೌರವಗಳನ್ನೆಲ್ಲಾ ಕಟ್ಟಿಟ್ಟು ದೇಶೋದ್ಧಾರಕ್ಕೆ ಪಾಡುಪಡಲು ಸೊಂಟಕಟ್ಟಿ ನಿಂತರು. ಈ ರೀತಿಯಾಗಿ ಸ್ವರಾಜ್ಯಕ್ಕಾಗಿ ಹೋರಾಡುತ್ತಿರುವ ಕಾಲದಲ್ಲಿ ಮಹಾತ್ಮಾ ಗಾಂಧಿಜಿಯವರ ಅಸಹಕಾರ ಚಳವಳಿಯು ಪ್ರಾರಂಭವಾಯಿತು. ದೇಶಬಂಧುವಿಗೆ ಯಾವಾಗಲೂ ಸನ್ಯಾಸದಲ್ಲಿಯೂ, ತ್ಯಾಗಗಳಲ್ಲಿಯೂ ಬಹಳ ಆಸಕ್ತಿಯಿದ್ದಿತು. ಮಹಾತ್ಮಜೀಯವರ ಚಳವಳಿಯು ಇವರಿಷ್ಟಕ್ಕೆ ತಕ್ಕಂತೆ ಇದ್ದಿತು. ಈ ಚಳವಳಿಯು ಕೇವಲ ದರಿದ್ರರನ್ನು ಮಾತ್ರ ತನ್ನ ಕಡೆಗೆ ಎಳೆಯಲಿಲ್ಲ. ಆ ರಾಜಗೃಹಗಳಂತಹ ಸೌಧಗಳಲ್ಲಿ ವಾಸಮಾಡುತ್ತಿದ್ದ ರಾಜಸಮಾನರಾದ ಭಾರತೀಯರನ್ನೂ, ಹಣದರಾತಿಯಮೇಲೆ ಹೊರಳಾಡುತ್ತಿದ್ದ ಹಿಂಡೂಗಳನ್ನೂ ಮಹಾತ್ಮಜೀಯವರ ಈ ಚಳವಳಿಯು ತನ್ನ ಕಡೆಗಾಕರ್ಷಿಸಿತು. ತ್ಯಾಗಕ್ಕೂ, ದೇಶಸೇವೆಗೂ ತಕ್ಕ ಸಾಧನವು ಈ ಮಾರ್ಗವೇ

ಎಂಬುದನ್ನು ದೇಶಬಂಧುವು ಅರಿತು 1916 ನೆಯ ಇಸವಿಯಲ್ಲಿ ಕಲ್ಕತ್ತೆಯಲ್ಲಿ ನಡೆದ ರಾಷ್ಟ್ರೀಯ ಮಹಾಸಭೆಯಲ್ಲಿ ಮಹಾತ್ಮಜೀಯವರಿಗೂ ಇವರಿಗೂ ಕೆಲವು ವಿಷಯಗಳಲ್ಲಿ ಭಿನ್ನವಾದವುಂಟಾದರೂ ನಾಗಪುರದಲ್ಲಿ ನಡೆದ ಸಭೆಯಲ್ಲಿ ತಾವೇ ಅಸಹಕಾರ ಚಳವಳಿಯನ್ನಾ ಮೋದಿಸಿ ಅದನ್ನು ಪ್ರಚಾರಗೊಳಿಸಲು ಬದ್ಧಕಂಕಣರಾದರು.

1921 ನೆಯ ಇಸವಿಯಲ್ಲಾ ಈ ಅಸಹಕಾರ ಚಳವಳಿಯು ಅಭಿವೃದ್ಧಿಯಾಗಿ ದೇಶದೇಶವೆಲ್ಲವೂ ಹರಡುವ ವಿಷಯದಲ್ಲಿಯೇ ಪೂರ್ಣಶ್ರದ್ಧೆ ವಹಿಸಿದ್ದರು. ಪ್ರತಿದಿವಸವೂ ವಿದ್ಯಾರ್ಥಿಗಳಿಗೆ ಕಳುಹಿಸುತ್ತಿದ್ದ ಸಂದೇಶಗಳಿಂದ ವಂಗ ವಿದ್ಯಾರ್ಥಿಗಳ ಮನವೆಲ್ಲವೂ ಆಕರ್ಷಿಸಲ್ಪಟ್ಟಿತು. ಸಾವಿರಗಟ್ಟಿಲೆ ವಿದ್ಯಾರ್ಥಿಗಳು ಕಲಾಶಾಲೆಗಳನ್ನು ಬಿಟ್ಟು ದೇಶಸೇವಕರಾಗಲು ಮುಂದೆ ಬಂದರು. ಅನೇಕ ತರುಣ ವಕೀಲರು ವಕೀಲಿಯನ್ನು ಬಿಟ್ಟು ದೇಶಬಂಧುವಿನ ಹಿಂಬಾಲಕರಾದರು. ಈರೀತಿಯಲ್ಲಿ ದೇಶಬಂಧುವು ವಂಗರಾಜ್ಯದಲ್ಲೆಲ್ಲಾ ಸ್ವರಾಜ್ಯ ಚಳವಳಿಯನ್ನು ಹಬ್ಬಿಸಿ ದೇಶಾಭಿಮಾನದ ಕಿಚ್ಚು ಹೆತ್ತಿ ಉರಿಯುತ್ತಿರುವಾಗ 1921 ನೆಯ ಇಸವಿಯಲ್ಲಿ ಅಹಮದಾಬಾದಿನಲ್ಲಿ ನಡೆದ ರಾಷ್ಟ್ರೀಯ ಮಹಾಸಭೆಗೆ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಆ ಕಾಲದಲ್ಲಿ ಈ ವಿದ್ಯಾರ್ಥಿಗಳ ಗುಂಪು ಸ್ವಲ್ಪ ಬಲಹೀನವಾಗುವಂತಿತ್ತು. 1923 ನೆಯ ಇಸವಿಯಲ್ಲಿ ವೇಲ್ಸಿನ ಯುವರಾಜರ ಆಗಮನವನ್ನು ಬಹಿಷ್ಕರಿಸಬೇಕೆನ್ನುವ ಚಳವಳಿವು ರಾಜ್ಯದಲ್ಲೆಲ್ಲಾ ಹಬ್ಬಿತು. ಸ್ವಯಂಸೇವಕದಳದವಂದ ಈ ಬಹಿಷ್ಕಾರವು ದೇಶಬಂಧುವಿನ ಮೂಲಕ ಹೇಗೂ ನಡದೇತೀರುವುದೆನ್ನುವ ಭಯದಿಂದ ಸರ್ಕಾರದವರು ವಿದ್ಯಾರ್ಥಿಗಳೂ, ಸ್ವಯಂಸೇವಕರೂ ಎಲ್ಲರೂ ''ಅರಾಜಕ ಗುಂಪಿನವರು'' ಎಂದು ಪ್ರಸಿದ್ಧಪಡಿಸಲು ಶ್ರೀಯುತ ದಾಸರು ಹೆಚ್ಚು ವಿದ್ಯಾರ್ಥಿಗಳನ್ನು ಈ ಸೇವಕ ಗುಂಪಿಗೆ ಬಂದು ಸೇರುವಂತೆ ಪ್ರಾರ್ಥಿಸಿದರು. ಇದನ್ನರಿತ ಸರ್ಕಾರದವರು ರಾಷ್ಟ್ರೀಯ ಸಭೆಯು ನಡೆಯುವುದಕ್ಕೆ ಕೆಲವು ದಿನಗಳ ಹಿಂದೆ ಇವರನ್ನು ಖೈದು ಮಾಡಿ ಮೂರು ತಿಂಗಳವರೆಗೂ ಯಾವ ವಿಚಾರಣೆಯನ್ನೂ ಮಾಡದೆ ಕಾಲಹರಣ ಮಾಡಿ ಕೊನೆಗೆ 6 ತಿಂಗಳ ಶಿಕ್ಷೆಯನ್ನು ವಿಧಿಸಿದರು. ಕೆಲವು ದಿನಗಳಾದನಂತರ ಮಹಾತ್ಮಾ ಗಾಂಧಿಯವರೂ ಖೈದುಮಾಡಲ್ಪಟ್ಟರು. ದೇಶಭಕ್ತರಾದ ಅನೇಕರು ಸರ್ಕಾರದವರ ಆಜ್ಞೆ ಮೀರಿ ಲಕ್ಷಗಟ್ಟಿಲೆ ದಿನವೂ ಕಾರಾಗೃಹಕ್ಕೆ ತೆರಳುತ್ತಿದ್ದರು. ಇಷ್ಟರ ಮಧ್ಯೆ ಎಷ್ಟೋ ವಿಷಯಗಳು ನಡೆದವು. ದೇಶಬಂಧುವೂ ಬಂಧಮುಕ್ತರಾದರು. ಇದಾದನಂತರ 1922 ನೆಯ ಇಸವಿಯಲ್ಲಿ ಗಯೆಯಲ್ಲಿ ನಡೆದ ರಾಷ್ಟ್ರೀಯಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿ ತಾವು ನೂತನವಾಗಿ ಸ್ಥಾಪಿಸಬೇಕೆಂದಿದ್ದ ''ಸ್ವರಾಜ್ಯ ಸಭೆಯ'' ತರಾವುಗಳನ್ನು ಸಭೆಯು ಮುಂದಿಟ್ಟು ಸಕಲರ ಅಂಗೀಕಾರವನ್ನೂ ಪಡೆದು ಆ ಸಭೆಯ ಅಧ್ಯಕ್ಷರಾಗಿ ದಿವಾಂಚಾತ್ರಿಯವರೂ ದುಡಿದರು. ಸ್ವರಾಜ್ಯಪಂಗಡದವರು ನ್ಯಾಯ ವಿಧಾಯಕಸಭೆಯಲ್ಲಿ ಮಾಡಿರುವ ಕಾರ್ಯಗಳನ್ನು ಇಲ್ಲಿ ವಿವರಿಸಬೇಕಾಗಿಲ್ಲ. ಬಂಗಾಳ

ವನ್ನು ಇಬ್ಭಾಗ ಮಾಡಿ ದ್ವಿಮುಖ ರಾಜ್ಯಭಾರ ಮಾಡುವುದನ್ನು ಸಂಪೂರ್ಣವಾಗಿ ನಿಲ್ಲಿಸಿದರು. ಬಂಗಾಳದ ದ್ವಿಮುಖ ರಾಜ್ಯಭಾರವು ಸಂಪೂರ್ಣವಾಗಿ ನಾಶವಾದ ವಿಷಯವು ಮರಣಕ್ಕೆ ಮೊದಲನೆಯ ದಿನ ತಾನೇ ತಿಳಿಯಿತು. ಇದರ ಪೂರ್ಣ ಗೌರವವೂ ಶ್ರೀಯುತ ದಾಸರನ್ನೇ ಸೇರಬೇಕಾಗಿರುವುದು.

1924 ನೆಯ ಇಸವಿಯಲ್ಲಿ ಬೆಳಗಾಂ ರಾಷ್ಟ್ರೀಯ ಸಭೆಯಲ್ಲಿ ಮಹಾತ್ಮಜೀಯವರೊಡನೆ ಸೇರಿ ಕೆಲಸಮಾಡಿ ಅವರ ಠರಾವುಗಳನ್ನೆಲ್ಲಾ ಅನುಮೋದಿಸಿ ಕಾಂಗ್ರೆಸ್ಸಿನ ಸದಸ್ಯರು ನಾಲ್ಕಾಣೆ ಕೊಡುವುದನ್ನು ಬಿಟ್ಟು ನೂಲು ನೂಲುಕೊಡಬೇಕೆನ್ನುವ ಠರಾವನ್ನು ಪೂರ್ಣಮನಸ್ಸಿನಿಂದಾಮೋದಿಸಿದ್ದಲ್ಲದೆ ತಾವೂ ತಮ್ಮ ಮನೆಯವರೂ ನೂಲುವುದಾಗಿ ತೀರ್ಮಾನಮಾಡಿದರು ; ಆದರೆ ಬೆಳಗಾಂನಿಂದ ಹಿಂತಿರುಗಿದ್ದು ಮೊದಲು ಇವರು ಆರೋಗ್ಯವಾಗಿರಲೇ ಇಲ್ಲ. ಹವಾ ಬದಲಾಯಿಸುವ ನಿಮಿತ್ತ ಪಾಟಲೀಪುರ (ಪಾಟ್ನಾ) ಕ್ಕೆ ಹೋಗಿ ಅಲ್ಲಿ ಕೆಲವು ದಿನಗಳಿದ್ದರು. ಈ ಮಧ್ಯೆ ಮಾರ್ಚಿ ತಿಂಗಳು 23 ನೆಯ ತಾರೀಖಿನಲ್ಲಿ ನಡೆದ ಬಂಗಾಳದ ನ್ಯಾಯವಿಧಾಯಕ ಸಭೆಗೆ ತನ್ನನ್ನು ಒಂದು ಆರಾಮಕುರ್ಚಿಯಲ್ಲಿ ಮಲಗಿಸಿ ಎತ್ತಿಕೊಂಡುಹೋಗುವಂತೆ ಹೇಳಿ ಅಲ್ಲಿ ಹಾಜರಿದ್ದು ಮಂತ್ರಿಗಳ ಸಂಬಳವನ್ನು ಬಂಗಾಳದ ನ್ಯಾಯವಿಧಾಯಕಸಭೆಯವರು ಮೂರನೆಯಾವೃತ್ತಿ ನಿರಾಕರಿಸುವಂತೆ ಮಾಡಿದರು. ಇಂತಹ ಗುಂಡಿಗೆಯು ಯಾವ ಭಾರತೀಯನಿಗಿರುವುದು? ತಾನು ಹಿಡಿದಕಾರ್ಯವನ್ನು ಸಾಧಿಸಿ ತೀರಬೇಕೆನ್ನುವ ದೃಢನಿಶ್ಚಯದಿಂದ ತನ್ನ ದೇಹಾಲಸ್ಯವನ್ನೂ ಲಕ್ಷ್ಯ ಮಾಡದೆ ಒದ್ದಾಡಿದರು. ಮಾರ್ಚಿ ತಿಂಗಳಲ್ಲಿ ಈತನು ಭಾರತೀಯರಿಗೆ ಕಳುಹಿಸಿದ ಸಂದೇಶವು ಎಲ್ಲರಿಗೂ ತಿಳಿದಿರುವುದು. ಕಳೆದ ಏಪ್ರಿಲ್ ತಿಂಗಳಲ್ಲಿ ಎರಡನೆಯ ಸಾರಿ ಕಲ್ಕತ್ತೆಯ ನಗರಪರಿಪಾಲನಸಭೆ (Municipality) ಯ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. ಅನಂತರ ಫರೀದ್‌ಪುರದಲ್ಲಿ ನಡೆದ ಬಂಗಾಳದ ಪ್ರಾಂತಿಕ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಮಾಡಿದ ಭಾಷಣವು ಭಾರತೀಯಲ್ಲಿ ಒಂದುವಿಧವಾದ ನೂತನೋತ್ಸಾಹವನ್ನುಂಟುಮಾಡಿತು. ಪುನಃ ದೇಹಾಲಸ್ಯವು ಹೆಚ್ಚಿ ತಮ್ಮ ಪತ್ನಿಯ ವರೊಡನೆ ಡಾರ್ಜಿಲಿಂಗಿಗೆ ಹೊರಟಿದ್ದರು. ಮಹಾತ್ಮಜೀಯವರು ಇವರ ಅತಿಥಿಗಳಾಗಿದ್ದ ಒಂದು ವಾರವೂ ಪ್ರಸ್ತುತ ರಾಜಕೀಯಸ್ಥಿತಿಯ ವಿಷಯವಾಗಿ ದೀರ್ಘವಾಗಿ ಯೋಚಿಸಿದರು. ಸ್ವರಾಜ್ಯಸಾಧನೆಗೆ ಮುಖ್ಯಾಯುಧವು ಕಡ್ಡಾಯವಾಗಿರಬೇಕೆಂದು ಮಹಾತ್ಮಜೀಯವರು ಹೇಳಿದ್ದನ್ನು ಮನಃಪೂರ್ವಕವಾಗಿ ಅನುಮೋದಿಸಿ ರಾಷ್ಟ್ರೀಯ ಸಭೆಗೆ ಮಿತವಾದಿಗಳೂ (Moderates) ಇತರರೂ ಸದಸ್ಯರಾಗಬಹುದೆಂಬ ಠರಾವನ್ನೊಪ್ಪಿಕೊಂಡು ಮಹಾತ್ಮಜೀಯವರೂ ತಾವೂ ಸೇರಿ ಭರತಖಂಡವಾಸಿಗಳಿಗೆಲ್ಲಾ ಒಂದು ಸಂದೇಶವನ್ನು ಕಳುಹಿಸಿದರು. ಈ ಮಧ್ಯೆ ಡಾಕ್ಟರ್ ಬೆಸೆಂಟರವರೂ ಇವರನ್ನು ಕಂಡು ಮಾತನಾಡಿ ಮುಂದಿನ ಕಾರ್ಯಕ್ರಮವನ್ನು ನಿರ್ಧರಿಸಿದರು.

ಬಂಗಾಳದ ಹಳ್ಳಿಗಳ ಪುನರುದ್ಧಾರಣಕ್ಕಾಗಿ ಈತನು ಪಟ್ಟಕಷ್ಟವು ಅಷ್ಟಿಷ್ಟಲ್ಲ. ದೇಶ ಬಂಧುವು ಪ್ರಸಿದ್ಧವಾದ ತ್ಯಾಗಮೂರ್ತಿಯು. ತಾನು ಕಷ್ಟಪಟ್ಟು ಸಂಪಾದಿಸಿದ ಸರ್ವಸ್ವವನ್ನೂ ದೇಶಕ್ಕಾಗಿ ಚಲ್ಲಿದರು. ಕೊನೆಗೆ ತಾವಿದ್ದ ರಾಜಗೃಹದಂತಹ ಸೌಧವನ್ನೂ ಕೂಡ ಋಣವಾಗಿ ಭಾವಿಸಿ ಸರ್ವಸ್ವವನ್ನೂ ತ್ಯಜಿಸಿ ತ್ಯಾಗಿಯಾಗಿ ದೇಶಬಂಧನವನ್ನು ಬಿಡಿಸಲು ಹೊರಟರು. ಕಲಿಯುಗದ ಕರ್ಣನೆಂಬ ಹೆಸರೂ ದೃಢ ನಿಶ್ಚಯದಲ್ಲಿ ಭೀಷ್ಮನೆಂಬ ಹೆಸರೂ ಈ ಪುಣ್ಯಮೂರ್ತಿಗೆ ಸಲ್ಲುವುದು. ಕಲ್ಕತ್ತೆಯ ರಸ್ಸಾರೋಡಿನಲ್ಲಿರುವ 148 ನೇ ನಂಬರಿನ ಮನೆಯಲ್ಲಿ ಸವಿಾಪದಲ್ಲಿ ತಾನಿಳಿದಿದ್ದಾಗ, ಇಷ್ಟೊಂದು ರಾಜಸುಖವನ್ನೂ ತ್ಯಜಿಸಿ ಭಗವದ್ಭಕ್ತಿಯುಕ್ತ ದೇವನಂತೆ ನಿಸ್ವಾರ್ಥತ್ಯಾಗಿಯಾಗಿ ಹೊರಹೊರಟ ದೇಶಬಂಧುವನ್ನು ನೋಡಿದಾಗ ಉಕ್ಕಿಬರುವ ಕಣ್ಣೀರನ್ನು ಹಿಡಿಸುವುದು ತನ್ನಿಂದ ಸಾಧ್ಯವಾಗಲಿಲ್ಲವೆಂದು ಮಹಾತ್ಮಜೀಯವರು ಹೇಳಿದರು. ಅಂತಹ ತ್ಯಾಗಿಯು ತನ್ನ ಅಸಂಖ್ಯಾತರಾದ ಸಹಪಾಠಿಗಳನ್ನು ದುಃಖಸಾಗರದಲ್ಲಿ ಮುಳುಗಿಸಿ ಪರಲೋಕಗತರಾದರು. ಬಂಗಾಳದ ದ್ವಿಮುಖ ಸರ್ಕಾರವನ್ನು ನಿರ್ಮೂಲವಾಗಿ ಮುರಿಯಬೇಕೆಂದು ರಾತ್ರೀ ಹಗಲೂ ಒದ್ದಾಡಿದ ಮಹನೀಯರು ತಮ್ಮ ಸ್ವಾರ್ಥವು ನೆರೆವೇರಿದುದನ್ನು ಕಣ್ಣಿನಿಂದ ನೋಡದೆಹೋದರು. ಇಂತಹ ದೃಢ ನಿಶ್ಚಯವೂ ದೇಶಾಭಿಮಾನವೂ ಉಳ್ಳ ದೇಶಬಂಧುವು ಸ್ವತಂತ್ರರಾಜ್ಯದಲ್ಲಿದ್ದಿದ್ದರೆ ಪ್ರಥಮಮಂತ್ರಿಸ್ಥಾನವನ್ನು ಪಡೆದು ಸುಖವಾಗಿರುತಿದ್ದರು. ಈ ಭರತಖಂಡದಲ್ಲಿ ಬಂಧನವೂ, ಭಿಕ್ಷುಕವೇಷವೂ ಮಾತ್ರವೇ ಅವರಿಗೆ ಉಂಟಾಯಿತು. ಭಾರತಮಾತೆಯ ಅನುಗ್ರಹವಿಷ್ಟೇ! ತನ್ನ ಸರ್ವಸ್ವವನ್ನೂ ಕೊನೆಗೆ ತನ್ನ ಅಮೂಲ್ಯವಾದ ಜೀವವನ್ನೂ ಆತ್ಮವನ್ನೂ ಭರತಮಾತೆಯ ಅಡಿದಾವರೆಗಳಿಗೆ ಸಮರ್ಪಿಸಿದರು. ಇ ರಂಥಾ ತ್ಯಾಗಿಯು ಈ ಕಾಲದಲ್ಲಿ ಬಹಳ ಅಪರೂಪವೆಂದೇ ಹೇಳಬೇಕಾಗಿ ಇವರ ರಾಜಕೀಯ ತತ್ವಗಳನ್ನು ಕೈಕೊಳ್ಳಲು ಧೈರ್ಯವಿಲ್ಲದ ಮಹನೀಯರು ಇವರ ತ್ಯಾಗಗುಣವನ್ನೂ ದೇಶಾಭಿಮಾನವನ್ನೂ ಹಿಂಬಾಲಿಸಿದರೆ ಚಿತ್ತರಂಜನರು ಭರತಖಂಡಕ್ಕೆ ಮಾಡಿದ ಅಪೂರ್ವವಾದ ಕೆಲಸವನ್ನು ಸ್ಮರಿಸಿದಂತಾಗುವುದು. ಇವರ ಅಕಾಲಮರಣದಿಂದ ಸಮಸ್ತ ಭಾರತವರ್ಷವೂ ಅನೇಕ ಪಾಶ್ಚಾತ್ಯರೂ ಕಣ್ಣೀರು ಸುರಿಸುತ್ತಿರುವರು. ಹಿಂದೂ ಮುಸಲ್ಮಾನರ ಐಕ್ಯಮತ್ಯಕ್ಕಾಗಿ ಬಹಳ ಕಷ್ಟಪಟ್ಟರು. ಈ ಕಾರ್ಯನಿರ್ವಹಣಕ್ಕೆ ಇವರಷ್ಟು ಶಕ್ತಿವಂತರು ಮತ್ತಾರೂ ಇರಲಿಲ್ಲ. ಬಂಗಾಳಕ್ಕೆ ಲಾರ್ಡ್ ಲಿಟ್ಟನ್ ಪ್ರಭುಗಳು ಹೆಸರಿಗೆ ಮಾತ್ರ ಅಧಿಪತಿಯಾಗಿದ್ದರೂ ದೇಶಬಂಧುಗಳು ಅನಭಿಷಿಕ್ತ ವಂಗಚಕ್ರವರ್ತಿಯಾಗಿದ್ದರೆಂದು ಅನೇಕ ಮುಂದಾಳುಗಳು ಸೂಚಿಸಿರುವರು. ಇವರ ಉಜ್ವಲವಾದ ದೇಶಭಕ್ತಿಯೇ ಇವರಿಗೆ "ದೇಶಬಂಧು" ಎನ್ನುವ ಬಿರುದನ್ನು ಸಂಪಾದಿಸಿಕೊಟ್ಟಿತು. ಮರಣಕಾಲದಲ್ಲಿಯೂಕೂಡ ತಾವು ಪ್ರಾರಂಭಿಸಿರುವ ಕಾರ್ಯಕ್ರಮಗಳನ್ನು ನೆರವೇರಿಸಬೇಕೆಂಬ ಸಂದೇಶವನ್ನೇ ಕೊಟ್ಟುಹೋದರು. ಈಗ ನಮ್ಮ

ಕರ್ತವ್ಯವೇನೆಂದರೆ, ಅವರು ಪ್ರಾರಂಭಿಸಿರುವ ಕೆಲಸವನ್ನು ಅಖಿಲ ಭಾರತೀಯರೂ ಒಂದುಗೂಡಿ ನಡೆಸಬೇಕಾದುದೇ. ಅವರ ಮರಣವು ನಮ್ಮ ಭರತಮಾತೆಯ ದೌರ್ಭಾಗ್ಯದಿಂದಾದುದು. ಅದನ್ನು ಕುರಿತು ಚಿಂತಿಸುವುದನ್ನು ಬಿಟ್ಟು ಅವರ ಉಪದೇಶವನ್ನು ಗ್ರಹಿಸಿ ಅನುಸರಿಸಿ ನಡೆದರೆನಾತ್ರ ಅವರ ಕಾರ್ಯಕ್ರಮವನ್ನು ನೆರವೇರಿಸುವೆನೆನ್ನುವ ದೃಢನಿಶ್ಚಯವನ್ನು ಮಾಡಿದರೆ ಮಾತ್ರ ಅವರ ಆತ್ಮವು ತೃಪ್ತಿಹೊಂದುವುದಲ್ಲದೆ, ದೊಡ್ಡದೊಡ್ಡ ಸಭೆಗಳೂ, ಸಂತಾಪಸೂಚಕವಾದ ತಂತೀ ವರ್ತಮಾನಗಳೂ, ದೊಡ್ಡದೊಡ್ಡ ಠರಾವುಗಳೂ, ದೊಡ್ಡದೊಡ್ಡ ಸೌಧನಿರ್ಮಾಣಗಳೂ ಅವರ ಆತ್ಮಕ್ಕೆಳ್ಳಷ್ಟೂ ತೃಪ್ತಿಯನ್ನುಂಟುಮಾಡಲಾರವು. ನಾವು ಅವರ ಪವಿತ್ರನಾಮದ ಸ್ಮಾರಕನಿರ್ಮಾಣಮಾಡಬೇಕಾದರೆ ಕಾಯಾ ವಾಚಾ ಮನಸಾ ಅವರನ್ನೂ ಅವರ ಪಂಥವನ್ನನುಸರಿಸಬೇಕಲ್ಲದೆ ಮತ್ತಾವ ವಿಧವಾದ ಕಾರ್ಯದಿಂದಲೂ ಅವರ ಸ್ಮಾರಕವನ್ನು ಮಾಡಿದಹಾಗಾಗುವುದಿಲ್ಲ. ತನ್ನ ಸಹಪಾಠಿಗಳು, ತನ್ನ ಹಿಂಬಾಲಕರು, ತನ್ನ ದೇಶವಾಸಿಗಳು, ತನ್ನ ಪ್ರಜೆಗಳು ತಾನು ಪ್ರಾರಂಭಿಸಿದ ಕಾರ್ಯಕ್ರಮವನ್ನು ನಡೆಸಿ ಜೈಸುವರೆಂಬ ನಿಶ್ಚಯದಿಂದ ದೇಶಬಂಧುವಿನ ಆತ್ಮವು ಶಾಂತವಾಗಿ ನಿದ್ರಿಸಲಿ.

ಓಂ ಶಾಂತಿ ಶಾಂತಿ ಶಾಂತಿಃ.

ಸುಲಭ ಚಿಕಿತ್ಸೆ.



ರೋಗ ಚಿಕಿತ್ಸೆಗಿಂತಲೂ ಆರೋಗ್ಯಜೀವನವೇ ಮೇಲು. ವಿಷಯಲೋಲುಪರಾಗಿ ದೇಹಾರೋಗ್ಯವನ್ನೂ ಬುದ್ಧಿಯನ್ನೂ ಕೆಡಿಸಿಕೊಳ್ಳುವುದಕ್ಕಿಂತ ಶಾಸ್ತ್ರೋಕ್ತ ಜೀವನದಿಂದ ಸುಖಿಯಾಗಿರುವವನು ಭಾಗ್ಯಶಾಲಿ. ಆದರೆ ಸುಖಜೀವನವೇ ಧರ್ಮ ಜೀವನವೆಂಬ ತಪ್ಪುತಿಳುವಳಿಕೆಯು ಹೆಚ್ಚಿನ ಜನತೆಗಿರುವುದರಿಂದ ಈ ಕಾಲದಲ್ಲಿ ಎಲ್ಲೆಲ್ಲಿಯೂ ರೋಗಿಗಳೂ ವೈದ್ಯರೂ ಕಂಡುಬರುತ್ತಾರೆ. ರೋಗಿಗಳೂ, ಆಸ್ಪತ್ರೆಗಳೂ, ದುಷ್ಟರೂ, ಕೋರ್ಟುಸೆರೆಮನೆಗಳೂ ಸಂಸ್ಕೃತಿಯ ಚಿನ್ಹೆಗಳಲ್ಲ. ಚೀನಾದೇಶದಲ್ಲಿ ಯಾವುದೋ ಒಂದು ಸರಕಾರದ ಆಸ್ಪತ್ರಿಯೊಳಗೆ ರೋಗಿಗಳ ವಾರ್ಷಿಕ ಸಂಖ್ಯೆಯು ಹೆಚ್ಚಾದರೆ ವೈದ್ಯನ ಸಂಬಳವನ್ನೇ ಕಡಿಗಿಸುತ್ತಾರೆ. ಇದರಿಂದ ವೈದ್ಯರು ರೋಗ ವಿಶೇಷವಾಗದಂತೆ ಕೊಡಬೇಕಾದ ಶಿಕ್ಷಣವನ್ನು ಜನರಿಗೆ ಕೊಟ್ಟು ಅಕಸ್ಮಾತ್ತಾಗಿ ಬಂದ ಸಾಧಾರಣರೋಗಗಳ ಚಿಕಿತ್ಸೆಯನ್ನು ತಾವೇ ಮಾಡುವಂತೆ ಉಪದೇಶಮಾಡುತ್ತಾರೆ. ಇದರಿಂದ ಜನರಿಗೆ ಆರೋಗ್ಯತತ್ವಸಾಧನೆಗಳೂ, ರೋಗ ಪ್ರತಿಬಂಧಕ ಕ್ರಮಗಳೂ, ಸಾಧಾರಣ ರೋಗಚಿಕಿತ್ಸೆಯೂ ತಿಳಿಯಬರುತ್ತವೆ.

ಅದರಿಂದ ಜರಾ, ವ್ಯಾಧಿ, ಮರಣಗಳು ಕಡಮೆಯಾಗುತ್ತ ಆ ದೇಶದ ಜನರು ಮುಂದಕ್ಕೆ ಬರುತ್ತಿದ್ದಾರೆ. ಸಾತ್ವಿಕ ವ್ಯವಹಾರಗಳನ್ನಿಟ್ಟುಕೊಂಡವರ ಮನಸ್ಸು ಮಾತ್ರ ಧಾರ್ಮಿಕ ಬುದ್ಧಿಯಿಂದ ಸಾತ್ವಿಕವಾಗಿಯೇ ಇರತಕ್ಕದ್ದು. ಮನಸ್ಸಿನಲ್ಲಿ ಸತ್ವಗುಣವೇ ವಿಶೇಷವಾಗಿದೆಯೆಂದು ಸಾಂಖ್ಯಯೋಗದ ಸಿದ್ಧಾಂತ. ಶರೀರೇಂದ್ರಿಯ ಸ್ಥಿತಿಗತಿಗಳು ಅದರಲ್ಲಿ ಪ್ರತಿಬಿಂಬಿಸುವುದರಿಂದ ಆ ಸತ್ವಕ್ಕೆ ಧಂಗಬರುತ್ತದೆ. ಇಂಥ ಪ್ರತಿಬಿಂಬವನ್ನು ನಿರೋಧಿಸುವುದೂ ಮತ್ತು ಅದಕ್ಕಾಗಿ ದೇಹವನ್ನು ಉತ್ತಮಸ್ಥಿತಿಯಲ್ಲಿಡಲಿಕ್ಕೆ ಬೇಕಾದ ಸಾಧನಗಳನ್ನು ಮಾಡುವುದೂ ರಾಜಯೋಗ ಹಠಯೋಗಗಳ ಕರ್ತವ್ಯವಾಗಿದೆ. ''ಶರೀರಮಾದ್ಯಂಖಲುಧರ್ಮಸಾಧನಂ'' ಎಂದು ಕಾಳಿದಾಸನ ವಚನವಿದೆ. ಆದುದರಿಂದ ಧರ್ಮಸಾಧನೆಯು ಸಾಂಗೋಪಾಂಗವಾಗಿ ನಡೆಯುವಂತೆ ಕಲಿಯಬೇಕಾದ ವಿದ್ಯೆಯನ್ನು ಸಂಪಾದಿಸುವುದೂ ಧರ್ಮವೇ.

ಕೆಳಗೆ ಪುರುಷರೂ ಸ್ತ್ರೀಯರೂ ತಿಳಿದುಕೊಳ್ಳುವಂತೆ ಸಾಧಾರಣ ರೋಗಗಳ ಕಾರಣ, ನಿದಾನ, ಚಿಕಿತ್ಸೆಗಳು ವರ್ಣಿಸಲ್ಪಟ್ಟಿವೆ. ಆದರಲ್ಲಿರುವ ಎಲ್ಲ ಪದಾರ್ಥಗಳೂ ಹಳ್ಳಿಪಳ್ಳಿಗಳಲ್ಲಿಯೂ ಸುಲಭವಾಗಿ ದೊರೆಯುವಂಥವಾಗಿರುವುದರಿಂದ ಅವುಗಳನ್ನು ಸಿದ್ಧಪಡಿಸುವುದು ಎಲ್ಲರಿಗೂ ಅನುಕೂಲ. ಆಯುರ್ವೇದದಲ್ಲಿ ಉಪದ್ರವಿ ಮತ್ತು ನಿರುಪದ್ರವಿ ಎಂಬ ಎರಡು ವಿಧವಾದ ಔಷಧಿಗಳಿವೆ. ಈ ''ಸುಲಭ ಚಿಕಿತ್ಸೆ''ಯಲ್ಲಿ ಬರೆದ ಎಲ್ಲ ಪದಾರ್ಥಗಳೂ ನಿರುಪದ್ರವಿಯಾಗಿವೆ. ಬಲ್ಲಿದನಾದ ವೈದ್ಯನು ಮಾಡುವ ನಿದಾನಗಳೆಲ್ಲವೂ ತಿಳಿಯುವುದು ಇವುಗಳಿಗೆ ಅನವಶ್ಯಕ. ಏಕಂದರೆ, ಆರೋಗ್ಯದಿಂದಿರುವ ಮನುಷ್ಯನು ಇವುಗಳಲ್ಲಿಯ ಯಾವುದಾದರೊಂದು ಔಷಧವನ್ನು ಸೇವಿಸಿದರೆ ಅವನಿಗೇನೂ ಬಾಧೆಯಾಗಲಿಕ್ಕಿಲ್ಲ. ಬುದ್ಧಿಯು ಚುರುಕಾಗಿದ್ದರೆ ವಿಶೇಷ ಗುಣವಾಗುವುದು ನಿಶ್ಚಯವಲ್ಲದೆ ಅದು ಸ್ವಲ್ಪ ಕಡಮೆಯಾಗಿದ್ದವರು ಇವನ್ನುಪಯೋಗಿಸಿದರೆ ಅಪಾಯಬರುವ ಸಂಭವವೇನೂ ಇಲ್ಲ.

ಹತ್ತಿಪ್ಪತ್ತು ವರ್ಷಗಳ ಹಿಂದಿನವರೆಗೆ ಮುದುಕರಿಗೂ ಮುದುಕಿಯರಿಗೂ ಇವುಗಳಲ್ಲನೇಕ ಉಪಾಯಗಳು ತಿಳಿದಿದ್ದವು. ಇತ್ತೀಚೆಗೆ ಗೃಹಶಿಕ್ಷಣವು ಸಹಮುಳುಗಿ ಹಾಳಾಗಿ ಈಗಿನ ವೈದ್ಯರಲ್ಲಿದ್ದ ಸಾಧಾರಣ ಪುರುಷ ಸ್ತ್ರೀಯರಿಗೆ ವಿಷಯಲಾಂಪಟ್ಯವನ್ನು ಬಿಟ್ಟಿನ್ನೇನೂ ಗೊತ್ತಿಲ್ಲ. ಸ್ವಲ್ಪ ಕಾಯಿಲೆಯಾದೊಡನೆಯೇ ವೈದ್ಯನು ಮನೆಗೆ ಬರಲೇಬೇಕು. ಕಷ್ಟಪಟ್ಟು ದುಡಿದು ತಂದ ಹಣವನ್ನು ಹಾಳುಮಾಡದೆ ಆರೋಗ್ಯವು ಲಭಿಸುವುದಿಲ್ಲ. ಮತ್ತು ಅನೇಕ ವೈದ್ಯರು ಸ್ಥಳಾನಗೋರಿಗಳ ಗುತ್ತೇದಾರರೆಂಬಂತೆ ಇರುತ್ತಾರೆ. ರೋಗಿಗಳಿಗೆ ಬೇನೆಯ ಕಾರಣವನ್ನು ವಿವರಿಸಿಹೇಳುವ ವೈದ್ಯರು ಬಹಳಕಡಮೆ. ನಮ್ಮ ಆಹಾರವ್ಯವಹಾರ ದೇಹಮನಸ್ಸುಗಳ ಸ್ಥಿತಿಗತಿಗಳಿಗೊಳಪಡದ ಎಷ್ಟೋ ಔಷಧಗಳು ಈಗ ಉಪಯೋಗಿಸಲ್ಪಡುತ್ತಿವೆ. ಈ ಅಜ್ಞಾನದಿಂದ ನಮ್ಮ ದೇಶ ಮತ್ತು ದೇಶಗಳು ರೋಗದಾಗರವಾಗಿವೆ.

ಸಾಧಾರಣ ಹದಿಮೂರು ವರ್ಷಗಳ ವೈದ್ಯಕೀಸೇವೆಯಿಂದ ನನ್ನ ಅನುಭವಕ್ಕೆ ಬಂದ ಈ ವಿಷಯಗಳನ್ನಿಲ್ಲಿ ಪ್ರಕಟಿಸಿರುವ ಕಾರಣವೇನಿರಬಹುದೆಂದು ವಾಚಕರು ತಾವೇ ಊಹಿಸಿ ತಿಳಿಕೊಳ್ಳಬಹುದು. ಇದರಿಂದೆಲ್ಲರಿಗೂ ಹಿತವಾಗಬೇಕೆಂಬುದೊಂದೇ ನನ್ನ ಇಚ್ಛೆ. ಈ ಚಿಕಿತ್ಸೆಯನ್ನು ಕುರಿತು ಏನಾದರೂ ತಿಳಿದುಕೊಳ್ಳಬೇಕೆಂದು ಯಾರಾದರೂ ಇಚ್ಛಿಸಿದರೆ ನನಗೊಂದು ರಿಪ್ಲೈ ಕಾರ್ಡು ಬರೆದರೆ ನನ್ನ ಯೋಗ್ಯತಾನುಸಾರ ಅರಿವನ್ನು ಮಾಡಿಕೊಡುವೆನು. ಪರೋಪಕಾರಿಗಳಾದ ಪ್ರೇಮಮೂರ್ತಿಗಳು ಈ ಚಿಕಿತ್ಸೆಯ ಶ್ರಮವನ್ನು ಜನ್ಮಾಗಿ ತಿಳಿದುಕೊಂಡರೆ ಹಳ್ಳಿ ಊರುಗಳಿಗೆ ಹೋಗಿ ಔಷಧ ಆಶ್ರಯಕೆಯಿಲ್ಲದ ಅನೇಕಜನರಿಗುಪಕಾರಮಾಡಿ ಪುಣ್ಯವಂತರಾಗಬಹುದು. ಸತ್ಯಾತ್ಯದಿಂದ ಮುಖ್ಯಾದೆಯು ತಾನೇ ಬರುವುದು. ಅಂಥವರ ಉಪದೇಶವು ಸಮಾಜಕ್ಕೆ ಬೇಗನೆ ನಾಟುವುದು. ಆದಕಾರಣ ಲೋಕಸಂಗ್ರಹಮಾಡಿಕೊಂಡು ಜನರನ್ನು ಧರ್ಮಪ್ರವೃತ್ತರಾಗಿ ಮಾಡಲಿಕ್ಕೆ ಇದೊಂದು ಸುಲಭ ಸಾಧ್ಯ, ಅಗತ್ಯ ಮತ್ತು ಯೋಗ್ಯ ಉಪಾಯ.

ಈ ನನ್ನ ಸೇವೆಯಿಂದುಪಯೋಗ ಕಂಡುಬಂದರೆ ಮುಂದೆ ಆಯುರ್ವೇದ ಶಾಸ್ತ್ರದ ವಿಷಯಕ್ಕೆ ವಿಶೇಷಜ್ಞಾಪನ್ನು ಕೊಡಬೇಕೆಂದು ನನ್ನ ಕಾಂಕ್ಷೆ. ರಾಷ್ಟ್ರಜೀವನಕ್ಕೆ ಅಸ್ತಿಭಾರವಾದ ಶಿಶುಸಂಗೋಪನ ಶಿಕ್ಷಣವನ್ನು ಕುರಿತು ಲೇಖನಗಳು ಬರೆಯಲ್ಪಡುವವು. ಜಗತ್ತಿನಲ್ಲಿ ಪ್ರಸಿದ್ಧವಾಗಿರುವ ಚಿಕಿತ್ಸಾವಿಧಿಗಳನ್ನು ಪರಿಶೀಲಿಸಿ ಎಲ್ಲವುಗಳನ್ನು ಕುರಿತು ಮುಖ್ಯವಾದ ಜ್ಞಾನವನ್ನು ಸಾಧಾರಣ ಜನರಿಗೂ ವೈದ್ಯರಿಗೂ ಉಪಯೋಗವಾಗುವಂತೆ ಬರೆಯಬೇಕೆಂದೂ, ಮುಂದೆ ಗಾಯನಶಾಸ್ತ್ರ, ವರ್ಣ (ಬಣ್ಣ) ಶಾಸ್ತ್ರ, ಯೋಗಶಾಸ್ತ್ರ, ಮಂತ್ರಶಾಸ್ತ್ರ, ಜ್ಯೋತಿಷಶಾಸ್ತ್ರ ಮತ್ತು ಆಯುರ್ವೇದ ಶಾಸ್ತ್ರಗಳ ಪರಸ್ಪರ ಸಂಬಂಧವನ್ನು ಸ್ಪಷ್ಟವಾಗಿ ಉಪಯೋಗಕ್ಕೆ ಬರುವಂತೆ ತೋರಿಸಬೇಕೆಂದೂ ಕುತೂಹಲವಿದೆ. ಆದರೆ ದೊಡ್ಡ ಕಾರ್ಯವು ಜಗನ್ಮಾತೆಯ ಕೃಪೆಯಿಂದಲೂ ದೇಶ ಧರ್ಮ ವಿದ್ಯಾಭಿಮಾನಿಗಳಾದವರ ಪ್ರೋತ್ಸಾಹದಿಂದಲೂ ನಡೆಯಬೇಕು. ನನ್ನ ಪ್ರೇಮಸೇವೆಯು ಮಾತೆಗೆ ಸಮ್ಮತವಾಗಲಿ.

ಪಥ್ಯಾಪಥ್ಯ ವಿಷಯಗಳು.

ಎಲ್ಲ ರೋಗಗಳಿಗೂ ಸಾಧಾರಣವಾಗಿ ಅನ್ನ, ಹಾಲು, ಮಜ್ಜಿಗೆ, ಒಳ್ಳೆಯ ಕಾಯಿಪಲ್ಯಗಳು ಮುಂತಾದ ಸಾತ್ವಿಕ ಪದಾರ್ಥಗಳನ್ನುಣ್ಣಬಹುದು. ಹೊಟ್ಟೆ ಪೂರ್ತಿಯಾಗಿ ಕುಂಬುವವರೆಗೆ ಉಣ್ಣುವುದು ಎಲ್ಲರಿಗೂ ಅಪಾಯಕರವಾಗಿದೆ. ರೋಗಿಗಳಾದರೂ ಹೊಟ್ಟೆಯನ್ನು ಹಗುರವಾಗಿಟ್ಟುಕೊಳ್ಳುವಂತೆ ಇರಬೇಕು. ಬೇಳೆಗಳನ್ನುಪಯೋಗಿಸಿದ್ದಲ್ಲಿ ಅವುಗಳ ಕಟ್ಟನ್ನು ಜೀರಿಗೆ ಜಿಗ್ಗರಣೆ, ಸೈಂಧವ

ಲವಣ ಮೆಣಸು ಹಾಕಿ ಉಪಯೋಗಿಸುವುದು ಬಹಳ ಉತ್ತಮ. ಸಾರು ಮುಂತಾದ ಹುಳಿ ಸೇರಿದ ಪದಾರ್ಥಗಳಿಗಿಂತಲೂ ಪ್ರತಿದಿನವೂ ಕಟ್ಟಿನ ರೂಢಿಯನ್ನೇ ಇಟ್ಟುಕೊಳ್ಳುವುದು ಬಹಳ ಉತ್ತಮ. ಇದರಿಂದಲೇ ಅನೇಕ ರೋಗಗಳು ಔಷಧವಿಲ್ಲದೆ ದೂರವಾಗುತ್ತವೆ. ಇಂದ್ರಿಯಚಾಪಲ್ಯವೇ ರೋಗಗಳಿಗೆ ಮುಖ್ಯ ಕಾರಣ. ಮತ್ತು ಅದನ್ನು ಭೋಗದಿಂದ ಶಮನಮಾಡುವುದು ಸಾಧ್ಯವೇ ಇಲ್ಲ. ಹುಳಿ ಕಾರಗಳನ್ನು ಅತಿಯಾಗಿ ತಿಂದು ರೂಢಿಯಿದ್ದವರಿಗೆ ಎರಡುಮೂರು ದಿನಗಳ ವರೆಗೂ ತೊಂದರೆಯಾಗಬಹುದು. ಈ ನಮ್ಮ ಅಶ್ರಮದಲ್ಲಿಯೇ ಹುಳಿ ಕಾರವನ್ನು ಯಾವಾಗಲೂ ತಿನ್ನುವವರಿಗೆ ರೋಗಗಳು ಅಂಟುವುದು ಹೆಚ್ಚು. ಕಟ್ಟು, ಅನ್ನ, ರೊಟ್ಟಿ, ಕಾಯಿಪಲ್ಯವನ್ನುಣ್ಣುವವರ ಆರೋಗ್ಯವು ಬಹುಚನ್ನಾಗಿರುತ್ತದೆ.

ರೋಗಿಗಳು ಸಾಧಾರಣವಾಗಿ ಕಡಲೆ, ಉದ್ದು, ಮೆಂತಸರು, ಕರೆದ ಪದಾರ್ಥಗಳು, ಹುಣಸೇ ಹುಳಿ, ಎಣ್ಣೆ, ಒಲಿತ ಬದನೇಕಾಯಿ, ಪುಂಡಿ ಪಲ್ಯ, ಮುಂತಾದ ಜಡ ಪದಾರ್ಥಗಳನ್ನು ವರ್ಜಿಸಬೇಕು. ವಿಶೇಷ ಪಥ್ಯವಿದ್ದಲ್ಲಿ ಅಲ್ಲಲ್ಲೇ ಸೂಚಿಸಲ್ಪಡುವುದು.

ಪಯೋಮಾನ— ಔಷಧಗಳ ಪ್ರಮಾಣ.

ಈಗ ಔಷಧಗಳ ಪರಿಮಾಣವನ್ನು ವಯಸ್ಸಿಗನುಸಾರವಾಗಿ ತಿಳಿದುಕೊಳ್ಳಬಹುದು.

ವಯೋಮಾನ	...	ಪ್ರಮಾಣ
1—2ರ ವರೆಗೆ	....	$\frac{1}{12}$—$\frac{1}{8}$ ವರೆಗೆ
2—4 ,,	....	$\frac{1}{8}$—$\frac{1}{4}$,,
4—6 ,,	....	$\frac{1}{4}$—$\frac{1}{3}$,,
6-12 ,,	...	$\frac{1}{3}$—$\frac{1}{2}$,,
12-15 ,,	....	$\frac{1}{2}$—$\frac{2}{3}$,,
16ರಿಂದ ಮೇಲೆ	....	ಪೂರ್ಣ.

ಕೆಳಗೆ ಕೊಟ್ಟ ಪ್ರಮಾಣಗಳೆಲ್ಲವೂ ಪೂರ್ಣಪ್ರಮಾಣಗಳು. ಅದುದರಿಂದ ಮೇಲೆ ಕಾಣಿಸಿದ ಪಟ್ಟಿಯಲ್ಲಿದ್ದಂತೆ ವಯಸ್ಸನ್ನು ತಿಳಿದುಕೊಂಡು ಪ್ರಮಾಣಗಳನ್ನು ನಿಶ್ಚಿಸಬೇಕು. ಔಷಧಗಳು ನಿರುಪದ್ರವಿಯಾಗಿರುವುದರಿಂದ ಸ್ವಲ್ಪ ಹೆಚ್ಚು ಕಮ್ಮಿಯಾದರೆ ಏನೇನೂ ಅಪಾಯವಾಗುವುದಿಲ್ಲ.

ತೂಕದ ವಿಷಯ ಸ್ವಲ್ಪ ತಿಳಿದುಕೊಳ್ಳಬೇಕು.

ತೂಕಗಳು.

4 ಧಾನ್ಯಗಳು	=	1 ರತ್ತಿ
8 ರತ್ತಿಗಳು	=	1 ಮಾಶೆ
12 ಮಾಶೆಗಳು	=	1 ತೊಲೆ
೮ ತೊಲೆಗಳು	=	೧ ಚಟಾಕು

180 ಗ್ರೈನುಗಳು (grains)ಅಥವಾ ೧ ಡ್ರಾಮುಗಳು (drams) ಒಂದು ತೊಲೆ ಅಥವಾ ರೂಪಾಯಿ ತೂಕಕ್ಕೆ ಸರಿಯಾಗುವವು.

1 ಡ್ರಾಮಿಗೆ	...	8 ಮಾಶೆಗಳಾಗುತ್ತವೆ
1 ರತ್ತಿಗೆ	...	2 ಗ್ರೈನುಗಳಾಗುತ್ತವೆ.

ಮುಂದಿನಸಂಚಿಕೆಯಿಂದ ನಿದಾನಚಿಕಿತ್ಸೆಯ ವಿಷಯವು ಕ್ರಮೇಣ ತಿಳಿಸಲ್ಪಡುವವು.

ಬಿಡಿನುಡಿಗಳು.

ಗ್ರಂಥಗಳು ಮತ್ತು ಪತ್ರಿಕೆಗಳು.

ಈ ಕೆಳಗೆ ವಿವರಿಸಿರುವ ವಿಷಯಗಳು ದಿ ಜಪಾನ್ ಮ್ಯಾಗಸೈನ್ (The Japan Magazine) ಎಂಬ ಪತ್ರಿಕೆಯಿಂದ ಸಂಗ್ರಹಿಸಲ್ಪಟ್ಟಿರುವುದು.

"ಸ್ವೀಯರಸಲುವಾಗಿ ಪ್ರಕಟಿಸಲ್ಪಡುವ ಪತ್ರಿಕೆಗಳು ಈಗ ಬಹಳ ಅಭಿವೃದ್ಧಿಯಲ್ಲಿವೆ. ಇತರ ಪತ್ರಿಕೆಗಳಿಗಿಂತಲೂ ಇವು ಹೆಚ್ಚಾಗಿ ವಿಕ್ರಯಿಸಲ್ಪಡುತ್ತಲಿವೆ. ಆದುದರಿಂದ ಪತ್ರಿಕಾಪ್ರಚಾರಕರು ಕಾದಂಬರಿ ಮೊದಲಾದ ಲೇಖನಗಳನ್ನು ಬರೆಯತಕ್ಕವರಿಗೆ ಸಾಕಾದಷ್ಟು ಪ್ರತಿ ಸಹಾಯವನ್ನು ಮಾಡುವರು. ಜಪಾನ್ ದೇಶದ ಪತ್ರಿಕೆಗಳಲ್ಲಿ "ಫುಜೂಕಾಯ್" (Phujoo Kai) ಮತ್ತು ಷುಫುನೋಟೋಮೋ (Shufu-no-tomo) ಎಂಬುವುಗಳು ಅಗ್ರಸ್ಥಾನವನ್ನು ವಹಿಸಿವೆ. ಈ ಮಾಸಪತ್ರಿಕೆಯ ಪ್ರಚಾರವು ೩,೦೦,೦೦೦ ಇದೆ. ಕೋಡಕ್ ಕ್ಯಾ

(Kodan club) ವೊದಲಾದ ಮಕ್ಕಳಿಗೆ ಸಂಬಂಧಿಸಿದ ವಿಷಯಗಳನ್ನೊಳಗೊಂಡ ಪತ್ರಿಕೆಗಳೂ, ಜನಾನುರಾಗವನ್ನು ಪಡೆದಿರುವ ಇತರ ಕೆಲವು ಪತ್ರಿಕೆಗಳೂ ಹೊರತಾಗಿ ಮೇಲ್ಕಂಡ ಪತ್ರಿಕೆಗಳಿಗೆ ಸಮತೂಗುವ ಪತ್ರಿಕೆಯು ಮತ್ತ್ಯಾವುದೂ ಇಲ್ಲ. ''ದಿ ಹಾಸ್ಪ-ನೋ-ಟಿಎಂಬೋ'' ಎಂಬ ಪತ್ರಿಕೆಗೆ ಲೇಖನವನ್ನು ಬರೆಯುವರಾದ '' ಹ್ಯಾರ್ಸ '' (ಎಪ್‌ರೆಕ್) ಎಂಬುವರಿಗೆ ಮಾಸೋಮೆಯವರಿಂದ ಹತ್ತು ಸಾವಿರ ಸವರ್ಣಗಳು (ಆ ದೇಶದ ನಾಣ್ಯಗಳು) ಕೊಡಲ್ಪಟ್ಟವು. ಹಾಗೆಯೇ '' ಫುಜೋಕಾಯ್ '' ಎಂಬ ಪತ್ರಿಕೆಗೆ ಲೇಖನಗಳನ್ನು ಬರೆಯುತಕ್ಕವರಿಗೆ ''ಏಂಜು'' (ನ್ಯೂ ಜ್ಯೂಯಲ್) ಗೆ ಕಾನ್‌ಕಿಕುಚ್ಚಿಯವರಿಂದ ಕಾಪಿಯಿಂಗ್ ಪೇಪರ್ ಅಳತೆಯ ಪುಟ ಒಂದಕ್ಕೆ ಇಪ್ಪತ್ತೈದು ಎನ್ ಗಳಂತೆ ಕೊಡಲ್ಪಟ್ಟವು. ಇದರಿಂದ ವಿಲೇಖಕರ ಗೌರವವು ಹೆಚ್ಚುವುದಲ್ಲದೆ ಭಾಷಾ ಪ್ರೋತ್ಸಾಹವೂ ಉಂಟಾಗುವುದು. ಇದರಂತೆಯೇ ''ಸೆಂಟ್ರಲ್ ರಿವ್ಯೂ'' ಎಂಬ ಪತ್ರಿಕೆಯೂ ಕೂಡ ವಿಲೇಖಕರಿಗೆ ಉತ್ತೇಜನ ಕೊಡುತ್ತಿರುವುದು.

ಪಶ್ಚಿಮದೇಶಗಳಲ್ಲಿ ಪತ್ರಿಕೆಯನ್ನೋದುವವರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿರುವುದು. ಜಪಾನ್ ದೇಶದಲ್ಲಿಯೂ ಕೂಡ ಹೆಚ್ಚುತ್ತಿರುವುದು. ದೇಶ ವಿಸ್ತೀರ್ಣವು ಸ್ವಲ್ಪವಾಗಿದ್ದರೂ ಯಾವುದಾದರೊಂದು ಗ್ರಂಥದ 5000 ಪ್ರತಿಗಳು ವಿಕ್ರಯವಾದರೆ ಅದು ಸಾಕಾದಷ್ಟಾಯಿತೆಂದು ಜಪಾನಿನವರು ಭಾವಿಸುವರು. ಕೆಲವು ಗ್ರಾಮ್ಯಗ್ರಂಥಗಳುಮಾತ್ರ ಹತ್ತು ಸಾವಿರ ಪ್ರತಿಗಳಷ್ಟು ವಿಕ್ರಯವಾಗಿರುತ್ತವೆ. ಆದರೂ ಸಾಹಿತ್ಯಪ್ರಪಂಚದಲ್ಲಿ ಅವು ಗಣನೆಗೆ ಯೋಗ್ಯವಲ್ಲವೆಂದು ಅವರು ಭಾವಿಸುವರು.

ಮಕ್ಕಳಿಗೆ ಸಂಬಂಧಿಸಿದ ವಿಷಯವನ್ನೊಳಗೊಂಡ ಪತ್ರಿಕೆಗಳ ಅಭಿವೃದ್ಧಿಯು ಅಗ್ರಸ್ಥಾನವನ್ನು ವಹಿಸಿರುವುದು. ಪುಸ್ತಕಶಾಲೆಗಳಲ್ಲಿ ಅಂತಹ ಸುಂದರವಾದ ಪತ್ರಿಕೆಗಳು ಹತ್ತೆಂಟು ತರಹದವುಗಳು ಮಾರಾಟಕ್ಕಿಡಲ್ಪಟ್ಟಿರುವುದರಿಂದ ಯಾವುದನ್ನು ಕೊಳ್ಳುವುದು, ಯಾವುದನ್ನು ಬಿಡುವುದು ಎನ್ನುವುದೇ ತಿಳಿಯುವುದಿಲ್ಲ. ಈ ಪತ್ರಿಕೆಗಳು ನಾನಾತರಹೆಯವುಗಳಿರುತ್ತವೆ. ಮೊದಲನೆಯದು 2 ರಿಂದ 6 ವರ್ಷದ ಮಕ್ಕಳಿಗೆ ಉಪಯುಕ್ತವಾದದ್ದಾಗಿರುತ್ತವೆ. ಅವುಗಳಲ್ಲಿ ನಾನಾವಿಧವಾದ ಬಣ್ಣದ ಚಿತ್ರಪಠಗಳು ಸಾಗ್ರಹವಾಗಿ ವಿವರಿಸಲ್ಪಟ್ಟಿರುತ್ತವೆ. ಎರಡನೆಯತರದ ಪತ್ರಿಕೆಗಳು ಪಾಠಶಾಲೆಯಲ್ಲಿ ಓದತಕ್ಕ ಬಾಲಕರಿಗಾಗಿ ಪ್ರಚುರಪಡಿಸಲ್ಪಡುತ್ತವೆ. ಅವುಗಳಲ್ಲಿ ವಿಸ್ತಾರವಾದ ಚಿತ್ರಪಠಗಳೂ ಓದತಕ್ಕ ವಿಷಯಗಳೂ ಚಂದಾದಾರರಿಂದ ಬರೆದು ತುಂಬಲ್ಪಡತಕ್ಕ ಸುಲಭ ಚಿತ್ರಲೇಖನ (Fine drawing) ಗಳೂ ಇರುತ್ತವೆ. ಮೂರನೆಯ ತರದ ಪತ್ರಿಕೆಗಳು (ಸೀನಿಯರ್) ದೊಡ್ಡ ತರಗತಿಗಳಲ್ಲಿ ಓದುವ ವಿದ್ಯಾರ್ಥಿಗಳಿಗೂ (ಜೂನಿಯರ್)

ಕಡಮೆ ತರಗತಿಗಳಲ್ಲಿ ಓದುತ್ತಿರುವ ಹುಡುಗಿಯರಿಗೂ (ವಿದ್ಯಾರ್ಥಿನಿಯರಿಗೂ) ಉಪಯುಕ್ತವಾಗಿರುತ್ತವೆ. ಬಾಲಕ ಬಾಲಕಿಯರಿಗೆ ಪ್ರತ್ಯೇಕವಾದ ಪತ್ರಿಕೆಗಳಿರುತ್ತವೆ. ಎರಡನೆಯ ತರದ ಪತ್ರಿಕೆಗಳಿಗಿಂತ ಮೂರನೆಯ ತರದ ಪತ್ರಿಕೆಗಳಲ್ಲಿರುವ ಕಥೆ ವಿಷಯಗಳು ಪ್ರೌಢ ಶೈಲಿಯಲ್ಲಿರುತ್ತವೆ. ಪತ್ರಿಕೆಯ ಪುಟಗಳು ಪತ್ತೇದಾರಿ ಕಥೆಗಳಿಂದಲೂ ವೀರವೃತ್ತಿಗಳ ಸಾಹಸ ಚರಿತ್ರೆಗಳಿಂದಲೂ ತುಂಬಿರುತ್ತವೆ. ಸ್ತ್ರೀಯರಿಗಾಗಿ ಪ್ರಕಟಿಸಲ್ಪಡುವ ಪತ್ರಿಕೆಗಳಲ್ಲಿ ಶೃಂಗಾರ, ಕರುಣಾರಸ ಸಂಬಂಧವಾದ ರಸಭರಿತವಾದ ವಿಷಯಗಳಿರುತ್ತವೆ. ಬಾಲಕರ ಪತ್ರಿಕೆಗಳು ಚಂದಾದಾರರು ಕಳುಹಿಸುತ್ತಿರುವ ಲೇಖನಗಳನ್ನು ಇತರ ಲೇಖನಗಳಿಂದ ಪ್ರಾಮುಖ್ಯವಾಗಿ ಎಣಿಸುತ್ತದೆ. ಚಂದಾದಾರರು ಕಳುಹಿಸುವ ವ್ಯಾಸಗಳು, ಕಥೆಗಳು ಚಿತ್ರಲೇಖನಗಳು, ಹಾಡುಗಳು ಮುಂತಾದ ವಿಷಯಗಳು ಪತ್ರಿಕೆಯ ಕಡೆಯಭಾಗದಲ್ಲಿ ಪ್ರಕಟಿಸಲ್ಪಡುತ್ತವೆ. ಅವುಗಳಲ್ಲಿ ಅನೇಕವುಗಳಿಗೆ ಬಹುಮಾನವು ಕೊಡಲ್ಪಡುತ್ತವೆ. ನಾಲ್ಕನೆಯ ತರಹದ ಪತ್ರಿಕೆಗಳು ಪ್ರೌಢ ಮತ್ತು ಮಧ್ಯತರಗತಿಗಳ ವಿದ್ಯಾಶಾಲೆಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಉಪಯುಕ್ತವಾಗಿರುತ್ತವೆ. ಇವುಗಳಲ್ಲಿ ವಿದ್ಯಾರ್ಥಿಗಳಿಗೆ ಬೇಕಾದ ಮುಖ್ಯ ವಿಷಯಗಳೆಲ್ಲವೂ ಪ್ರಕಟಿಸಲ್ಪಡುತ್ತವೆ. ಕೆಲವು ಪತ್ರಿಕೆಗಳಲ್ಲಿ ಉನ್ನತ ಪ್ರವೇಶಪರೀಕ್ಷೆಗಳಿಗೆ ಉಪಯುಕ್ತವಾದ ವಿದ್ಯಾವಿಷಯಗಳೂ ಮತ್ತು ಹಿಂದಿನ ಕಾಲದ ಪರೀಕ್ಷಾಪ್ರಶ್ನೆಗಳೂ ತಮ್ಮ ವಿದ್ಯಾಪಾಠಕ ವೃಂದದ ಪ್ರವೇಶ ಪರೀಕ್ಷೆಯ ತೆರ್ಗಡೆಗನುಕೂಲವಾಗಿ ವಿವರವಾಗಿ ಪ್ರಕಟಿಸಲ್ಪಡುತ್ತವೆ. ಈ ವಿಧವಾದ ಸಾಹಿತ್ಯದಲ್ಲಿ ಜರ್ಮನ್ ದೇಶದ ಪ್ರೌಢ ಪರೀಕ್ಷೆಗಳು ಬಹಳ ಕಠಿನತರವಾಗಿರುತ್ತವೆ. ಮಕ್ಕಳ ಹಾಡುಗಳು ಈ ಕಾಲದಲ್ಲಿ ಬಹಳ ಪ್ರಾಮುಖ್ಯವಾದುದರಿಂದ ಮಕ್ಕಳ ಪತ್ರಿಕೆಗಳು ಪ್ರತಿಯೊಂದು ಸಂಚಿಕೆಯ ಪ್ರತಿಯೊಂದು ಪುಟದಲ್ಲಿಯೂ ಈ ವಿಧವಾದ ಹಾಡುಗಳಲ್ಲಿ ಕೆಲವನ್ನು ಪ್ರಕಟಿಸುತ್ತವೆ. ಈ ವಿಧವಾದ ಪತ್ರಿಕೆಗಳು ನಾನಾತರದ ಚಿತ್ರಗಳಿಂದ ಕಂಗೊಳಿಸುತ್ತವೆ. ನಮ್ಮ ಭರತಖಂಡದ ಅದರಲ್ಲೂ ಕರ್ನಾಟಕದ ಪತ್ರಿಕಾಪ್ರಚಾರವನ್ನೂ, ಮೇಲ್ಕಂಡ ದೇಶದವರ ವಾಚನಾಭಿವೃದ್ಧಿಯನ್ನೂ ಹೋಲಿಸಿನೋಡಿದರೆ ನಾವೆಷ್ಟು ಹಿಂದುಳಿದಿರುವೆವೆನ್ನುವುದು ಹೇಳದೆಯೇ ವ್ಯಕ್ತವಾಗುವುದು.

(ಮಾಡರನ್ ರಿವ್ಯೂ)

ಭಕ್ತಿಸುಮಾಂಜಲಿ

(ಹಿಂದಿನ ಸಂಚಿಕೆಯಿಂದ ಮುಂದರಿದ್ದು.)

ಈ

ಪ್ರಪಂಚದ ಭವಬಂಧನದಲ್ಲಿ ಸಿಲುಕಿ, ಆ ಸ್ಥಿತಿಯಲ್ಲಿಯೇ ಇರ ಬೇಕೆಂಬಾತನಿಗೆ ವೇದಾಂತವೇಕೆ? ಮಾನಕ್ಕೆ ಅಂಜದಿರುವವನ ಮೇಲೆ ಅಭಿಮಾನವನ್ನಿಟ್ಟಲ್ಲಿ ಏನುತಾನೇ ಪ್ರಯೋಜನ? ಅಜ್ಞಾನಿಗೆ ಗುರು ಬೋಧೆಯುತಾನೇ ಏಕೆ? ಅದರಿಂದಾತನಿಗೆ ಸರಿಯಾದ ತಿಳುವಳಿಕೆ ಉಂಟಾಗುತ್ತದೆಯೇ?

ಹಾಡುಕುರುಬನಿಗೆ ಪಟ್ಟಣಿಗರ ಶೃಂಗಾರ ರುಚಿಸುವುದೇ? ಲೋಫಿಗೆ ಬಿಂಕತನವೇಕೆ? ಹಾಡುಗಳನ್ನು ಹೇಳಲಿಕ್ಕೆ ಬಾರದಿರುವವರಿಗೆ, ಹಾಡು ಗಳನ್ನು ಹೇಳುತ್ತೇನೆಂಬ ಒಣಡಂಭವೇಕೆ? ಯಾವ ಯೋಗ್ಯತೆಯೂ ಇಲ್ಲದವನಿಗೆ ಜಂಭಡಂಭಗಳಿದ್ದೇನುಫಲ? ಭಾಷೆಕೊಟ್ಟು ಅದರಂತೆ ನಡೆಯ ದಿರುವನಮೇಲೆ ನಂಬಿಕೆ ಇಡಲೇಕೆ? ತನ್ನಂಥಾ ಪ್ರವೀಣನೂ, ಗುರುವೂ ಈ ಪ್ರಪಂಚದಲ್ಲಿಲ್ಲವೆನ್ನುವವನಿಗೆ ತಾನು ಕಲಿತ ವಿದ್ಯೆಯಿಂದೇನು ಫಲ? ತನ್ನ ಮುಂದಿನ ಗತಿ ಪರಿಣಾಮಗಳನ್ನು ಯೋಚಿಸದಿರುವವನೇಕೆ? ಯೋಗ್ಯತೆ ಇಲ್ಲದವನು ದೊಡ್ಡ ಪದವೀಧರನಾಗಲೇಕೆ? ಈ ಪ್ರಪಂಚದ ಕಷ್ಟಸುಖಗಳಿಗೊಡಪಡದಿರುವವನಿಗೇಕೆ ಕೈವಲ್ಯಮಾರ್ಗ? "ಮಾಡು ವುದು ಅನಾಚಾರ, ಮನೆಮುಂದೆ ಮಾತ್ರ ಬೃಂದಾವನ" ಎಂಬ ಲೋಕೋ ಕ್ತಿಯಂತೆ ನಡೆಯುವಾತನಿಗೆ ಮುಕ್ತಿಮಾರ್ಗವೇಕೆ?

ಹೇ! ಮನಸ್ಸೇ! ಅತ್ಯ ಜೀವಕುದ್ಧಿಯಾಗುವುದಕ್ಕೂ ನೀಸ್ಯರ ಪೂಜ್ಯ ಬುದ್ಧಿಯನ್ನು ಅನುಗ್ರಹಿಸುವಂತೆ ದೇವರನ್ನು ಪ್ರಾರ್ಥಿಸು! ಪ್ರಾರ್ಥಿಸು! ಅಂಥಾ ಪೂಜ್ಯಬುದ್ಧಿಯು ಅನುಗ್ರಹಿಸಲ್ಪಡಲಿ!

ತತ್ಸತ್

ಉ

ಹೇ ! ಜಗದೀಶ್ವರಾ ! ಕೆಲವುದಿವಸ ನಿನ್ನ ಧ್ಯಾನಪರನಾಗಿದ್ದು ಈ ಹಾಳು ಸಂಸಾರಸುಖವನ್ನು ಅನುಭವಿಸಲೆನ್ನ ಮನಸ್ಸು ಬಡಂಬಟ್ಟು ಅದರ ಪಾಕಕ್ಕೆ ಯಾತಕ್ಕೆ ಸಿಲುಕಿಬಿದ್ದೆ ? ಈ ದೆಸೆಯಿಂದ ನಿನ್ನನ್ನು ಪ್ರತಿ ದಿವಸವೂ ಭಜಿಸುವುದನ್ನೇ ಬಿಟ್ಟು, ಆ ಪಾಪಮಯವಾದ ಮಾರ್ಗಕ್ಕೆ ಒಳಪಟ್ಟವನಾದೆ. ಇದರಿಂದ ನನಗೆ ತೊಂದರೆ ಕಷ್ಟಪರಂಪರೆಗಳು ಬರಲಾರಂಭಿಸುತ್ತಿವೆ. ಈ ಬಂಧನದ ಬಿಡುಗಡೆಯು ನಿನ್ನ ಧ್ಯಾನದಿಂದಲೇ ಆಗಬೇಕಲ್ಲವೆ ?

ಈ ಹಾಳು ಸಂಸಾರಸುಖದಿಂದ ನಿನ್ನ ಧ್ಯಾನವನ್ನು ಬಿಡಲು ಕೋಪವನ್ನು ಎನ್ನಮೇಲೆ ಏಕೆ ಬೀರುತ್ತಿರುವಿ ? ನನ್ನ ಅಜಾಗ್ರತೆಯಿಂದ ಮಾಡಿದ ಅಪರಾಧವನ್ನು, ನಿನ್ನಿಂದನುಗ್ರಹಿತವಾದ ಕಷ್ಟಗಳಿಂದ ಅನುಭವಿಸುತ್ತಿರುವೆನು. ಅವುಗಳಿಂದ ನಾನು ಪಾರಾಗಲು ಎನ್ನಮೇಲಿನ ಕೋಪವನ್ನು ಬಿಟ್ಟು ಅಂಜಲಿಬದ್ಧನಾಗಿ ಮಾಡುವ ನನ್ನ ಪ್ರಾರ್ಥನೆಗಳನ್ನು ಅಂಗೀಕರಿಸು. ನೀರೊಳಗೆ ಕಷ್ಟವು ಬಿಡುಗಡೆಯಾದೀತೆಂಬ ಆಕೆಯಿಂದ ಮುಳುಗಿದರೆ, ಅದು ನನ್ನ ಬೆನ್ನನ್ನುಬಿಡದಿಹದೇ ? ಬೇಕಾದಷ್ಟು ಭಾರ ಹೊತ್ತಿರುವನೆಂದು ತಿಳಿದು, ಅದನ್ನು ತಪ್ಪಿಸಿಕೊಳ್ಳಲೆತ್ನಿಸಿದರೆ ಆದೀತ ? ಈ ಕಷ್ಟಪರಂಪರೆಯಿಂದ ಬಿಡಿಸಿಕೊಳ್ಳಬೇಕೆಂದು ಎಷ್ಟು ವಿಧವಾಗಿ ತಪ್ಪಿಸಿಕೊಂಡನೆಂದರೂ ನೀನು ಮಾತ್ರ ಬಿಡೆ.

ಇಂಥಾಕಾಲದಲ್ಲಿ ನಿನ್ನನ್ನು ಅಂಜಲಿಬದ್ಧನಾಗಿ ಧ್ಯಾನಮಾಡತಕ್ಕದ್ದು ನನ್ನ ಕರ್ತವ್ಯವು. ಇಗೋ ! ನಿನ್ನ ನಾಮಸಂಕೀರ್ತನೆಯನ್ನೂ, ಧ್ಯಾನವನ್ನೂ ಮಾಡತೊಡಗುವೆನು. ನನಗೆ ಕೈವಲ್ಯಮಾರ್ಗವನ್ನು ತೋರಿಸು. ಈ ಹಾಳು ಪ್ರಪಂಚದಲ್ಲಿ ಅನುಭವಿಸುವ ಸುಖಸೌಖ್ಯಗಳಿಗಿಂತಲೂ ನಿನ್ನ ಪಾದಾರವಿಂದವನ್ನು ಸೇರುವುದೇಲೇಸು ; ಅದನ್ನು ಅನುಗ್ರಹಿಸು !

ತತ್ಸತ್

ಓಂ.

ಸ್ತ್ರೀಯರೂ ಸಮಾಜ ಸೇವೆಯೂ.

ರಾಷ್ಟ್ರೀಯ ವಿಷಯಗಳಲ್ಲಿ ಪ್ರಾಮುಖ್ಯತೆಯನ್ನು ಮನೆಯು ವಹಿಸಿರುವುದು ಮುಖ್ಯವಾಗಿ ಭಾರತರಮಣಿಯರಿಗೆ ಏಕೆ? ಸಕಲ ಮಹಿಳಾವರ್ಗಕ್ಕೂ ಬಹಳ ಆನಂದವಾದ ವರ್ತಮಾನವಾಗಿರುವುದೂ, ಮಕ್ಕಳಿಗೆ ಕಲಿಸತಕ್ಕ ಶಾಲೆಯೂ ಕೂಡ ಸ್ವಂತ ಮನೆಯಂತೆಯೇ ಇರ ಬೇಕೆನ್ನುವುದೂ ಅನೇಕರ ಅಭಿಪ್ರಾಯವಾಗಿರುವುದರಿಂದಲೇ ಅನೇಕರು ಮನೆಯಂತಹ ಭಾವನೆಯನ್ನುಂಟುಮಾಡುವ ಶಾಲೆಗಳಿಗೂ, ಕಾರ್ಖಾನೆ ಗಳಿಗೂ ಕಳುಹಿಸುತ್ತಿರುವರು. ಖೈದಿಗಳೂ ಕೂಡ ಈಗ ನಡೆಸಲ್ಪಡು ತ್ತಿರುವ ರೀತಿಗಿಂತ ಮತ್ತಿಷ್ಟು ಉತ್ತಮ ರೀತಿಯಲ್ಲಿ ನಡೆಸಲ್ಪಡಬೇಕು. ಗೃಹಕ್ಕೆ ಸಂಬಂಧಿಸಿದ ವಸ್ತುಗಳಲ್ಲದೆ ಕಬ್ಬಿಣದ ಸಲಾಕೆಗಳೂ, ಸಂಕೋಲೆ ಗಳೂ, ನೆಲಮಾಳಿಗೆಗಳೂ ಇಂತಹ ಅಪರಾಧಿಗಳನ್ನು ಉತ್ತಮ ಮಾರ್ಗಕ್ಕೆ ತರತಕ್ಕ ಅಸ್ತ್ರಗಳಲ್ಲ. ದುರಿತಪ್ಪಿದ ಹೆಂಗಸರಿಗೂ ಕೂಡ ಅವರನ್ನು ಉತ್ತಮಮಾರ್ಗಕ್ಕೆ ತರತಕ್ಕ ಅನುಕೂಲವಾದ ಗೃಹಸೌಖ್ಯ ಗಳನ್ನು ದೊರಕಿಸಿಕೊಟ್ಟಲ್ಲಿ ಈ ಸುಧಾರಣೆಯ ಫಲವನ್ನು ಪಡೆದು ಆರೋಗ್ಯವಂತರೂ, ನಾಗರಿಕವಂತರೂ ಆದ ಜನಾಂಗವಾಗಿ ಪರಿಣಮಿ ಸುವುದರಲ್ಲಿ ಸಂಶಯವಿಲ್ಲ. ಪಾಶ್ಚಾತ್ಯದೇಶಗಳಲ್ಲಿ ಅನಾಥರೂ, ದುರ್ಮಾ ರ್ಗಕ್ಕೆ ಸಿಕ್ಕಿದವರೂ ಆದ ಬಾಲಕರು ಇಂತಹ ಸುಧಾರಣ ಗೃಹಕ್ಕೆ ತರ ಲ್ಪಟ್ಟು ಉತ್ತಮರಾಗುತ್ತಲಿರುವರು. ಸಮ್ಮಿಲ್ಲನೇಕರು ಈಗ ಈ ವಿಷಯ ಗಳನ್ನು ತಮ್ಮ ತಮ್ಮ ಗೃಹಿಣಿಯರೊಡನೆ ಚರ್ಚಿಸಲಾರಂಭಿಸಿರುವರು. ಪ್ರಕೃತಕಾಲದಲ್ಲಿ ಇವುಗಳೆಲ್ಲವೂ ಸಂತೋಷ ಜನ್ಯವಾಗಿರುವುದಲ್ಲದೆ ಮಹಿಳೆಯರು ಮತ್ತಿಷ್ಟು ಪ್ರಯೋಜನವಾಗಲು ಹೇತುವಾಗಿರುವುದು. ಅವರು ಇಂತಹ ಪೌರಕಾರ್ಯಗಳಿಗಾಗಿ ಸ್ವಲ್ಪಹೊತ್ತನ್ನು ಕಳೆದ ಮಾತ್ರ ದಿಂದಲೇ ಗೃಹಕೃತ್ಯಕ್ಕೆ ಸಂಬಂಧಿಸಿದ ಕಾರ್ಯಗಳನ್ನು ಅಸಡ್ಡೆ ಮಾಡಿದ ರೆಂದು ಅಲಗಳಿಸಿಕೊಳ್ಳತಕ್ಕ ಸಂದರ್ಭವು ಬದಗಲಾರದು. ಮನೆಯು ರಾಷ್ಟ್ರೀಯ, ರಾಜಕೀಯ, ಪೌರಸಾಮಾಜಿಕ ಕಾರ್ಯಗಳೆಲ್ಲವನ್ನೂ

ಸಂತೋಷದಿಂದ ಯಾರ ಅಡ್ಡಿಯೂ ಇಲ್ಲದೆ ಮಾಡತಕ್ಕ ಸ್ಥಳವೆಂದು ನಿಸ್ಸಂದೇಹವಾಗಿ ಹೇಳಬಹುದು. ಅದು ಹೇಗೆಂದೂ, ಏಕೆಂದೂ ವಿವರಿಸಲು ನನಗೆ ಅವಕಾಶವಿಲ್ಲ. ಮನೆಯು ಹೇಗೆ ಮೇಲ್ಕಂಡ ಕೆಲಸಗಳಿಗೆ ಕೇಂದ್ರಸ್ಥಾನವಾಗಿ ಭಾವಿಸಲ್ಪಟ್ಟಿರುವುದೋ ಅದರಂತೆಯೇ ಗೃಹಿಣಿಯ ಪತ್ರಮುಖ್ಯತೆಯ ವಿಷಯವಾಗಿ ಯೋಚಿಸಬೇಕು.

ಭಾರತ ಮಹಿಳೆಯರು (ಈಗ ನಾನು ಮಾತನಾಡಲುದ್ದೇಶಿಸಿರುವುದು ಮುಖ್ಯವಾಗಿ ಅವರ ವಿಷಯವಾಗಿ) ಅವರಿಗೆ ತಿಳಿದೋ ತಿಳಿಯದೆಯೋ ಸಾಮಾಜಿಕ, ನೈಮಿತ್ತಿಕ, ನೈಸರ್ಗಿಕ ವಿಷಯಗಳಲ್ಲಿ ಅನೇಕ ವರ್ಷಗಳಿಂದ ಮುಖ್ಯ ಪಾತ್ರಗಳನ್ನು ವಹಿಸಿದ್ದರೆನ್ನುವುದು ಎಲ್ಲರಿಗೂ ತಿಳಿದ ವಿಷಯವಾಗಿರುವದು. ಇದಕ್ಕೆ ಗಾರ್ಗಿ, ಮೈತ್ರೇಯಿ, ಶುಕವಾಣಿಯರೇ ಸಾಕ್ಷಿ. ಬಂದಾನೊಂದು ಕಾಲದಲ್ಲಿ ಎಂದರೆ ಈಗಿನಂತೆ ಸಭೆಗಳೂ, ವೃತ್ತಮಾಸಪತ್ರಿಕೆಗಳ ಮುದ್ರಣಕ್ಕೆ ಅವಕಾಶವಿಲ್ಲದ ಕಾಲದಲ್ಲಿಯೂ ಕೂಡ ಸಮ್ಮಾರ್ಜನ್ಯಭೂಮಿಯು ಅತ್ಯುತ್ತಮವಾದ ಸಮಾಜ ಸುಧಾರಣೆಯ ಕಾರ್ಯಕ್ಷೇತ್ರವಾಗಿದ್ದಿತು. ಸಂಸಾರ ನಿರ್ವಾಹ ಸಮಯದಲ್ಲಿ ಉಂಟಾಗತಕ್ಕ ಬಂದು ಅಲ್ಪವಿಷಯವೂ ಕೂಡ ಯುಕ್ತಿ ಚಾತುರ್ಯಗಳಿಂದ ನಡೆಸಲ್ಪಡುತ್ತಿದ್ದುದು ಮಾತ್ರವಲ್ಲದೆ ಮೇಲ್ಕಂಡ ಗುಣಭರಿತರಾದ ರಮಣಿಯರು ಗೃಹರಾಜ್ಯದಲ್ಲಿ ಅಧಿಷ್ಠಿತರಾದ ಲಕ್ಷ್ಮಿಯರಂತೆ ಬೆಳಗುತ್ತಿದ್ದರು. ರುಚಿರುಚಿಯಾದ ಭಕ್ಷ್ಯವೇ ಮೊದಲಾದ ಅಡಿಗೆ ಪದಾರ್ಥಗಳನ್ನು ಸಿದ್ಧಗೊಳಿಸಿ ಪಾಕಶಾಲೆಯನ್ನು ಶುದ್ಧವಾಗಿಟ್ಟುಕೊಳ್ಳುವುದರಲ್ಲಿ ಇವರನ್ನು ಮೀರಿಸಿದವರ್ಯಾರೂ ಇರಲಿಲ್ಲ. ಈಗ ಇದನ್ನು 'ಗೃಹಕಾರ್ಯನಿರ್ವಾಹ' (Domestic Economy) ಎಂದು ಶಾಲೆಗಳಲ್ಲಿ ಬೋಧಿಸತೊಡಗಿರುವರು. ಮನೆಯಲ್ಲಿ ಮಕ್ಕಳಿಗೆ ಬೇಕಾಗುವ ಉಡಿಗೆ ತೊಡಿಗೆಗಳನ್ನು ಸಿದ್ಧಮಾಡುವುದು, ರೋಗಿಗಳನ್ನು ಪಥ್ಯ, ಔಷಧವೇ ಮೊದಲಾದವುಗಳಿಂದ ಉಪಚರಿಸುವುದು, ನೆರೆಹೊರೆಯವರ ಕಷ್ಟ ಸುಖಗಳನ್ನು ವಿಚಾರಿಸಿ ಅವರಿಗೆ ಸಹಾಯಮಾಡುವುದು, ಧರ್ಮದೇವತೆಯಂತೆ ತನ್ನ ಕಷ್ಟವನ್ನೂ ಲಕ್ಷ್ಯಮಾಡದೆ, ನಿದ್ರಾಹಾರ ಪರ್ಯಂತರವಾಗಿ ತನಗೆ ತಿಳಿದಿರುವ ಅಲ್ಪಸ್ವಲ್ಪ ಅನುಭವ ವಿಷಯ

ಗಳ ಪ್ರಯೋಗದಿಂದ ರೋಗಿಗಳನ್ನು ಉಪಚರಿಸುವುದು, ಮನೆಗೆ ಬಂದ ಅತಿಥಿಗಳನ್ನು ಆದರದಿಂದ ಕಾಣುವುದು, ಇವೇ ಮೊದಲಾದವುಗಳು ಅವರ ನಿತ್ಯನೈಮಿತ್ತಿಕ ಕರ್ತ್ಯಗಳಾಗಿದ್ದವು. ಈಗಿನ ಕಾಲದವರಾದ ಸುಖವಾಸಿಗಳಾದ ನಾವಾದರೋ ಇದಕ್ಕೆ ವ್ಯತಿರಿಕ್ತವಾದ ಸ್ಥಿತಿಯಲ್ಲಿರುವೆವೆಂದರೂ ಅತಿಶಯೋಕ್ತಿಯಾಗಲಾರದು. ಇದಕ್ಕೆ ನಾವೇಕಾರಣರಲ್ಲದೆ ಕಾಲವಾಗಲಿ, ಧರ್ಮವಾಗಲಿ ಕಾರಣವಲ್ಲ. "ದುಃಖದವಿಗ್ರಹ" ನಿರ್ಭಾಗ್ಯರು (Statue of sorrow, unfortunate) ಎಂಬಭಿಧಾನಗಳಿಂದ ನಮ್ಮಿಂದ ಸಂಬೋಧಿಸಲ್ಪಡುತ್ತಿರುವ,ಅಲಕ್ಷ್ಯವಾಗಿ ಭಾವಿಸಲ್ಪಡುತ್ತಿರುವ ಹಿಂದೂ ವಿಧವೆಯರಾದರೋ ತಮ್ಮ ಕಷ್ಟದುಃಖಗಳನ್ನು ತೃಣವಾಗಣಿಸಿ ತಮ್ಮ ಬಂಧುಗಳ ಮತ್ತು ನೆರೆಹೊರೆಯವರ ಸೇವೆಯನ್ನು ಭಕ್ತಿಶ್ರದ್ಧೆಯಿಂದಲೂ,ಸ್ವಾರ್ಥತ್ಯಾಗದಿಂದಲೂ ಮಾಡುತ್ತಾ ತೇಜಸ್ವಿಗಳಾದ ಬಾಲಸನ್ಯಾಸಿಗಳಂತೆ ಬೆಳಗುತ್ತಿದ್ದರು. ಬಂದು ಬೀದಿಯ ಅಥವಾ ಪೇಟೆಯ ಸುಧಾರಕ ಸ್ತ್ರೀಯರೆಲ್ಲರೂ ಬಂದುಗೂಡಿ (ಈಗ ನಾಲ್ಕಾರುಜನರೊಂದಾದರೆ ಬಂದಹ್ಲೋಹಿಣಿ ಕೂಡಿದಂತೆ ತಿಳಿಯಬೇಕು. ನಮ್ಮ ಐಕಮತ್ಯವಷ್ಟರಲ್ಲಿದೆ) ಬಂದು ಸಭೆ ಅಥವಾ ಸಂಘವನ್ನು ಸ್ಥಾಪಿಸಿ ಅದು ನಿರ್ವಿಘ್ನವಾಗಿ ನಡೆಯಲು ಬಹಳ ಕಷ್ಟಪಡುವರು. ಪಾಶ್ಚಾತ್ಯದೇಶದ ಮಹಿಳೆಯರು ಹೀಗಿದ್ದರೆ ? ಕೆಲವು ಜನ ಮಹಿಳೆಯರು ಬಂದುಗೂಡಿ ಕೆಲವು ಘಂಟೆಗಳ ಕಾಲದಲ್ಲಿ ಸಾವಿರಾರುಜನ ಅತಿಥಿಗಳಿಗೆ ಸ್ವಲ್ಪವೂ ಕಷ್ಟ ಬೇಸರಿಕೆಯಿಲ್ಲದೆ ಅಡಿಗೆಮಾಡುತಿದ್ದರು. ಈಗ ಗಂಡನು ತನ್ನನ್ನು ಕೇಳದೆ ಮನೆಗೆ ಇಬ್ಬರನ್ನು ಊಟಕ್ಕೆ ಕರೆತಂದ ಮಾತ್ರದಲ್ಲಿ ಅವನಿಗೆ ಎಷ್ಟು ವಾಕ್ಪ್ರಹಾರವೋ ? ಎಷ್ಟು ಪಾತ್ರೆಗಳು ಒಡೆಯಬೇಕೋ ? ಎಷ್ಟು ಮಕ್ಕಳು ಏಟು ತಿನ್ನಬೇಕೋ? ತನ್ನನ್ನೆಷ್ಟು ಬೈದುಕೊಳ್ಳಬೇಕೋ? ಹೀಗಾಗುವುದನ್ನು ನಾವೆಷ್ಟೋಕಡೆ ನೋಡಿದೇವೆ. ನಾವು ಕಲಿತ ಗೃಹಿಣೀ ಧರ್ಮವಿದೇ ! "ಗೃಹಿಣೀ ಗೃಹಮುಚ್ಯತೆ" ಎನ್ನುವದು "ಗೃಹಣೀ ಗೃಹಮುಚ್ಯತ್ತೆ"ಎಂದಾಗಿದೆ. ಅನೇಕಕಡೆ ಓದಿನ ನಿಮಿತ್ತ ಮನೆಯ ಸಂಸಾರವನ್ನು ಅಲಗಳೆಯುವರೆಷ್ಟೋ? ಇಂತಹ ಪರಿಸ್ಥಿತಿಗೆ ನಾವೀಗ ಬಂದಿರುವೆವು. ಪಾಶ್ಚಾತ್ಯರು ಸಭೆಗಳನ್ನು ಕೂಡಿಸಲು ತೆಗೆದುಕೊಳ್ಳತಕ್ಕಕಾಲದಲ್ಲಿಯೂ, ಅದಿಗೆ ಕೂಡಲು ತೆಗೆದುಕೊಳ್ಳತಕ್ಕ ಕಾಲದಲ್ಲಿಯೂ ನಾಲ್ಕರಷ್ಟೆಂದು

ಪೊಲುಕೂಡ ಇವರಿಗೆ ಅವಶ್ಯಕವಿಲ್ಲ.ನಮ್ಮಂತೆ ಅವರಿಗೆ ವಿಹಾರಸ್ಥಳಗಳೂ ಸಂಘಗಳೂ ಅವಶ್ಯಕವಿಲ್ಲದಿರಬಹುದು; ಆದರೆ ಗ್ರಾಮದ ಬಾವಿಯಬಳಿ (ಈಗಿನಂತೆ ಸುಖವಾಗಿ ಕುಳಿತ ಕಡೆ ನೀರು ಬರುವಂತೆ ನಲ್ಲಿಗಳಿರಲಿಲ್ಲ.) ನೀರು ಸೇದಲು ನಾನಾ ಮನೆಯ ಹೆಂಗಸರು ಬಂದಾಗ ಸೇರುತಿದ್ದಾಗ ಸಾಮಾಜಿಕ,ಸಾಂಸಾರಿಕ, ಸುಧಾರಕ,ತಮ್ಮ ಗ್ರಾಮಕ್ಕೆ ಸಂಬಂಧಿಸಿದ ಇತರ ಮಾತುಗಳು, ಇವುಗಳ ವಿಷಯವಾಗಿ ಚರ್ಚಿಸಿ ಪರಸ್ಪರಾಭಿಯುಕ್ತವಾದ ತೀರ್ಮಾನಗಳನ್ನೂ ಸಲಹೆಗಳನ್ನೂ ನಿರ್ಧರಿಸುತ್ತಿದ್ದರು. ಈಗ ಇಂತಹ ನಿರ್ಧಾರಗಳಿಗೂ, ತೀರ್ಮಾನಗಳಿಗೂ, ಸಭೆಗಳೂ, ಠರಾವುಗಳೂ ಅವಶ್ಯಕವಾಗಿದೆ. ಇಷ್ಟುಮಾಡಿದರೂ ಅವರಲ್ಲಿದ್ದ ಐಕಮತ್ಯವು ನಮ್ಮಲ್ಲಿಲ್ಲವೆಂದು ನಿಸ್ಸಂದೇಹವಾಗಿ ಹೇಳಿದೆಯೇ ತಿಳಿಯುವುದು. ಹಿಂದೂ ಮಹಿಳೆಯ ಚಿಂತನೆ, ಕಾರ್ಯ ಎಲ್ಲವೂ ಅವಳ ಕುಟುಂಬ ಮತ್ತು ಸಮಾಜದವರ ಹಿತಚಿಂತನೆಯಲ್ಲಿಯೇ ಲಯಿಸಿಹೋಗಿರುವುದು. ಗ್ರಾಮ ಕುಟುಂಬಗಳಲ್ಲಿ ಈರೀತಿ ಇರುವುದನ್ನು ನಾವೀಗಲೂ ನೋಡಬಹುದು.

ಪ್ರಾಚೀನಮಹಿಳೆಯರ ವಿಷಯವಾಗಿ ಇಷ್ಟುದೂರ ಹೇಳಿದ್ದು ನವನಾಗರಿಕವನ್ನಲಗಳೆಯಬೇಕೆನ್ನುವ ಅಥವಾ ದಿನದಿನಕ್ಕೆ ಹೆಚ್ಚುತ್ತಿರುವ ನೂತನೋತ್ಸಾಹವನ್ನು ಹೋಗಲಾಡಿಸಬೇಕೆನ್ನುವ ಉದ್ದೇಶದಿಂದಲ್ಲ. ಅಲ್ಲದೆ ಈಗ ನಾವಿರುವ ಸ್ಥಿತಿಯೇ ಉತ್ತಮವಾದುದೆಂದು ವಾದಿಸುವುದಕ್ಕೂ ಅಲ್ಲ. ಸಮಗೆ ಇಂತಹ ಭಾವನೆಯೇ ಸ್ಥಿರವಾಗಿರುವುದೆಂದು ಹೇಳಲಾಗುವುದಿಲ್ಲ. ವಿಶೇಷ ಪ್ರಯತ್ನಮಾಡದೆ, ಬದಲಾವಣೆಯಿಲ್ಲದೆ ಹಳೆಯ ಪದ್ಧತಿಗಳನ್ನು ಬಿಟ್ಟು ಹೊಸಪದ್ಧತಿಯನ್ನನುಸರಿಸುವುದೇನೂ ಕಷ್ಟವಲ್ಲ. ಅನೇಕಕಡೆ ವಿಭಕ್ತ (joint family system) ಕುಟುಂಬ ಪದ್ಧತಿಯು ಬಹಳ ಖಿಲವಾಗಿರುವ ಈ ಕಾಲದಲ್ಲಿ ಸಮಾಜ ಸೇವೆಯಲ್ಲಿ ಮಹಿಳೆಯರಿಗಿರುವ ಅಧಿಕಾರವು ಮತ್ತಿಷ್ಟು ಹೆಚ್ಚಿ ತಮ್ಮ ಸ್ವಂತ ಕುಟುಂಬದಲ್ಲಿ ಮಾತ್ರವಲ್ಲದೆ ಸಹಾಯಾಪೇಕ್ಷಿಗಳಾದ ನೆರೆಹೊರೆಯವರ ಕ್ಷೇಮಚಿಂತನೆಯನ್ನೂ ನೋಡಬೇಕಾದ ಸಂದರ್ಭವು ಪ್ರಾಪ್ತವಾಗಿರುವುದು. ದಿನೇದಿನೇ ಹೊಸವಿಷಯಗಳನ್ನು ಕಲಿಯಲು ನಮ್ಮ ಮನಸ್ಸು ಉತ್ಸುಕರಗೊಳ್ಳುವುದೆಂದು ಹೇಳುವುದು ಅಷ್ಟೇನೂ ಸರಿಯಲ್ಲ. ಆದರೆ

ಪುರುಷರು ಬೇಡವೆಂದು ಬಿಟ್ಟಿರುವ ಕೆಲವು ವಿಷಯಗಳನ್ನು ಕಲಿಯುವ ಅಪೇಕ್ಷೆಯು ಒಂದೊಂದು ಸಲ ಉಂಟಾಗುವುದು ಸಹಜವೇ. ಆದುದರಿಂದಲೇ ಪ್ರಕೃತ ವಿವರ್ಡಿಸಲ್ಪಟ್ಟಿರುವ ವಿದ್ಯಾಭ್ಯಾಸವು ಜ್ಞಾನಾರ್ಜನೆಗಲ್ಲದೆ ಧನಾರ್ಜನಾಸಾಧಕವಾದುದೆಂದೂ, ಅಂತಹವಿದ್ಯಾಭ್ಯಾಸವು ನಮ್ಮ ಮಹಿಳೆಯರಿಗೆ ಅವಶ್ಯಕವಿಲ್ಲವೆಂದೂ ಅನೇಕರು ಅಭಿಪ್ರಾಯಪಡುವರು. ಅಂತಹ ವಿದ್ಯಾಭ್ಯಾಸದಿಂದ ಸಮಾಜಸೇವೆಗಾಗಲಿ ಕುಟುಂಬ ಸಂರಕ್ಷಣೆಗಾಗಲಿ ಮತ್ಯಾವ ಸದ್ವಿಷಯಕ್ಕಾಗಲಿಸಹಾಯವಾಗುವುದಿಲ್ಲವೆಂದು ಮತ್ತೆ ಕೆಲವರು ಅಭಿಪ್ರಾಯಪಡುವರು. ಯೋಚಿಸಿ ನೋಡಿದರೆ ಈ ವಿಷಯವು ನಿಶ್ಚಯವೆಂದೇ ತೋರುವುದು. ನಮ್ಮ ಸಹೋದರರು ಅನೇಕ ವರ್ಷಗಳಾದ ನಂತರ ಬಹಳ ದ್ರವ್ಯ ವ್ಯಯಮಾಡಿ ಕೂಡಿಸಿದ ಸಭೆಗಳ, ಶಾಲೆಗಳ, ವಿದ್ಯಾನಿಲಯಗಳ, ಸಂಘಗಳ ಮೂಲಕವಾಗಿ ರಾತ್ರೀ ಹಗಲೂ ಕಷ್ಟಪಟ್ಟು ಎದೆಯೊಡೆದುಕೊಂಡು ಗಂಥಾನಲೋಕನಮೂಲಕ ಕಲಿಯುಲೆತ್ನಿಸುತ್ತಿರುವ ವಿದ್ಯಾಭ್ಯಾಸವು ಪ್ರಾಜೇನಕಾಲದಲ್ಲಿ ತಾಯಿಯು ಸ್ತನ್ಯಪಾನದ ಮೂಲಕ ಮಕ್ಕಳಿಗೆ ಉಂಟಾಗುತ್ತಿತ್ತು. ನಾಗರಿಕತೆಯು, ಕೇವಲ ಶೃಂಗಾರ ದೇವತೆಯು, ಸುಖದೇವತೆಯು ಉಪಾಸಕರಾದ ದುರ್ಬಲರಾದ ಈಗಿನ ಕಾಲದ ತಾಯಿಯರಿಂದ ಮಕ್ಕಳಿಗೆ ಹೊಟ್ಟೆಯತುಂಬ ಹಾಲಿಗೇ ಮೂರ್ಗವಿಲ್ಲದೆ ವಿದೇಶದಿಂದ ತಯಾರಿಸಲ್ಪಟ್ಟ ನಾನಾವಿಧವಾದ ಆಹಾರಪದಾರ್ಥಗಳಿಗೆ ಕೈಯೊಡ್ಡಿನಿಂತಿರುವಾಗ ಅಂತಹ ಜ್ಞಾನವು ಈಗಿನ ಜನಾಂಗಕ್ಕೆಲ್ಲಿಂದಬರಬೇಕು? ನಾವು ಯಾವಾಗ ಸುಖದೇವತೆಯ ಉಪಾಸಕರಾಗಲು ತೊಡಗಿದೆವೋ ಅಲ್ಲಿಗೆ ನಮ್ಮಲ್ಲಿದ್ದ ಪ್ರಾಕಸ್ಥ್ಯ ಜನನೀತ್ವ ಜ್ಞಾನತ್ವಗಳೆಲ್ಲವೂ ನಾಶವಾದವು. ಇದಕ್ಕೆ ಪೌರಾಣೀಕಕಥೆಗಳೇ ಸಾಕ್ಷಿ. ನಮ್ಮ ಈ ವಿಧವಾದ ದುರವಸ್ಥೆಯಿಂದ ಯಾವಕಾರ್ಯಕ್ಕೂ ಸಹ ಯೋಜನವಿಲ್ಲದವರಾಗಿ ಭಾವಿಸಲ್ಪಟ್ಟಿರುವೆವು ನಮಗೆ ಪ್ರಾಕೃತಿಕ ಮತ್ತು ಬುದ್ಧಿವಿಕಾಸತೆಗನುಕೂಲವಾದ ಕೆಲಸವನ್ನೊಪ್ಪಿಸಿದಸಂತರ ಇದರಿಂದ ಇತರರರಿಗೆ ಸಹಾಯವಾಗುವುದೇ ಇಲ್ಲವೇ ಎನ್ನುವ ವಿಷಯವನ್ನು ತೀರ್ಮಾನಿಸಲಿ. ಪ್ರಾಜೇನಾರ್ಯರಮಣಿಯು ಗುರುಶಿಕ್ಷಣವಿಲ್ಲದೆ ಕಲಿತಪ್ಪು ವಿದ್ಯೆಯು ಈಗ ಶಾಲೆಯಲ್ಲಿ ಕಲಿತವರಿಗೆ ಇಲ್ಲವೆಂದು ಹೇಳಬಹುದಾಗಿದೆ. ಗರ್ಭಿಣೀಶಿಶುಸಂರಕ್ಷಣಾಶಾಲೆಗಳು, ದೊಡ್ಡದೊಡ್ಡ ಹೆಂಗಸರು ಕಲಿಯಲನುಕೂಲವಾದ ಶಾಲೆಗಳು,

ಸಂಘವೇ ಮೊದಲಾದವುಗಳು ಕೇವಲ ಸ್ತ್ರೀಯರ ಮೊಹಸತ್ತಿನಿಂದಲೇ ಎಷ್ಟು ತೃಪ್ತಿಕರವಾಗಿ ನಡೆಸಲ್ಪಡುವುದೆನ್ನುವುದು ಸರ್ವರೂ ಅರಿತ ವಿಷಯವೇ ಆಗಿರುವುದು. ಬೆಂಗಳೂರು, ಮೈಸೂರು ಪಟ್ಟಣಗಳಲ್ಲಿರುವ ಸ್ತ್ರೀ ಸಂಘಗಳು, ಪೂನಾಪಟ್ಟಣದ ಸೇವಾಸದನ, ಮದರಾಸಿನ ಕ್ವೀಮೇರೀಸ್ ಕಾಲೇಜ್ ಮೊದಲಾದವುಗಳು ಇದಕ್ಕೆ ಸಾಕ್ಷಿ. ತಮ್ಮ ತಮ್ಮ ನೆರೆಹೊರೆಯವರಿಗೆ ಸಂಬಂಧಿಸಿದ ಪೌರಸಾಮಾಜಿಕಕಾರ್ಯಗಳಲ್ಲಿ ಮಹಿಳೆಯರು ಹೇಗೆ ತರಬೇತಾಗಬೇಕೆನ್ನುವ ಪ್ರಶ್ನೆಯ ಉತ್ತರವನ್ನು ನಾವೀಗ ಯೋಜಿಸಬೇಕಾಗಿದೆ. ಇಲ್ಲಿನ ಸಹೋದರಿಯರ ಪ್ರೇಮ, ಸಹಾನುಭೂತಿ, ಸರಳಹೃದಯ ಮೊದಲಾದ ಸುಗುಣಗಳು ನನ್ನ ಹೃದಯದಲ್ಲಿ ಜೇರೂರಿ ನಿಂತಿರುವವು. ಈ ಪಟ್ಟಣದಲ್ಲಿ ನನಗೆ ಬಳಕೆಯಾಗಿರುವ ಸಹೋದರಿಯರ ನಡೆನುಡಿಗಳ ವಿಷಯದಲ್ಲಿನ ಅನುಭವದಿಂದಲೂ ಬೆಂಗಳೂರಿನ ಸ್ತ್ರೀಸಂಘದಲ್ಲಿ ಕೆಲಸಮಾಡಿದ ಅನುಭವದಿಂದಲೂ ಈ ಕೆಳಗೆ ಕೊಟ್ಟಿರುವ ಕಾರ್ಯಕ್ರಮವು ಸುಲಭವಾದುದೆಂದು ನನಗೆ ತೋರುವುದು.

ಮಹಿಳೆಯರ ಸೇವಾಗೃಹ (Women's Home of Service)

ಪೂರ್ವದಂತೆ ಮಹಿಳೆಯರು ಕೆರೆಗಾಗಲಿ, ಬಾವಿಗಾಗಲಿ ನೀರು ತರಲುಹೋಗಿ ಬಂದುಕಡೆ ಸೇರುವುದು ಅದರೂ(ಪಟ್ಟಣಗಳಲ್ಲಿ ಇಲ್ಲವೇ ಇಲ್ಲವೆಂದು ಹೇಳಬಹುದು) ವಾಗಿರುವುದರಿಂದ ಎಲ್ಲರೂ ಬಂದುಗೂಡಲು ಬಂದು ಸ್ಥಳವನ್ನೇರ್ಪಡಿಸಬೇಕು. ಐಶ್ವರ್ಯವಂತರಾದ ಮಹಿಳೆಯರೂ, ಮಧ್ಯಮತರಗತಿಯ ಮಹಿಳೆಯರೂ ಯಾವುದಾದರೊಂದುದ್ದೇಶದಿಂದ ಬಂದುಕಡೆ ಸೇರಿ ತಮ್ಮ ತಮ್ಮ ಜನಾಂಗಕ್ಕೆ ಸಂಬಂಧಪಟ್ಟ ಮತ್ತು ಇತರ ವಿಷಯಗಳನ್ನು ಚರ್ಚಿಸಿ ಪರಸ್ಪರಾಭಿಪ್ರಾಯಗಳನ್ನು ತಿಳಿದುಕೊಳ್ಳುವಂತೆ ಮಾಡಲನುಕೂಲವನ್ನುಕಲ್ಪಿಸುವುದು ಬಂದು ದೊಡ್ಡ ಕೆಲಸ. ಹೀಗೆ ಬಬ್ಬರಿಗೊಬ್ಬರು ಸೇರಲನುಕೂಲವಾಗುವುದರಿಂದ ಅನೇಕ ಪ್ರಯೋಜನಗಳಾಗಬಹುದು. ಅವು ಯಾವುವೆಂದರೆ: ಜನಾಂಗಕ್ಕೆ ಸಂಬಂಧವಾದ ವಿಷಯಗಳಿಗೆ ಗಮನಕೊಡುವುದು. ಇದಂದ ಕೆಲವು ದಿನಗಳಾದನಂತರ ರಾಜ್ಯಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ, ರಾಜ್ಯಾಭಿವೃದ್ಧಿಯ ವಿಷಯದಲ್ಲಿ ಸಮಯೋಚಿತವಾದ ಸಲಹೆಗಳನ್ನು ಕೊಟ್ಟು ನಮ್ಮ ಸಹೋದರರು

ಓಂ

ಸರಸ್ವತಿ

ಸಂಪುಟ ೫ | ಕ್ರೋಧನ ವರ್ಷ—ಆಷಾಢ ಮಾಸ | ಸಂಚಿಕೆ ೩

ನೀವು ಯಾರು ?



ನೀವಿಂದು ಪ್ರಪಂಚವ್ಯವಹಾರವನ್ನರಿಯದ ಮಕ್ಕಳು; ನಾಳೆಯದಿನ ಬಾಲಕಿಯರಾಗುವಿರಿ; ಇನ್ನೂ ಕೆಲವು ದಿನಗಳಲ್ಲಿ ಹುಡುಗಿಯರಾಗುವಿರಿ ಮತ್ತೆ ಕೆಲವು ದಿನಗಳಲ್ಲಿ ನೀವೂ ಸ್ತ್ರೀಯರಾಗುವಿರಿ. ಈಗಲೋ ದೋಷರಹಿತವಾದ ಬಾಲ್ಯ ಚೇಷ್ಟೆಗಳನ್ನು ಮಾಡುತ್ತಾ ಆನಂದದಿಂದ ತಂದೆ ತಾಯಿಗಳ ಮನೆಯಲ್ಲಿ ಕೋಲಾಹಲದಿಂದಾಟವಾಡುತ್ತಿರುವಿರಿ. ನಿಮ್ಮ ಅಣ್ಣತಮ್ಮಂದಿರೊಡನೆಯೂ, ಅಕ್ಕತಂಗಿಯರೊಡನೆಯೂ, ಪಕ್ಕದಮನೆ ಎದಿರುಮನೆಯ ಹುಡುಗಿಯರೊಡನೆಯೂ ಆಟವಾಡುತ್ತಾ ಸಂತೋಷದಿಂದ ಕಾಲಕಳೆಯುತ್ತಿರುವಿರಿ. ಅತ್ತೆಯ ಮನೆಗೆ ಹೋದಮೇಲೆಯೂ ಕೂಡ ನಿಮ್ಮ ಸದ್ಗುಣ ಸನ್ಮಾರ್ಗಗಳಿಂದಾವೃತರಾಗಿ ಆನಂದಮಯವಾಗಿ ಕಾಲಕಳೆಯುವಿರಿ. ತರುವಾಯ ನೀವು ಪುತ್ರವತಿಯರಾಗಿ ನಿಮ್ಮ ಸ್ವಂತ ಗೃಹಗಳನ್ನು ಆನಂದಸದನ, ಸುಖಾವಾಸವನ್ನಾಗಿ ಮಾಡುವಿರೆಂಬುದರಲ್ಲಿ ಸಂಶಯವಿಲ್ಲ. ದೇಶಕ್ಕೆ ಸುಖ ಸಂತೋಷಗಳನ್ನುಂಟುಮಾಡುವ ಉದ್ದೇಶದಿಂದಲೇ ಈಶ್ವರನು ನಿಮ್ಮನ್ನು ಸೃಷ್ಟಿಸಿರುವನು. ಆನಂದ, ಸೌಖ್ಯ, ಭಾಗ್ಯ, ಇವುಗಳನ್ನು ಜಗತ್ತಿಗೆ ಪೂರ್ಣವಾಗಿ ಕೊಡತಕ್ಕವರು ನೀವುಗಳು. ಇವುಗಳನ್ನುಂಟುಮಾಡುವ ಶಕ್ತಿಯು ನಿಮ್ಮಲ್ಲಿರುವುದು; ಆದರೆ ಇವುಗಳನ್ನರಿತವರಾರು ?

ಈ ಪ್ರಪಂಚವೇ ಒಂದು ನಾಟಕರಂಗ. ಸಂಸಾರವೊಂದು ನಾಟಕ. ಜನಗಳು ಈ ನಾಟಕದಲ್ಲಿ ಬರತಕ್ಕ ಪಾತ್ರಗಳು. ಉತ್ತಮ ಪಾತ್ರವನ್ನು ವಹಿಸಿ ರಂಗಸ್ಥಳದಲ್ಲಿ ನಿಪುಣತೆಯಿಂದಲೂ, ಉತ್ತಮರೀತಿಯಿಂದಲೂ ಅಭಿನಯಿಸತಕ್ಕವರಿಗೆ ರಂಗ

ಸ್ಥಳದಲ್ಲಿಯೂ ಜನಸಮೂಹದಲ್ಲಿಯೂ ಸತ್ಕೀರ್ತಿಯು ಲಭಿಸುವುದಲ್ಲದೆ ಒಳ್ಳೆಯ ಹೆಸರು ಬರುವುದು ಪ್ರಿಯ ಸಹೋದರಿಯರೇ ! ಪ್ರಪಂಚರೂಪವಾದ ನಾಟಕ ರಂಗದಲ್ಲಿ ಸಂಸಾರರೂಪವಾದ ನಾಟಕದಲ್ಲಿ ನೀವೂ ನಾನಾಪಾತ್ರಗಳನ್ನು ವಹಿಸಿ ನಟಿಸಬೇಕಾಗಿರುವುದಲ್ಲವೇ ?

ನಾಟಕಕ್ಕೆ ಜೀವವೂ ಸಾರವೂ ತೇಜಸ್ಸೂ ಉಂಟಾಗಬೇಕಾದರೆ ಸ್ತ್ರೀಪಾತ್ರ ದಿಂದಲ್ಲದೆ ಪುರುಷ ಪಾತ್ರದಿಂದಲ್ಲ. ಸ್ತ್ರೀಪಾತ್ರಗಳು ತಾವು ವಹಿಸಿರುವ ಪಾತ್ರ ವನ್ನು ನಿಪುಣತೆಯಿಂದ ಅಭಿನಯಿಸಿ ಉತ್ತಮರೀತಿಯಂದ ನಟಿಸುವ ಪಕ್ಷದಲ್ಲಿ ನಾಟಕವು ಸ್ವಾರಸ್ಯವಾಗಿ ಜನರಂಜಕವಾಗಿರುವುದು. ಪ್ರಪಂಚರೂಪವಾದ ಈ ನಾಟಕರಂಗದಲ್ಲಿ ಸಂಸಾರರೂಪವಾದ ನಾಟಕಕ್ಕೆ ಸ್ತ್ರೀಯರ ಯೋಗ್ಯತೆ, ಆತ್ಮತೇಜಸ್ಸು ಇವುಗಳಿಂದ ಮಾತ್ರವೇ ಪ್ರಾಶಸ್ತ್ಯವೂ, ಗಣ್ಯವೂ, ಗೌರವವೂ, ಉಂಟಾಗುವವು- ಇಷ್ಟುಮಾತ್ರವಲ್ಲ; ಈ ನಾಟಕದಲ್ಲಿ ಸ್ತ್ರೀಯರು ಸಮಯೋಚಿತವಾದ ಪಾತ್ರಗಳನ್ನು ವಹಿಸಿ ನಟಿಸುವ ಪಕ್ಷದಲ್ಲಿ ನಾಟಕಕ್ಕೆ ಕೀರ್ತಿಯುಂಟಾಗುವುದು.

ಹುಟ್ಟಿದ ಮನೆಯಲ್ಲಿ ಚಂಚಲಬುದ್ಧಿಯುಳ್ಳ ಬಾಲಿಕೆಯರ ಪಾತ್ರಗಳನ್ನು ವಹಿಸಿ ನಿಮ್ಮ ತಾಯಿ ತಂದೆ, ಸೋದರಸೋದರಿಯರನ್ನು ಸಂತೋಷಪಡಿಸಬೇಕಾಗಿರುವುದು. ಅತ್ತೆಯಮನೆಯಲ್ಲಿ ಸೊಸೆ, ಓರಗಿತ್ತಿ ಮೊದಲಾದ ಪಾತ್ರಗಳನ್ನು ವಹಿಸಬೇಕಾಗಿರುವುದು. ಸ್ವಂತಗೃಹದಲ್ಲಿ ಕ್ರಮವಾಗಿ ಪತ್ನಿ, ಗೃಹಿಣಿ, ತಾಯಿ, ಅತ್ತೆ ಮೊದಲಾದ ವೇಷಗಳನ್ನು ಧರಿಸಿ ನಟಿಸಬೇಕಾಗಿರುವುದು. ವೇಷಧರಿಸುವುದು ಒಂದೇ ವ್ಯಕ್ತಿಯಾದರೂ ವೇಷವೂ, ವೇಷದ ಕರ್ತವ್ಯವೂ ಅನೇಕ ವಿಧವಾಗಿರುವುದರಿಂದ ಈ ಪಾತ್ರಗಳನ್ನು ವಹಿಸುವುದು ಅತಿಕಷ್ಟವೇ. ಇಷ್ಟೊಂದು ಪಾತ್ರಗಳನ್ನೂ ವಹಿಸಿ ಕುಂದುಕೊರತೆಗಳಿಲ್ಲದೆ ನಿರ್ವಹಿಸುವ ವಿವೇಕವೂ ಚಾತುರ್ಯವೂ ಇದ್ದ ಹೊರ್ಲು ನಾಟಕವು ಶೋಭಿಸದು. ಈ ಪಾತ್ರಗಳನ್ನು ನೀವು ಸರಿಯಾಗಿ ಅಭಿನಯಿಸಿದರೆ ಎಲ್ಲರೂ ನಿಮ್ಮನ್ನು ಹೊಗಳುವರು. ನಾಟಕಕ್ಕೂ ಒಳ್ಳೆಯ ಹೆಸರು ಬರುವುದು.

ಈ ಪ್ರಪಂಚ ನಾಟಕದಲ್ಲಿ ಪಾತ್ರವನ್ನು ವಹಿಸಿ ಉತ್ತಮ ರೀತಿಯಿಂದ ಅಭಿನಯಿಸಬೇಕಾಗಿದ್ದರೆ ಕಾಳಿದಾಸ, ಭವಭೂತಿ ಷೆಲ್ಲಿ (Shelly), ಬೈರನ್ (Byron) ಷೇಕ್ಸ್‌ಪಿಯರ್ (Shakespeare) ಮೊದಲಾದ ನಾಟಕ ಕರ್ತರಿಂದ ನೀವು ಕಲಿಯಬೇಕಾದುದೇನೂ ಇಲ್ಲ. ದಿವಾರಾತ್ರಿಯೂ ನಿಮ್ಮ ಕಣ್ಣುಗಳ ಮುಂದೆ ನಿಂತಿರುವ ಸಂಸಾರವೇ ನಿಮಗೆ ಬೇಕಾದುದನ್ನು ಕಲಿಸುವುದು. ಈ ಸಂಸಾರದಲ್ಲಿ ಮನಸ್ಸುಟ್ಟು ಪ್ರತಿಯೊಂದು ಕಾರ್ಯವನ್ನೂ ಮನಃಪೂರ್ವಕವಾಗಿ ಅಭ್ಯಾಸ ಮಾಡಿದರೆ ನಿಮ್ಮ ಪಾತ್ರಗಳನ್ನು ತಕ್ಕರೀತಿಯಲ್ಲಿ ವಹಿಸಿ ನಡೆಸಬಹುದು. ಕಣ್ಣು

ಗಳನ್ನು ಯಾವಾಗಲೂ ತೆರೆದೇ ಇರಬೇಕಲ್ಲದೆ ಅಂತಃಕರಣ ಶುದ್ಧಿಯಾಗಿರಬೇಕು. ಹೀಗೆ ಮಾಡಿದರೆ ನೀವು ಕೂಡುವಾಗಲೂ, ನಿಲ್ಲುವಾಗಲೂ, ನಿದ್ರೆಮಾಡುವಾಗಲೂ, ಊಟಮಾಡುವಾಗಲೂ, ಕೆಲಸಮಾಡುವಾಗಲೂ ಸಂಸಾರದಲ್ಲಿ ನಿಮಗೆ ಬೇಕಾದುದನ್ನು ಕಲಿಯಬಹುದು.

ಸಂಸಾರದಲ್ಲಿ ನಡೆಯತಕ್ಕ ಪ್ರತಿಯೊಂದು ಕಾರ್ಯಗಳ ಮೂಲಕವಾಗಿಯೂ ನೀವು ಪ್ರಪಂಚವ್ಯವಹಾರವನ್ನು ಸ್ವಲ್ಪಸ್ವಲ್ಪವಾಗಿ ಕಲಿಯಬಹುದು. ಸದ್ಗ್ರಂಥಗಳನ್ನೋದುವುದರಿಂದ ಸಂಸಾರದಲ್ಲಿ ಉತ್ತಮರೀತಿಯಿಂದ ವರ್ತಿಸಬಹುದು. ಸದ್ಗ್ರಂಥಗಳ ಸಹವಾಸವು ಬೇಕಾಗಿದ್ದಲ್ಲಿ ವಿದ್ಯೆಯನ್ನು ಕಲಿಯತಕ್ಕದ್ದು ಅತ್ಯಾವಶ್ಯಕವು. ಪ್ರತಿಯೊಬ್ಬ ರಮಣಿಯೂ ಉತ್ತಮಗೃಹಿಣಿಯಾಗಬೇಕಾಗಿದ್ದಲ್ಲಿ ವಿದ್ಯೆಯು ಅತ್ಯಾವಶ್ಯಕವಾಗಿ ಬಂದಿರಬೇಕು. ಆಗ ನೀವು ಪಿತೃ ಗೃಹದಲ್ಲಿ ವಿವೇಕವತಿಯಾದ ಪುತ್ರಿಯಾಗಿಯೂ, ಪತಿಗೃಹದಲ್ಲಿ ಉತ್ತಮ ಪತ್ನಿಯಾಗಿಯೂ ಗೃಹಿಣಿಯಾಗಿಯೂ, ಪುತ್ರವತಿಯಾದನಂತರ ಉತ್ತಮ ಮಾತೆಯಾಗಿಯೂ ಆಗಬಹುದು.

ಪ್ರಿಯ ಬಾಲಕಿಯರೇ! ಈಶ್ವರನ ವಿಶೇಷ ಕೃಪಾಕಟಾಕ್ಷದಿಂದ ನೀವು ಸ್ತ್ರೀ ಜನ್ಮವನ್ನು ವಹಿಸಿ ಧನ್ಯರಾಗಿರುವಿರಿ. ದೇಶಕ್ಕೆ ಆಧಾರಸ್ತಂಭಗಳಂತಿರುವ ಪ್ರಜೆಗಳನ್ನು ಸೃಷ್ಟಿಸತಕ್ಕವರು ನೀವೇ. ಇಷ್ಟುಮಾತ್ರವಲ್ಲದೆ, ಅವರನ್ನು ಬಲಿಷ್ಠರನ್ನಾಗಿ ಮಾಡುವುದಕ್ಕೂ, ಉತ್ತಮ ಪ್ರಜೆಗಳಾಗುವುದಕ್ಕೂ, ಸತ್ಕಾರ್ಯಗಳನ್ನು ಮಾಡುವುದರ ಮೂಲಕ ಯಶೋವಂತರಾಗಲು ಪ್ರೇರೇಪಿಸುವುದಕ್ಕೂ ಸಾಧನವಾದ ಶಕ್ತಿಯು ನಿಮ್ಮಲ್ಲೇ ಅಡಗಿರುವುದು. ದೇಶವನ್ನು ಉನ್ನತ ಸ್ಥಿತಿಗೆ ತರುವ ಸಾಮರ್ಥ್ಯವನ್ನೂ, ಭಾಗ್ಯವನ್ನು ಹೆಚ್ಚಿಸುವ ಶಕ್ತಿಯನ್ನೂ ಪರಮೇಶ್ವರನು ನಿಮ್ಮ ಕೈಯಲ್ಲಿತ್ತಿರುವನು. ಆದುದರಿಂದ ನಿಮ್ಮ ಜನ್ಮವೇ ಅತಿ ಶ್ರೇಷ್ಠವಾದುದೆನ್ನುವುದರಲ್ಲಿ ಸಂಶಯವಿಲ್ಲ. ಆದರೆ ನನ್ನ ಅಜ್ಞಾನದಿಂದ ನಾವು ಕೆಲಸಕ್ಕೆ ಬಾರದವರೆಂದು ನಮ್ಮನ್ನು ನಾವೇ ಹೀಯಾಳಿಸಿಕೊಂಡು ನಮ್ಮ ಮನೆಯಲ್ಲಿರುವ ಇತರ ಹೆಣ್ಣುಮಕ್ಕಳನ್ನೂ "ಅಯ್ಯೋ! ನಿರ್ಭಾಗ್ಯ ಹೆಣ್ಣೇ! ದುರಾದೃಷ್ಟಹುಡುಗಿಯೇ!" ಎಂದು ಸಂಬೋಧಿಸುತ್ತಾ ಅವರನ್ನು ಮತ್ತಿಷ್ಟು ಅಧಃಪಾತಾಳಕ್ಕೆ ತಳ್ಳುವ ಸ್ಥಿತಿಯನ್ನು ನಾವೇ ತರುವೆವು. ಬಾಲಕಿಯರೇ! ನೀವು ಹಾಗೆ ಮಾಡುವಿರಾ? ಈ ಉನ್ನತಪದವಿಯನ್ನು ಪರಿಪಾಲಿಸಲು ಬಾಲ್ಯದಿಂದಲೂ ಶಾಂತ ದಯಾಗುಣ ಧೃತರಾಗಿರಬೇಕೆನ್ನುವುದನ್ನು ನೀವು ಯಾವಾಗಲಾದರೂ ಯೋಚಿಸಿನೋಡಿದಿರಾ? ನಿಮ್ಮ ಜವಾಬ್ದಾರಿಯಾದ ಕೆಲಸವನ್ನು ಸರಿಯಾಗಿ ನಿರ್ವಹಿಸುವುದಕ್ಕೂ, ಉತ್ತಮ ಗೃಹಿಣಿಯಾಗುವುದಕ್ಕೂ ಪುರುಷರಿಗಿಂತ ಹೆಚ್ಚು ವಿದ್ಯೆಯನ್ನು ನೀವು ಕಲಿಯಬೇಕಾಗಿರುವುದೆನ್ನುವುದನ್ನು ತಿಳಿದುಕೊಳ್ಳಿ. ಪ್ರಸ್ತುತ ಪ್ರಚಾರದಲ್ಲಿರುವ ಪುರುಷ ವಿದ್ಯಾಭ್ಯಾಸಕ್ರಮವನ್ನನುಸರಿಸುವುದರಿಂದ ನಿಮಗೆ ಶಕ್ತ ಅಭಿವೃದ್ಧಿಯನ್ನು

ಹೊಂದಲು ಅಸಾಧ್ಯವೆನ್ನುವುದನ್ನು ತಿಳಿದುಕೊಳ್ಳಿ. ಅಮೂಲ್ಯವೂ ಜವಾಬ್ದಾರಿಕೆಯೂ ಉಳ್ಳ ನಿಮಗೆ ಭಗವಂತನಿಂದ ಕೊಡಲ್ಪಟ್ಟಿರುವ ಕಾಲವನ್ನು ಪುರುಷರಂತೆ ಪಾಠಶಾಲೆಗಳಲ್ಲಿ ಒಹಳ ದಿನ ಕಳೆಯಲು ನಿಮಗನಕಾಶವಿಲ್ಲವೆನ್ನುವುದನ್ನು ತಿಳಿದುಕೊಳ್ಳಿ.

ಚಿಕ್ಕವಯಸ್ಸಿನಿಂದಲೇ ಅಂದರೆ ಪಿತೃಗೃಹದಲ್ಲಿರುವಾಗಲೇ ನೀವು ವಿದ್ಯೆಯನ್ನಭ್ಯಾಸಮಾಡತೊಡಗಬೇಕು. ಪಿತೃಗೃಹದಲ್ಲಿ ಪುತ್ರಿ, ಪತ್ನಿ, ತಾಯಿ ಮೊದಲಾದ ವೇಷಗಳನ್ನಭ್ಯಾಸಿಸಿ ಪತಿಗೃಹಕ್ಕೆ ಹೋದಮೇಲೆಯೂ ಆ ಅಭ್ಯಾಸಗಳನ್ನು ಮಾಡುತ್ತಿರಬೇಕು. ಈಶ್ವರಾನುಗ್ರಹದಿಂದ ನಿಮ್ಮ ಗರ್ಭದಲ್ಲಿ ಪುತ್ರರತ್ನಗಳುದ್ಭವಿಸಿದರೆ ಅವರಿಗೂ ಇಂಹ ಅಭ್ಯಾಸವನ್ನೇ ಮಾಡಿಸಬೇಕು. ಪುತ್ರವತಿಯರಾದ ನಂತರ ನೀವು ನಹಿಸಬೇಕಾದ ಜವಾಬ್ದಾರಿಯ ವಿಷಯವನ್ನು ಯೋಚಿಸಿನೋಡಿ. ಅಂದಿನಿಂದ ನಿಮಗೆ ನೀವೇ ಗುರುಗಳು. ನಿಮ್ಮ ಸಂತತಿಗೂ ನೀವೇ ಗುರುಗಳು. ಇಡ್ಡಲ್ಲಿದ ದೇಶಕ್ಕೇ ನೀವು ಪೂಜ್ಯಗುರುಗಳು. ನೀವು ಎಂತಹ ಉತ್ತಮ ಸಂತತಿಯನ್ನುಂಟುಮಾಡುವಿರೆ ದೇಶಕ್ಕೆ ಅಂತಿಮ ಫಲವುಂಟಾಗುವುದು.

ಗೌರಿಯ ಮಗ, ಸೀತೆಯ ಮಗ, ಲಕ್ಷ್ಮಿಯ ಮಗ, ಕಾವೇರಿಯ ಮಗ ಎಂದು ಜನರು ಹೊಗಳುವಂತಾದರೆ ಆ ಕೀರ್ತಿಯು ಯಾರನ್ನು ಸೇರಿದ್ದು ? ತಾಯಿಯರಾದ ನಿಮಗಲ್ಲವೇ ! ರಾಮಕೃಷ್ಣನು ಮಗನೆಂದು ಅವನ ತಾಯಿಯ ಶಿಕ್ಷಣದಿಂದ ಖ್ಯಾತಿಹೊಂದಿದನು. ಜಾನಕಿಯ ಮಗನೆಂಬ ತಾಯಿಮಾತ್ರವನ್ನು ಕಳೆ ಉನ್ನತಸ್ಥಿತಿಗೆಬಂದನು. ಗೌರಿಯಮಗನೆಂಬ ಸಾಂತಾಯಿಯಿಂದನು ತಾಯಿ ಬೋಧನೆಯಿಂದ ಉನ್ನತಪದವಿಗೆ ಬಂದಿದಾನೆ, ಎಂದು ಎಲ್ಲರೂ ಮಾತುಗಳಾಡುವರು. ಸನ್ಮಾರ್ಗವನ್ನು ಬೋಧಿಸುವ ಶಕ್ತಿಕ್ಕ ಅವರು ತಮ್ಮ ಕುಟುಂಬಕ್ಕೆ ಕೀರ್ತಿಯನ್ನು ತರುವಂಥಲ್ಲದ ದೇಶಕ್ಕೂ ಒಳ್ಳೆಯ ಹೆಸರನ್ನು ಗಳಿಸುವರು. ನಿಮ್ಮ ದೇಶವು ಯಾವ ವಿಧವಾಗಿ ಸ್ವಾತಂತ್ರ್ಯಕ್ಕೆ ಬಂದಿತೆನ್ನುವುದನ್ನರಿತ ಸುಶಿಕ್ಷಿತಮಾತ್ರಲಿನವರೂ ನಿಮ್ಮಂತಾಗಲು ಪ್ರಯತ್ನಿಸುವಂತಾದರೆ ಭಾರತವು ಉನ್ನತಸ್ಥಿತಿಗೆಬರಲಾರದೆ ? ಬಾಲಕಿಯರೇ ! ನಿಮ್ಮ ಮಕ್ಕಳು ಸಭೆಗಳು, ಸಂಘಗಳು, ದೇಶ, ಜಗತ್ತುಗಳನ್ನು ಉನ್ನತಸ್ಥಿತಿಗೆ ತರುವ ಸೂತ್ರವು ನಿಮ್ಮ ಕೈಯಲ್ಲೇ ಇರುವುದು.

ಶಿವಾಜಿ ಮಹಾರಾಜನ ತಾಯಿಯಾದ ಜೀಜೀಬಾಯಿಯು ಶಿವಾಜಿಯನ್ನು ಹೆತ್ತು ಮಹಾರಾಷ್ಟ್ರದೇಶಕ್ಕೇ ಶಾಶ್ವತವಾದ ಕೀರ್ತಿಯನ್ನೂ, ನೆಪೋಲಿಯನ್ನಿನ ತಾಯಿಯಾದ ಲೆಟೀಶಿಯಾಳು ನೆಪೋಲಿಯನ್ನನ್ನು ಹಡೆದು ಅವಳಿದೇಶಕ್ಕೆ ಕೀರ್ತಿಯನ್ನೂ ತಂದು ತಮ್ಮ ಜನ್ಮಸಾರ್ಥಕ್ಯಮಾಡಿಕೊಂಡರು. ನೀವೂ ಅಂಥಂತೆಯೇ ರಾಜಾರಾಮನ ತಾಯಾದ ಜಾನಕಿಯಂತೆ, ಚಂದ್ರಗುಪ್ತನಂದ್ರಚಂದ್ರಗುಪ್ತರಂತೆ ಚಂದ್ರಬಾಯಿ ರಮೇಶಚಂದ್ರದತ್ತ, ಸುಪ್ರಭಾ ದೇವೀಂದ್ರನಾಥಟಾಗೋರ್, ಇಂದಿರಾ ರವೀಂದ್ರನಾಥಟಾಗೋರ್

ಸ್ವಾಮಿ ರಾಮತೀರ್ಥ, ಸ್ವಾಮಿ ರಾಮಕೃಷ್ಣ ಪರಮಹಂಸ, ಸ್ವಾಮಿವಿವೇಕಾನಂದ, ದಯಾನಂದಸರಸ್ವತಿ, ಬಾಲ ಗಂಗಾಧರತಿಲಕ್, ಗೋಪಾಲಕೃಷ್ಣಗೋಖಲೆ, ದಾದಾಬಾಯಿ ನೌರೋಜಿ, ಮಹಾತ್ಮಾ ಗಾಂಧಿ, ದೇಶಬಂಧು ದಾಸರೇ, ಮೊದಲಾದ ನರರತ್ನಗಳಂತಹ ಪುತ್ರರನ್ನು ಪಡೆದು ದೇಶೋದ್ಧಾರಮಾಡಿರಿ. ಇಂತಹ ನರರತ್ನಗಳನ್ನು ಹೆರುವ ತಾಯಿಯರನ್ನು ಪಡೆಯುವ ಮಾರ್ಗವನ್ನು ಪ್ರತಿಯೊಂದು ದೇಶವೂ ಹುಡುಕಬೇಕು. ಪ್ರಯತ್ನಪಟ್ಟ ನೀವೂ ಸಫಲರಾಗುವಿರಿ.

ಉತ್ತಮಮಾತೆಯಾಗಬೇಕಾದರೆ ಬಾಲ್ಯಾರಭ್ಯ ವ್ರತವನ್ನನುಸರಿಸಬೇಕು. ನಿಮ್ಮ ತಂದೆಯ ಮನೆಯಲ್ಲಿ ಈ ವ್ರತವು ಪ್ರಾರಂಭವಾಗುವುದು. ಪತಿಗೃಹಕ್ಕೆ ತೆರಳಿದನಂತರ ಈ ವ್ರತವನ್ನು ಸಮಾಪ್ತಿಗೊಳಿಸಬೇಕು. ಈ ವ್ರತಕ್ಕೆ ತಂದೆಯಮನೆಯಲ್ಲಿ ತಾಯಿ, ತಂದೆ, ಸಹೋದರ ಸಹೋದರಿಯರು. ಪತಿಗೃಹದಲ್ಲಿ ಪತಿ, ಮಾವ, ಅತ್ತೆ, ಅತ್ತಿಗೆ, ನಾದಿನಿ, ಓರಗಿತ್ತಿ ಮೊದಲಾದವರ ಸಹಾಯವು ದೊರೆಯುವುದು. ಬಾಲಜೀವ್ಯೆಗಳನ್ನು ಮರೆತುಬಿಡಿ. ಚಂಚಲಬುದ್ಧಿಯನ್ನು ಬಿಟ್ಟುಬಿಡಿ. ಸನ್ಮಾರ್ಗ ವ್ರತವತವನ್ನಾರಂಭಿಸಿ ದುರ್ಮಾರ್ಗವನ್ನು ಪೂರ್ಣವಾಗಿ ತ್ಯಜಿಸಿಬಿಡಿ. ಉತ್ತಮ ಸಂತತಿಗಳನ್ನು ಕೊಡುವಂತೆ ಏಕಮನಸ್ಸಿನಿಂದ ಈಶ್ವರನನ್ನು ಧ್ಯಾನಿಸಿ. ಭಗವಂತನು ನಿಮ್ಮ ವ್ರತವನ್ನು ಪೂರ್ತಿಮಾಡುವನು. ನಿಮ್ಮ ಗರ್ಭದಲ್ಲಿ ಮೇಲೆ ಹೇಳಿದಂಥ ದೇಶೋದ್ಧಾರಕಗಳಾದ ನರಕೇಸರಿಗಳು ಜನಿಸುವರು. ನಿಮ್ಮ ಜನ್ಮಸಾಫಲ್ಯವುಂಟಾಗುವುದು. ಕುಲಕ್ಕೆ ಕೀರ್ತಿಯುಂಟಾಗುವುದು. ದೇಶವು ಕೀರ್ತಿಹೊಂದುವುದು.

ಭಾರತಮಾತೆಯು ನಿಮಗಿಂತಹ ಅನುಗ್ರಹವನ್ನು ಕ್ಷಿಪ್ರದಲ್ಲಿಯೇ ಕೊಡಲಿ.

ಭಕ್ತಸುಮಾಂಜಲಿ.

(ಹಿಂದಿನ ಸಂಚಿಕೆಯಿಂದ ಮುಂದರಿಸಿದ್ದು)

ಊ

ಹೇ! ದುಂದುಭನವೇ! ಅತಿಭೋಗವೇ! ನಿನ್ನಿಂದ ಈ ಪ್ರಪಂಚದಲ್ಲಿ ಎಷ್ಟು ಅನಾಹುತಗಳು ನಡದಿವೆ! ನಿನ್ನಿಂದಲ್ಲವೆ ಈ ಪ್ರಪಂಚದ ಮರುಳಾಟಕ್ಕೆ ಬಿದ್ದು ಅರ್ಥಹಾನಿ, ಮಾನಹಾನಿ, ಪ್ರಾಣಹಾನಿ— ಈ ಮೂರು ಬಹುಮಾನಗಳಿಂದ ಸಂಭಾವಿತರಾಗುವುದದಿಲ್ಲವೆ? ಮೊದಲೊಮ್ಮೆಲು ನಿನ್ನ ಗುಣವು ಬಹು ಆನಂದದಾಯಕವಾಗಿದ್ದು, ಕೊನೆಗೆ ಛೇದಾಸ್ಪದವನ್ನು ಕೊಂದು, ಆ ಮೇಲೆ ವಿಷಪ್ರಾಯವಾಗಿರುವುದು

ಅನುಸರಿಸುವಂತೆ ಮಾಡುತ್ತೀ. ರಾಜ್ಯವು ನಿನ್ನ ಶುಭ್ರವಾದ ಗುಣದ ದೆಸೆಯಿಂದ ಶ್ರೇಷ್ಠತೆಯನ್ನು ಹೊಂದುವುದಾದರೂ ಅವಿಚ್ಛಿನ್ನವಾದ ಮಹಿಮೆಯನ್ನು ಅದು ಹೊಂದಲಾರದು. ಅದು ಎಂದಿನವರಿಗೆ ಐಶ್ವರ್ಯಸಂಪದ್ಯುಕ್ತವಾಗಿರುವುದೋ, ದೊಡ್ಡದಾಗಿ ಪರಿಣಮಿಸಿ ನಿರ್ವಾಹವನ್ನಾಡಲು ಅಸಾಧ್ಯವಾಗಿ, ಆಟೋಪಾಡಳಿತಗಳು ಸರಿಯಾಗಿರದೆ ಅನಾಯುಕತ್ವವನ್ನು ಹೊಂದುವುದಲ್ಲವೇ? ಇದೆಲ್ಲಾ ನಿನ್ನ ಪ್ರಭಾವವೇ!

ನಿನ್ನನ್ನು ಹೊಂದಿದ ಮನುಷ್ಯನು ನಿಶ್ಚಿಂತನಾಗಿರನು. ಅವನ ದೇಹವೆಲ್ಲಾ ಬಾಯಾಗಿ ಪ್ರಪಂಚವೇ ಸಾಲದೆಹೋಗುವುದು. ಅತೃಪ್ತಿಯು ಎಲ್ಲಾ ಕಡೆಯೂ ವ್ಯಾಪಿಸಿ ಕೊನೆಗೆ ಪ್ರಪಂಚವೇ ಲಯವಾಗಿ ಹೋಗುವುದು. ಆದರಿಂದ ನಿನ್ನನ್ನು ಹೊಂದುವವರು ಅಧಃಪತಿತರಾಗಿ ಹೋಗುವರು.

ಹೇ! ದೇವಾದಿದೇವ! ಪಾವನಮೂರ್ತಿ! ಸಕಲೇಶ್ವರಾ! "ತೃಪ್ತಿ"ಯನ್ನು ಎಲ್ಲರೂ ಹೊಂದುವಂತೆ ಅನುಗ್ರಹಿಸು. ಇದನ್ನು ಹೊಂದಿ, ಸಕಲರೂ ತೃಪ್ತರಾಗಿ ಈ ಪ್ರಪಂಚದ ಸುಖವನ್ನು ನೆನವರಿಸದೆ ಭಕ್ತಿಯನ್ನುಹೊಂದಿ, ಸ್ವರ್ಗೀಯ ಸುಖವನ್ನು ಅನುಭವಿಸುವರು. ಆದುದರಿಂದ ಇದನ್ನು ಅನುಗ್ರಹಿಸು! ಅನುಗ್ರಹಿಸು!!

ತಕ್ಷಸ್

ಯು

ಹೇ! ದೇವಾದಿದೇವಾ! ತೊರೆ, ಹೊಳೆ, ನದಿ, ನದಾ—ಇವುಗಳು ಅನೇಕಾನೇಕ ಸ್ಥಳಗಳಲ್ಲಿ ಉದ್ಭವಿಸಿ, ಹರಿದು, ವಾಹನಿಗಳಾಗಿ, ನೀರನ್ನು ಹೇಗೆ ಶೇಖರಿಸಿಕೊಂಡು ಮಹಾಸಾಗರದಲ್ಲಿ ಸಂಗಮವಾಗುತ್ತದೆಯೋ ಅದೇರೀತಿ ವಿವಿಧವಾರ್ಗಗಳಿಂದ, ಮಾರ್ಗಗಳು ಸರಿಯಾಗಿಯೋ ಇಲ್ಲವೆ ಡೊಂಕಾಗಿಯೋ ಇದ್ದು, ಕಲ್ಲು ಮುಳ್ಳುಗಳಿಂದ ತುಂಬಿದ್ದರೂ ಹೇಗೆ ನಿನ್ನನ್ನು ಸೇರುತ್ತವೆ ಎಂಬುದನ್ನು ತರ್ಕಿಸಿದರೆ ಅವೆಲ್ಲವೂ ನಿನ್ನ ಬಳಿಗೆ ತಂದುಬಿಡುತ್ತವೆ.

ನಿನ್ನ ಬಳಿಯನ್ನೈದಲು ಅನೇಕನಾರ್ಗಗಳಿವೆ. ಅವುಗಳಲ್ಲಿ ಯಾವುದು ಸುಲಭವೋ, ಸರಳವೋ, ಕಷ್ಟವೋ, ಪ್ರಯಾಸವೋ, ನಿರ್ಣಯಿಸಲಸಾಧ್ಯ. ಕಬೀರ್ ದಾಸರು ತಮ್ಮ ಅಭಿಮತದಿಂದಲೂ, ಅಭೀಷ್ಟದಿಂದಲೂ ಉಪದೇಶವನ್ನು ಬೋಧಿಸತೊಡಗಿ, ಅಂದು ಖಿಲವಾಗುತ್ತಿದ್ದ ಹಿಂದೂಮತವನ್ನು ನವೀಕರಿಸಲಿಲ್ಲವೆ?

"ದೇವರು ಒಬ್ಬನೇ; ಆತನ ಸ್ವಭಾವವು ಪ್ರೀತಿ ಅಥವಾ ಪ್ರೇಮ; ಆತನು ಸರ್ವಾಂತರ್ಯಾಮಿ, ಸರ್ವತ್ರಾಣಿ, ಸರ್ವಲೋಕರಕ್ಷಕ; ಆತನಿಗೆ ದ್ವಂದ್ವತ್ವವಿಲ್ಲ. ಆತನೇ ಸಕಲ ಅತ್ಯಕ್ಕೂ ಸ್ನೇಹಿತ ಮತ್ತು ಹಿತೈಷಿಕನು. ಆತನನ್ನು ಸೇರಲು ನಡೆಯುವ ಒಳ್ಳೆಯದಾರಿಯಾಗಿರುವುದು, ವಿಶ್ವಾಸ, ನಂಬಿಕೆ, ಶ್ರದ್ಧೆ ಮತ್ತು ಭಕ್ತಿ

ಇವು ಮಾತ್ರವೇ! ದೇವರು ಎಂಥಾ ಭಕ್ತನಿಗೂ (ಆತನು ಕೀಳಾಗಿದ್ದರೂ ಮೇಲಾಗಿದ್ದರೂ ಸರಿಯೆ) ಒಲಿಯುತ್ತಾನೆ". (ಕಬೀರ್).

"ಮನಸ್ಸಿನಲ್ಲಿ ದೇವರನ್ನು ಧ್ಯಾನಿಸು. ಯಾವಾಗ್ಯೂ ಸೊತ್ರಿಸು. ನ್ಯಾಯವು, ವಿಶ್ವಾಸ, ನಂಬಿಕೆ, ಶ್ರದ್ಧೆ ಇದರಮೇಲೆ ನಿಲ್ಲುವದು" (ನಾನಕ್).

"ದೇವರೊಬ್ಬನೇ! ಆತನೇ ಸತ್ಯ ಮತ್ತು ಸೃಷ್ಟಿಕರ್ತ! ದೇವರು ಏಕೇಶ್ವರನು! ಆತನೊಬ್ಬನೇ! ಆತನೇ ಕರ್ತನು! ಆತನು ಹಿಂದುವಿನ ಅಲ್ಲವೇ ಮುಸಲ್ಮಾನನ, ಅಲ್ಲವೇ ಕ್ರಿಶ್ಚಿಯನ್ನಿನ ದೇವರಲ್ಲ, ಮಾನವದೇವರು! ಆತನನು ಯಾವವಿಧದಲ್ಲಿ ಪೂಜಿಸಿದರೂ ಯಹೋವಾ! ಜೀಸಸ್ ಕ್ರೈಸ್ತ! ಅಲ್ಲಾ! ರಾಮಾ! ಆತನು ಒಬ್ಬನೇ—ಅದೃಶ್ಯನು, ಚಿರಸ್ಥಾಯಿಯು! ಅನಿರ್ಮಿತನು! ಸಕಲ ಜ್ಞಾನಗಳಿಗಿಂತಲೂ ದೈವಜ್ಞಾನವು ಶ್ರೇಷ್ಠತಮವು." (ನಾನಕ್) ತತ್ವಸತ್.

ಜೂ

ಶ್ರೀನಿವಾಸ! ವೈಕುಂಠಾಧಿಪತಿ! ಲಕ್ಷ್ಮೀಪ್ರಿಯಾ! ವೆಂಕಟಾಚಲಾಧಿಪತಿ! ಶ್ರೀ ವೆಂಕಟರಮಣಸ್ವಾಮಿ! ಶ್ರೀ ಲಕ್ಷ್ಮೀವೆಂಕಟೇಶಾ! ಏಕೆನ್ನನು ಈಪರಿಯೊಳು ಸಂಕಟಪಡುವಂತೆ ಮಾಡಿರುವಿ? ನಿನ್ನನ್ನು ನನ್ನ ಅಜ್ಞಾನದಿಂದಲೂ ಅಜಾಗ್ರತೆಯಿಂದಲೂ, ಈ ಕ್ಷಣಭಂಗುರವಾದ ಪ್ರಪಂಚಸುಖಗಳಿಂದ ಮರೆಕುಬಿಟ್ಟಿರೋಣದರಿಂದ ಈಪರಿಯ ಕಷ್ಟವನ್ನಿತ್ತಿರುವಿಯೋ? ಜ್ಞಾನವನ್ನೂ, ಮೋಕ್ಷಮಾರ್ಗವನ್ನೂ ಇತ್ತು ಸಲಹೋ! ತೀವ್ರವಾಗಿ ಈ ಕಷ್ಟಗಳ ಬಂಧನದಿಂದ ಬಿಡಿಸು!

* * * * *

ಅತ್ತು ಅತ್ತು ಬೇಸರಪಟ್ಟು ನಿನ್ನ ಆಗಮನವನ್ನೇ ನಿರೀಕ್ಷಿಸುತ್ತಿದ್ದೆ! ನಿನ್ನ ದಯುಬಾರಲಿಲ್ಲ. ಏಕಿಂತು ಕ್ರೂರಿಯಾಗಿರುವೆ? ಎನ್ನಳುವು ದಾರುಣವಾದುದು. ಇದೇನು ನನ್ನ ಲಲಾಟದಲ್ಲಿ ಲಿಖಿತದಂಥಾ ಲೇಖವೋ? ಅಥವಾ ಅದೃಷ್ಟವೋ? ಹೃಷೀಕೇಶ! ಎಲ್ಲಿರುವೆ? ನನಗೆ ಜಗತ್ತೇ ಕಾಣದಂತಾಗಿರುವುದಿಲ್ಲ. ಅಜ್ಞಾನ ಸಾಗರದಲ್ಲಿ ಮುಳುಗಿರುವೆನು. ದಡವೆಂತು ಕಾಂದೆನೋ! ನೀನು ಭಕ್ತನಮೇಲೆ ಕೃಪೆಯಿಟ್ಟು ರಕ್ಷಿಸು. ಭಕ್ತವತ್ಸಲನು ಎಂಬ ಬಿರುದನ್ನು ಹೊಂದಿರುವೆ. ಅಂಥಾವನಾಗಿದ್ದ ಪಕ್ಷದಲ್ಲಿ ರಕ್ಷಿಸೋ! ಹೇ ದೇವಾದಿದೇವ! ಈ ಭವಬಂಧನಕ್ಕೆ ಸಿಲುಕಿದಿಕ್ಕೆಸೆ ಕಾಣದೆ ಇದ್ದೇನೆ.

ಲೋಕರಕ್ಷಕನೂ ಸರ್ವಾಂತರ್ಯಾಮಿಯೂ ಆದ ನೀನು ಪ್ರಹ್ಲಾದ, ಅಜಾಮಿಳ ಮೊದಲಾದ ಎಲ್ಲಾ ಭಕ್ತರನ್ನೂ ಕಾಪಾಡಿ ಭಕ್ತರಕ್ಷಕನೆಂಬ ಬಿರುದನ್ನು ಹೊಂದಲಿಲ್ಲವೆ? ರಕ್ಷಿಸಿ ಮೋಕ್ಷವನ್ನು ಅನುಗ್ರಹಿಸು! (ತತ್ವಸತ್)

ಮಾನವ ಸುಖಬೋಧಾಮೃತ

(Part I.)

೧. ಮಾನವನ ಜೀವಿತಕಾಲದ ಏಳು ಅಂಕಗಳು.

ಭಾ॥ ಧರೆಯುರಂಗಸ್ಥಳವಾಗಿದೆ |
ಪುರುಷವನಿತೆಯರೆಲ್ಲರಭಿನಯ |
ತೆರುವನುವೇಷಧಾರಿಗಳೆನಿಸಿ ಜನನಮರಣಗಳು ||
ಭರದೆರಂಗಳೆ ಸಾರಿಪೋಗುವ |
ತೆರದೆಕಾಣ್ಬುದ ಬಗೆಯೆ ಮನುಜನ |
ಮೆರೆವಜೀವಿತಕಾಲದೇಳಂಕವನೆನೆತೋರುವುದು ॥೧॥

ಮೊದಲೆನಿಪಶೈಶವವೆಂಬಂ |
ಕದೊಳುಮಾತೆ[illegible]ತೊಡೆಯೇರುತೆ |
ವಿದವಿಧದಪದಗಳನೆಬೀರುತೆಕಾರುತಿರುತಿಹನು ||
ಮುದದೊಳೆರಡನೆಯಂಕಬಾಲ್ಯದೆ |
ಹೃದಯಕಾನಂದವನು ಬೀರುವ |
ವದನದಿಂರಾಜಿಸುವಕಾಂತಿಯನಾಂತುಮೆಗೆಯುವನು ॥೨॥

ಬಿಡದೆಹೊತ್ತಿಗೆಯನ್ನು ಹಸ್ತದೆ |
ಪಿಡಿದುಬಿಕ್ಕುತಲಳುತುದಯಿಸಿದೊಳು |
ನಡೆದುಬಸವಿನಪ್ಪಳದತೆರದಿಂಮತಸಾರ್ವಾಲೆ ||
ನಡೆವ ಮೂರನೆಯಂಕದೊಳುತನ |
ಗಡಸುದಾಜೌವ್ವನದೆ ಮದದಿಂ |
ದಿಡಿದುಜವದಿಂಮತ್ತನಾಗುತೆ ವಿರಹತಾಪದೊಳು ॥೩॥

ತರಹರಿಸಿ ನಿಟ್ಟುಸರಬಿಡುತಂ |
ನಿರುತತನ್ನಿನಿಯಳನೆಬಣ್ಣಿಸಿ |
ಬರೆದಪದ್ಯಂಗಳನುಪಾಡುತೆ ಮೋಹವಶನಹನು ||
ಕರೆನನಾಲ್ಕನೆಯಂಕದೊಳುತಾ |
ಮೆರೆವಕೌಮಾರದೊಳಧಿಪವಂ |
ಗಿರುವಪದವಿದ್ರವ್ಯಯಶಗಳ ಬಿಡದೆತಾಗಳಿಸಿ ॥೪॥

ಬಿನದದಿಂದಾಣೆಗಳನಿಕ್ಕುತೆ |
ಜನಕೆಸತ್ಯವನೊರೆವೆನೆನ್ನುತೆ |
ಘನತರದಭಾಷೆಗಳನಿಡುತಲಿ ದುಡುಕಿಕಲಹವನು ||
ಮುನಿದುಗೆಯುಂತೆ ವಿದಿತಕೀರ್ತಿಯ |
ನನುವಿನಿಂತಾಪಡೆವೆನೆನ್ನುತೆ |
ಘನತೆಗೋಸುಗ ಗುಂಡಿನಿದಿರೊಳುನಿಲಲುಹೆದರನಲ ||೫||

ಒರೆಯುನ್ಮೈದನೆಯಂಕದೊಳುನಸು |
ನತೆಕಳೇಶವನಾಂತುಜನರೊಳು |
ವೆರೆವಗೌರವದಿಂದೆಕಾಣಿಸಿಕೊಳುತೆಜನಗಳನು ||
ತರತರದ ಸುಡಿಗಳಿಗೆ ದಂಡಿಸು |
ತರಿಮೆಯಿಂಲೋಕಾನುಭವವಂ |
ಧರೆಗೆಸಾರ್ವುತೆಲೋಕಮನ್ನಣೆಯಾಂತು ಜೀವಿಸುತೆ ||೬||

ಮುದದಲೋಕಕೆನೀತಿಯೊರೆಯುತೆ |
ಹದನದಿಂದಿತಿಹಾಸಗಾದೆಗ |
ಳದುಬುತವಾಗಿಪೇಳ್ವುತೆಮಿತಿಯುಮಿರಿಪುಂಬಿಸುತೆ ||
ಒದಗಿದಾಸ್ಥಲವವುವಾಂತೀ |
ವಿಧದೆತಾಪಚಾಯತಿಯಗ್ಗೈ |
ವುದರೊಳಾಸಕ್ತತೆಯುನಾನುತೆಕಾಲಕಳೆಯುವನು ||೭||

ಆರನೆಯಂಕವೆನಿಪಜರೆಯೊಳು |
ಭೂರಿಸುಖಮಿಲ್ಲದಲೆಗಳಿತಶ |
ರೀರಗಡಿಗಡಿಗುಡಿಗೆತೊಡಿಗೆಗಳಿಂದೆಸಿಂಗರಿಸಿ ||
ದೂರನೋಡೆಸುಲೋಚನ ಕಂಟ |
ಕಾರಿಗಳನ್ನುಕಾಳಿಸೆಟ್ಟುತ |
ಊಗಗೋಲನುಪಿಡಿದು ತಪ್ಪೆಜ್ಜೆಗಳಹಾಕುವನು ||೮||

ನಂಬುಗೆಯನಿಡದಂತೆಯಾರೊಳು |
ಹಂಬಲಿಸಿಯಾಡಿದುದನಾಡುತೆ |
ತುಂಬಿದಾಪಳಿವಿಗೆಡೆಯಾಗುತೆ ಮೊದಲಸರಮುಳಿದು ||
ಕುಂಭಿನಿಯುಹಾಸ್ಯಕೆಡೆಯಾಗುತ |
ಲಿಂಬುಳಿಯುತಂಕೀರಸರಂಗ |
ಳಿಂಬಿಡಿವಿಡಿಯನುಡಿಯ ನುಡಿಯುತೆಕಾಲಕಳೆಯುವನು ||೯||

ನರನನಾಟಕಕೊನೆಯದಂಕದೊ |
ಳಿರುತಲಂತ್ಯಾವಸ್ಥೆಗೆ ಬಿಡದೆ |
ಗುರಿಯುದಾಗುತೆತಿರುಗಿಬಾಲ್ಯಾವಸ್ಥೆಯತೋರಿಸಿ ||
ಅದಮೆಹೀನತೆಯಾಂತುದಂತಗ |
ಳಿರದೆರುಚಿದಪ್ಪಿಕರಣಮುಡುಗಿ |
ಪರಮಪದನಂಪಡೆಯಲಂತ್ಯದೆಲಯವನೊಂದುವನು ||೧೧|

ಇಂತಿರುವನರಜನ್ಮದೆಬಿಡದೆ |
ಸಂತತಂ ಸಂತರನುಸೇವಿಸಿ |
ಸಂತಸದ್ಗುಣಧರಿತನಾಗುತೆಲೋಕಸೇವೆಯೊಳು ||
ಸಂತಸದೆತಾನಿರತನಾಗುತೆ |
ಚಿಂತಿತಾರ್ಥಪ್ರದನಸೇವಿಸು |
ತಿಂತುಮಾನವಜನ್ಮತತ್ವವನರಿಯೊಮಾನವನೆ ||೧೯||

ಬಿಡಿನುಡಿಗಳು.

ಕೆಲವು ಪ್ರಾಜೇನ ಕ್ರೈಸ್ತ ಪಾದ್ರಿಗಳ ಅಭಿಪ್ರಾಯುಗಳು.

ದೇವನು ಚಿನ್ಮಯನು, ರಸಪುರುಷನು; ಆದರೆ ಮಾನವಾಕಾರನೂ ಅಲ್ಲ, ನಿರಾಕಾರನೂ ಅಲ್ಲ. ಸರ್ವ ಸೃಷ್ಟಿಯಲ್ಲಿಯೂ ಆವಿರ್ಭವಿಸುವನು; ಆದರೆ ಜಡ ಪ್ರಕೃತಿ (ವಸ್ತು) ಭಿನ್ನವಾದ ಆತ್ಮನಾಗಿಹನು.

ಸ್ವರ್ಗಕ್ಕೆ ಮುತ್ತಿನ ಹೆಬ್ಬಾಗಿಲುಗಳಿಲ್ಲ; ಗಾನ ವಾದ್ಯಗಳ ಮಂಗಳಸ್ವರವೂ ಇಲ್ಲ. ನರಕದಲ್ಲಿ ಅಗ್ನಿ ಇಲ್ಲ. ಭೂತವೆಂಬುದು ಪಾರ್ಸಿಯವರ ಫೋರೋಸ್ಟ್ರಿಯನ್ ಧರ್ಮದ ಒಂದು ಕಲ್ಪನೆ ಮಾತ್ರ.

ಬರೀಧ್ಯಾನೆ (ಪ್ರಾರ್ಥನೆ)ವು ಯಾವನಾದರೊಬ್ಬ ಮಧ್ಯಸ್ಥನಿಲ್ಲದೆ ಹಸಿವೆಯಿಂದ ಹೊಣಗಾದ ಮನುಷ್ಯನ ಕೈಯಲ್ಲಿ ರೊಟ್ಟಿಯ ತುಣಕನ್ನು ನೀಡಲರಿಯದು.

ಅಮರತ್ವವು ಸ್ವದೇಹವಲ್ಲ. ಸ್ವಸಾದೃಶ್ಯವು ಬಾಳಬಲ್ಲದು; ಆದರೆ ಸ್ವದೇಹಕ್ಕೆ ಶಾಶ್ವತವಿಲ್ಲ.

ಈ ಒಡಂಬಡಿಕೆಯಲ್ಲಿಯ ಪವಾಡ ಕೃತ್ಯಗಳೆಲ್ಲ ಕೇವಲ ಕಟ್ಟು ಕಥೆಗಳು. ಹೊಸ ಒಡಂಬಡಿಕೆಯಲ್ಲಿವು ಇತ್ತೀಚಿಗೆ ಸೇರಿಸಲ್ಪಟ್ಟವುಗಳು. ಇಂಥ ಜಾಲ ವಿದ್ಯೆಯ ಏಸುಕ್ರಿಸ್ತನ ಸ್ವಭಾವಕ್ಕೆ ಸರಿಬಾರದ ಸಂಗತಿಯು.

"ಸ್ವರ್ಗಾರೋಹಣ" ವೆಂಬ ಪದಸಮುಚ್ಚಯವು. ಸ್ವರ್ಗವು ಭೂಮಿಯ ಮೇಲ್ಮಾಯಿಯಲ್ಲಿರುವುದೆಂದು ತಿಳಿಯುವ ಮನುಷ್ಯನಿಂದ ಧರ್ಮಗ್ರಂಥದಲ್ಲಿ ಸೇರಿಸಲ್ಪಟ್ಟಿದೆ. ಇದನ್ನು ಎಷ್ಟೋ ಜನರು ಇನ್ನೂ ನಂಬುತ್ತಾರೆಂದು ಹೇಳುವುದು ಬರೀಮೂರ್ಖತನವು.

(ಪ್ರೇಮ)

ಕಾಜ್ ಎಂಡ ಹೈಸ್ಕೂಲಿನ ಮುಖ್ಯ ಉಪಾಧ್ಯಾಯಿನಿಯು ಅಭಿಪ್ರಾಯವು.

"ಅಡಿಗೆಮಾಡುವುದಕ್ಕೂ ಬಟ್ಟೆ ಹೊಲಿಯುವುದಕ್ಕೂ ಒಗೆಯುವದಕ್ಕೂ ಬಾರದ ಹುಡುಗಿಯರು ವಿದ್ಯಾವಂತರಲ್ಲ.

ಹೆಂಗಸು ತನ್ನ ಜೀವನಕ್ಕೆ ಗಂಡನನ್ನು ನಂಬಿರಕೂಡದೆಂಬ ಅಭಿಪ್ರಾಯದಿಂದ ಪಾಶ್ಚಾತ್ಯ ತಂದೆ ತಾಯಿಯರು ತಮ್ಮ ಹುಡುಗಿಯರನ್ನು ಶಾಲೆಗೆ ಕಳುಹಿಸಿ ದೊಡ್ಡದೊಡ್ಡ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿಸುತ್ತಾರೆ. ದಡ್ಡ ಹುಡುಗಿಯರು ಮಾತ್ರ ಅಡಿಗೆಮಾಡುವುದನ್ನೂ ಗೃಹಕೃತ್ಯದ ಕೆಲಸಗಳನ್ನೂ ಕಲಿಯಬೇಕೆಂಬುದು ವಾಡಿಕೆಯಾದ ಅಭಿಪ್ರಾಯವಂತೆ.

"ಇದು ತಪ್ಪು. ಪರೀಕ್ಷೆಗಳಲ್ಲಿ ತೇರ್ಗಡೆಯಾಗುವುದರಲ್ಲಿ ಹೆಚ್ಚಿನ ಗೌರವವಿಲ್ಲ. ಒಬ್ಬ ಹುಡುಗಿಯು ಅಡಿಗೆ ಮಾಡುವುದನ್ನೂ, ಬಟ್ಟೆ ಹೊಲೆಯುವುದನ್ನೂ, ಬಟ್ಟೆ ಒಗೆಯುವುದನ್ನೂ ಕಲಿತು ಹಣವನ್ನು ಉದಸ್ಟು ಕಡಿಮೆ ಖರ್ಚು ಮಾಡಿ ಉಳಿಸುವದನ್ನು ಕಲಿಯುವುದೇ ಎಲ್ಲಕ್ಕಿಂತಲೂ ಹೆಚ್ಚಿನ ಗೌರವ. ಈ ವಿಷಯಗಳು ಗೊತ್ತಿಲ್ಲದ ಹುಡುಗಿಗೆ ಭೂಲೋಕದಲ್ಲಿದ್ದ ಎಲ್ಲಾ ಪರೀಕ್ಷೆಗಳ ಸರ್ಟಿಫಿಕೇಟುಗಳು ಸಿಕ್ಕಿದರೂ ಅವಳು ವಿದ್ಯಾವಂತೆಯಾಗಲಿಲ್ಲ" ಎಂದು ಮೇಲ್ಕಂಡ ಹೈಸ್ಕೂಲಿನ ಮುಖ್ಯೋಪಾಧ್ಯಾಯಿನಿಯಾದ "ಮಿಸ್ ಕಾಡ್ಮೈ" ಎಂಬುವರು ಹೇಳುತ್ತಾರೆ.

ಇದು ನಿಜವಾದದ್ದು. ಪಾಶ್ಚಾತ್ಯರ ಮಾದರಿಯನ್ನು ವಿದ್ಯಾವಂತರಾದ ಹಿಂದೂಗಳೂ ಸಹ ಅನುಸರಿಸುತ್ತಿರುವುದು ಅತಿಶೋಚನೀಯವಾದ ಸಂಗತಿ. ಗೃಹಸ್ಥಿತಿಯನ್ನೂ ಸ್ಥಿತಿಯನ್ನೂ ಶ್ರೇಷ್ಠತರಕ್ಕೆ ತರುವ ಕಾರ್ಯಕ್ಕೆ ಮಗುಳ್ಚು

ಮೂಲೆಗೊತ್ತಿ ಪ್ರಾಪಂಚಿಕ ಮೇಲಾಟಕ್ಕೆ ಒದ್ದಾಡುತಿದ್ದೇವೆ. ಅಂತಹ ನೆಯಲ್ಲಿ ಸುಖವೆಲ್ಲಿಂದ ಬರಬೇಕು ?

" ನಮ್ಮ ಮನೆಗಳು ಮನಸ್ಸಿಗೆ ಶಾಂತತೆಯನ್ನು ಕೊಡುವ ಗಡುಗಳಂತಿದ್ದರೂ ಚಿಂತೆಯಿಲ್ಲ. ಪಾಶ್ಚಾತ್ಯರು ಅನುಸರಿಸುವ ಲೌಕಿಕ ಮೇಲಾಟ ಜೂಜು ನಮಗೆ ಬೇಡ" ಎನ್ನುವುದೇ ಇನ್ನು ಮುಂದಿನ ಕೂಗಾಗುತ್ತದೆ.

(ಲೋರೆಹಸ್ಯ)

ಸ್ತ್ರೀಯೆರೂ ಸಮಾಜ ಸೇವೆಯೂ.

(ಹಿಂದಿನ ಸಂಚಿಕೆಯಿಂದ ಮುಂದರಿಸಿದ್ದು)

ಮಾಡತಕ್ಕ ಅನೇಕ ಕಾರ್ಯಗಳಿಗೆ ತಾವೂ ಸಹಾಯಕರಾಗಿ ನಿಲ್ಲುವ ಮನಸ್ಸುಂಟಾಗುವುದು ಮಾತ್ರವಲ್ಲದೆ ತಮ್ಮಿಂದ ಸಾಧ್ಯವಾದ ಪರೋಪಕಾರಕಾರ್ಯಗಳನ್ನು ಮಾಡಲು ಸಿದ್ಧರಾಗುವಂತೆ ಪ್ರೇರೇಪಿಸುವುದು. ಅಲ್ಲದೆ ನಮ್ಮದೀನ ಸೋದರಿಯರ ಸಹಾಯಾರ್ಥವಾಗಿ ನಮ್ಮ ಮೂಲಕ ಅಥವಾ ಸ್ತ್ರೀಸಂಘಗಳ ಮೂಲಕ ಮಾಡಲ್ಪಡಬೇಕಾದ ಕಾರ್ಯಗಳು ಎಷ್ಟೋ ಇರುವುದಾದ್ದರಿಂದ ಇಂತಹ ಕಾರ್ಯ ನಿರ್ವಾಹಕತ್ವವನ್ನು ವಹಿಸಿ ದೇಶಸೇವೆ ಮತ್ತು ಸಮಾಜ ಸೇವೆಮಾಡಲು ಒಬ್ಬರಿಬ್ಬರು ಸೋದರಿಯರು ಸ್ವಾರ್ಥತ್ಯಾಗಮಾಡಿ ಸೊಂಟಕಟ್ಟಿ ನಿಲ್ಲಬೇಕಾದುದು ಅತ್ಯಾವಶ್ಯಕವು.

ಇಂತಹ ಕಾರ್ಯವನ್ನು ಮಾಡಲೆಳಸುವರು ಆಯಾ ಊರಿನವರ ಅಥವಾ ಪಟ್ಟಣದವರ ಅನುಕೂಲಕ್ಕೆ ತಕ್ಕಂತೆ ಎಲ್ಲರನೂ, ಒಂದು ಸ್ಥಳದಲ್ಲಿ ಕೂಡಿಸಿ ಸಮಯಾನುಸಾರ ಅವರವರಿಗೆ ತಕ್ಕಂತೆ ಕೆಲಸಗಳನ್ನು ವಿಭಾಗಿಸಿ ಕೊಡಬೇಕಾದರೆ ಈ ಕೆಳಗೆ ಕಂಡುಬರುವಂತೆ ಪರಸ್ಪರ ಸಹಾಯದಿಂದ ನಡೆಸಬಹುದು.

(1) ಐಶ್ವರ್ಯವಂತ ಮಹಿಳೆಯರೂ——ಮಧ್ಯಮತರಗತಿಯವರೂ.

ಈಕೆಳಗೆ ಕಂಡುಬರುವಂತಹ ವಿಧವನ್ನು ಈ ವಿದ್ಯಾವಂತರ ವಿಷಯದಲ್ಲಿ ಆಚರಣೆಗೆ ತರುವುದು ಮುಖ್ಯವಾದುದು. ಮೇಲಿರಿಸಿದ ಸ್ತ್ರೀಯರೆಲ್ಲರೂ ಸಾಧಾರಣವಾಗಿ ತಮ್ಮ ತಮ್ಮ ಸ್ವಂತಭಾಷೆಯಲ್ಲಿಯೂ ಅನೇಕರು ಆಂಗ್ಲಭಾಷೆಯಲ್ಲಿಯೂ

ಪರಿಚಯವುಳ್ಳವರಾಗಿರುವರು. ಇವರುಗಳಿಗಾಗಿ ಪ್ರತಿದಿನವೂ ತರಗತಿಗಳನ್ನೇರ್ಪಡಿಸಬೇಕಾದ ಅವಶ್ಯಕತೆಯಿಲ್ಲ. ಆದರೆ ಆಗಾಗ್ಗೆ ಸುಲಭವಾಗಿ ಅರ್ಥವಾಗುವ ಮಾಸಪತ್ರಿಕೆಗಳು, ಪುರಾಣಪುಣ್ಯಗ್ರಂಥಗಳು, ವ್ಯಾವಹಾರಿಕಜ್ಞಾನವನ್ನುಂಟುಮಾಡುವ ಮಹಿಳಾವರ್ಗಕ್ಕೆ ಉಪಯುಕ್ತವಾದ ಉಪನ್ಯಾಸಗಳು, ಪೌರಸಾಮಾಜಿಕವಿಷಯಕ್ಕೆ ಸಂಬಂಧಪಟ್ಟ ಭೂತಕನ್ನಡಿಯ ಮೂಲಕ ಚಿತ್ರಪ್ರದರ್ಶನ (Magic lantern) ಇವುಗಳ ಮುಖಾಂತರ ತಿಳಿಸುವುದು ಮಾತ್ರವಲ್ಲದೆ ಮತಶಾಸ್ತ್ರ ಮೊದಲಾದವುಗಳಿಗೆ ಸಂಬಂಧವಾದ ವಿಷಯಗಳ ಚರ್ಚೆಗೆ ಅವಕಾಶವನ್ನುಂಟುಮಾಡುವುದರಿಂದ ಇಂತಹ ಮಹಿಳೆಯರು ಉತ್ಸಾಹದಿಂದ ಕಾಲಕಳೆಯಲು ಅನುಕೂಲವಾಗುವುದಲ್ಲದೆ ಉತ್ತರೋತ್ತರ ಸಕಲ ಅಂತಸ್ಥಿನ ಸ್ತ್ರೀಯರೂ ಒಂದುಕಡೆ ಸೇರುವುದರಿಂದ ಪರಸ್ಪರ ಸೌಹಾರ್ದ್ರಭಾವವೂ ಸೋದರೀಭಾವವೂ ಹೆಚ್ಚಿ ತಮ್ಮ ಸಮಾಜ ಸೇವೆಗೆ ಒದ್ಕಂಕಣರಾಗುವ ಮನಸ್ಸುಂಟಾಗುವುದು. ಬಾಲಕಿಯರ ಆಟಗಳು ಸಂಗೀತ, ಚಿತ್ರಕೆಲಸ ಮೊದಲಾದವುಗಳು ಇಂತಹ ಉಪಪನ್ನರಾದ ಸ್ತ್ರೀಯರ ಅನುಕೂಲಕ್ಕಾಗಿ ಮಾತ್ರವಲ್ಲದೆ ಸಕಲರೂ ಉತ್ಸಾಹದಿಂದ ಒಂದು ಕಡೆ ಸೇರುವ ಅಭಿಲಾಷೆಯನ್ನುಂಟುಮಾಡುವ ಉದ್ದೇಶದಿಂದೇರ್ಪಡಿಸಬಹುದು. ಸಂಘದ ಅಭಿವೃದ್ಧಿಗೆ ದ್ರವ್ಯ ಸಹಾಯಮಾಡುವುದು ಇವರ ಮುಖ್ಯಕರ್ತವ್ಯವಲ್ಲದೆ ತಾವು ಕಲಿತಿರತಕ್ಕ ಕುಶಲವಿದ್ಯೆಗಳನ್ನೂ ಓದುಬರಹವನ್ನೂ ಸಂಘದವರಿಗೆ ಮುಫತ್ತಾಗಿ ಕಲಿಸುವುದು ಇವರನ್ನು ಸೇರಿರುವುದು.

(2) ಮಧ್ಯಮತರಗತಿಯ ಹೆಂಗಸರು

ಐಶ್ವರ್ಯವಂತರ ವಿಷಯವನ್ನಾಲೋಚಿಸಿದ್ದಾಯಿತಷ್ಟೆ. ಕಡಮೆಸಂಬಳ ಬರತಕ್ಕವರ ಪತ್ನಿಯರು, ಸಹೋದರಿಯರು ತಾವು ಕೈಗಾರಿಕೆಯನ್ನಾಗಲಿ, ವಿದ್ಯೆಯನ್ನಾಗಲಿ ಕಲಿಯಲು ತಮಗೆ ಇಷ್ಟವಿದ್ದಾಗ್ಯೂ ತಮ್ಮ ಗಂಡಂದಿರುಗಳಿಗೆ ಬರತಕ್ಕ ವರಮಾನವು ಅಲ್ಪವಾಗಿರುವುದರಿಂದ ತಮ್ಮ ಆಸೆಯನ್ನು ಕೃಪ್ತಿಪಡಿಸಿಕೊಳ್ಳಲಾರರು. ಇಂತಹವರಿಗಾಗಿ ಹೊಲಿಗೆಯಕೆಲಸ, ಕಸೂತಿಯಕೆಲಸ, ಚಿತ್ತಾರದಕೆಲಸ ಮೊದಲಾದವುಗಳನ್ನು ಪ್ರಥಮತಃ ಕಡಮೆಖರ್ಚಿನಿಂದೇರ್ಪಡಿಸಿ ಇಂತಹವರಿಗೆ ಸ್ವಲ್ಪಮಟ್ಟಿಗೆ ಸಹಾಯದೊರೆಯುವಂತೆ ಮಾಡಬಹುದು. ಮನೆಯಲ್ಲಿ ಮಕ್ಕಳಿಗೂ ಮತ್ತು ತಮಗೂ ಉಪಯೋಗವಾಗುವಂತೆ ಹೊಲಿಗೆಯ ಕೆಲಸವನ್ನು ಕಲಿಯುವುದು ಮುಖ್ಯವಾದುದಲ್ಲದೆ ಮನೆಯ ಖರ್ಚಿನಲ್ಲಿ ಸ್ವಲ್ಪಭಾಗವು ಕಡಮೆಯಾದಂತಾಗುವುದು. ಈ ಕಾರ್ಯದಿಂದ ಸಂಘಕ್ಕೆ ನಷ್ಟವಾಗದ ಸಾಕಾದಷ್ಟು ದ್ರವ್ಯವು ಉತ್ಪನ್ನವಾಗದೆ ಮೇಲ್ಕಂಡ ವಿದ್ಯಾರ್ಥಿಗಳಿಗೆ ತಾವು ಖರ್ಚುಮಾಡಿದಷ್ಟು ಹಣವನ್ನು ಕಳಿಸಿಕೊಂಡು ಉಳಿದದ್ದನ್ನು ಹಂಚಬಹುದು. ಈ ರೀತಿ ಶ್ರೀಮಂತರೂ ಬಡವರೂ ಒಂದುಕಡೆ ಸೇರಿ ಕೆಲಸ ಕಲಿಯಲು ಮೊದಲುಮಾಡಿದಲ್ಲಿ

ಕಡಮೆಯಾಗಿರುವುದರಿಂದ ಮೇಲ್ಕಂಡ ರೀತಿಯಲ್ಲಿ ಅವರಿಗೆ ಸಹಾಯಮಾಡಿದಲ್ಲಿ ಹಿಂದೂಮುಸಲ್ಮಾನರಲ್ಲಿ ಪರಸ್ಪರ ಸೌಹಾರ್ದ್ರಭಾವವು ಹೆಚ್ಚಿ ಹಿಂದೂ ಮಹಿಳಾಜನಾಂಗವನ್ನುತ್ಸಾಹ, ಪ್ರಾಬಲ್ಯಕ್ಕೆ ಬರುವುದು. ತಮ್ಮ ಹಿತಚಿಂತಕರಿರುವರೆಂಬ ಭಾವನೆಯು ಯಾವಾಗ ಉಂಟಾಗುತ್ತೋ ಆಗ ಪ್ರೀತಿ, ವಿಶ್ವಾಸ, ಪರಸ್ಪರ ಸೌಹಾರ್ದ್ರಭಾವ, ಸೋದರೀವಾತ್ಸಲ್ಯ ಮೊದಲಾದವುಗಳು ತನ್ಮೂಲಕ್ಕೆ ತಾವೇ ಉಂಟಾಗುವುವು.

ಇಂತಹ ಸ್ತ್ರೀಸಂಘಗಳು ನೆಪಹೊರೆಯ (ಪುರುಷರಿಂದ ಸ್ಥಾಪಿಸಲ್ಪಟ್ಟಿರುವ) ಸಂಘಗಳೊಡನೆ ಸೇರಿ ಕೆಲಸಮಾಡುವುದಾದರೂ ಉದ್ದೇಶವುಮಾತ್ರ ಮುಖ್ಯವಾಗಿ ಮಹಿಳೆಯರ ಪುರೋಭಿವೃದ್ಧಿಯನ್ನನುಸರಿಸಿದ್ದಾಗಿರಬೇಕು. ಬಡವರಾಗಿರುವ ತಮ್ಮ ಸ್ನೇಹಿತರಿಬ್ಬರು ಮೂವರನ್ನು ಉತ್ತಮಸ್ಥಿತಿಯಲ್ಲಿರುವ ಸ್ತ್ರೀಯರು ಇಂತಹ ಸಂಘಗಳಿಗೆ ಕರೆದುಕೊಂಡುಬಂದು ಸಹಾಯಮಾಡಿಸಿದಲ್ಲಿ ಸ್ತ್ರೀಯರಲ್ಲಿ ನೆಲಸಿರುವ ಕೆಲವು ಮೂಢನಂಬಿಕೆಗಳು ತೊಲಗಿ ತಮ್ಮ ಕ್ಷೇಮಕ್ಕಾಗಿ ಪಾಡುಪಡತಕ್ಕವರಿರುವರೆಂದು ಅವರಿವರಲ್ಲಿ ಹೇಳುವುದರಿಂದ ಇಂತಹ ಸಂಘಗಳಿಂದಾಗುವ ಸಹಾಯವನ್ನು ಇಲ್ಲಿ ಮತ್ತೆ ವಿವರಿಸಬೇಕಾಗಿಲ್ಲ.

ಕಾರ್ಯ ನಡೆಸುವರೀತಿ

ಇಂತಹ ಸಂಘಗಳನ್ನು ಸ್ಥಾಪಿಸಿ ನಡೆಸತಕ್ಕ ವಿಷಯದಲ್ಲಿಯೂ, ಮುಖ್ಯವಾಗಿ ಇಂತಹ ಸಂಘಗಳು ಅಭಿವೃದ್ಧಿಗೆ ಬರತಕ್ಕ ವಿಷಯದಲ್ಲಿಯೂ ಇರತಕ್ಕ ಆಟಂಕವನ್ನು ಆರೋಗ್ಯವಾದ ವಿಸ್ತಾರವಾದ ಸ್ಥಳಗಳಲ್ಲಿರತಕ್ಕ ಪ್ರತ್ಯೇಕ ಕಟ್ಟಡವು. ಸ್ತ್ರೀಯರು ಮಾಡತಕ್ಕ ಸಾಂಘಿಕ ಕಾರ್ಯಗಳು (Social works) ಅನೇಕವಿದೆ ಅವರು ಒಂದಾಗಿಸೇರಲು ಯೋಗ್ಯವಾದ ಕಟ್ಟಡವಿಲ್ಲದ್ದರಿಂದ ಕ್ರಮವಾಗಿ ನಡೆಯುತ್ತಿಲ್ಲವೆಂದು ಹೇಳಬಹುದು. ಇಂತಹ ಕಟ್ಟಡವು ಸಾಧಾರಣವಾಗಿ ಆ ಪ್ರಾಂತ್ಯದಸುತ್ತುಮುತ್ತುಲಿರುವ ಸ್ತ್ರೀಯರು ಸುಲಭವಾಗಿ ಬರಲು ಅನುಕೂಲಸ್ಥಳದಲ್ಲಿರಬೇಕು. ಪುಸ್ತಕಭಂಡಾರ ಉದ್ಯಾನವನಮಂದಿರ, ಸಂಗೀತಶಾಲೆ, ಆಟಪಾಗಳಿಗನುಕೂಲವಾದ ಸ್ಥಳ, ಇತ್ಯಾದಿಗಳಿಂದ ಕೂಡಿದುದಾಗಿರಬೇಕು. ಹೊಲಿಗೆ ತರಗತಿ, ಬೆಕ್ಕಸದ ತರಗತಿ, ಮತ್ತು ಅನೇಕ ಇತರವಿಧವಾದ ಕೈಗಾರಿಗೆ ತರಗತಿಗಳನ್ನು ನಡೆಸಲು ಅನುಕೂಲವಾದ ಸ್ಥಳವುಳ್ಳದ್ದಾಗಿರಬೇಕು. ಇಲ್ಲಿಂದ ಒಡವರಾದವರಿಗೆ ಬಟ್ಟೆಬರೆಗಳನ್ನು ಹಂಚಬಹುದು. ಸಾಧ್ಯವಿದ್ದು, ತಕ್ಕಷ್ಟು ಪ್ರೋತ್ಸಾಹವಿದ್ದರೆ ಕಲಿಯಲು ಬರುವ ದೊಡ್ಡದೊಡ್ಡ ಹೆಂಗಸರ, ಮಕ್ಕಳುಗಳ ಪರಾಂಬರಿಕೆಗಾಗಿ ಆಳುಗಳನ್ನಿಟ್ಟು ಅಡಿಸುವುದಕ್ಕೆ ಪ್ರತ್ಯೇಕಸ್ಥಳವನ್ನೇರ್ಪಡಿಸಿ ಅವರು ಸ್ವಲ್ಪ ದೊಡ್ಡವರಾದ

[ಸಶೇಷ]

ಭಗವತೀ ಶ್ರೀ ಶಾರದಾದೇವಿಯವರು.

(ಶ್ರೀ ರಾಮಕೃಷ್ಣ ಪರಮಹಂಸರವರ ಧರ್ಮ ಪತ್ನಿ)



ಜನನ ೧೮೫೩ ನಿರ್ಯಾಣ ೧೧-೭-೧೯೨೦.

ಅಗಾಕರ್ತೆಮುದಿತೇಹೃಷ್ಯಾ ಪ್ರೋಷಿತೇಮಲಿನಾಕೃಶಾ |
ಮೃತೇಮ್ರಿಯೇತಯಾನಾರೀ ಸಾಸ್ತ್ರೀಜ್ಞೇಯಾಪತಿವ್ರತಾ ||

ಆಧುನಿಕಭಾರತವು ಅನೇಕ ವಿಷಯಗಳಲ್ಲಿ ಪಾಶ್ಚಾತ್ಯ ಹಾಗೂ ಪೌರಾತ್ಯ ದೇಶಗಳಿಗಿಂತ ಬಹುಮಟ್ಟಿಗೆ ಹಿಂದುಳಿದಿರುವುದಾದರೂ ಸಮಸ್ತ ಮಹಿಳಾಪ್ರಪಂಚಕ್ಕೆ ಆದರ್ಶಸ್ವರೂಪರಾದ ಸಾಧ್ವಿಶಿರೋಮಣಿಯರನ್ನು ಹೊಂದಿರುವುದರಲ್ಲಿ ಮಾತ್ರ ಇದು ಈಗಲೂ ಅಗ್ರಸ್ಥಾನವನ್ನೇ ವಹಿಸಿರುವುದೆಂಬುದು ಎಲ್ಲರಿಂದಲೂ ಒಪ್ಪಲ್ಪಟ್ಟ ಮಾತು. ಸೀತಾ ಸಾವಿತ್ರಿಯರಂತಹ ಸಾಧ್ವೀಮಣಿಯರೂ, ವೈತ್ರೇಯಿ ಲೀಲಾವತಿಯರಂತಹ ವಿದುಷಿಯರೂ, ಜನ್ಮಗ್ರಹಣಮಾಡಿದ ಈ ಪವಿತ್ರಭೂಮಿಯು ಎಂದಿಗೂ ಭಂಜೆಯಾಗಿರಕ್ಕಿದ್ದಲ್ಲ. ಪತಿಗತಪ್ರಾಣೆಯರಾಗಿ ತಮ್ಮ ಸುಖಸಂತೋಷ

ಗಳನ್ನು ಪತಿಗೋಸ್ಕರ ತ್ಯಜಿಸಬಲ್ಲವರೆಂದರೆ ನಮ್ಮ ಭಾರತಮಹಿಳೆಯರೇ! ಇಂತಹ ವರಲ್ಲಿ ಶ್ರೀಮತಿ ಶಾರದಾದೇವಿಯವರೊಬ್ಬರು. ಈಕೆಯು ಉದ್ಧಾಮ ಮಹಾತ್ಮರೆನಿಸಿದ ಶ್ರೀ ರಾಮಕೃಷ್ಣ ಪರಮಹಂಸರವರ ಅರ್ಧಾಂಗಿ. ನೂತನ ಪಾಶ್ಚಾತ್ಯ ವಿದ್ಯಾಭ್ಯಾಸವಿಂದ ಭಾರತೀಯರಲ್ಲಿ ಹಾಗೂ ಬಂಗಾಳಿಗಳಲ್ಲಿ ಅಂಕುರಿಸಿದ್ದ ವಿಲಾಸಲೋಲುಪತೆ ಮತ್ತು ಆರ್ಯಧರ್ಮಗಳಲ್ಲಿ ಅವಿಶ್ವಾಸವೆಂಬ ದುಷ್ಕೃತವನ್ನು ನಾಶಮಾಡಿ ಧರ್ಮದ ಜೀವಜ್ಯೋತಿಯನ್ನು ಮತ್ತೆ ಸಂಸ್ಥಾಪನಮಾಡುವ ಮಹತ್ಕಾರ್ಯದಲ್ಲಿ ಆ ಮಹಾತ್ಮರಿಗೆ ನೆರವಾಗಿದ್ದ ಸಹಧರ್ಮಿಣೀ. ಬಿರಬ್ರಹ್ಮಚರ್ಯವನ್ನು ಸಾಧಿಸುತ್ತಾ ಆ ಪುಣ್ಯಪುರುಷರ ಸೇವೆಗೆ ತನ್ನ ನಾರೀದೇಹವನ್ನು ಅರ್ಪಣನ್ನಾಗಿ ಮಾಡಿದ ಮಹನೀಯಳು. ಶ್ರೀ ರಾಮಕೃಷ್ಣ ಪರಮಹಂಸರು ಈಕೆಯನ್ನು ಪೂತೃಭಾವನಿಂದ ನೋಡುತ್ತಿದ್ದರು. ತಮ್ಮ ಇಷ್ಟದೈವವಾದ ಮಾದುರ್ಗಿಯ ಅವತಾರವೆಂದು ತಿಳಿದಿದ್ದರು. ಇವರೀಗ ಸ್ವರ್ಗವಾಸಿಗಳಾಗಿದರೂ ಇವರ ಅಕ್ಷಯವಾದ ಆತ್ಮವು ಸರ್ವದಾ ನಮ್ಮ ಸೋದರೀಮಣಿಯರ ಹೃದಯದ ಮಧ್ಯೆ ಆವಿಷ್ಕರಿಸಿ ಅವರನ್ನು ಇಮ್ಮಡಿಗುಣವತಿಯರನ್ನಾಗಿಯೂ, ಪತಿಯ ಇಷ್ಟಧರ್ಮದಲ್ಲಿ ಅನನ್ಯಸಹಾಯವನ್ನು ಕೊಡುವ ಸಹಧರ್ಮಿಣಿಯರನ್ನಾಗಿಯೂ ಮಾಡಲಿ!

ಓಂ ಶಾಂತಿಶಾಂತಿಶಾಂತಿಃ

ಹಾವು ಸರಸರನೆ ಹರಿದು ಕಂಟಿ (ಪೊದೆ)ಯನ್ನು ಹೊಕ್ಕಿತು. ಕೂಡಲೆ ಅವಿಮಾನೆಯು ಓಡಿಹೋಗಿ ಮಗಳನ್ನು ಅಮುಜಿಕೊಂಡು ಬಂದೇಸವನೆ ಮುದ್ದಾಡಿ ಪೊಲೆಕುಡಿಸಿದಳು.

ಆ ಹಿಂಸ್ರಪ್ರಾಣಿಯಾದ ಹಾವಿನ ಅಲೌಕಿಕ ಪ್ರೇಮದ ಸೋಟು ದಿಂದಲೋ ನಾಗರಹಾವಿನ ಹೆಡೆಯನ್ನು ಕೊಡೆಯಾಗಿ ಹಿಡಿಸಿಕೊಂಡ ಕೂಸುಗಳು ಮುಂದೆ ಅರಸುತನವನ್ನು ಹೊಂದುತ್ತಾರೆಂಬ ನಂಬಿಕೆ ಯಿಂದಲೋ ತಂದೆತಾಯಿಗಳಿಬ್ಬರ ಹೃದಯವೂ ಕರಗಿನೀರಾಗಿ ಹರಿಯಲಾ ರಂಭಿಸಿತು. ಆ ಕಾಲಕ್ಕೆ ಅವರಲ್ಲಿ ಹುಟ್ಟಿದ ಕಕ್ಕುಲತೆಯು ಆ ಕೂಸನ್ನು ಬಿಟ್ಟು ಹೋಗಬೇಕೆಂಬ ಅವರ ದೃಢನಿಶ್ಚಯವನ್ನು ತೇಲಿಸಿಕೊಂಡು ಹೋಗಿ ಅದನ್ನು ಎಲ್ಲಿ ಬಯ್ದುಬಿಟ್ಟಿತೋ ದೇವರೇ ಬಲ್ಲನು! ಇಬ್ಬರಲ್ಲಿ ಯೂ ಅದನ್ನು ತೆಗೆದುಕೊಂಡುಹೋಗಬೇಕೆಂಬ ಬಯಕೆಯು ಬಲಿ ಯಿತು. ಇಬ್ಬರೂ ಕೂಸನ್ನು ಬಿಟ್ಟುಹೋಗುವ ಮಾತನ್ನು ಎತ್ತದೆ, ಆ ಹಾವಿನ ಅದ್ಭುತ ಪ್ರೇಮವನ್ನೂ, ದೇವರ ಅಗಾಧವಾದ ಕರುಣೆಯನ್ನೂ ಹೊಗಳುತ್ತ ಆನಂದಾತಿರೇಕದಿಂದ ಹಾದಿಹಿಡಿದು ನಡೆದರು. ಹಾವಿನ ಅಗಮ್ಯವಾದ ಪ್ರೇಮ, ದೇವರ, ಅಪಾರಮಹಿಮೆ ಕೂಸಿನ ಭಾವಿ ಐಶ್ವರ್ಯ ಈ ಮೂರು ಮಾತುಗಳ ಹೊರತು ಬೇರೆ ಯಾವ ವಿಷಯವೂ ಅವರ ನೆನ ಪಿಗೆ ಬರಲಿಲ್ಲ.

ಹೀಗೆ ಬಂದೆರಡು ದಿವಸಗಳು ಕಳೆದುಹೋದಬಳಿಕ ಅವರಿಗೆ ತಮ್ಮ ಪರಿಸ್ಥಿತಿಯ ಅರಿವು ಬಂತು. ಈ ಕಾಲಕ್ಕೆ ಅವರು ಉಸುಬಿನ ಬಯ ಲನ್ನು ದಾಟಿ ಗುಡ್ಡಗಾಡು ಸೀಮೆಗೆ ಬಂದಿದ್ದರು. ಆಗ ಬಾಯಾರಿಕೆ ನೀರಡಿಕೆ ಬಿಸಲುರಿಗಳು ಕಡಮೆಯಾಗಿದ್ದರೂ ಶೀತದ ಬಾಧೆಯೂ ಕಾಡು ಮಿಕಗಳ ಕಾಟವೂ ಹೆಚ್ಚಿದ್ದವು

ಉಸುಬಿನ ಕಾಡಿನ ಕೆಚ್ಚಿನಿಂದಲೂ ಬಿಸಲಿನ ತಾಪದಿಂದಲೂ ಹೊತ್ತು ಹೊತ್ತಿಗೆ ಅನ್ನನೀರು ದೊರೆಯದ್ದರಿಂದಲೂ, ದಾರಿನಡೆಯುವ ಆಯಾಸ ದಿಂದಲೂ ಹೆರಿಗೆಯ ರಕ್ತಸ್ರಾವದಿಂದಲೂ, ಮುಂದೆ ತಮ್ಮ ಪಾಡುಏನಾ ಗುವುದೆಂಬ ಉಮ್ಮಳದಿಂದಲೂ, ತಾನೇ ತನ್ನ ಗಂಡನು ಮನೆಮಾರು ತಂದೆ ತಾಯಿಗಳನ್ನು ಬಿಟ್ಟು ನಾಡುಗೇಡಿ ಆಗಲಿಕ್ಕೆ ಕಾರಣಳಾದೆನೆಂಬ ಪಿರಿದು ಗಡದಿಂದಲೂ ಕೊರಗಿ ಅವಿಮಾನೆಯು ತೀರ ಅಶಕ್ತಳಾಗಿದ್ದಳು. ಇಂತಹ

ದೇಹಸ್ಥಿತಿಯಲ್ಲಿ ಅತಿಶೀತಪ್ರದೇಶವಾದ ಗುಡ್ಡಗಾಡಿನಲ್ಲಿ ಬಂದುದರಿಂದ ಕಾದ ಹೆಂಚಿನಮೇಲೆ ನೀರು ಸುರುವಿದಂತಾಯಿತು. ಆಕೆಗೆ ಉರಿಬಂದವು. ಅಯ್ಯಾಸನು ಎಷ್ಟು ಆರೈಕೆ ಮಾಡಿದರೂ ಅವು ಕಡಮೆಯಾಗದೆ ದಿನ ದಿನಕ್ಕೆ ಹೆಚ್ಚುತ್ತ ನಡೆದವು. ಇನ್ನು ಬದಕುವ ಆಕೆ ಇಲ್ಲವೆಂದು ಅಮಾನೆಗೆ ಹೊಳೆಯಿತು. ತನ್ನ ಮುದ್ದು ಮಗಳನ್ನು ಎಷ್ಟು ಕ್ರಮವಾದರೂ ಜೋಕೆ ಮಾಡಬೇಕೆಂದು ಗಂಡನಿಂದ ಕೈಮೇಲೆ ಕೈ ಹಾಕಿಸಿಕೊಂಡು ಆಕೆಯು ಪ್ರಾಣಬಿಟ್ಟಳು!!

ಅಯ್ಯಾಸನ ದುಃಖಕ್ಕೆ ತಡೆಯೇ ಇಲ್ಲದಾಯಿತು ಮುಗಿಲು ಒಮ್ಮೆಲೆ ಅವನ ಮೇಲೆ ಕಡಿಕೊಂಡು ಬಿದ್ದಂತಾಯಿತು. ಅವನಿಗೆ ದಿಕ್ಕುಗಳೇ ತೋರಲೊಲ್ಲವು. ಅವನು ಈಗ ದಿಟವಾಗಿ ಪರದೇಶಿಯಾದಂದಲ್ಲದೆ, ಬಂದು ತಿಂಗಳ ಕಂದಮ್ಮನ ಜೋಪಾನದ ಹೊರೆಯನ್ನು ಹೊತ್ತುಕೊಳ್ಳ ಬೇಕಾಯಿತು. ಮುಂದಿನ ವಿಚಾರವೇನೂ ಬಗೆಹರಿಯಲೊಲ್ಲದು. ಆತ್ಮ ಹತ್ಯದಿಂದ ಸಂಸಾರದುಃಖವನ್ನು ನೀಗಬೇಕೆಂದು ಬಗೆದನು. ಅಷ್ಟರಲ್ಲಿ ತಾನು ತನ್ನ ಪ್ರಯಹೆಂಡತಿಗೆ ಕೊಟ್ಟವನಾತು ನೆನಪಾಯಿತು. ಅವನು ಕರ್ತವ್ಯದಕ್ಷನೂ ಎದೆಗಾರನೂ ದೃಢನಿಶ್ಚಯನೂ ಆದ್ದರಿಂದ ಆ ವಿಚಾರವನ್ನು ಅಷ್ಟಕ್ಕೇ ಅಡಗಿಸಿಕೊಂಡನು. ಎಲ್ಲ ಕೋಟಲೆಯನ್ನೂ ತಾಳಿ ಆ ಕೂಸನ್ನು ಸಂರಕ್ಷಿಸಿ ತಾನು ಕೊಟ್ಟ ವಚನದಿಂದ ಮುಕ್ತನಾಗ ಬೇಕೆಂದು ನಿರ್ಧರಿಸಿದನು. ಇನ್ನುಮುಂದೆ ಅಲ್ಲಿ ನಿಂತು ಎಷ್ಟು ದುಃಖಿ ಸಿದರೂ ಏನೂ ಪ್ರಯೋಜನವಿಲ್ಲೆಂದು ಮನಗಂಡು, ವ್ಯರ್ಥವಾಗಿ ಕಾಲಕಳೆಯುವುದು ಸರಿಯಲ್ಲವೆಂದೆಣಿಸಿ, ಆ ಪರದೇಶಿಯಾದ ಕೂಸನ್ನು ಎದೆಗೆ ಅವಚಿಕೊಂಡು, ಸಾಮಾನಿನ ಗಂಟನ್ನು ತಲೆಯ ಮೇಲೆ ಹೊತ್ತು ಕೊಂಡು ಈ ದೇಕದ ದಾರಿಯನ್ನು ಹಿಡಿದನು.

ಬಂದೆರಡು ದಿವಸ ಹಾದಿ ನಡೆಯುವಷ್ಟರಲ್ಲಿ ಬಂದು ದಿನ ನಡುಹಗ ಲಿನಲ್ಲಿ ೩೧೪ ಡೇರೆಗಳೂ ಹತ್ತಿಪ್ಪತ್ತು ಕುದುರೆಗಳೂ, ಎಂಟುಹತ್ತು ಬಂಟಿಗಳೂ ಬಹುಜನರ ಸುಳಿದಾಟವೂ ಅಯ್ಯಾಸನ ಕಣ್ಣಿಗೆ ಬಿದ್ದವು. ಆಗ ಅವನಿಗಾದ ಆನಂದವು ಕೆಳಗೆ ಬರೆದ ಶ್ಲೋಕದಲ್ಲಿ ಹೇಳಿದ ಜನರ ಆನಂದದಷ್ಟಾಯಿತು—

ಬಡವ ನಡೆನಡೆಯುತ್ತ ಭಾಗ್ಯವ ನೆಡಹಿ ತಾ ಕಂಡಂತೆ |
ರೋಗಿಯು ಹಡುಕುತಿರ್ದೌಷಧದ ಲತೆ ಕಾಲ್ಮೊಡರಿ ಕಾಣ್ಬಂತೆ||

ಅವನು ನಲವಿನಿಂದ ಹಿರಿಹಿರಿ ಹಿಗ್ಗಿದನು. ಕೂಡಲೆ ಅಲ್ಲಿಗೆ ಹೋಗಿ ಆಳುಗಳಿಗೆ ಹೇಳಿಕೊಂಡು ಬಳಿಗೆ ಹೋಗಿ ಅವರ ಒಡೆಯನ ಮುಂದೆ ಉದ್ದಕ್ಕೆ ಅಡ್ಡಬಿದ್ದನು. ಆ ಒಡೆಯನು ಅವನನ್ನು ಎಬ್ಬಿಸಿ ಕುಳ್ಳಿರಿಸಿ ಅವನ ಹೆಂಡತಿಯು ಅಡವಿ ಹೆಣವಾದ ಸುದ್ದಿಯನ್ನು ಕೇಳಿ ಕನಿಕರ ಪಟ್ಟು ಅವನಿಂದ ಆ ಕೂಸನ್ನು ತೆಗೆದುಕೊಂಡು, ಅವನಿಗೆ ಊಟೋಪಚಾರ ಮಾಡಿಸಲಿಕ್ಕೆ ನೆರಯಲ್ಲಿದ್ದ ಡೇರೆಗೆ ಕಳುಹಿಸಿದನು. ಅಯ್ಯಾಸನು ತೆಹರಾನ ಬಿಟ್ಟ್ಯಂದಿನಿಂದ ಹೊಟ್ಟೆತುಂಬ ಊಟಮಾಡಿದ್ದು ಆ ಹೊತ್ತೇಸರಿ. ಊಟಮಾಡಿ ಒಂದಬಳಿಕ ಯಜಮಾನನು ತಾನು ಕಂದಹಾರದ ವ್ಯಾಪಾರಿಯೆಂತಲೂ ತಾನು ಸರಕು ತೆಗೆದುಕೊಂಡು ಹೊರಟಿರುತ್ತೇನೆಂತಲೂ, ಅಯ್ಯಾಸನನ್ನು ತನ್ನ ಸಂಗಡ ಕರೆದುಕೊಂಡು ಹೋಗುವೆನೆಂತಲೂ ಹೇಳಿದನು.

ಈ ಆತಿಥ್ಯವನ್ನೂ ಈ ಅನಿಮಿತ್ತ ಪ್ರೇಮವನ್ನೂ ಕಂಡು ಅಯ್ಯಾಸನಿಗೆ ಹೊಟ್ಟೆ ಹಿಡಿಸಲಾರದಷ್ಟು ಆನಂದವಾಯಿತು. ಆದ್ದರಿಂದ ಅವನು ದೇವರ ಅಗಾಧಮಹಿಮೆಯನ್ನೂ ತಡೆಯಿಲ್ಲದ ಶಕ್ತಿಯನ್ನೂ ಅನಂತ ಪ್ರೀತಿಯನ್ನೂ ಕೊಂಚೆ ಹೊತ್ತು ಕಣ್ಣುಮುಚ್ಚಿ ನಿಸ್ಸೀಮ ಭಕ್ತಿಯಿಂದ ಕೊಂಡಾಡಿದನು. ಬಳಿಕ ಆ ವರ್ತಕನ ಕೋರಿಕೆಯಂತೆ ಕೆಲದಿನ ಅವನ ಬಳಿಯಲ್ಲಿರಲಿಕ್ಕೆ ಒಪ್ಪಿಕೊಂಡನು.

ಅಯ್ಯಾಸನು ಊಟಕ್ಕೆ ಹೋದಾಗ ಅವನ ಕೂಸನ್ನು ಆ ವರ್ತಕನು ತನ್ನ ಹೆಂಡತಿಗೆ ತೋರಿಸಿದನು. ಅದರ ಅಂದಚಂದ ಸೊಬಗನ್ನು ನೋಡಿ ಆಕೆಯು ಅದಕ್ಕೆ ಮೋಹಿಸಿದಳು. ಕರ್ಮ ಧರ್ಮಸಂಯೋಗದಿಂದ ಆಕೆಯ ಕೂಸು ಸತ್ತು ಒಂದು ತಿಂಗಳಮಾತ್ರ ಆಗಿತ್ತು. ಆದ್ದರಿಂದ ತನ್ನ ಸತ್ತಕೂಸನ್ನೇ ದೇವರು ತನಗೆ ಮರಳಿ ಕೊಟ್ಟನೆಂದು ನೆನಿಸಿ ಆಕೆಯು ಅದಕ್ಕೆ ಮೊಲೆಕೊಡಲಾರಂಭಿಸಿದಳು. ಮೊಲೆ ಕಾಣದ ಆ ಕೂಸು ಆನಂದದಿಂದ ಕುಡಿಯಲಾರಂಭಿಸಿತು. ಹಾಲಿನ ರೂಪದಿಂದ ಆಕೆಯ ಪ್ರೇಮವು ಆ ಕೂಸಿನ ಮೈಯ್ಯೆಲ್ಲಾ ವ್ಯಾಪಿಸಿತು. ದೇವರ ಮಹಿಮೆಯಿಂದ ಆ ಕೂಸು ತನ್ನದೇ ಎಂದು ಆಕೆಯು ಮನಸ್ಸಿನಲ್ಲಿ ಭಾವನೆ

ಉಂಟಾಯಿತು. ಆದ್ದರಿಂದ ಅಕ್ಕೆಯು ಆ ಕೂಸನ್ನು ಹೇಗಾದರೂ ಮಾಡಿ ಇಟ್ಟುಕೊಳ್ಳಬೇಕೆಂದು ಗಂಡನನ್ನು ಬೇಡಿಕೊಂಡಳು. ತನ್ನ ಹೆಂಡತಿಯ ಕೋರಿಕೆಯನ್ನು ಪೂರೈಸುವ ಉದ್ದೇಶದಿಂದಲೇ ಆ ವರ್ತಕನು ಮೇಲೆ ಹೇಳಿದಂತೆ ಅಯ್ಯಾಸನಿಗೆ ತನ್ನ ಸಂಗಡ ಬರಲಿಕ್ಕೆ ಸೂಚಿಸಿದನು; ಮತ್ತು ಅಯ್ಯಾಸನು ಆ ಸೂಚನೆಗೆ ಒಪ್ಪಿಕೊಂಡು ಅವನನ್ನು ಹಿಂಬಾಲಿಸಿದನು. ಆದ್ದರಿಂದ ಅವನಿಗೆ ತನ್ನಹೆಂಡತಿಯ ಸಾವಿನ ಉಮ್ಮಳದ ಹೊರತು ಬೇರೆ ಯಾವ ಹಂಬಲವೂ ಉಳಿಯಲಿಲ್ಲ.

ಆಯ್ಯಾಸನು ಅನಾಯಾಸವಾಗಿ ವರ್ತಕನ ಪರಿವಾರದೊಡನೆ ದಾರಿನಡೆಯುತ್ತಾ ಲಾಹೋರಿಗೆ (ಕಂದಹಾರ)ಬಂದುಮುಟ್ಟಿದನು. ವರ್ತಕನ ಹೆಂಡತಿಯು ಮೊಲೆಕುಡಿಸುತ್ತಿದ್ದುದರಿಂದ ಕೂಸು ಪುಷ್ಟಿಯಾಗಿ ಬೆಳೆಯತೊಡಗಿತು. ಆಕಾಲಕ್ಕೆ ಈಗಿನಂತೆ ಅಂಚೆಯ ವಿವರ್ಣಾಡಿದ್ದಿಲ್ಲ, ತಂತಿಸುದ್ದಿ ಇದ್ದಿಲ್ಲ, ಉಗೆ ಬಂಡಿಯು ಪ್ರಯಾಣವಿದ್ದಿಲ್ಲ ; ಅದೇಕೆ ಊರಿಂದೂರಿಗೆ ಹೋಗಲಿಕ್ಕೆ ಸರಿಯಾಗಿ ಮಾಡಿದ ದಾರಿಗಳೆ ಇದ್ದಿಲ್ಲ. ಆದ್ದರಿಂದ ದಿಲ್ಲಿಯ ಚಕ್ರವರ್ತಿಯಾದ ಅಕ್ಬರ ಬಾದಶಹನು ಎಲ್ಲಿರುತ್ತಾನೆಂದು ತಿಳಿದುಕೊಳ್ಳಲಿಕ್ಕೆ ಅಯ್ಯಾಸನಿಗೆ ಬಹಳ ಪ್ರಯಾಸವೂ ಕಾಲವ್ಯಯವೂ ಹತ್ತಿತು. ೪-೫ ತಿಂಗಳ ಮೇಲಾದರೂ ಈ ಸಂಗತಿಯು ತಿಳಿದುದು ಅವನ ಸುದೈವವೇ ಸರಿ. ರಜೆ ತೆಗೆದುಕೊಂಡುಬಂದ ಒಬ್ಬ ದಂಡಾಳಿನ ಭೆಟ್ಟಿಯು ಅಕಸ್ಮಾತ್ತಾಗಿ ಅವನಿಗೆ ಅದುದರಿಂದ ಬಾದಶಹನು ಜೆಹಲಮ ಹೊಳೆಯ ದಂಡೆಯ ಮೇಲಿದ್ದ ಬಹಿರೆ ಎಂಬ ಊರಲ್ಲಿ ಪಾಳಯ ಹಾಕಿಕೊಂಡಿರುತ್ತಾನೆಂತಲೂ ಅವನ ಬೇಟೆಯ ಪೂರ್ವಸಿದ್ಧತೆಯು ನಡೆದಿರುತ್ತದೆಂತಲೂ ಗೊತ್ತಾಯಿತು ಕೂಡಲೆ ಅವನು ವರ್ತಕನಿಗೆ ಈ ಸುದ್ದಿಯನ್ನು ತಿಳಿಸಿದನು. ದೈವಯೋಗದಿಂದ ಆ ವರ್ತಕನಿಗೆ ಲಾಹೋರಿನ ಸುಬೇದಾರನೊಡನೆ ಮನೆತನದ ಬಳಿಕೆಯಿತ್ತು. ಆದ್ದರಿಂದ ಆ ಸುಬೇದಾರನು ತನ್ನ ಗೆಳೆಯನಾದ ಅಬುಲ್ ಫಾಜಲ್ಲನಿಗೆ ಬಂದು ಕಾಗದವನ್ನುಕೊಟ್ಟನು. ಆ ಕಾಗದವನ್ನು ತೆಗೆದುಕೊಂಡು ಅವನು ಬಹಿರೆಗೆ ಹೊರಟನು (ಮೇ ೧೫೭೪).

"ಶ್ರೀಯಾಂಸಿ ಬಹುವಿಘ್ನಾನಿ" ಎಂಬ ಸಕ್ಕದ ಗಾದೆಯ ಅನುಭವವು ಈ ಕಾಲಕ್ಕೆ ಅಯ್ಯಾಸನಿಗೆ ಬಂತು. ಅವನು ಬಹಿರೆಗೆ ಹೋಗಿ

ಸುಬೇದಾರನ ಬಳಿಯನ್ನು ಕೊಡಲು, ಅದನ್ನು ನೋಡಿ ಅಬುಲ್ ಫಾಜಲ್ಲನು ಅವನಿಗೆ ಆದರ ಸತ್ಕಾರಮಾಡಿದನು. ಆದರೆ ಆ ಕಾಲಕ್ಕೆ ಬಾದಶಹನ ಪ್ರಕೃತಿಯು ಅಸ್ವಸ್ಥವಾಗಿತ್ತು. ಅದ್ದರಿಂದ ಅವನನ್ನು ಬಾದಶಹನ ಕಡೆಗೆ ಒಯ್ದು ಬೆಟ್ಟಮಾಡಿಸಲಿಕ್ಕೆ ಅನುಕೂಲವಿದ್ದಿಲ್ಲ ಬಾದಶಹನ ಆರೈಕೆಮಾಡಲಿಕ್ಕೆ ಅವನ ತಾಯಿಯು ಆಗ್ರಾದಿಂದ ಬರುವವಳಿದ್ದಳು. ಆದಕಾರಣ ಮುಂದೆ ಏನುಮಾಡಬೇಕೆಂಬುದು ಅಯ್ಯಾಸನಿಗೆಹೊಳೆಯಲಿಲ್ಲ. ಅಲ್ಲೇ ಇರಬೇಕೆಂದರೆ ಉದರನಿರ್ವಾಹಕ್ಕೆ ಮಾರ್ಗವಿದ್ದಿಲ್ಲ. ತಿರುಗಿ ಹೋಗಬೇಕೆಂದರೆ ಅವನು ಇದ್ದಲ್ಲಿ ಬಾದಶಹನ ಆರೋಗ್ಯದ ಬಸುಗೆಯು ತಿಳಿಯಲಿಕ್ಕೆ ಅನುಕೂಲವಿದ್ದಿಲ್ಲ ಬಂದು ಕಡೆ ಬಾವಿ, ಬಂದುಕಡೆ ಕೆರೆ, ಈಬಗೆಯಾಗಿ ಉವ್ವಳಿಸುತ್ತ ಕುಳಿತಿರುವಾಗ ಅಬುಲ್ ಫಾಜಲ್ಲನೆ ಬಂದು ಉಪಾಯವನ್ನು ತೆಗೆದನು. ೪-೦೦ ದಿವಸಗಳ ಬಳಿಕೆಯಿಂದ ಅಯ್ಯಾಸನು ಓದಿದವನೆಂತಲೂ ಬುದ್ಧಿಯುಳ್ಳವನೆಂತಲೂ ಮಾತಿನಲ್ಲಿ ಚತುರನೆಂತಲೂ ಅವನು ಮನಗಂಡನು. ಅವನ ವಿಶಾಲವಾದ ಹಣೆಯನ್ನೂ ಅರಳಿದ ಹೂವಿನಂತಿರುವ ಕಣ್ಣನ್ನೂ ಸಂಪಿಗೆಹೂವಿನಂತೆ ನೀಟಾದ ಅವನ ಮೂಗನ್ನೂ ತೇಜಸ್ವಿಯಾದ ಮೋರೆಯನ್ನೂ ಹರವಾದ ಎದೆಯನ್ನೂ ಉದ್ದಾದ ಕೈಗಳನ್ನೂ, ಎತ್ತರವಾದ ನಿಲುವಿಕೆಯನ್ನೂ ನೋಡಿ ಅಬುಲ್ ಫಾಜಲ್ಲನು ಅವನನ್ನು ಹೇಗಾದರೂ ಮಾಡಿ ಇಟ್ಟುಕೊಳ್ಳಬೇಕೆಂದು ಮನದಲ್ಲಿ ನಿಶ್ಚಯಿಸಿಕೊಂಡು ಅವನಿಗೆ ಬಾದಶಹನಿಗೆ ಗುಣವಾಗುವ ವರೆಗೆ ತನ್ನ ಬಕ್ಷಿಯಾಗಿ ನಿಲ್ಲಲಿಕ್ಕೆ ಸೂಚಿಸಿದನು. "ರೋಗಿ ಬಯಸಿದ್ದು ಹಾಲೋಗರ, ವೈದ್ಯನು ಹೇಳಿದ್ದು ಹಾಲೋಗರ" ಎಂಬ ಗಾದೆಯಂತೆ ಅಯ್ಯಾಸನು ಆನಂದದಿಂದ ಅವನ ಬಕ್ಷಿಯಾಗಲಿಕ್ಕೆ ಒಪ್ಪಿಕೊಂಡು, ತನ್ನ ಕೂಸನ್ನು ತರಲಿಕ್ಕೆ ತಿರುಗಿ ಹೊರಟನು. ಲಾಹೋರಿನಲ್ಲಿದ್ದ ವರ್ತಕನ ಹೆಂಡತಿಯು ಆ ಮುದ್ದು ಕೂಸನ್ನು ಕೊಡಲಿಕ್ಕೆ ಬೇಗನೆ ಒಡಂಬಡಲಿಲ್ಲ. ಆಕೆಯು ಸಂರಕ್ಷಣೆ ಮಾಡಲಿಕ್ಕೆ ಆ ಕೂಸನ್ನು ತನಗೇ ಕೊಡಬೇಕೆಂದು ಪರಿಪರಿಯಿಂದ ಬೇಡಿಕೊಂಡಳು. ತನ್ನ ಹೆಂಡತಿಗೆ ಮಾತುಕೊಟ್ಟುದರಿಂದ ಆ ಜೋಪಾನದ ಹೊರೆಯನ್ನು ಎರಡನೆಯವರ ಮೇಲೆ ಹಾಕದೆ ತಾನೇ ಹೊರಬೇಕಾಗಿರುತ್ತದೆಂದು ಅಯ್ಯಾಸನು ಖಂಡಿತವಾಗಿ ಹೇಳಿದನು. ಕೊನೆಗೆ ಆಕೆಯು ಆ ಕೂಸನ್ನು

ಅತಿದುಃಖದಿಂದ ಅವನಿಗೆ ಒಪ್ಪಿಸಿದಳು. ಆ ಕೂಸಿನೊಡನೆ ಬಹಿರಂಗಕ್ಕೆ ಬಂದು ಅಯ್ಯಾಸನು ಅಬುಲ್ ಫಾಜಲ್ಲನ ಬಹ್ನಿಯಾಗಿ ನಿಂತನು. ಆ ಹೊತ್ತಿಗೆ ಅವನ ಸುರದೃಷ್ಟವು ನುಗಿಯಿತು ಮತ್ತು ಸುದೈವವು ತೆರೆಯಿತು. ಅವನು ಮುಂಬೆ ಸಾಮ್ರಾಜ್ಯದ ಲೆಕ್ಕಿಗನೂ ಬಂಡಾರದವನೂ ಆಗಿ ಬಾದಷಹನ ಪೂರ್ಣನಂಬಿಕೆಗೆ ಪಾತ್ರನಾದನು.

ಹೀಗೆ ಐವ್ವಾರು ವರುಷಗಳು ಕಳೆದುಹೋದವು ಹಗಲು ೧೦ ತಾಸು "ಅವಿಾನೆ ಅವಿಾನೆ" ಎಂದು ಹಲಬುತ್ತಿದ್ದ ಅಯ್ಯಾಸನು ಆಕೆಯನ್ನು ಮರೆಯತೊಡಗಿದನು. ಪ್ರಪಂಚದ ಮಾಯೆಯು ಅನಿವಾರ್ಯವಾದುದು ಮತ್ತು ಕಾಲದ ವಹಿಮೆಯು ಅನರ್ಣನೀಯವಾದುದು. ಮಹಾತ್ಮರಾದ ಪರಮಹಂಸರ ಹೊರತು ಉಳಿದವರೆಲ್ಲರೂ ಈ ಮಾಯೆಯ ಬಲೆಗೆ ಸಿಲುಕುವವರೇ. ಪ್ರಿಯರ ಸತ್ಕಾದಿವಸದ ದುಃಖವು ನೂರು ದಿವಸ ಇರುವುದಿಲ್ಲ, ತಿಂಗಳಾದ ಬಳಿಕ ಅದಕ್ಕೂ ಕಡಮೆ, ವರ್ಷವಾದ ಬಳಿಕ ಅದಕ್ಕೂ ಕಡಮೆ. ಈಗ ಅವಿಾನೆಯು ಸತ್ತು ೬|೭ ವರ್ಷಗಳಾಗಿದ್ದವು. ಆದ್ದರಿಂದ ಅಯ್ಯಾಸನ ದುಃಖವು ಬಹಳ ಕಡಮೆಯಾಗಿತ್ತೆನ್ನಲಿಕ್ಕೆ ಅಡ್ಡಿಯಿಲ್ಲ. ಅವನು ತನ್ನ ವಿರಾಮಕಾಲವನ್ನು ಓದು ಬರಹದಲ್ಲಿಯೂ ತನ್ನ ಮುದ್ದುಮಗಳಿಗೆ ಕಲಿಸುವುದರಲ್ಲಿಯೂ, ಆಟ ನೋಟಗಳಲ್ಲಿಯೂ ಕಳೆಯುತ್ತಿದ್ದನು. ಆದರೆ ಇರಳೂಟವಾದ ಬಳಿಕ ಅವನ ಮಗಳು ಬೇಗನೆ ಮಲಗುತ್ತಿದ್ದುದರಿಂದ ಅವನಿಗೆ ಒಬ್ಬಂಟಿಗತನದ ಅನುಭವವು ಬರುತ್ತಿತ್ತು. ಆಗ ಸ್ವಾಭಾವಿಕವಾಗಿ ಅವನ ಪ್ರೀತಿಯ ಅವಿಾನೆಯು ನೆನಪಾಗುತ್ತಿದ್ದಳು. ಆಕೆಯ ಚೆಲುವಿಕೆಯನ್ನೂ, ಗುಣಾತಿಶಯವನ್ನು ನೆನೆನೆನೆದು ಕಣ್ಣೀರು ಸುರಿಸುತ್ತಿದ್ದನು. ತಂದೆತಾಯಿಗಳ ಅಗಲುವಿಕೆಗೂ ದೇಹತ್ಯಾಗಕ್ಕೂ ಅವಿಾನೆಯೇ ಕಾರಣಳಾದಳೆಂದು ಆಕೆಯನ್ನು ಕೆಲಹೊತ್ತು ಹಳಿಯುತ್ತಿದ್ದನು. ತರುವಾಯ ತನಗೆ ಮುದ್ದುಮಗಳೂ ಈಗ ಅನುಭವಿಸುವ ಸುಖವೂ ಅಬುಲ್ ಫಾಜಲ್ ಫೈಜಿ ಬೀರಬಲ್ಲ ಇಂತಹ ಘನವಿದ್ವಾಂಸರ ಮತ್ತು ಪಂಡಿತರ ಸಹವಾಸವೂ ಅಕ್ಬರ ಬಾದಷಹನಂತಹ ಉದಾರಚಕ್ರವರ್ತಿಯ ಆಶ್ರಯವೂ ತಾನು ಆಕೆಯನ್ನು ಪಡುವೆಮಾಡಿಕೊಂಡದ್ದರಿಂದಲೇ ದೊರೆತವೆಂದೆನಿಸಿ ಹಿಗ್ಗಿ, ಖುಷಿಯನ್ನು ಕೊಂಡಾಡುತ್ತಿದ್ದನು. ಈ ಎಣಿಕೆಯು ತಲೆಗಳ ಮೇಲೆ

ತೇಲಾಡುವಾಗ ಹೊಂಚುಹಾಕಿಕೊಂಡು ಈಳತಿದ್ದ ನಿದ್ದೆವೆಣ್ಣು ಬನ್ನಿಯ ಮೇಲೆ ಹಾರಿಬಂದು ಅವನ ಮೇಲೆ ಬಿದ್ದು ಮುಸುಕಿ ಕಟ್ಟಿ ಅವನನ್ನು ತನ್ನ ಸೆರೆಯಾಳಾಗಿ ಮಾಡುತ್ತಿದ್ದಳು.

ಅಯ್ಯಾಸನ ಸ್ಥಿತಿಯಲ್ಲಿದ್ದ ಗೃಹಸ್ಥರು ಬಹಳ ವರ್ಷ ವಿಧುರರಾಗಿ ಇರಲಾರರೆಂಬ ಮಾತು ಪ್ರವೃತ್ತಿಮಾರ್ಗದಲ್ಲಿದ್ದ ಎಲ್ಲ ಸಂಸಾರಿಕರಿಗೆ ಗೊತ್ತಿದ್ದ ಸಂಗತಿಯೇ ಸರಿ. ಅಮಾನೆಯು ಕಷ್ಟದಿನಿಂದ ಆಗ್ರಾಕ್ಕೆ ಬರುವ ವರೆಗೆ ಎನೆಯ ಮದುವೆ ಮಾಡಿಕೊಳ್ಳಬಾರದೆಂದು ಅವನು ದೃಢ ನಿಶ್ಚಯ ಮಾಡಿದ್ದನು. ಬಾದಶಹನ ಆಶ್ರಯವು ದೊರೆತಂದಿನಿಂದ ಅವನ ಅಧಿಕಾರವೂ ಸಂಪತ್ತೂ ಬೆಳೆಯಲಾರಂಭಿಸಿದವು. ಅವನಿಗೆ ೩೦ ವರ್ಷ ಗಳು ಇನ್ನೂ ತುಂಬಿದ್ದಿಲ್ಲ. ಇಂತಹ ಹೊರಹೊಮ್ಮುವ ಹರೆಯದಲ್ಲಿ ಅವನು ಹೆಂಡತಿಯಿಲ್ಲದಿರಲೆಳಸುವುದು ಎಲ್ಲರಿಗೂ ಬಲು ಸೋಜಿಗವಾಗಿ ಕಂಡಿತು. ಆಗ್ರಾದಲ್ಲಿ ಅವನಿಗೆ ಹತ್ತಿರೊಂದಿದವರಾರೂ ಇದ್ದಿಲ್ಲ. ಅದ್ದರಿಂದ ಅವನ ಆಶ್ರಿತರೂ ಗುರುತಿಸವರೂ ಗೆಳೆಯರೂ ಬೇಕಾದವರೂ ಉಪಕೃತರೂ ಎನೆಯ ಮದುವೆಮಾಡಿಕೊಳ್ಳಬೇಕೆಂದು ಎಡೆಬಿಡದೆ ಅವನಿಗೆ ಸೂಚಿಸತೊಡಗಿದರು ಪ್ರಾರಂಭದಲ್ಲಿ ಅವನು ತನ್ನ ಗುಟ್ಟನ್ನು ಹೊರಗೆಡವದೆ ಸುಮ್ಮನಿರುತ್ತಿದ್ದನು. ಅವನ ಮೌನವನ್ನು ಕಂಡು ಎಲ್ಲರೂ ಆಶ್ಚರ್ಯಭರಿತರಾಗುತ್ತಿದ್ದರು ಅವರಿಗೆ ಕಾರಣ ವೇನೂ ತಿಳಯಲೊಲ್ಲದು. ಪೂರ್ಣಯನ್ವಸ-ಧನಸಂಪತ್ತು ಅಧಿಕಾರ ಇವು ಮೂರೂ ಇದ್ದು ಅವನು ಏಕೆ ಮದುವೆ ಬಲ್ಲನೆಂಬುದು ಅವರೆಲ್ಲರಿಗೂ ಗುಂಬುಬಿತ್ತು. ಅವನಿಗೆ ಆಗಲಾರದವರು ಅವನು ತೃತೀಯ ಪ್ರಕೃತಿಯ್ ವುರುಷ (ಸಪುಂಸಕ)ನಾಗಿರಬಹುದೆಂದು ಅಭಿಪ್ರಾಯಪಟ್ಟರು. ಮೊದಲಿನ ಹೆಂಡತಿಯು ಅತಿಪ್ರಿಯಳಾದ್ದರಿಂದ ಆಕೆಯ ನೆನಪು ಮದುವೆಗೆ ಅಡ್ಡ ಬರುತ್ತದೆಂದು ಹಲವರು ಹೇಳಿದರು. ಸಾಯುವಾಗ ಮೊದಲಿನ ಹೆಂಡ ತಿಯು ಎನೆಯ ಮದುವೆ ಮಾಡಿಕೊಳ್ಳಬಾರದೆಂದು ಅವನಿಂದ ಮಾತು ತೆಗೆದುಕೊಂಡಿರಬಹುದೆಂದು ಕೆಲವರು ತರ್ಕಿಸಿದರು. ಮಗಳ ಮೇಲಿದ್ದ ತನ್ನ ಪ್ರೇಮಾತಿಶಯಕ್ಕೆ ತೊಂದರೆ ಬರಬಹುದೆಂದು ಎನೆಯ ಮದುವೆಯ ವಿಚಾರವನ್ನು ಬಿಟ್ಟಿರುತ್ತಾನೆಂದುಮತ್ತೆ ಕೆಲವರು ಅನುಮಾನ ಮಾಡಿದರು.

ಈಮೇರೆಗೆ ಊರಲ್ಲೆಲ್ಲ ಅಯ್ಯಾಸನ ಮದುವೆಯ ಸಲುವಾಗಿ

ತರ್ಕವಿತರ್ಕಗಳು ನಡೆಯಲಾರಂಭಿಸಿದವು. ಈ ಚರ್ಚೆಯ ಸುದ್ದಿಯು ಆಗಿಂದಾಗ ಅವನ ಕಿವಿಯಮೇಲೆ ಬೀಳುತ್ತಿತ್ತು. ಅವನು ಜನರು ಹೇಳಿದ್ದನ್ನೆಲ್ಲ ಕೇಳಿ ಮುಗುಳುನಗೆ ನಕ್ಕು ಸುಮ್ಮನಿರುತಿದ್ದನು. ಎಷ್ಟು ಕೆಣಕಿದರೂ ಬಂದು ತುಟಿ ಎರಡುಮಾಡುತ್ತಿರಲಿಲ್ಲ. ಕಟ್ಟಕಡೆಗೆ ಅವನೊಬ್ಬ ಜೀವದ ಗೆಳೆಯನು ಈ ಮದುವೆಯ ಮಾತನ್ನು ಅವನ ಮುಂದೆ ಎತ್ತಿದನು.

ಗೆಳೆಯ:—ಅಯ್ಯಾ ಬೇಗ, ಹೋದಲ್ಲೆಲ್ಲ ಗುರುತಿನ ಗಂಡಸರೂ ಹೆಂಗಸರೂ " ನೀನು ಎಂದು ಮದುವೆಮಾಡಿಕೊಳ್ಳುತ್ತಿ " ಎಂದು ಕೇಳುತ್ತಾರೆ. ನೀನು ಲಗ್ನಮಾಡಿಕೊಳ್ಳುವುದಿಲ್ಲೆಂದು ಹೇಳಿದರೆ ಅದೇಕೆ ಎಂದು ಪ್ರಶ್ನೆ ಮಾಡುತ್ತಾರೆ. ಅವರಿಗೆ ಉತ್ತರ ಕೊಟ್ಟು, ಕೊಟ್ಟು ಬೇಸತ್ತೆನು. ಇನ್ನು ಮುಂದೆ ಯಾರ ಮನೆಗೂ ಹೋಗಬಾರದೆಂದು ನಿಶ್ಚಯಿಸಿದ್ದೇನೆ.

ಅಯ್ಯಾಸ—ಈ ಊರಿನವರು ನಿರುದ್ಯೋಗಿಗಳೋ ಕಿಡಿಗೇಡಿಗಳೋ ? ನನ್ನ ಮದುವೆಯ ಗೊಡವೆ ಅವರಿಗೇನು? ಮುನ್ನೋಡಿ ತಮ್ಮ ತಮ್ಮ ಮನೆಯ ವಿಚಾರಮಾಡುವುದನ್ನು ಬಿಟ್ಟು ನನ್ನ ಮದುವೆಯ ಬಗ್ಗೆ ಏಕೆ ತಲೆಚಚ್ಚಿಕೊಳ್ಳುತ್ತಾರೆ ?

ಗೆ—ಹಾಗಂದರೆ ಹೇಗೆ ? ಮದುವೆಯು ಸಾಮಾಜಿಕವಿಷಯವಲ್ಲವೇ? ಸಮಾಜದವರಿಗೆ ಸಾಮಾಜಿಕ ವಿಷಯದ ವಿಚಾರಮಾಡಲಿಕ್ಕೆ ಪೂರ್ಣ ಅಧಿಕಾರವಿರುತ್ತದೆ. ಆದ್ದರಿಂದ ಅವರು ವಿಚಾರಮಾಡುವುದು ತಪ್ಪೆಂದು ಹೇಗೆ ಹೇಳಬೇಕು ?

ಅಯ್ಯಾಸ—ಮದುವೆಯು ಸಮಾರಂಭವು ಸಾಮಾಜಿಕವಾದರೂ ಯಾವನಾದರೊಬ್ಬನು ಮದುವೆಮಾಡಿಕೊಳ್ಳುವುದೂ ಬಿಡುವುದೂ ವ್ಯಕ್ತಿಮಾತ್ರಕ ವಿಷಯವಾಗಿರುತ್ತದೆ. ನನ್ನ ಆಪ್ತೇಷ್ಟರು ಮಾತ್ರ ಆ ಸಂಬಂಧದಿಂದ ಕೇಳಬಹುದು. ಉಳಿದವರು ಅದರಲ್ಲಿ ಬಾಯಿಹಾಕುವುದು ತಪ್ಪಲ್ಲದೆ ಮತ್ತೇನು ?

ಗೆಳೆ—ಅಯ್ಯಾಸಬೇಗ, ಇದೆಂತಹ ನಿನ್ನ ವಿಚಾರ ? ನಮ್ಮ ಸಮಾಜವು ಬೆಳೆಯಬೇಕೆಂದು ಬಯಸುವುದು ನಮ್ಮೆಲ್ಲರ ಕರ್ತವ್ಯವಲ್ಲವೇ ?

[ಸಶೇಷ]

ಓಂ

ಸರಸ್ವತಿ

ಸಂಪುಟ ೫ | ಕ್ರೋಧನ ವರ್ಷ— ಶ್ರಾವಣ ಮಾಸ | ಸಂಚಿಕೆ ೪

ಅಭಿನಂದನ

ಸುಲಲಲಿತ ಕಾವ್ಯ ಕೋಮಲ ಸುಹಾಸಿನಿ। ರೂಪಳ ರಮ್ಯರೂಪಿನಿ। ಸೋ।
ಜ್ವಲ ಸರಸಪ್ರಭಂದ ಭರಭಂದುರಿ। ಸುಂದರನವ್ಯಸತ್ಕಥಾ ॥
ವಿಲಸದ ಮುಂದ ವಿಭ್ರಮ ವಿಲಾಸಿನಿ ಸಜ್ಜನ ಸೇವ್ಯೆಯಾಗುತಂ।
ನಲಿಯುಗೆ ನಮ್ಮಚಿತ್ತದೆ "ಸರಸ್ವತಿ" ಭಾರತಿಯಂತೆ ಸಂತತಂ ॥೧॥

ಮಹಿಳೆಯರೇಳ್ಗೆಯ ಬಯಸುತೆ।
ಮಹಿಳಾಜನದೊಲವನಾಂತು ಪ್ರತಿಮಾಸದೊಳಂ ॥
ಮಹಿಳಾಧರ್ಮವಭೋದಿಪ।
ಮಹಿತೆ "ಸರಸ್ವತಿಗೆ" ಮಂಗಳಂ ಚಿರಮಿರ್ಕೆ ॥೨॥

ಒಗುಮಿಗೆ ಸಲ್ಪ ಮಾತುಗಳನಾಡುವ ಮೋಹದಪತ್ರಿಯಂತೆ ಪ್ರೀ।
ತಿಗೆ ನೆಲೆಯಾಗಿ ನಲ್ನುಡಿಗಳಿಂ ಮುದವಿತ್ತಾಯುವ ಕಾಂತೆಯಂತೆ ನ ॥
ಲ್ಮೆಗೆ ನಿಧಿಯಾಗಿ ನಮ್ಮಯ ಹಿತೇಚ್ಛೆಗೆ ದಂಡಿಪವ ಮಾತೆಯಂತೆ ಕೃ।
ಪೆಗೆ ತವರಾಗಿ ಶೋಭಿಸುಗೆ ನಾಡೆ "ಸರಸ್ವತಿ" ನಮ್ಮ ನಾಡಿನೋಳ್ ॥೩॥

"ಭಾರತೀಸುತ"

ಭರತ ಭೂಮಿ.

ನಮ್ಮದೀ ನಮ್ಮದೀ ಭರತಭೂಮಿ
ನೀಡುತಲಿ ನಿಜಬಾಹುಯುಗಳಮಂ ನಿರ್ಧಯದಿ |
ನಿಂದಿಹನು ದ್ವಾರದೋಳ್ ಹಿಮವಂತನು
ಕೂಡಿ ಮೊರೆಯುವ ನಿಖಿಲ ನಿರ್ಝರದ ದನಿಯೆ ಜಯ |
ಘೋಷಮಾರಕ್ಷಕನು ದುರ್ಧರ್ಷನೆನಿಸಿ
ನಮ್ಮದೀ ನಮ್ಮದೀ ಭರತಭೂಮಿ ||

ಪದತಲದೆ ಜಲಧಿ ತನ್ನಯ ಭೀಷಣಾರವವ |
ಗೈಯ್ಯುತಿದೆ ಜಗಕೆಲ್ಲ ಭಯವನಿತ್ತು
ನಿಧಿಯೆನಿಸಿ ಸಕಲರತ್ನಾವಳಿಗೆ ಪರಹೇಳ |
ನವ ಸಹಿಪರಾರುಂಟು ಪೇಳೆಂಬತೆರದೆ
ನಮ್ಮದೀ ನಮ್ಮದೀ ಭರತಭೂಮಿ ||

ಪೊಸತೆನಿಪ ಫಲಪುಷ್ಪಭರದಿ ಸಂಚಿತವಾದ |
ದಿವ್ಯಶೋಭೆಯನಾಂತು ಮೆರೆಯುತೀಗ
ನಸುನಾಣ್ಚುವಂತ ನಂದನಕಾನನವ ಗೈದು |
ಭವ್ಯಸೌಖ್ಯದಿ ಜನರ ತಣಿಪ ನಾಡು
ನಮ್ಮದೀ ನಮ್ಮದೀ ಭರತಭೂಮಿ ||

ವೇದಶಾಸ್ತ್ರಪುರಾಣಚಿರಸಂಚಿತಜ್ಞಾನ |
ಭಂಡಾರಮಿದು ನಾಡೆ ಕ್ಷಯಿಪುದಲ್ಲ
ಸಾದರದೊಳಾತ್ಮವಿದ್ಯದ ಮಹಿಮೆಯನು ತೋರಿ |
ವಿಶ್ವಸಂಸಾರಕಿದು ಆದರ್ಶಮೆನಿಸುವುದು
ನಮ್ಮದೀ ನಮ್ಮದೀ ಭರತಭೂಮಿ ||

ಮಹಿಮೆಯುಡುಗಿದುದೆಂದು ಗರಿಮೆತಾನಿಲ್ಲೆಂದು |
ಮುಂದೆ ಬಹುದುಸ್ತರದ ಕಳ್ತಲೆಂದು
ಗ್ರಹಿಸಿಚಿಂತಿಪುದೇಕೆ ಮರಳಿಬರ್ಪುದು ಮುನ್ನಿ |
ನುತ್ಕರ್ಷೆ ಈ ನಾಡಸಿರಿಗೆ ಜವದಿ
ನಮ್ಮದೀ ನಮ್ಮದೀ ಭರತಭೂಮಿ ||

ಭಕ್ತ ಸುಮಾಂಜಲಿ

(ಹಿಂದಿನ ಸಂಚಿಕೆಯಿಂದ ಮುಂದರಿಸಿದ್ದು.)

೨

"ಸಂಸಾರ ಪೀಡನೆಯಿಂದ ಬಹು ಸಾಕಾದೆ. ಏನುತಾನೆ ಮಾಡಲಿ? ಪ್ರಪಂಚವು ಸೌಖ್ಯದ ನೆಲೆಯೆಂದು ತಿಳಿದಿದ್ದೆ. ಇಲ್ಲಿ ಅನುಭವಿಸುವ ಸುಖವನ್ನು ಸ್ವರ್ಗದಲ್ಲಿ ಅನುಭವಿಸಲಾರೆನು. ಇದೇ ಸ್ವರ್ಗೀಯಸುಖವೆಂದು ಭಾವಿಸಿದ್ದೆ. ಇದೇನು ನರ್ಕೀಯಸುಖವೋ! ಅವರ್ಗೀಯ ಸುಖವೋ! ಇದೊಂದು ಕಠಿಣವಾದ ಒಗಟಾಗಿದೆ. ಈ ಒಗಟನ್ನು ಒಡೆಯುವ ಬಗೆಯೆಂತು?"

ಹೀಗೆಂದು ಆಲೋಚಿಸುತ್ತಾ ಕುಳಿತಿರುವಾಗ ಸಂತ ತುಕಾರಾಮನು ಆಡಿದಂಥಾ ಮಾತುಗಳು ಜ್ಞಾಪಕಕ್ಕೆ ಬಂದವು. ತಾನು ಜಾತಿಯಲ್ಲಿ ಶೂದ್ರನು ಮತ್ತು ವ್ಯಾಪಾರಮಾಡಿ ಜೀವನ ಮಾಡುತ್ತಿದ್ದನು. ತನ್ನ ತುದೆ ತಾಯಿಗಳು ಪರಲೋಕವನ್ನು ಹೊಂದಿದಮೇಲೆ ತನಗೆ ಪ್ರಪಂಚವೇ ಬೇಡವಾಯಿತು. ತನ್ನಲ್ಲಿದ್ದ ಹಣವನ್ನು ಅಂದು ಕ್ಷಾಮನಿವಾರಣೆಗಾಗಿ ಉಪಯೋಗಿಸಲು ತನಗೆ ಪ್ರಖ್ಯಾತಿ ಬಂತು; ಆದರೆ ತನ್ನ ಹೆಂಡತಿಯು ಅನ್ನವಿಲ್ಲದೆ ಸತ್ತುಹೋದಳು. ತಾನು ಈ ರೀತಿಯಿಂದ ದುಃಖಿತನಾಗಿ ಹನ್ನೊಂದನೇ ದಿನದಿಂದ ದೇವರ ಭಜನೆಯನ್ನು ಮಾಡುತ್ತಾ ಅದರಲ್ಲಿಯೇ ಆಸಕ್ತನಾದನು. ದೇವರ ಮೇಲಿನ ಭಕ್ತಿಯು ಉಕ್ಕುತ್ತಾ ಬಂತು. ತನ್ನನ್ನು ತಾನೇ ಮರೆತುಬಿಟ್ಟ ದೈವತಾಸಕ್ತಿಯಲ್ಲೇ ಇದ್ದು ಪದಗಳನ್ನು ಸೂಚಿಸಲುಪಕ್ರಮಿಸಿದ; ಇತ್ಯಾದಿ ಇತ್ಯಾದಿ.

***

ಅತನ ಹೆಂಡತಿಯು ತನ್ನ ಮಗನೊಂದಿಗೆ "ಮಗನೇ! ಮನೆಯಲ್ಲಿ ಏನೂ ಇಲ್ಲ. ಎಂಥಾ ಆಹಾರವನ್ನು ತಾನೇ ತಿನ್ನುತ್ತಿ? ನಮಗೆ ಅನ್ನವನ್ನು ಹಾಕುವ ಪುಣ್ಯಾತ್ಮರಾರು? ಅವರು ಪ್ರತಿದಿನವೂ ಭಕ್ತರಂತೆ ದೇವಸ್ಥಾನಕ್ಕೆ ಹೋಗಿ ತಾಳ ಹೊಡೆಯುತ್ತಾ ಭಜನೆ ಮಾಡುತ್ತಿರುವರು. ಅಂಗಡಿಯಲ್ಲಿ ಕುಳಿತು ವ್ಯಾಪಾರ ಮಾಡಿ ನಮಗೆ ದುಡಿದು ತಂದು ಹಾಕುವುದಿಲ್ಲ. ಈಗ ನಾವೇನು ಮಾಡೋಣ? ಅರಣ್ಯಕ್ಕೆ ಹೊರಟುಹೋದರು. ಕೇಳಿದರೆ "ನೀನು ತಾಳ್ಮೆಯನ್ನು ಹಿಂದೆ ಎಂದಾದರೂ ತೋರಿಸದಿದ್ದರೆ ಈಗಲಾದರೂ ತೋರಿಸು. " ಇತ್ಯಾದಿ.

***

"ವಿಠ್ಠೋಬ! ನಾನು ದಿವಾಳಿಯಾದ್ದು ಉತ್ತಮವಾಯಿತು. ಕ್ಷಮದಿಂದ ನಗಳಿದ್ದೂ ಉತ್ತಮವೇ! ಈ ದೆಸೆಯಿಂದಲಾದರೂ ನಿನ್ನ ನಾವಾಮೃತವನ್ನು ಪಾನಮಾಡಲು ಅವಕಾಶವುಂಟಾಯಿತು. ಪಶ್ಚಾತ್ತಾಪಪಟ್ಟು ನಿನ್ನನ್ನೇ ಸೇರಿದ ನನಗೆ ಈ ಪ್ರಪಂಚವು ಅಸಹ್ಯವಾಯಿತು. ನನ್ನ ಪತ್ನಿಯಿಂದ ಹೀಯಾಳಿಸಿಕೊಂಡು ಅಪಮಾನ ಮತ್ತು ನನ್ನ ಹೆಸರು, ಐಶ್ವರ್ಯಾದಿಗಳನ್ನು ಹೊಂದುವುದಕ್ಕಿಂತ ನಿನ್ನನ್ನೇ ನಾನು ಸೇರಿದ್ದೇನೆ. ನನ್ನನ್ನು ನೀನೇ ಕಾಪಾಡು! ನಿನ್ನನ್ನೇ ಶರಣು ಹೊಕ್ಕಿದ್ದೇನೆ. ನೀನೇ ನನ್ನ ತಂದೆ, ತಾಯಿ, ಎಲ್ಲವೂ ನೀನೇ"!

ಸಂಸಾರ ಪೀಡನೆಯಿಂದ ಪಾರಾಗುವವರಿಗೆ ದೇವರ ನಾಮವೇ ಅಮೃತ! ಹೇ ಮನಸ್ಸೇ! ಈಗಲಾದರೂ ದೇವರ ಧ್ಯಾನಮಾಡು! ಇದರಿಂದ ಐಹಿಕ ಸುಖಕ್ಕಿಂತಲೂ ಶ್ರೇಷ್ಠತಮವಾದ ಸ್ವರ್ಗೀಯ ಸುಖ, ಮೋಕ್ಷ ಸಿದ್ಧಿಯಶೋಲಾಭವಾಗುತ್ತೆ!

ತತ್ಸತ್

ಸ್ತ್ರೀ ಮತ್ತು ಧರ್ಮ.

ಪಂಡಿತ ತಾರಾನಾಥರವರು.

"ಸ್ತ್ರೀಯರಿಂದಲೇ ಧರ್ಮವು ಉಳಿದಿದೆ; ಇವರಾದರೆ ಈಗಿನ ಗಂಡಸರ ಮುನ್ನೋವಿಕಾರಗಳಿಂದ ಧರ್ಮವು ಎಲ್ಲಿ ಹೋಗುತ್ತಿತ್ತೋ ಏನೋ" ಎಂಬ ಉದ್ಗಾರಗಳನ್ನು ಎಷ್ಟೋಮಂದಿ ಗಂಡಸರ ಬಾಯಿಂದಲೇ ಕೇಳಬಹುದು. ಅರ್ಜುನನು ಸಹ ತನ್ನ ಕ್ಲೈಬ್ಯಕ್ಕೆ ಗಂಭೀರಕವಚವಾಗಿ ಉಪಯೋಗಿಸಿದ ಉದ್ಗಾರವೂ ಇದೇ. ನಿಜವಾಗಿ ನೋಡಿದರೆ (29—30ನೇ ಶ್ಲೋಕಗಳು) "ಬಾಯಿಯು ಒಣಗುತ್ತದೆ, ಮೈಗೆ ಮುಳ್ಳುಗಳೇಳುತ್ತವೆ, ಗಾಂಡೀವಧನುಸ್ಸು ಕೈಯಿಂದ ಕಳಚಿ ಬೀಳುತ್ತದೆ. ಮೈಯೆಲ್ಲ ಕಾದುಹೋಗಿದೆ, ಎದ್ದು ನಿಲ್ಲುವೆನೆಂದರೆ ಸಾಧ್ಯವಿಲ್ಲ. ಮನಸ್ಸು ಭ್ರಮೆಗೊಂಡಿದೆ" ಎಂದು ಅರ್ಜುನನು ಕೃಷ್ಣನಿಗೆ ಹೇಳುತ್ತಾನೆ. 32 ನೇ ಶ್ಲೋಕದಿಂದ ಈ ಭ್ರಮಸೂಚಕವಾದ ಲಕ್ಷಣಗಳಿಗೆ ದಯೆ, ವೈರಾಗ್ಯಗಳ ಹೊದಿಕೆಯು ಬರುತ್ತದೆ. "ಕೃಷ್ಣಾ! ನನಗೆ ವಿಜಯಾಪೇಕ್ಷೆ ಬೇಡ, ರಾಜಸುಖಗಳ ಕಾಂಕ್ಷೆಯೂ ಬೇಡ. ಗೋವಿಂದಾ! ರಾಜ್ಯದಿಂದೇನು, ಭೋಗಗಳಿಂದೇನು, ಜೀವಿತದಿಂದಾದರೂ ಏನು ಫಲ" ಮುಂತಾದ ಬೇಡ, ಬೇಡಗಳ ಉದ್ಗಾರಗಳು!

ಪರಹೀತೇಚ್ಛು ಮಹಾತ್ಮಾ ಅರ್ಜುನ! ಕೈಕಾಲುಗಳು ನಡುಗುವದು, ಗಾಂಡೀವವು ತಾನಾಗಿಯೇ ಜಾರುವದು, ಇವೆಲ್ಲವೂ ಭೂತದಯಾಲಕ್ಷಣಗಳೊ!

ಅಥವಾ ನಪುಂಸಕತ್ವದ ಕುರುಹುಗಳೋ? ಈ ಪ್ರಕಾರವಾಗಿ ಈಕಾಲದಲ್ಲಿ ಒಳಗೆ "ಧಗಧಗ" ಮೇಲೆ "ಝಗರುಝುಗ" ಇಟ್ಟುಕೊಂಡ ಅರ್ಜುನರು ಎಷ್ಟೋ! ಇದೊಂದು ವಿಶೇಷವಲ್ಲ. ಸಾಮಾನ್ಯಮನುಷ್ಯನ ಸ್ವಭಾವ, ಅರಿತಾಗಲಿ ಅರಿಯದೇ ಆಗಲಿ ಮನುಷ್ಯನಿಂದ ಇಂತಹ ತಪ್ಪು ಆಗುವದುಂಟು. ಇಂಥ ಕ್ಷುದ್ರ ಸ್ವಭಾವವನ್ನು ಆಳವಾದ ಮನಸ್ಸಿನ ಮೂಲೆ ಮೂಲೆಗಳಿಂದಲೂ ಹುಡುಕಿ ತೆಗೆದು ಜ್ಞಾನಾಯುಧದಿಂದ ಹೊಡೆದಟ್ಟುವದೇ ಧರ್ಮಸಾಧನ. ತನ್ನಂತರಂಗವನ್ನು ಶೋಧಿಸಿ ಜ್ಞಾನದೃಷ್ಟಿಗೆ ಕೀಳಾದ್ದನ್ನು ಕೆಳಏ, ಮೇಲಾದ್ದನ್ನು ಕೆಚ್ಚೆದೆಯಿಂದ ಸ್ಥಾಪಿಸುವದೇ ಧರ್ಮಸಾಧನ. ಅರ್ಜುನನು ಇಂಥ ಜ್ಞಾನಸಾಧನವನ್ನು ಅರ್ಜುನ ಮಾಡಲೇಬೇಕಾದ ಸಾಮಾನ್ಯಜನರ ಸಂಕೇತ; ಆದರೆ ಶ್ರೀ ಕೃಷ್ಣನು ಎಂತಹ ಸದ್ಗುರು! ಅರ್ಜುನನ ಸ್ವವಂಚನೋದ್ಗಾರಕ್ಕೆ ಭಳಿರೇ! ಎಂದು ಬೆನ್ನು ತಟ್ಟುತ್ತಾನೋ? "ಕ್ಲೈಬ್ಯಂಮಾಸ್ಮಗಮ! ಪಾರ್ಥ....." (ಪಾರ್ಥ! ಕ್ಲೈಬ್ಯಕ್ಕೆ ಈಡಾಗಬೇಡ) ವೆಂದು ಹೇಳುತ್ತಾನಲ್ಲದೆ ಅವನ ಅನರ್ಥವಾದ ಸಂದೇಹಗಳಿಗೆ ಬೇರೆ ಉತ್ತರವನ್ನೇ ಕೊಡುವುದಿಲ್ಲ. ಕ್ಲೈಬ್ಯ ಈ ಒಂದು ಶಬ್ದದಿಂದಲೇ ಅವನನ್ನಾತು ಯಾತರ ಲಕ್ಷಣವೆಂಬುದನ್ನು ತೋರಿಸಿಬಿಡುತ್ತಾನೆ. ಆದರೆ ಅರ್ಜುನನನ್ನು ಪ್ರೇಮದಿಂದಲೇ ಸಾಧಕನನ್ನಾಗಿ ಮಾಡಲು ಯತ್ನಿಸುತ್ತಾನೆ.

ಹೆಂಗಸರ ಮತ್ತು ಧರ್ಮದ ಈಗಿನ ಜನರ ಉದ್ಗಾರವು ಕೃಷ್ಣನಿಂದ ನಿಷ್ಕರ್ಷಿಸಲ್ಪಟ್ಟ ಕ್ಲೈಬ್ಯದ ಲಕ್ಷಣವೇ ಎನ್ನಲಿಕ್ಕೇನೇನೂ ಸಂದೇಹವಿಲ್ಲ. ಬೇರೆಯವರಿಂದ ನಮಗೆ ಹಿತಕಾರಿಯೂವ ವಸ್ತುವು ಉಳಿದದ ಎಂಬ ಭಾವವು. ದಾಸ್ಯದ ಪರಾಧೀನತೆಯ ಮೊದಲನೆಯ ಲಕ್ಷಣ. ಬ್ರಿಟಿಷ್ ಸರಕಾರದಿಂದ ನಮ್ಮ ಧರ್ಮವೂ ಮಾನವೂ ಕಾಪಾಡಲ್ಪಟ್ಟಿದೆ ಎಂಬ ಗಾರ್ಧಬುಗಾನವೂ ಇದೇರೀತಿಗೆ ಸೇರಿದೆ. ಸ್ವ ಪ್ರಯಾಸ, ಸ್ವಮರ್ಯಾದೆಯ ಅಭಾವವು ಎಲ್ಲೆಲ್ಲಿದೆಯೋ ಅಲ್ಲೆಲ್ಲ ಇಂತಹ ರೋದನವೇ. "ಹೆಂಗಸರಿಂದಲೇ ನಮ್ಮ ಧರ್ಮವು ಉಳಿದಿದೆ" ಎಂಬುದರ ಅರ್ಥವಾದರೂ ಏನೋ ದೇವರೇ ಬಲ್ಲ! ಧರ್ಮವೆಂದರೇನೋ? ಯಾಕಂದರೆ, ಧರ್ಮಕ್ಕೆ ಅನೇಕ ಅಂಗಗಳಿವೆಯಷ್ಟೆ. ಅವುಗಳಲ್ಲಿ ಮುಖ್ಯವಾದುವು ಸ್ವಧರ್ಮ ಒಂದು, ಸಮಾಜ ಧರ್ಮ ಇನ್ನೊಂದು. ಇವರಡರಲ್ಲಿ ಈಗ ಸಾಮಾನ್ಯ ಹೆಂಗಸರು ನಡೆಸುವಂಥಾದ್ದಾವುದು? ನಮ್ಮಲ್ಲಿ ಧರ್ಮದ ಮೂಲಗ್ರಂಥವು ವೇದವೆಂಬುದು ಎಲ್ಲರಿಗೂ ಗೊತ್ತಿದೆ. ಆದರೆ ವೇದವೇದಾಂಗಗಳನ್ನೋದುವ ಅಧಿಕಾರವು ಹೆಂಗಸಿಗೆ ಇಲ್ಲವೇ ಇಲ್ಲವಂತೆ! ಸ್ವಹಿತವನ್ನು ಮಾಡತಕ್ಕ ಸ್ವಧರ್ಮವನ್ನು ಅರಿತುಕೊಳ್ಳುವದಕ್ಕೆ ಉತ್ತಮ ಸಹಾಯವಾದ ವೇದವನ್ನು ಅವಳು ಓದಲೇಬಾರದಂತೆ. ಮುಂದೆ ಸಮಾಜಧರ್ಮ ಒಂದುಳಿಯಿತು. ಸ್ವಹಿತವೇ ಗೊತ್ತಿಲ್ಲದಮೇಲೆ ಸಮಾಜಹಿತವನ್ನಾ ಸ್ಪಷ್ಟ ಹ್ಯಾಗೆ ಮಾಡಬೇಕು? ಇರಲಿ, ಆಧುನಿಕರೀತಿಯಿಂದಲಾದರೂ ಸಮಾಜಸೇವೆ

ಯನ್ನು ಮಾಡಬೇಕಾದರೆ ಹೆಂಗಸಿಗೆ ಗೊತ್ತಿರುವ ಉಪಾಯಗಳು ಯಾವವು? ಒದಗುವ ಸಂದರ್ಭಗಳು ಯಾವವು? ಜ್ಞಾನ, ಮಾನ, ಧನ, ಧಾನ್ಯ ಇವೆಲ್ಲಕ್ಕೂ ಪರಾಧೀನಳೂ ಪರಾವಲಂಬಿಯೂ ಆಗಿ ಇದ್ದವಳು, ಇಡಲ್ಪಟ್ಟವಳು ಪರರ ಸೇವೆಯನ್ನು ಮಾಡಲಿಕ್ಕೆ ಯೋಗ್ಯಳೋ? ಅಂದ ಮೇಲೆ ಹೆಂಗಸಿನಿಂದ ಕಾಪಾಡಲ್ಪಟ್ಟ ಧರ್ಮವು ಯಾವದು? ಈ ಪ್ರಕಾರವಾಗಿ ಅವಳನ್ನು ಹೊಗಳುವ ಗಂಡಸರ ಅನುಕೂಲತೆ ಒಂದೇ ಎಂದು ತೋರುತ್ತದೆ. ಆದರೆ ಅನುಕೂಲತೆಯೂ ಧರ್ಮವೂ ಒಂದೇ ಅಲ್ಲವಷ್ಟೆ. ಇದರಿಂದಾಗುವ ಪರಿಣಾಮವೇನು? ಅಯೋಗ್ಯವಾದ ಸ್ತೋತ್ರದಿಂದ ಯಾರ ಉದ್ಧಾರವೂ ಆಗುವದಿಲ್ಲ; ಇದು ನಿಶ್ಚಯ. ಧರ್ಮವೆಂದರೆ ಶಂಖ, ಜಾಗಟೆಗಳು ಮಾತ್ರವಲ್ಲ. ಅಡಿಗೆಯಮನೆಯೂ ದೇವರ ಮನೆಯೂ ಅಲ್ಲ. ಪಾತ್ರೆಗಳೂ ದೇವರೂ ಅಲ್ಲ. ಹಾಗೆ ಜ್ಞಾನದೃಷ್ಟಿಯಿಂದ ನೋಡಿದರೆ ಜಗತ್ತೆಲ್ಲವೂ ದೇವರೇ ಆದರೆ ಸಾಧಕರಿಗೆ ಈ ಭಾವವು ಸತ್ಯವಾದರೂ ಕಷ್ಟಸಾಧ್ಯ. ಇದರಿಂದ ಗೃಹಕೃತ್ಯಗಳು ನೀಚವೆಂದರ್ಥವಾಡಿಕೊಳ್ಳಲಾಗದು. ಅದನ್ನೂ ಉತ್ತಮರೀತಿಯಿಂದಲೇ ಮಾಡಬೇಕು. ಸಂಸಾರದಲ್ಲಿ ತನುಮನಗಳನ್ನು ಜೊಕ್ಕಟವಾಗಿಟ್ಟು ಆತ್ಮಸಾಕ್ಷಾತ್ಕಾರಸಾಧನೆಗೆ ಅನುಕೂಲತೆಗಳನ್ನೊದಗಿಸಿಕೊಡುವ ಧರ್ಮವು ತಾಯಂದಿರಿಗೆ ಸುಂದರವಾಗಿ ಒಪ್ಪಿದಷ್ಟು ಬೇರೆಯಾರಿಗೂ ಒಪ್ಪಲಾರದು. ಆದರೆ ಈ ಕೆಲಸವು ಸಾಧಾರಣವಲ್ಲ. ಇದಕ್ಕೆ ಬೇಕಾದ ಶಾಸ್ತ್ರಗಳ ಜ್ಞಾನವೂ ಬೇಕು. ಮಾನವಜೀವನದಲ್ಲಿ ''ಆಹಾರ, ನಿದ್ರಾ,ಭಯ,ಮೈಥುನ'' ಮಾತ್ರವಲ್ಲದೆ ವಿಶೇಷವೇನಾದರೂ ಇದೆಯೆಂಬ ನಂಬಿಕೆಯುಳ್ಳವರು ಜ್ಞಾನವನ್ನು ಸಂಪಾದಿಸಲೇಬೇಕು. ಜ್ಞಾನದಿಂದಲೇ ಗೃಹಕೃತ್ಯಗಳನ್ನು ಮಾಡಬೇಕು. ಧರ್ಮವು ಇಲ್ಲಿಯೇ ಪ್ರಾರಂಭವಾಗುತ್ತದೆ. ಎಲ್ಲ ಕರ್ಮಗಳನ್ನೂ ಜ್ಞಾನದಿಂದ ಸರ್ವಾಂಗಸುಂದರವಾಗಿ ಮಾಡುವದೇ ಧರ್ಮ. ಅದೇ ಯೋಗ. ಯೋಗವೆಂದರೆ ಕರ್ಮ ತ್ಯಾಗವಲ್ಲ, ಕರ್ಮ ಫಲತ್ಯಾಗ; ಅದೂ ಕರ್ಮವನ್ನು ಮನಃಪೂರ್ವಕವಾಗಿ ಮಾಡಿದಮೇಲೆ, 'ಯೋಗಃ ಕರ್ಮಾನು ಕೌಶಲಂ' ಎಂದು ಕೃಷ್ಣಪರಮಾತ್ಮನು ಸ್ಪಷ್ಟವಾಗಿ ಹೇಳಿದುದರ ಅರ್ಥವು ಇದೇ. ಹೆಂಗಸು ಮನೆಯ ರಾಣಿಯಾಗಿದ್ದು ದರಿಂದ ಅವಳು ಜ್ಞಾನದಿಂದ ಕುಶಲವಾಗಿ ಮಾಡಿದ ಕಾರ್ಯಗಳೇ ಅವಳ ಮಕ್ಕಳಿಗೆ ಮೇಲ್ಪಙ್ತಿಯಾಗುವವು. ದೇಹಕ್ಕೆ ಅನಿವಾರ್ಯವಾದ, ಮಾಡಿಯೇ ತೀರಬೇಕಾದ ಕೆಲಸಗಳನ್ನು ಚನ್ನಾಗಿ ಮಾಡುವದು ಸುಲಭವೋ ಅಥವಾ ಈಗ ಸದ್ಯಕ್ಕೆ ಅದೃಶ್ಯವಾದ ಮೋಕ್ಷಸುಖಕ್ಕಾಗಿ ಮಾಡುವ ಕಾರ್ಯವು ಸುಲಭವೋ? ಅವಶ್ಯವಾಗಿ ಪ್ರಪಂಚದಲ್ಲಿ ನಡೆಸಲೇಬೇಕಾದ ಕಾರ್ಯರಂಗದಲ್ಲಿ ಉಪೇಕ್ಷೆಯಿಂದ ಬಿಟ್ಟು ಸಾಗಿಸುವವರಿಗೆ, ಊಹೆ ಸಂಕಲ್ಪಗಳಿಂದ ಮಾಡಬೇಕಾದ, ಅಗೋಚರವಾದ ಮೋಕ್ಷಸಾಧನೆಯು ಎಂದೆಂದಿಗೂ ಸಾಧ್ಯವಾಗುವದೋ? ಇಹ ಸ್ವರ್ಗಗಳೆರಡಕ್ಕೂ ಸುನಸ್ಸೇ ಮುಖ್ಯವಷ್ಟೇ. ಅದಕ್ಕೆ ''ಕರ್ಮಕೌಶಲದಿಂದಲೇ

ಯೋಗಬಲವು ಬರಬೇಕಾದದ್ದು. ಆದುದರಿಂದ ಒಣಸೊತ್ತ್ರತ್ರಗಳಿಂದ ಮರುಳಾಗಿ ಯಂತ್ರದೋಪಾದಿಯಲ್ಲಿ ಜೀವನಯಾತ್ರೆಯನ್ನು ಜ್ಞಾನವೇ ಇಲ್ಲದೆ ತಿಂದು ಉಂಡುಮಾತ್ರ ಕಳೆಯುವ ಹೆಂಗಸರಿಗೆ ಇಲ್ಲಿಯೂ ಸುಖವಿಲ್ಲ ಪರದಲ್ಲಿಯೂ ಇಲ್ಲ. ಛತ್ರಪತಿ ಶಿವಾಜಿಯ ಗುರುಗಳಾದ ಸಮರ್ಥರಾಮದಾಸರು ಇದನ್ನು ಸೂಚಿಸಿಯೇ ಹೀಗೆಂದು ಹೇಳಿದ್ದಾರೆ.—

ಆದಿ ಪ್ರಪಂಚ ಕರಾವಾನೇಟಕಾ | ಮಗ ಪರಮಾರ್ಥ ಸಾಧಾವಾ ವಿವೇಕಾ||

(ಮೊದಲು ಪ್ರಪಂಚವನ್ನು ಅಂದರೆ ಸಂಸಾರವನ್ನು ನೆಟ್ಟಗೆ ನಡೆಸಬೇಕು. ಮತ್ತೆ ಸುಲಭವಾಗಿ (ಅದರಿಂದುದ್ಭವಿಸಿದ) ವಿವೇಕದಿಂದ ಪರಮಾರ್ಥವನ್ನು ಸಾಧಿಸಬೇಕು.) ಇದು ಜ್ಞಾನದಿಂದಲ್ಲವೇ ಸಾಧ್ಯವಾಗತಕ್ಕದ್ದು.

ಹೆಂಗಸರು ಧರ್ಮದ ಉಚ್ಚ ತತ್ವಗಳನ್ನು ಮರೆತು ಕೇವಲ ತಮ್ಮ ಮತ್ತು ತಮ್ಮವರ ದೇಹದ ಸುಖ ಸೌಕರ್ಯಗಳಿಗೇ (ಆರೋಗ್ಯಕ್ಕಲ್ಲ) ಮರುಳಾದ್ದರಿಂದ ಧರ್ಮವು ಎಷ್ಟು ರೀತಿಯಿಂದ ಅಧೋಗತಿಯನ್ನೈದಿದೆಯೆಂಬದು ಮುಂದೆ ಇತಿಹಾಸದ ದೃಷ್ಟಾಂತಗಳಿಂದ ತೋರಿಸಲ್ಪಡುವದು ರಾಣಾಪ್ರತಾಪನ ತಂಗಿಯಾದ ತಾರಾದೇವಿಯು ಹಿಂದೂಸ್ತ್ರೀಯರಿಗೂ ಧರ್ಮಕ್ಕೂ ದೇಶಕ್ಕೂ ಮಾಡಿದ ಉಪಕಾರವು ಮುಂದೆ ಪ್ರಕಟವಾಗುವದು.

ಪುನರುಜ್ಜೀವನ

ಅನವಟ್ಟಿ ಕೃಷ್ಣರಾಯರವರು.

೧

"ಯೋಷೀ, ರಜನಿಯು ಹೇಗೆ ಪ್ರಕಾಶಿಸುತ್ತಿರುವದು ನೋಡು. ಪೂರ್ಣ ಚಂದಿರನ ಸೊಬಗನ್ನು ನೋಡು. ಸಮ್ರಾಟನ ಆಸ್ಥಾನವನ್ನು, ಅಂಬರದಲ್ಲಿ ಸೂರ್ಯಮಂಡಲದ ಸುತ್ತಲೂ ಇರುವ ನಕ್ಷತ್ರಗಳ ಗುಂಪಿಗೆ ಹೋಲಿಸಬಹುದಲ್ಲವೇ ?"

"ನೀವು ಸುಮ್ಮನಿದ್ದರಾಗುತ್ತದೆ. ನಿಮ್ಮ ರಜನಿಯ ಸೊಬಗನ್ನಾಗಲೀ, ನಿಮ್ಮ ಸಮ್ರಾಟನ ಆಸ್ಥಾನವನ್ನಾಗಲೀ ಮೆಚ್ಚುವ ಶಕ್ತಿ ನನಗಿಲ್ಲ. ತಾವಾದರೋ ಸುಪ್ರಸಿದ್ಧ ಕವಿಗಳು. ಸಮ್ರಾಟನ ಪ್ರೇಮಾಸ್ಪದರು. ಸಮ್ರಾಟನಿಂದ ಅನೇಕ ಬಹುಮಾನಗಳನ್ನೂ ಗೌರವವನ್ನೂ ಮಾನವನ್ನೂ ಪಣಕಟ್ಟಿ ಪಡೆದಿರುವಿರಿ; ಆದರೆ

ನಾನು ಮುಗ್ಧೆ, ಹಳ್ಳಿಯ ಹುಡುಗಿ. ನಿಮ್ಮ ಕವಿತೆಗಳೇಕೋ ನನಗೆ ರುಚಿಸು ವುದೇ ಇಲ್ಲ.''

''ಯೋಷೀ, ಕವಿತೆಗಳು ಸಾಮಾನ್ಯವಾಗಿ ಎಲ್ಲಾಗೂ ಅರ್ಥವಾಗುವ ಪದ ಗಳಲ್ಲ. ಗೂಢಾರ್ಥಗಳನ್ನು ಸೂಕ್ಷ್ಮರೀತಿಯಿಂದಲೂ, ನಯವಿನಯುಗಳಿಂದಲೂ ಪ್ರಕಟಿಸುವ ರತ್ನದ ಚೂರುಗಳು. ಯೋಷೀ, ಪ್ರಸಂಚವೇ ನನ್ನ ಕವಿಯಭ್ಯನಿಗೆ ಬೆಬ್ಬುಮರೆತಿದ್ದಾಕೆ ನೀನು, ನೀನು, ನನ್ನ ಸ್ವಂತ ಸಹಧರ್ಮಿಣಿ ಹೀಗೆ ಅಲೆಗಳೆಯು ವಿಯಲ್ಲಾ, ಇದಕ್ಕೆ ಕಾರಣವೇನು ಯೋಷಿ?''

''ಕಾಪ್ಯವೆಲ್ಲವೂ ಧರ್ಮವನ್ನು ಮರೆತಿರುವುದರಿಂದಲೂ, ಇತರಪರಸುಖಕ್ಕೆ ಸಾಧನವಾದ ಮಾಕ್ಯ ಬಂಧವಿಮೋಚನ ಕಾರ್ಯವನ್ನು ತಮ್ಮಂತೆ ಸಂಪೂರ್ಣ ವಾಗಿ ಅವರು ತ್ಯಾಜ್ಯವಾಡಿರುವದರಿಂದ ನಿಮ್ಮ ಕಿನ್ನರಿಯ ಕೀರ್ತನೆಗೆ ಹೆಜ್ಜೆ ಹಾಕುತ್ತಾರೆ. ಆದರೆ ಹಿಂದೂರಾಷ್ಟ್ರದ ಧರ್ಮ, ಪಾವನಕ್ಷದ ಜ್ಯೋತಿಗಳು ನನ್ನ ಹೃದಯದಲ್ಲಿ ಇಂದಿಗೂ ಪರಿಶುದ್ಧತೆಯಿಂದ ಪ್ರಕಾಶಿಸುತ್ತಿರುವುದು. ಅದ್ದ ರಿಂದಲೇ ದಾಸತ್ವದ ಕೀರ್ತನೆಗಳು ನನಗೆ ರುಚಿಸವು.''

''ಯೋಷೀ, ಮನೆತನದ ಮಾತನ್ನು ಮರೆತು ರಾಜಕೀಯವನ್ನಾರಂಭಿಸಿದೆ. ಜೋಕೆ! ನೀನು ಮಾತನಾಡುತ್ತಿರುವುದು ರಾಜದ್ರೋಹ, ನೆನಪಿನಲ್ಲಿರಲಿ. ಸಮ್ರಾ ಟನು ಸಾಮಾನ್ಯನೆಂದರಿಯಬೇಡ. ಯೋಷೀ, ನನ್ನ ಗೌರವಕ್ಕೂ ನನ್ನ ಪದವಿಗೂ ಚ್ಯುತಿಯನ್ನು ತರಲು ಪ್ರಯತ್ನಿಸಬೇಡ, ಜೋಕೆಯಿಂದಿರು.''

''ಇರಲಿರಲಿ; ನಾನು ಕಂಡಿರುವೆನು. ನಿಮ್ಮ ಸಮ್ರಾಟನೇನು ನನಗೆ ಹೊಸ ಬನಲ್ಲ. ಸಮ್ರಾಟನ ನಡೆವಳಿಕೆಗಳನ್ನು ಅರಿಯದ ಅಜ್ಞಳೇನಲ್ಲ. ನಾನು ಪರ ಸ್ತ್ರೀಯರನ್ನೇ ಸದಾ ಬಯಸುತ್ತಾ, ಸ್ವಸುಖದಲ್ಲಿಯೇ ಮಗ್ನನಾಗಿ, ಅಜ್ಞರಾದಂತಹ ನಿಮ್ಮಂತಹ ಹಿಂದುಗಳಿಗೆ ಅಲ್ಪಸ್ವಲ್ಪ ಆಶೆ ತೋರಿಸಿ ಜಾತಿ, ಮಾನಗಳನ್ನು ಕೆಡಿ ಸುತ್ತಿರುವ ನರಾಧಮನವನು. ನಿಮ್ಮ ಕಣ್ಣಿಗೆ ಮನ್ಮಥನಂತೆ ಕಂಡುಬಂದರೂ ನನಗವನು ಮಹಿಷಾಸುರನೇ!''

''ಯೋಷೀ, ಹಾಳಾದವಳೇ! ಕೆಟ್ಟ ಹೆಂಗನೇ! ನಿನಗೇನು ದುರ್ಬುದ್ಧಿ ಬಂದಿತು? ಕೆಲಸಕ್ಕೆ ಬಾರದ ಮಾತುಗಳನ್ನಾಡಿ ನನ್ನ ಮನಸ್ಸನೇಕೆ ನೋಯಿ ಸುವೆ? ಆ ಮಾತನ್ನು ಬಿಡು. ದಿನವೂ ಇದೇ ರಾಮಾಯಣವನ್ನೇ ಒದರುವಿ ಯಲ್ಲಾ? ಅದು ಹೋಗಲೀ? ಫಲಹಾರಕ್ಕೆ ಏನು ಮಾಡಿರುವೆ. ಯೋಷೀ, ಸತ್ಯವನ್ನು ಹೇಳುವೆನು ಕೇಳು. ಸಮ್ರಾಟನೊಂದಿಗೆ ನಾನು ಭುಜಿಸಿದಾರಭ್ಯ ನಿನ್ನ ಪಾಕದಲ್ಲಿ ನನಗೆ ರುಚಿಯೇ ಕಾಣುಬರುವುದಿಲ್ಲ. ನಿನ್ನ ಅಡಿಗೆಯು ನೀರಸ ವಾಗುತ್ತಲಿದೆ, ಯೋಷೀ!''

ಹೌದು ಹೌದು. ಸಮ್ರಾಟನ ಅಡಿಗೆಯಲ್ಲಿ ಮಾಂಸಾಹಾರವಿರುತ್ತದೆ. ಅದರಿಂದಲೇ ಅದು ತಮಗೆ ಹೆಚ್ಚು ರುಚಿ. ನನ್ನ ಅಡಿಗೆಯಲ್ಲಿ ರುಚಿ ಹೇಗೆ ಬರಬೇಕು ? ಪಾಪ ! ಈದಿನ ಇಲ್ಲಿ ಅನುಕೂಲವಿಲ್ಲ. ಸಮ್ರಾಟನ ಭೋಜನಕ್ಕೆ ದಯಮಾಡಿಸ ಬಹುದು,

ಯೋಷೀ, ದಮ್ಮಯ್ಯ ! ಕ್ಷುದ್ಬಾಧೆಯು ವಿಪರೀತವಿದೆ. ಈದಿನ ಪಾಕವು ಹೇಗಿದ್ದರೂ ಅಮೃತಕ್ಕಿಂತಲೂ ರುಚಿಕರವಾಗಿರುತ್ತದೆ, ಸದ್ಯಃ ಏನು ಮಾಡಿರುವೆಯೋ ತಂದುಹಾಕು.

ಯೋಷಿಯು ಪೃಥ್ವಿರಾಜನ ಪತ್ನಿ. ಯೋಷಿಯು, ಯೋಷೀಬಾಯಿಯೋ ಯೋಷೀದೇಗವೆಮ್ಮೇ ತಿಳಿಯದು. ಬೇಗಮ್ ಎನಿಸಿಕೊಳ್ಳಲು ಯೋಷಿಯು ಒಪ್ಪಳು; ಪತಿಯು ಬಿಡನು ಸಮ್ರಾಟ ಅಕ್ಬರ ಚಕ್ರವರ್ತಿಯೊಂದಿಗೆ ಬಂದು ತ್ವನ್ನು ಬೆಳಸಿ ತಮ್ಮ ಮತ, ದೇಶ, ಸ್ವಗೌರವಗಳನ್ನು ಮರೆತವರಲ್ಲಿ ಪೃಥ್ವಿರಾಜನೂ ಒಬ್ಬನು. ನಿಜವಾಗಿಯೂ ಸಮ್ರಾಟನು ತಮ್ಮನ್ನು ಪ್ರೇಮದೃಷ್ಟಿಯಿಂದಲೇ ನೋಡುತ್ತಾನೆಂದು ಜಾತಿಗೆಟ್ಟ ಈ ರಜಪೂತರ ತಿಳುವಳಿಕೆ. ಆದರೆ ಸಮ್ರಾಟನ ಅಂತರಂಗವು ಅವರಿಗೆ ಹೇಗೆ ಗೊತ್ತು ? ಸಮ್ರಾಟನು ಕಾಮಾಂಧಪಶು. ರಜಪೂತ ಸ್ತ್ರೀಯರನ್ನು ಪ್ರೀತಿಸುತ್ತಿದ್ದನೇ ವಿನಹಾ ವೀರರನ್ನಲ್ಲ. ಹಿಂದೂ ದೇಶವುಹಾಳಾದರೇನು ? ಉಳಿದರೇನು ? ತನ್ನ ಕಾಮಾಗ್ನಿಗೆ ರಜಪೂತವನಿತೆಯರ ಆಹುತಿಯು ಸರಿಯಾಗಿ ಬೀಳುತ್ತಿದ್ದರಾಯಿತು. ಬೆಂಕಿಯನ್ನು ಆಹಾರವೆಂದು ಭ್ರಮಿಸಿ ಗರಿಸೀದು ಬೀಳುವ ಪತಂಗದ ಹುಳುಗಳಂತೆ ರಜಪೂತ ಅಧಿನಾಯಕರು ಅಕ್ಬರನ ನಸುನುಡಿಗಳಿಗೆ ಬೆರಗಾಗಿ ಅವನ ಕುಟಿಲಕ್ಕೆ ತುತ್ತಾಗುತ್ತಿದ್ದರು. ತಮ್ಮ ಸ್ವಂತ ಸಹೋದರಿ, ಹೆಣ್ಣುಮಕ್ಕಳು, ಪತ್ನಿಯರನ್ನೇ ಅವನಿಗೆ ಆಹುತಿಯನ್ನಾಗಿ ಕೊಡುತ್ತಿದ್ದರು. ಇಂತಹ ದೇಶದ್ರೋಹಿಗಳಿಗೆ ಧಿಕ್ಕಾರ ವಿರಲಿ. ಪರದೇಶದರರು ಎಷ್ಟು ವಿಶ್ವಾಸದಿಂದ ನಮ್ಮನ್ನು ಕಂಡರೂ ಅವನು ನಮ್ಮ ಹಿತಚಿಂತಕನೇ ? ಅವರೂ ಭಾರತಾಂಬೆಯ ಮಾಂಗಲ್ಯದ ರತ್ನಗಳೆಲ್ಲವೂ ಕಪ್ಪುಬಣ್ಣ ತಿರುಗಿರಲಿಲ್ಲ. ಒಂದು ರತ್ನ ಮಾತ್ರ ಬಾದೇ ವಿಧವಾದ, ಅಚ್ಚಳಿಯದ, ಪೂರ್ಣಪ್ರತಾಪದ ದೇಶಾಭಿಮಾನದಿಂದ ಕೂಡಿ ವಿಜೃಂಭಿಸುತ್ತಲಿತ್ತು. ಆ ರತ್ನವೇ ಮೇವಾಡದ ಮಾಣಾಪ್ರತಾಪಸಿಂಹ! ಪ್ರತಾಪಸಿಂಹನ ಪ್ರತಾಪದ ಬಗ್ಗೆ ಸಮ್ರಾಟನಿಗೆ ಹಳದೀಘಟ್ಟದಲ್ಲಿ ಪೂರ್ಣಪರಿಚಯವಾಗಿತ್ತು. ಶಕ್ತಿಸಿಂಹನ ಪಾದಘಾತದ ಪೆಟ್ಟು ಸಮ್ರಾಟನ ಪ್ರಿಯಳುವರ ನೆಲೀಮನ ದವಡೆಯನ್ನು ಇನ್ನೂ ಬಿಟ್ಟಿರಲಿಲ್ಲ. ಸಮ್ರಾಟನು ವಿಶ್ವಪ್ರಯತ್ನ ಮಾಡಿದನು, ಸಾಧ್ಯವಾಗಲಿಲ್ಲ. ಇದೀ ಹಿಂದೂಸ್ಥಾನವನ್ನೇ ಪಾದದಡಿಯಲ್ಲಿ ಧರಿಸಿರುವ ಸಮ್ರಾಟನಿಗೆ ಮಿವಾಡಿನ ಸಿಂಹವೊಂದು ಹಳ್ಳಿಹಣ್ಣು ತಿನ್ನಿಸಿತು. ಸಿಂಹದ ತಲೆ ಸವರಿದನು.

ಸಿಂಹಕ್ಕೆ ಗೋವಿನಮಾಂಸದಾಸೆಯುಟ್ಟಿತು. ಸಿಂಹಕ್ಕೆ ಉತ್ತಮವಾದ ಆಶಾನುವಾದ ಪಶುಗಳನ್ನು ತೋರಿಸಿದನು. ಸಿಂಹವು ಎಲ್ಲವನ್ನೂ ನೋಡಿ, "ಮುಚ್ಚೂ ಬಾಯಿ, ಅಧಮ! ನೀತಿಕೆಟ್ಟವನೇ!" ಎಂದಿತು. ಸಿಂಹವನ್ನು ಬಲಿಗೆ ಹೇಗೆ ಕಡವ ಬೇಕೆಂಬುದೇ ಸಮ್ರಾಟನಿಗೆ ದೊಡ್ಡ ಸಮಸ್ಯೆಯಾಗಿದ್ದಿತು. ಏನುಮಾಡಿಯಾನು? ದೇಶಾಭಿಮಾನವೆಂಬ ಕೊಬ್ಬಿನಿಂದ ಉಂಬಿದ್ದ ಆ ಕೊಬ್ಬಿದ್ದ ಕೇಸರಿಗೆ ಕೇಡನ್ನು ಹೇಗೆ ತಂದಾನು? ಸಿಂಹದ ಸ್ನೇಹ ದೊರೆತರೆ ಸ್ವಂತಮಗಳಾದ ವಿಹರೆಯನ್ನು ಕೊಟ್ಟು ಪರಿಣಯನಮಾಡಲು ನಿಶ್ಚಯಿಸಿದನು. ಆದರೆ ತನ್ನ ಪತ್ನಿಯಾದ ಲಕ್ಷ್ಮೀದೇವಿಯ ಪಾದಪ್ರಕ್ಷಿಳನವಾದ ಜಲವನ್ನು ಪಾನಮಾಡುವ ಯೋಗ್ಯತೆಯನ್ನೂ ಸಹಾ ಪಡೆಯಿದಿರುವ ಸಮ್ರಾಟನ ಕುವರಿಯ ಮೇಲಣ ಮೋಹಕ್ಕಾಗಿ ಆ ವೀರನು ದೇಶವನ್ನು ಮರೆತಾನೆ! ಸಮ್ರಾಟನು ಸಮಯವನ್ನು ಕಾಯುತ್ತಾ ತಾಳ್ಮೆಯ ಸಹನೆಯಿಂದ ಸುಮ್ಮನಿದ್ದನು.

೨

ಅರಣ್ಯವಾಸ. ಮಹಾಕಠಿಣ ತಪಸ್ಸು ಸಿಕ್ಕಿದರೆ ಆಹಾರವನ್ನು ತಿನ್ನುವುದು, ಇಲ್ಲದಿದ್ದರೆ ಉಪವಾಸವಿರುವುದು. ಅಲ್ಪಸ್ವಲ್ಪ ಸಿಕ್ಕಿದರೆ ಮುಕ್ಕಳಿಗಿತ್ತು ಉಪವಾಸ ವ್ರತವನ್ನಾಚರಿಸುವುದು. ದೇಶಾಭಿಮಾನಿಗಳ ಪಾಡೆಲ್ಲಾ ಹೀಗೆಯೇ. ತಮ್ಮ ದೇಶವನ್ನು ತಾವು ನಿಷ್ಪಕ್ಷಪಾತದಿಂದ ಪ್ರೀತಿಸುವುದೇ ಅವರ ಶತಾಪರಾಧ. ಇದಕ್ಕೆ ಕಾರಾಗಾರವಾಸ, ಉಪವಾಸವ್ರತ; ಆದರೂ ಈ ಕಷ್ಟಗಳೆಲ್ಲವೂ ನಮ್ಮನ್ನು ಕರೆದೊಯ್ದು ಎಲ್ಲಿಗೆ ಬಿಡುವುದು? ಸ್ವಾತಂತ್ರ್ಯದ ಮುಂಬಾಗಿಲಿಗೆ! ಹೀಗೆಂದೇ ತಿಳಿದು ವೀರನಾದ ಶಾಕಾಪ್ರತಾಪಸಿಂಹನು ಬಂದ ಕಷ್ಟಗಳನ್ನೆಲ್ಲಾ ಸಹಿಸುತ್ತಿದ್ದನು. ಸೈನ್ಯವನ್ನು ಪುನಃ ಸೇರಿಸುತ್ತಿದ್ದನು. ಭಿಲ್ಲರ ಸಂಪೂರ್ಣ ಸ್ನೇಹ ವಿಶ್ವಾಸ ಸಹಾಯಗಳು ಇದ್ದುವು. ವೀರರಿಗೆ ಯಾರ ಸಹಾಯವು ಬೇಕು? ಅವರು ಸ್ವಾತಂತ್ರ್ಯ ಜೀವಿಗಳು.

ಪ್ರತಾಪಸಿಂಹನ ಜೀವನವು ಬಹುಕಷ್ಟಕರವಾಗಿದ್ದಿತು. ಅರಣ್ಯದ ದುಷ್ಟ ಮೃಗಗಳ ಕಾಟದಿಂದ ಒಂದುಕಡೆಯಿಂದ ಒಂದುಕಡೆಗೆ ಪ್ರತಿದಿನವೂ ಬದಲಾಯಿಸಬೇಕಾಗಿದ್ದಿತು. ಒಂದುಸಲ, ಮೂರುದಿನಗಳವರೆಗೂ ಯಾವ ಆಹಾರವೂ ದೊರೆಯಲಿಲ್ಲ. ನಾಲ್ಕನೆಯದಿವಸ ಸ್ವಲ್ಪ ಕಾಡುಜೋಳವು ದೊರೆಯಿತು. ಲಕ್ಷ್ಮೀದೇವಿಯು ಎರಡು ರೊಟ್ಟಿಗಳನ್ನುಮಾಡಿ ಒಂದನ್ನು ಮಕ್ಕಳಿಗೆ ಹಂಚಿ, ರಾತ್ರಿಗೋಸುಗ ಒಂದನ್ನು ಒಂದೆಡೆಯಲ್ಲಿ ಇಟ್ಟಿದ್ದಳು. ದೈವೇಚ್ಛೆಯಿಂದ ಬಾಲಕರ ರೊಟ್ಟಿಯನ್ನೂ, ತೆಗೆದಿಟ್ಟಿದ್ದ ರೊಟ್ಟಿಯನ್ನೂ ಒಂದು ಕಾಡುಬೆಕ್ಕು ಅಪಹರಿಸಿಕೊಂಡು ಹೋಯಿತು. ಮಕ್ಕಳಿಬ್ಬರೂ ದೀರ್ಘವಾಗಿ ರೋದಿಸಲಾರಂಭಿಸಿದರು. ಈ ದೃಶ್ಯವು ಉಕ್ಕಿನ ಎದೆಯುಳ್ಳಂತಹ ಪ್ರತಾಪನ ಹೃದಯವನ್ನೇ ಕರಗಿಸಿತು.

ದುಃಖದಿಂದ ನರಳುಬ್ಬಿದುವು. ಬಾಯಿಂದ ಮಾತು ಹೊರಡದಂತಾಯಿತು. ವಿಧಾನವಿನ ಸೂರ್ಯನ ಪಾಡು ಅರಣ್ಯರೋದನವಾಯಿತೇ? ಅಳಬಹುದಿತ್ತು ಕಟಾ! ಜಗದೀಶ್ವರಾ! ನಮ್ಮ ಈ ಪ್ರಯಾಸವಾದ ಪ್ರವಾಸವು ಇನ್ನೂ ಎಷ್ಟು ದಿನಗಳವರೆಗೆ? ವಂದ್ಯ ಮಾವಾರಿನ ಮುಖವನ್ನು ನಾವು ಯಾವಾಗ ನೋಡುವೆವು? ಎಂಬ ಶೋಕತರಂಗಾವಳಿಗಳು ವೀರಪತ್ನಿಯಾದ ಲಕ್ಷ್ಮೀದೇವಿಯನ್ನು ಬಾಧಿಸತೊಡಗಿದವು. ಅಕ್ಬರನಿಗೆ ಕ್ಷಮೆಯ ಪತ್ರವೊಂದನ್ನು ಬರೆಯಲು ಕಡೆಗೆ ರಾಣನು ನಿಶ್ಚಯಿಸಿದನು ಅಭಿಜ್ಞಶ್ರೇಷ್ಠನಾದ ರಾಣಾಪ್ರತಾಪಸಿಂಹನು ಅಜ್ಞಾರೊಡೆಯನಾದನು. ಪತ್ನೀಪುತ್ರರನ್ನು ಪೋಷಿಸಲು ತಾನು ಅಶಕ್ತನಾದೆನಲ್ಲಾ ಎಂಬ ಅಂಡಲೆಯಿಂದ ದಿನೇ ದಿನೇ ಕೃಶನಾಗುತ್ತಾ ಬಂದನು. ದುಃಖವು ರಾಣನನ್ನು ಪೂರ್ಣವಾಗಿ ವ್ಯಾಪಿಸುತ್ತ ಬಂದತೇವಿನಾ ಮಾಣದಾಯಿತು. ಧೈರ್ಯವನ್ನು ತಳೆದು ಸಮ್ರಾಟನು ಶಿರಬಾಗುವ ಲೇಖನವೊಂದನ್ನು ತನ್ನ ಪತ್ನಿಗೆ ತಿಳಿಸದೆಲೆ ಬರೆದನು. ಪತ್ನಿಯಾದ ಲಕ್ಷ್ಮೀದೇವಿಗೆ ಈ ವಾರ್ತೆಯು ಮುಟ್ಟಿದಲ್ಲಿ ಅಳೆಯು ನಿರಾಶೆಯಿಂದ ಬಸವಳಿದು ಕೂಡಲೆ ಪ್ರಾಣತ್ಯಾಗಮಾಡಿಯಾಳೆಂಬ ಸಂದೇಹದಿಂದ ರಾಣನು ಅತಿಪ್ರಾಮುಖ್ಯವಾದ ಈ ವಿಷಯವನ್ನು ಮರೆಮಾಡಿಟ್ಟನು. ಅಯ್ಯೋ! ಇಂದಿನ ದಿನ ಮಾವಾರಿನ ಕಳಶವು ಕಳಚಿಬಿದ್ದಿತೇ! ರಾಣಾಪ್ರತಾಪಸಿಂಹನೂ ಕೂಡ ಹೂಣರಸನ ಅಡಿಯಾಳಾದನೇ!

ಪತ್ರವು ವೇಳೆಗೆ ಸರಿಯಾಗಿ ರಾಣನ ಹಸ್ತವನ್ನು ಸೇರಿತು. ಶ್ರಮಪಟ್ಟು ಅರಣ್ಯವನ್ನೆಲ್ಲಾ ಒಂದು ಔಷಧದ ಬಳ್ಳಿಗಾಗಿ ಶೋಧಿಸುತ್ತಿರುವವನಿಗೆ ಅದೇ ಬಳ್ಳಿಯು ಕಾಲಿಗೆ ಬಂದು ತೊಡರಿಕೊಂಡರೆ ಎಷ್ಟು ಆನಂದವುಂಟಾಗುವುದೋ ಸಮ್ರಾಟ ಅಕ್ಬರನಿಗೂ ಅದೇ ಬಗೆಯ ಆನಂದವಾಯಿತು. ಹೆಮ್ಮೆಯು ಇಮ್ಮಡಿಸಿತು. ತನ್ನನ್ನು ವಿಮಾರಿಸಿರುವವರಿಲ್ಲ ಎಂಬ ಉಗ್ಗಡಣೆಯುಂಟಾಯಿತು. ತನ್ನನ್ನು ತಾನೇ ಸ್ತುತಿಸಿಕೊಂಡನು. ಈ ಆನಂದ ಸಂಭ್ರಮಕ್ಕೋಸ್ಕರ ದೊಡ್ಡ ಔತಣಕ್ಕೆ ಆಣಿಮಾಡಿದನು. ತನ್ನ ನಿಕರಕ್ಕೆಲ್ಲಾ ಮನಸ್ಸೀ ದಾನಮಾಡಿದನು. ರಾಣೇವಾಸದವರ ಹರ್ಷಕ್ಕಾಗಿ ಖುಸ ರೋಜ್ ಹಬ್ಬವನ್ನು ಮಾಡಹೇಳಿದನು. ಖುಸ್ ರೋಜ್ ಹಬ್ಬವು ಅಕ್ಬರನ ಅರಮನೆಯಲ್ಲಿ ವರ್ಷಂಪ್ರತಿಯಲ್ಲಿಯೂ ಆಗತಕ್ಕ ವಸ್ತುಪ್ರದರ್ಶನ ಮತ್ತು ಔತಣ. ಸಾಮಂತ ಅರಸರ, ಸರದಾರರ ಮನೆಯ ಸ್ತ್ರೀಯರೆಲ್ಲರೂ ತಾವೇ ರಚಿಸಿರತಕ್ಕ ಸಾಮಾನುಗಳನ್ನು ತಂದು ಪ್ರದರ್ಶಿಸುವುದು. ಸಮ್ರಾಟನೂ, ಅವನ ರಾಜ್ಞಿಯರೂ ಅವುಗಳನ್ನು ನೋಡಿ ತಕ್ಕಂತೆ ಬಹುಮಾನ ಮಾಡುವುದು. ಸಮ್ರಾಟನ ಬಹುಮಾನದ ಚಂದವೇ ಚಂದ. ರೂಪವತಿಯಲ್ಲದ ರಮಣಿಯು ವಿಶೇಷ ನಾಜೂಕಾಗಿಯೂ ರಮ್ಯವಾಗಿಯೂ ಇರುವ ಪ್ರದರ್ಶನವನ್ನು ತಂದಿಟ್ಟಿದ್ದರೂ ಅದರಕಡೆಗೇ ಸಮ್ರಾಟನ ದೃಷ್ಟಿಯು ಹೋಗದು. ಕಂಭೀರ್ಯತೆಯಿಂದ ರೂಪಸಿಯಾಗಿರುವ ಉತ್ಕೃಷ್ಟ ವಸ್ತುವಿನ

ವಾದ ಸಾಮಾನುಗಳನ್ನು ತಂದಿದ್ದರೂ ಅವುಗಳ ಮೆಚ್ಚಿಗೆಯೇ ಮೆಚ್ಚಿಗೆ! ಅವುಗಳಿಗೆ ಮಾಡುವ ಗೌರವ, ಬಳುವಳಿಗಳೇ ಬೇರೆ! ಈ ಖುಸ್ ರೋಜ್ ಹಬ್ಬಕ್ಕೆ ಸರ್ವರೂ ಬರಬೇಕೆಂದು ಸಮ್ರಾಟನ ಆಜ್ಞೆ.

ಯೋಷಿಯು ಹೋಗಲೊಲ್ಲಳು; ಪೃಥ್ವಿಯು ಬಿಡಲೊಲ್ಲನು. ಯೋಷಿಯ ರೂಪ ಲಾವಣ್ಯಗಳಿಂದ ತನಗೇನಾದರೂ ಸಮ್ರಾಟನ ವಿಶ್ವಾಸವು ಬರಲೆಂದು ಪೃಥ್ವಿಯ ಹಾರೈಕೆ. ಪಶುವಿಗೆ ಮುಖತೋರಿಸಬೇಕಲ್ಲಾ ಎಂದು ಯೋಷಿಗೆ ಸಂಕಟ. ಅಕ್ಬರನ ಸನ್ನಿವೇಶಗಳನ್ನು, ನಡತೆಗಳನ್ನು ಯೋಷಿಯು ಚೆನ್ನಾಗಿ ಬಲ್ಲವಳಾದ್ದರಿಂದ ವಿಶೇಷ ಭಯಾಕ್ರಾಂತೆಯಾಗಿದ್ದಳು. ತನ್ನ ಜಾಣ್ಮೆಯನ್ನೆಲ್ಲಾ ಪ್ರಯೋಗ ಮಾಡಿದಳು. ಏನುಹೇಳಿದರೂ ಪೃಥ್ವಿಯು ಜಗ್ಗನು. ಕಡೆಗೆ ಪತಿಗೆ ಸಲುವಾಗಿ ಖುಸ್‌ರೋಜ್‌ಗೆ ಹೋಗಲು ನಿಶ್ಚಯಿಸಿದಳು.

ಹಬ್ಬದ ಗೊಂದಲವು ಮುಗಿಯಿತು. ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಯೋಷಿಯೂ ಮನೆಗೆ ಬಂದಳು. ಯೋಷಿ ಬಂದವೇಳೆಯಲ್ಲಿ ಅಸ್ಥಾನ ಕವಿಯು ಕವನವನ್ನು ಕಟ್ಟುತ್ತಿದ್ದನು. ಯೋಷಿಯ ಮುಖದಲ್ಲಿ ರಮ್ಯವಿಲ್ಲ, ನಗೆಯಿಲ್ಲ, ಹರ್ಷವಿಲ್ಲ. ಕ್ರೋಧವು ಠಾರಾಜಿಸಿತು. ಗೃಹಕ್ಕೆ ಬಂದವಳು ನೇರವಾಗಿ ತನ್ನ ಕೆಲಸಕ್ಕೆ ಹೋಗದೆ ಪತಿಯ ಮುಂದೆ ಕವನವನ್ನು ಈಕ್ಷಿಸುತ್ತ ನಿಂತಿದ್ದಳು.

ಪೃಥ್ವಿ:—ಯೋಷಿ, ಯಾವಾಗ ಬಂದೆ? ಬಾ! ಬಾ! ಕವನದ ರಮ್ಯತೆಯಲ್ಲಿ ನಿನ್ನ ಆಗಮನವು ತಿಳಿಯಲೇ ಇಲ್ಲ. ಯೋಷಿ! ಇಂದಿನ ದಿನ ಕವನವು ಬಹು ಸೊಗಸಾಗಿ ಬಂದಿದೆ. ಪ್ರಾಸವೆಲ್ಲವೂ ಬಹಳ ಚೆನ್ನಾಗಿ ಕೂಡಿದೆ. ಮುಖ್ಯ, ಸಮ್ರಾಟನ ಅದೃಷ್ಟವೆಂದೇ ಹೇಳಬೇಕು.

ಯೋಷಿ:—ಕವನ, ಕವನ! ಕವನವು ಸೊಗಸಲ್ಲವೇ! ಕವನವು ರಮ್ಯವಲ್ಲವೇ! ನಿಮಗೆ ನಿಮ್ಮ ಕವನ! ನಿಮ್ಮ ಸಮ್ರಾಟ ಇವರಿಬ್ಬೇ ಪೂಜ್ಯವಸ್ತುಗಳಲ್ಲದೆ ನಿಮ್ಮ ಪತ್ನಿಯ ಅಗಾಧವಾದ ಪಾತಿವ್ರತ್ಯವು ಪೂಜ್ಯವಾದುದಲ್ಲ! ನೀಚ ಸ್ತುತಿಮಾಡುವ ನಿಮ್ಮ ನಾಲಗೆಯು ಸೀಳಿಹೋಗದೇಕೆ?

ಪೃಥ್ವಿ:—ಯೋಷೀ, ಇದೇನು ನಿನ್ನ ಆವೇಶ? ಇದೇನು ನಿನ್ನ ಕೋಪ? ಯೋಷೀ, ಸೈರಣೆಯನ್ನು ತಂದುಕೋ, ನಿಧಾನವಾಗಿ ಹೇಳು. ಏನು ಆಯಿತು? ವಿಶೇಷವೇನು? ನಿನಗೆ ಕೋಪಬರಲು ಕಾರಣವೇನು? ಎಲ್ಲವನ್ನೂ ನಿಧಾನವಾಗಿ ಹೇಳು.?

ಯೋಷಿ:— ಏನು! ಸೈರಣೆಯೇ! ನಿಧಾನವೇ! ಸ್ವಪತ್ನಿಯ ಮಾನವನ್ನು ಕಾಪಾಡುವ ಶಕ್ತಿಯಿಲ್ಲದಿರುವ ನಪುಂಸಕರಾದ ನಿಮ್ಮಲ್ಲಿ ನಾನು ಹೇಳತಕ್ಕದ್ದೇನಿದೆ?

ನಾನು ಹೆಂಗಸು; ಆದರೂ ಜಗದಾಂಬೆಯ ಅನುಗ್ರಹವಿದೆ ! ನಾನೇ ನೇಡನ್ನು ತೀರಿಸಿಕೊಳ್ಳುತ್ತೇನೆ. ನಾನೇ ಸಮ್ರಾಟನ ಸಾಮ್ರಾಜ್ಯಕ್ರಾಂತಿಗೆ ಮೂಲದೇವತೆಯಾಗುತ್ತೇನೆ.

ಪೃಥ್ವಿ:— ಯೋಷೀ, ಏನು ! ಸಮ್ರಾಟನು ನಿನ್ನನ್ನು ಹಿಂಸಿಸಿದನೇ ?

ಯೋಷಿ:—ಹಿಂಸೆಪಡಿಸಿಕೊಳ್ಳಲು ನಾನೇನು ನಿಮ್ಮಂತಹ ಜಿರಳೆಮಾತ್ರವಲ್ಲ. ಈವಿನ ಈ ಚೂರಿಯು ! ಈ ದಿವ್ಯ ಖಡ್ಗವು ನನ್ನ ಬಳಿಯಲ್ಲಿಲ್ಲದಿದ್ದರೆ ನಿಮ್ಮ ಹೆಂಡತಿಯು ಒಲಾತ್ಯಾದಿಂದ ಸಮ್ರಾಟನ ವೇಶ್ಯೆಯರಲ್ಲಿ ಒಬ್ಬಳಾಗುತ್ತಿದ್ದಳು.

ಪೃಥ್ವಿ:— ಏನಂದೆ ಯೋಷಿ !

ಯೋಷಿ: —ಪ್ರಭೂ! ಏನೂ ಇಲ್ಲ. ನಿಮ್ಮಲ್ಲಿ ಪುಂಸತ್ವವೂ, ಕ್ಷಾತ್ರತ್ರೇಜವೂ ಎಳ್ಳಷ್ಟಾದರೂ ಇದ್ದರೆ ಸಮ್ರಾಟನಮೇಲೆ ಪಣಕಟ್ಟಿ ಪ್ರತಾಪನ ಮರಿಹೋಗಿ ಸಮ್ರಾಟನ ಕೊನೆಗಾಲವನ್ನು ಕೂಡಲೆ ತಂದು ನಿಮ್ಮ ಹಿಂದೂಭಗಿನಿಯರ ಅಮೂಲ್ಯವಾದ ಮಾನಗಳನ್ನು ರಕ್ಷಿಸಿ ನಾನು ಸಹಿಸಲಾರೆ; ಇನ್ನೊಂದು ಕ್ಷಣಕಾಲವೂ ಸಹಿಸಲಾರೆ. ಪಾಪಸಂಭೃತವಾದ ಈ ಭೂಮಿಯಲ್ಲಿ ಇನ್ನೊಂದು ಘಳಿಗೆಯೂ ಇರಲಾರೆ. ನನ್ನ ಕೊನೆಯ ಪ್ರಾರ್ಥನೆಯನ್ನು ನಡೆಸಿಕೊಡಿ. ಸತ್ಯವಾದ ಕಾರ್ಯಕ್ಕಾಗಿ ಪ್ರಾಣವನ್ನು ಒಪ್ಪಿಸಿದರೂ ಶಂಕೆಯಿಲ್ಲ. ಪಾಮರನಾದ ಸಮ್ರಾಟನ ಸೇವೆಮಾಡಿ ಕುನ್ನಿಯಂತೆ ಸಾಯುವುದಕ್ಕಿಂತ ದೇಶಕ್ಕಾಗಿ ಪ್ರಾಣಬಿಟ್ಟರೆ ವೀರವಲಯದಲ್ಲಿ ನಿಮಗೆಲ್ಲಂದು ಸ್ಥಾನಸಿಕ್ಕುತ್ತದೆನ್ನುತ್ತಾ ತನ್ನ ಹಸ್ತದಲ್ಲಿದ್ದ ಚೂರಿಯಿಂದ ಇರಿದುಕೊಂಡು ಪತಿಯ ಪಾದಗಳಮೇಲೆ ಉರುಳಿ ಪ್ರಾಣವನ್ನು ತ್ಯಜಿಸಿದಳು. (ಸಶೇಷ)

ಸ್ತ್ರೀಯರೂ ಸಮಾಜ ಸೇವೆಯೂ.

(ಹಿಂದಿನ ಸಂಚಿಕೆಯಿಂದ ಮುಂದರಿಸಿದ್ದು.)

ನಂತರ ಅವರಿಗಾಗಿ ಕಿಂಡರ್‌ಗಾರ್ಟನ್ ತರಗತಿಗಳನ್ನಿಡಬಹುದು. ಈ ತರಗತಿಗಳಲ್ಲಿ ಸಕಲವಿಧವಾದ ಅಂತಸ್ಥಿನವರೂ ಕಲೆತು ಕೆಲಸಮಾಡಲು ತಕ್ಕುದಾಗಿದ್ದರೆ ಬಹಳ ಉತ್ತಮವಲ್ಲದೆ ದಿನೇ ದಿನೇ ಪರಸ್ಪರ ಸೋದರಭಾವವು ಹೆಚ್ಚಿ ಇಂತಹ ಸಂಘಗಳು ಕ್ರಮೇಣ ಭೂಲೋಕಸ್ವರ್ಗವಾಗಿ ಪರಿಣಮಿಸುವುದರಲ್ಲಾವಸಂಶಯವೂ ಇಲ್ಲ. ಇಂತಹ ಏರ್ಪಾಡು ಮೂನಾಪಟ್ಟಣದ ಸೇವಾಸದನದಲ್ಲಿರುವುದೆಂದು ಕೇಳಿಬರುವೆನ್ನು

ನಮ್ಮ ಮಹಿಳೆಯರ ಮನಸ್ಸಿನಲ್ಲಿ ನಿಸ್ವಾರ್ಥತ್ಯಾಗ, ಪರಸ್ಪರಪ್ರೇಮ, ಪರಹಿತಾಕಾಂಕ್ಷೆಗಳು ಬೇರೂರಿ ತಾವೇ ಸ್ವಯಂ ಇಂತಹ ಕೆಲಸ ಮಾಡಲು ಮುಂದರಿಯುವವರೆಗೂ ನಿಸ್ಪೃಹತ್ವದಿಂದ ಕೆಲಸಮಾಡತಕ್ಕವರು ಕೆಲವರು ಅತ್ಯಾವಶ್ಯಕವಾಗಿರಬೇಕು; ಆದರೆ ಪ್ರಕೃತ ಅನೇಕಜನ ಹಿಂದೂಮಹಿಳೆಯರು ಉಪಾಧ್ಯಾಯಿನಿಯರಾಗಿಯೂ ನೌಕರರಾಗಿಯೂ ಸೂಲಗಿತ್ತಿಯರಾಗಿಯೂ ಗ್ರಂಥಕರ್ತ್ರಿಯರಾಗಿಯೂ ಇರುವದರಿಂದ ಮೇಲ್ಕಂಡವೀ ಕೆಲಸಮಾಡತಕ್ಕವರು ಸಿಕ್ಕುವುದು ಅಷ್ಟು ಕಷ್ಟವಲ್ಲ. ಭರತಖಂಡದಲ್ಲೆಲ್ಲಾ ವಾ ಪಿಸಿರುವ ಚಿಕ್ಕವಯಸ್ಸಿನ ವಿಧವೆಯರ ವಿದ್ಯಾಭ್ಯಾಸಕ್ಕನುಕೂಲಮಾಡಿಕೊಟ್ಟಲ್ಲಿ ಅವರು ಸ್ವಾರ್ಥರಹಿತರಾಗಿ ಸಂಘಸೇವೆ, ಪ್ರಜಾಸೇವೆ, ರಾಷ್ಟ್ರಸೇವೆಗಳನ್ನು ಅಕ್ಕರೆಯಿಂದ ಮಾಡಬಾರದೇ? ಇಂತಹ ಸಂಘಗಳು ಮಾಡುವ ಉತ್ತಮಕಾರ್ಯಗಳನ್ನು ಪತ್ರಿಕೆಗಳಮೂಲಕ ಇತರ ಊರುಗಳ ಮಹಿಳೆಯರು ಅರಿತು ಎಷ್ಟೆಷ್ಟು ತಮ್ಮ ಸಹೋದರಿಯರಂತೆ ತಾವೂ ದೇಶಸೇವೆಗೆ ಮುಂದರಿಯುವರು ಎನೆಕರು ಇಂತಹ ಕಾರ್ಯಗಳಲ್ಲಿ ಪ್ರವೇಶಿಸಿದವರು ಮನೆಯಕೆಲಸಕ್ಕೆ ಗಮನಕೊಡಲಾರರೆಂದು ಭಾವಿಸುವರು. ಇದು ತಪ್ಪಭಿಪ್ರಾಯವು. ಮನೆಯಕೆಲಸ ಪೂರೈಸಿಕೊಂಡು ಬಿಡುವಾದಲ್ಲಿ ಕಳೆಯುವ ಸ್ವಲ್ಪವೇಳೆಯನ್ನು ಮೇಲ್ಕಂಡ ವಿಷಯಕ್ಕುಪಯೋಗಿಸಿದರೆ ಕುಟುಂಬಸಂಬಂಧವಾದ ಕಾರ್ಯಕ್ಕೇನೂ ಕುಂದುಕವುಂಟಾಗಲಾರದು. ಐಶ್ವರ್ಯವಂತರಾದ ಮಹಿಳೆಯರಿಗೆ ಮನೆಗೆಲಸಗಳ ತಾಪತ್ರಯವು ವಿಶೇಷವಾಗಿಲ್ಲದ್ದರಿಂದ ಸಂಘಸೇವೆಗೆ ಇವರು ಹೆಚ್ಚು ಕಾಲವನ್ನು ಉಪಯೋಗಿಸಬಹುದು.

ಹಣವಿಷಯ.

ಮೇಲೆ ಹೇಳಿದ ವಿಷಯಗಳು ಕ್ರಮವಾಗಿ ನಡೆಯಬೇಕಾದರೆ ದ್ರವ್ಯದ ಸಹಾಯವು ಬಹಳವಾಗಿರಬೇಕು. ಇಲ್ಲದಿದ್ದಲ್ಲಿ ಅಸ್ಥಿಭಾರವಿಲ್ಲದಂತಾಗುವುದು. ಇಂತಹ ಕಾರ್ಯಗಳಿಗೆ ಹಣ ಕೂಡಿಸುವ ವಿಷಯದಲ್ಲಿ ಜನರು ನಾನಾವಿಧವಾದ ದೋಷವನ್ನಾರೋಪಿಸುವುದರಿಂದ ಅವಮಾನವನ್ನೂ ಸಹಿಸಿ, ನಾವು ಮನುಷ್ಯರಲ್ಲಿ 'ಕಲ್ಲು' ಎಂಬ ಭಾವವನ್ನು ವಹಿಸಿ, ದೋಷಾರೋಪಣೆಗಳನ್ನೆಲ್ಲಾ ಸ್ಥಿರಮನಸ್ಸಿನಿಂದ ಸಹಿಸಬೇಕು. ನಾವು ಮಾಡುವ ಕಾರ್ಯವು ಜನಸಮೂಹದ ಕ್ಷೇಮಾರ್ಥವಾಗಲ್ಲದೆ ಕೇಡಿಗಲ್ಲವೆಂಬುದು ಕ್ರಮೇಣ ಜನರಿತು ತಾವೇತಾವಾಗಿ ಸಹಾಯಮಾಡಲು ಮುಂದರಿಯುವ ಪರಿಗೂ ಶಕ್ತನಿಷ್ಠುರಗಳನ್ನು ಸ್ಥೈರ್ಯದಿಂದ ಹೋರಾಡಬೇಕು. ನನ್ನ ಅನುಭವದಂತೆ ಈ ಕೆಳಗೆ ಕೊಟ್ಟಿರುವ ಪಟ್ಟಿಯಂತೆ ಅಲ್ಪ ದ್ರವ್ಯಸಹಾಯದಿಂದ ಕೆಲಸವನ್ನು ಪ್ರಾರಂಭಿಸಿದಲ್ಲಿ ಕ್ರಮೇಣ ಇಂತಹ ಸಂಘಗಳೂ ಅವುಗಳಮೂಲಕ ಪಡೆಸಬ್ಯಡುವ ಶರಗತಿಗಳೂ ಜನಸಮೂಹದವರ ಮತ್ತು ಸರ್ಕಾರದವರ ಸಹಾಯವನ್ನು ಪಡೆದು ಉನ್ನತಸ್ಥಿತಿಗೆ ಬರಬಹುದು.

I ಮೊದಲನೆಯ ವರ್ಷದಲ್ಲಿ ಆಗಬೇಕಾದ ಖರ್ಚಿನವಟ್ಟು:— ರೂ.

1. ಕನಿಷ್ಟಪಕ್ಷ ಎರಡು ಹೊಲಿಯುವ ಯಂತ್ರಗಳು, ೩ ಕಾಲು ಚೀಲದ ಯಂತ್ರಗಳು, ಚಂಕಿಚೆಲಸಮಾಡುವ ಯಂತ್ರಗಳು 250

2. ಕಟ್ಟಡದ ಬಾಡಿಗೆ, ಸಂಬಳಗಳು, ಪುಸ್ತಕ, ವಾರ, ಮಾಸ ಪತ್ರಿಕೆಗಳು, ಶಿಶುಸಂರಕ್ಷಣಾಕಾರ್ಯಕ್ಕೆ ಬೇಕಾದ ಸಾಮಾನುಗಳು 750

3. ಬೆಕ್ಕ, ದಾರ, ಸೂಜಿ, ಬಟ್ಟೆ ಮೊದಲಾದುವುಗಳಿಗಾಗಿ 500

II ಉತ್ಪತ್ತಿಯನ್ನು ಈ ಕೆಳಗೆ ಕಂಡುಬರುವ ವಿಧವಾಗಿ ತೆಗೆಯಬಹುದು (ಇವುಗಳಿಂದ ಇಷ್ಟೇ ಉತ್ಪತ್ತಿಯಾಗುವುದೆಂದು ಖಂಡಿತವಾಗಿ ಹೇಳಲಾಗುವುದಿಲ್ಲ):—

1. ಸಂಘದ ಸದಸ್ಯರು ಕೊಡತಕ್ಕ ಮಾಹೆಯಾನ ಚಂದಾ, ಆಟಪಾಟ, ವಾರಕ ಕಾಲೆ ಇತ್ಯಾದಿಗಳಿಗಾಗಿ ಕೊಡತಕ್ಕ ಚಂದಾ, ಕೆಲಸ ಕಲಿಯತಕ್ಕವರಲ್ಲಿ ಅನುಕೂಲಸ್ಥರಾದವರು ಕೊಡತಕ್ಕಧನ.

2. ಹೊಲಿದಬಟ್ಟೆಗಳು, ಕಯಾನಾದ ಬೆಕ್ಕದ ಸಾಮಾನುಗಳು, ಕಾಲುಚೀಲ, ಒನಿಯರ್ ಇತ್ಯಾದಿ ವಸ್ತುಗಳ ಮಾರಾಟದಿಂದ ದೊರೆಯುವ ಲಾಭ.

3. ಸರ್ಕಾರದ ಸಹಾಯ ದ್ರವ್ಯ.

4. ಪ್ರಜಾಸಹಾಯದಿಂದ ದೊರೆಯತಕ್ಕ ಸಹಾಯದ್ರವ್ಯ ಮತ್ತು ಚಂದಾಹಣ.

ಅನಾದಿಕಾಲದಿಂದಲೂ ಕುಟುಂಬಕ್ಕೆ ಸಂಬಂಧಿಸಿದ ಸಕಲ ಕಾರ್ಯಗಳನ್ನೂ ಧೈರ್ಯ, ಶ್ರಮಸಹಿಷ್ಣುತೆ, ಚತುರತೆ ಮೊದಲಾದ ಗುಣಗಳಿಂದ ರಾರಾಜಿಸುತ್ತಿರುವ ಸ್ತ್ರೀಯರು ನಿರ್ವಹಿಸುವುದೂ, ಪುರುಷರು ದುಡಿದು ಕುಟುಂಬ ಪೋಷಣೆಗೆ ಸಹಾಯಮಾಡುವುದೂ ಸ್ಥಿರವಾಗಿ ಇಂದಿನವರೆಗೂ ನಡೆದುಬಂದಿರುವ ಪದ್ಧತಿಯಾಗಿದೆ. ಪ್ರಾಚೀನಾರ್ಯಮಹಿಳೆಯರು ಕುಟುಂಬದಲ್ಲಿನ ಸಕಲ ಸ್ವಾತಂತ್ರ್ಯವನ್ನೂ ವಹಿಸಿ ಗೃಹರಾಜ್ಯಲಕ್ಷ್ಮಿಯರಾಗಿ ಬೆಳಗುತ್ತಿದ್ದರು. ಆದರೆ ಅನೇಕಕಡೆ ಪ್ರಕೃತ ಸ್ತ್ರೀಯರು ಶಿಶು ಉತ್ಪತ್ತಿಯಂತ್ರವಾಗಿ ದಾಸ್ಯವೃತ್ತಿಯಲ್ಲಿರುವುದರಿಂದ ಪುರುಷನ ಸುಖಸೂತ್ರ ಬೊಂಬೆಯಾಗಿರುವುದರಿಂದ, ಈಗ ಅವರಿಗಿರುವ ದಾಸತ್ವವನ್ನು ತಪ್ಪಿಸಿ ಅವರಿಗೆ ಇಂತಹ ಕಾರ್ಯಗಳ ಜವಾಬ್ದಾರಿಯನ್ನು ವಹಿಸಿದರೆ ನಮ್ಮ ಮಹಿಳಾವರ್ಗದಲ್ಲನೇಕರಿಗಿರುವ ಅನೇಕ ವಿಧವಾದ ಕುಂದುಕೊರತೆಗಳು ನೀಗಿ ಸುಖಮಯವಾಗಿ ಪರಿಣಮಿಸುವುದು. ಭಾರತಮಹಿಳೆಯರ ವಿಷಯದಲ್ಲಿ ಪ್ರಸಿದ್ಧ ವಂಗಕವಿಯಾದ "ರವೀಂದ್ರನಾಥಟಾಗೋರ್" ಯವರು ಹೇಳಿರುವ ಒಂದು ಪದ್ಯವನ್ನು ಬರೆದು ಈ ಲೇಖನವನ್ನು ಪೂರ್ತಿಮಾಡುವೆನು. ಇದರಿಂದ ನಮ್ಮ

ಮಹಿಳಾವರ್ಗವು ಎಷ್ಟು ಪ್ರಾಶಸ್ತ್ಯವುಳ್ಳದ್ದೆಂದೂ, ಜವಾಬ್ದಾರಿಯನ್ನು ಹೊತ್ತಿರುವುದೆಂದೂ, ಪ್ರಪಂಚ ನಾಟಕದಲ್ಲಿ ಎಷ್ಟು ಮುಖ್ಯಪಾತ್ರವನ್ನು ವಹಿಸಿದೆಯೆಂದೂ ಹೇಳದೆಯೇ ತಿಳಿಯುವುದು.

" With a glance of your eyes, could plunder all the wealth of songs struck from poets, harps fair woman,
But for their praises you have no ear—therefore I came to praise you,
You could humble at your feet, the proudest heads in the world,
But it is you Lord ones, unknown to fame, whom you choose to worship, therefore I worship you,
The perfection of your arms would add glory to kinlgy splendour with their touch,
But you use them to sweep away the dust, and to make clean your humble home, therefore I am filled with awe.

ಇಷ್ಟೆಂದು ಗೌರವವಾಗಿ ಭಾವಿಸಲ್ಪಟ್ಟಿರುವ ಮಹಿಳಾವರ್ಗವು ಈಗ ಅಬಲಾ ನಾಮವನ್ನು ಸಾರ್ಥಕಪಡಿಸಿಕೊಂಡು ಕೇವಲ ಪುರುಷನ ಆಟದ ಬೊಂಬೆಯಾಗಿ ಪರಿಣಮಿಸಿರುವುದು ಎಂತಹ ಶೋಚನೀಯವು!

ಮಹಾತ್ಮಾಗಾಂಧಿ, ದೇಶಬಂಧು ಚಿತ್ತರಂಜನದಾಸರು, ಶ್ರೀಯುತ ಪಂಡಿತ ತಾರಾನಾಥರವರು ಮೊದಲಾದವರೂ ಕೂಡ ಇಂತಹ ಸೇವಾಸಂಘಗಳಿಂದ ದೇಶೋನ್ನತಿಯಾಗುವುದೆಂದು ಅಭಿಪ್ರಾಯಪಟ್ಟಿರುವುದರಿಂದ, ಅಂತಹ ಮಹಾನುಭಾವರ ವಾಕ್ಯಗಳನ್ನು ನಿರರ್ಥಕಮಾಡದೆ ನಾವುಗಳೆಲ್ಲರೂ ಕರ್ತವ್ಯವನ್ನರಿತು ನಮ್ಮ ಸಮಾಜಸೇವೆಗೆ ಸಿದ್ಧರಾಗೋಣ. ನಾವೆಲ್ಲರೂ ಸೋದರಭಾವದಿಂದ ಐಕ್ಯರಾಗಿ ದೇಶದ, ಸಮೂಹದ, ಪ್ರಜಾವರ್ಗದ ಸೇವೆಗೆ ತನುಮನಗಳನ್ನು ಧಾರೆಯೆರೆಯೋಣ. ನಾವು ಸೇವೆಯಲ್ಲಿ ಸಂತೋಷಪಟ್ಟು ಸೇವೆಯಲ್ಲಿ ಕಾಲಕಳೆದು, ಸೇವೆಯಲ್ಲಿಯೇ ಮುಕ್ತರಾಗೋಣ, ನಮ್ಮ ಧ್ಯೇಯ, ಆಶೆ, ಅಭಿಲಾಷೆ, ಉದ್ದೇಶ ಎಲ್ಲವೂ ಸೇವೆಯಲ್ಲಿಯೇ ಲಯಿಸಲಿ.

ಓಂ ಶಾಂತಿಶ್ಶಾಂತಿಶ್ಶಾಂತಿಃ.

(ಬೆಳಗಾವಿಯ ಮಹಿಳಾಸಂಘದಲ್ಲಿ ಸಂಪಾದಕಿಯವರು ಮಾಡಿದ ಉಪನ್ಯಾಸ.)



ಈ ಭಾವಚಿತ್ರದಲ್ಲಿ ನಿಂತಿರುವವರೇ

ಮಿಸ್. ಲೀಲಾವತಿ ಸಿಂಗ್, ಎಂ. ಎ. ರವರು

ಈಕೆಯು ಹಿಂದೂ ಕ್ರೈಸ್ತಜಾತಿಯಲ್ಲಿ ಜನಿಸಿದಳು. ಈಕೆಯು ತನ್ನ ಹತ್ತನೆಯ ವಯಸ್ಸಿನಲ್ಲಿ ಲಕ್ನೋಪಟ್ಟಣದಲ್ಲಿರುವ ಇಸಾಬೆಲ್ ತಾಬರ್ಡ್ ಬಾಲಿಕಾ ಪಾಠಶಾಲೆಗೆ ವಿದ್ಯಾಭ್ಯಾಸಕ್ಕಾಗಿ ಕಳುಹಿಲ್ಪಟ್ಟು ಅಂದಿನಿಂದ ಆತಿಮುತುವರ್ದಿಯಿಂದ ವಿದ್ಯೆಯನ್ನಭ್ಯಸಿಸತೊಡಗಿ ಅಧ್ಯಾಪಕರು ಮೆಚ್ಚುವಂತೆ ಸಕಲ ಪರೀಕ್ಷೆಗಳಲ್ಲಿಯೂ ಉತ್ತೀರ್ಣಳಾಗಿ ಕೆಲವು ಕಾಲಾನಂತರ ತಾನು ಕಲಿತ ಶಾಲೆಯಲ್ಲಿಯೇ ಉಪಾಧ್ಯಾಯಿನಿಯಾದಳು. ತನ್ನ ವಿದ್ಯಾಪ್ರೌಢಿಮೆಗಾಗಿ ಪೂರೆತ ಬಹುಮಾನ ದ್ರವ್ಯಗಳನ್ನೆಲ್ಲಾ ಬಡವಿದ್ಯಾರ್ಥಿನಿಯರ ಸಹಾಯಕ್ಕಾಗಿ ಉಪಯೋಗಿಸುತಿದ್ದಳು. ಇವರ

ವಿದ್ಯಾಶಕ್ತಿಯನ್ನು ಕಂಡ ಆ ಕಲಾಶಾಲೆಯ ಪ್ರಿನ್ಸಿಪಾಲರಾದ ಇಸಾಬೆಲ್ ತಾಬೆರ್ ಮಹಿಳೆಯು 1900 ನೆಯ ಇಸವಿಯಲ್ಲಿ ಈಕೆಯನ್ನು ಉಚ್ಚಶಿಕ್ಷಣಕ್ಕಾಗಿ ಅಮೆರಿಕಾ ಖಂಡಕ್ಕೆ ಕಳುಹಿಸಲು ಈಕೆಯು ಅಲ್ಲಿಯೂ ಶಿಕ್ಷಣಹೊಂದಿ ಅನೇಕ ಬಹುಮಾನಗಳನ್ನು ಪಡೆದು ಮರ್ಯಾದೆ ಗೌರವಗಳನ್ನು ಪಡೆದು ಮರಳಿ ಹಿಂದೂಸ್ಥಾನಕ್ಕೆ ಬಂದು ಲಕ್ನೋ ಶಾಸ್ತ್ರ ಬಾಲಿಕಾಪಾಠಶಾಲೆಯಲ್ಲಿ ಹದಿನೇಳುವರ್ಷಗಳು ಉಪಾಧ್ಯಾಯಿನಿಯಾಗಿ ಕೆಲಸಮಾಡಿದಳು. ಈಕೆಯು ಅನೇಕಕಡೆ ವಿದ್ಯಾಭ್ಯಾಸದ ಬದಲಾವಣೆಯ ವಿಷಯವಾಗಿ ಶ್ರೇಷ್ಟವಾದ ಉಪನ್ಯಾಸಗಳನ್ನು ಕೊಟ್ಟು ಅನೇಕಕಡೆಯ ಶಿಕ್ಷಣ ಸಂಸ್ಥೆಗಳಿಂದ ಬಹುಮಾನಗಳನ್ನು ಪಡೆದಳು. 1907 ನೆಯ ಇಸವಿಯಲ್ಲಿ ಜಪಾನಿನ ರಾಜಧಾನಿಯಾದ ಟೋಕಿಯೋಪಟ್ಟಣದಲ್ಲಿ ಜರಗಿದ ಪ್ರಪಂಚ ಕ್ರೈಸ್ತ ವಿದ್ಯಾರ್ಥಿ ಸಭೆಗೆ ಈಕೆಯನ್ನು ಹಿಂದೂಸ್ಥಾನದಿಂದ ಪ್ರತಿನಿಧಿಯಾಗಿ ಕಳುಹಿಸಲು, ಈಕೆಯನ್ನು ಆ ಸಭೆಯವರು ಅಧ್ಯಕ್ಷಳನ್ನಾಗಿ ಮಾಡಿ ಗೌರವಿಸಿದರು. ಈಕೆಯು ಆಗ ಕಷ್ಟಪಟ್ಟು ಸ್ಥಾಪಿಸಿದ ಬಾಲಿಕಾ ಪಾಠಶಾಲೆಯು ಈಗ ದೊಡ್ಡಕಲಾಶಾಲೆಯಾಗಿ ಪರಿಣಮಿಸಿದೆ ಈಕೆ ತನ್ನ ಕಲಾಶಾಲೆಯ ಸಂಬಂಧವಾಗಿ ಮತ್ತೆ ಎರಡು ಮೂರಾವೃತ್ತಿ ಅಮೆರಿಕಾ ಮೊದಲಾದ ದೇಶಗಳಲ್ಲಿ ಸಂಚರಿಸಿ ಕಲಾಶಾಲೆಗೆ ಸಾಕಾದಷ್ಟು ದ್ರವ್ಯಸಂಚಯ ಮಾಡಿದಳು "ನನ್ನ ಜೀವವೊಂದು ಮಾತ್ರ ಗಟ್ಟಿಯಾಗಿದ್ದರೆ ಈ ಕಲಾಶಾಲೆಯು ಸ್ಥಿರವಾಗಿ ನಿಲ್ಲುವಂತೆ ಮಾಡಿ ಹಿಂದೂ ಬಾಲಕಿಯರು ವಿದ್ಯಾವೈಭವದಿಂದ ತುಳುಕುವಂತೆ ಮಾಡುವೆನು" ಎಂದು ಸರ್ವದಾ ಹೇಳುತಿದ್ದಳು. ಕಷ್ಟಪಟ್ಟು ಕಲಾಶಾಲೆಯನ್ನೇನೋ ಸ್ಥಿರವಾಗಿ ನಿಲ್ಲಿಸಿದಳು; ಆದರೆ ಜೀವವು ಶಾಶ್ವತವಾಗಿ ನಿಲ್ಲಲಿಲ್ಲ. 1909 ನೆಯ ಇಸವಿ ಮೇ ತಿಂಗಳಿನಲ್ಲಿ ಚಿಕಾಗೋ ಪಟ್ಟಣದಲ್ಲಿ ಅಕಾಲಮರಣವನ್ನು ಹೊಂದಿದಳು. ಈಕೆಯು ನೆಟ್ಟಬೀಜವು ಫಲಿಸಿ ಈಗ ಅದೇ ಶಾಲೆಯೇ ಲಕ್ನೊ ಮಹಿಳಾವಿದ್ಯಾಲಯವಾಗಿದೆ. ಈಕೆಯ ಅಕಾಲ ಮರಣದಿಂದ ಭರತಖಂಡವು ವಿದ್ಯಾಮಾತೆಯೊಬ್ಬಳನ್ನು ಕಳೆದುಕೊಂಡಂತಾಯಿತು. ಭಾರತಪುತ್ರಿಯರಲ್ಲಿ ಕೆಲವರಾದರೂ ಈ ನಾರೀಮಣಿಯಂತೆ ತನ್ನ ಸೋದರಿಯರ ವಿದ್ಯಾಭಿವೃದ್ಧಿಗಾಗಿ ಪಾಡುಪಡುವರಾದರೆ ದೇಶವು ವಿದ್ಯಾವೈಭವದಿಂದ ಶುಂಬಿ ತುಳುಕುವುದರಲ್ಲಿ ಸಂಶಯವೇನಿದೆ? ಶಕ್ತಿ ಶ್ರದ್ಧೆಯೂ ಉತ್ಸಾಹವೂ ನಮ್ಮ ಮಹಿಳಾ ವರ್ಗದಲ್ಲಾ ವಿರ್ಭವಿಸಿ ನಮ್ಮ ರಾಷ್ಟ್ರಸೀಮೆಯನ್ನು ಸ್ಥಿರವಾಗಿ ಮಾಡಲಿ. ಅನುಸರಣೀಯವಾದ ಈ ಲಲನಾಮಣಿಯ ಗುಣವನ್ನು ನಾವೂ ಅನುಸರಿಸೋಣ.

ಈಕೆಯ ಆತ್ಮಕ್ಕೆ ಜಗದೀಶ್ವರನು ಶಾಂತಿಯನ್ನುಂಟುಮಾಡಲಿ.

ಓಂ ಶಾಂತಿಶ್ಶಾಂತಿಶ್ಶಾಂತಿಃ.

ಮಾನವ ಸುಖಬೋಧಾಮೃತ

(ಹಿಂದಿನ ಸಂಚಿಕೆಯಿಂದ ಮುಂದರಿಸಿದ್ದು)

೨. ಪಂಚೇಂದ್ರಿಯಗಳು.

ಭಾ॥ ಮೊದಲೆರಚಿಸಿದ್ದರಿಂಗಳತಿ ನೀ ।
ಪಡೆದು ಹೆಚ್ಚಳಪಡುವುದೊಳಿತೇಂ ।
ಪುದಿದಬುದ್ಧಿಗೆ ಭಾಪುಭಾಪೆಂದೊರೆವುದನುಚಿತವು ॥
ಹೃದಯದೊಳಗಾತ್ಮನೆಲಸಿಹನೆಂ ।
ಬುದನರಿದು ತನುವಿಂಗೆದೇವಂ ।
ವಿದಿತವಹಿಮಾನ್ವಿತನು ಮೆರೆಯುನುಮೆನ್ನುತರಿಯುವುದು ॥೧॥

ಸಲಿಸುಧಾನ್ಯವ ನಡುವಕಾರ್ಯಕೆ ।
ನೆಲವನೊದಲೊಳು ಹಸನಗ್ಗೆದೊಡೆ ।
ಫಲವತಾನತಿಯಾಗಿ ಮಾನನೊಂದುವನು ಮೇಣು ॥
ನೆಲದೆಳುಂಬರನಗ್ನಿಕುಂಡವ ।
ನಲಸದಲೆ ತಾಜವದೆಸಿದ್ಧವ ।
ಗೊಳಿಸಿಕೊಳ್ವುದು ರಚಿಪಸುವರ್ಣಪಾತ್ರೆಗೆ ಮುನ್ನಮೆ ॥೨॥

ಪವನಪುರುಷನ ಗತಿಯುತೆರದಿಂ ।
ಜವದೆಜಲಧಿಯು ವೀಚಿಗಳು ತಾ ।
ವವನಿಯೊಳು ಮೇರೆಗಳ ವಿಸಾರದೆಸತ್ತಿ ಪರವೊಲು ॥
ಸವನಿಪಂತೆಯೆ ಕೇಳೆಲವೊ ಮಾ ।
ನವಗೆ ತಾಪ್ರೇರಿಸುವ ನನೆಯಿ.ಪ ।
ಹವಣವರಿಯುತೆ ದೇಹಯಂತ್ರವನಾತ್ಮನೊಲವಿನಲಿ ॥೩॥

ನೀರಮೇಲಣಗುಳ್ಳೆಯಂದದಿ |
ತೋರುವೀತನುವಿಗೊಡೆಯಾತ್ಮನು |
ಸಾರುಗೊಳಿಸುವ ವಿಧದಿ ತನುವಿನಮೇಲೆ ಕರಣಗಳ ||

ವಾರಗಳನೆಬ್ಬಿಸದೆ ತಾವೃತ |
ಸಾರಮುಹತನುವಿಂಗೆ ಬಿಡದಾ |
ಧಾರವಿಲುಬುಗಳಾಗಿಹುದೆನುತಲಿರೆಯೊ ಮಾನವನೆ ||೪||

ಜಲಧಿಯದು ಬಗರಿಗೆಗೆಮೂಲ |
ಸ್ಥಳಮದಾಗುತಲದುವೆನೆದಿಯಂ |
ತಲಸದೆಪರಿದು ಪಿಂದಿರುಂಗುತುದಧಿಯಸೇರ್ವಪ್ಪೆಲು ||

ನೆಲದೆಮನುಜನ ನಿಖಿಳಕರ್ಮವು |
ನಿಲದೆರ್ಮದಿಂ ಪೊರಟುಜವದಿಂ |
ತಳುವಗೊಳ್ಳದೆ ಪೊರಟಕಾನಕೆ ಬಂದು ಸಾರುವುದು ||೫||

ಮೇಲೆಯೊರೆದಿಹಪೊನಲದೆರಡುಂ |
ಜಾಲಮಾತುಗಳಲ್ಲ ನೋಡೆ ದ |
ಯಾಲವಾಲನ ನೇಮವೆಂದರಿಯುವುದು ಯೋಚಿಸದೆ ||

ನೀಲಮೇಘಶ್ಯಾಮ ನಂಘ್ರಿಯ |
ಕಾಲನೇಮದಿಪಿಡಿದು ಸದ್ಗುಣ |
ತೀಲನಾಗುತೆ ಜೀವಿಸಿರ್ಪುದೆ ಜನ್ಮಸಾರ್ಥಕವು ||೬||

ಪರಿಮಳದವಾಸನೆಯ ನರಿವುದು |
ಮೆರೆವ ನಾತಿಕವಲ್ಲವೆ ರಸಗಳ |
ಪರಿಯನರಿವುದು ರಸನೆಯಲ್ಲವೆ ಮಿತಿಯಮಿರ್ದಪರಿ ||

ತರತರದೆ ಸೇವಿಸಿರಲವುಗಳ |
ನರಿಮೆಗೈತರದೆ ಬಹುದುಸ್ಸಹ |
ವಿರುವಳತದಿಂ ಪರಿಣಮಿಸಿ ಕೇಡಿಗೆಡೆಯಾಗಿಪುವು ||೭||

ತನಗೆಕೇಡುಗಳೆಂದು ಬಿಡದಲೆ |
ಹನನಕೆಡೆಯಾಗಿಸದೆ ತಾವ್ವುದು |
ವಿನುಗುವಾನಯನಂಗಳಲ್ಲವೆ ಪೇಳೊ ಮಾನವನೆ ||

ಮನಕೆಗೋಚರಮಾಗಲದುವೇ |
ಘನತೆಯೊಂದಿಪ ನಿಜಮದಲ್ಲಮ |
ದೆನುತೆ ಬೆಮೆಗೆಡೆಗ್ಯೈಸಿ ನಾಶಕೆಹೇತುವಾಗಿಪುವು ॥೮॥

ಅದರಿನಿಂನಿನ್ನಾತ್ಮನಂ ಸ |
ಮ್ಮದದೆ ವಿತಮಿಂವಿಡುತೆ ಬೋಧಿಸ |
ಲದಕೆ ಸನ್ಮಾರ್ಗಾವಲಂಬನೆಯನ್ನು ಸಂತತವು ॥

ವಿದಿತಮಾದಾಸತ್ಯವಾರ್ಗದೊ |
ಳದುವೆ ಚರಿಸಲು ಹದನವಾಂತೊಡೆ |
ಮದವಿವರ್ಜಿತನಾಗಿ ಶಾಂತಿಯುನಾಂತುಬಾಳುವೆಯೊ ॥೯॥

ಕರವುವಿರಚಿಪ ಕಾರ್ಯಮಾರಯೆ |
ಧರೆಯೊಳಚ್ಚರಿಯಾಗಿ ತೋರುತ |
ಲಿರಲು ದೇವನಿನಗದನೀಡಿಸನೆಂದು ಭಾವಿಸುತೆ ॥

ಪರಿಪರಿಯೊಳಳಲಿಂದೆನೊಂದುತೆ |
ಕರಕರೆಯ ಬಡುತಿರ್ಪಜೀವಯ |
ಮರೆಯದಲೆ ಪಾಲಿಪುದೆ ಸಂತತಕರಕೆ ಭೂಷಣವು ॥೧೦॥

ಜಗದಜೀವಿಗಳೊಳಗೆ ನೀನೆಯೆ |
ಬಗೆಯೆನಾನೆಂದಿರಲು ಗೈದಿಹ |
ಬಗೆಯದನುಯೋಚಿಸಲು ಸಂತತ ಬಗೆಗೆಬಾರದಿದೆ ॥

ಮುಗುದಮಾನವ ! ನಿನ್ನೊಳಿಹುದದ |
ಮೊಗದೆಕಾಣ್ಬುದ ಕಶದೊಳಪಮಾ |
ನಗಳ ನಾನುವಕಾರ್ಯವೆಂದಿಗು ರಚಿಸಬಾರದಲೆ ॥೧೧॥

ವದನಕಡರಿಹ ಕೆಂಪನೀಕ್ಷಿಸ |
ಲೊದಗಿಹಾಭಯದಿಂ ವಿಕಾರವ |
ನದುವೆಗ್ಯೆದಿರೆಪರ್ಜಿಸುತೆ ಕಲ್ಮಷದ ಕಾರ್ಯಗಳ ॥

ಅದರಿನಿಂತವ ಮೆರೆವ ಹೃದಯದೊ |
ಳದುಬುತದ ಬಯವಿರ್ಪಕತದಿಂ |
ಬುದ್ಧರಮತದಿಂದದನುವರ್ಜಿಸೆ ಲೋಕಸಮ್ಮತವು ॥೧೨॥

ಮೆರೆವ ಶೈಯಾಸನದೆ ನಿದ್ರಿಸು |
ತಿರಲು ಸುಖದುಃಖಗಳ ಭಾವವ |
ಧರದೊಳಾತ್ಮಗೆಸೂಚಿಸುವುದದು ಪೂರ್ವಭಾವಿಯೊಳು ||

ಅರಿಮೆಯಿಂ ಯೋಚಿಸುತಲಾಗಳ |
ಗಿರದೆ ಮನ್ನಣೆಯಿಪಾವುದೊಳ್ಳಿತು |
ಗಿರಿಧರನಮತದಂತೆಯಾದುದು ಮೆಂದುಭಾವಿವುದು ||೧೩||

ಮುಂದಣದ ಫಲವರಿಯಲಾರೆಯೊ |
ಪಿಂದೆಗೈದಾವಿವಿಧ ಸುಕೃತಗ |
ಳಿಂದ ಮಾನವಜನ್ಮವೈದಿಹೆ ವೃದ್ಧಿಗೈತರುವ ||

ಕಂದರಿಗೆ ಸುಜ್ಞಾನದೋಧೆಗ |
ಳಿಂದದಿಂ ಬೋಧಿಸುತೆಭಕ್ತರ |
ವೃಂದವನು ಸೇವಿಸುವಕಾರ್ಯದೆ ಧನ್ಯನಾಗುವುದು ||೧೪||

ವಾಡಿಕೆಯಾಗಿ ನನ್ನು ಜಾತಿಯೊಳಗೆ ಪ್ರತಿಯೊಬ್ಬನೂ ಬಂದಕ್ಕಿಂತ ಹೆಚ್ಚು ಮದುವೆ ಮಾಡಿಕೊಳ್ಳುತ್ತಿರುವುದು, ನೀನು ಬಂಜೆಗನಾಗಿರುವುದನ್ನು ಕಂಡು ಜನರು ಆಶ್ಚರ್ಯಗೊಂಡು ನನ್ನನ್ನು ಕೇಳುವುದು ಅನ್ಯಾಯವೇ? ಪ್ರತಿಯೊಂದು ಮನೆಯಲ್ಲಿಯೂ ಬರೆಯದ ಹೆಣ್ಣುಮಕ್ಕಳು ಇರುವುದರಿಂದ ಅವರಿಗೆ ಯೋಗ್ಯರಾದ ಗಂಡಂದಿರನ್ನು ಹುಡುಕುವುದು ಹಿರಿಯರ ಕರ್ತವ್ಯವಲ್ಲವೇ ? ಇನ್ನೊಂದೆರಡು ವರ್ಷಗಳಾದ ಬಳಿಕ ನೀನಾದರೂ ಈ ತರದ ಶೋಧನೆಮಾಡಲಾರಂಭಿಸುವಿ,

ಅಯ್ಯಾಸ—ಹೌದು ; ನನ್ನ ಪುಟ್ಟನೂರಳು ದೊಡ್ಡವಳಾದಳು. ಆಕೆಯ ಬುದ್ಧಿ ಬಹಳ ಚುರುಕು. ಆಕೆಯ ಗ್ರಹಣಶಕ್ತಿಯೂ ಮೇಲ್ಬುದ್ಧಿಯೂ ವಿಚಾರಸರಣಿಯೂ ಅಸಾಮಾನ್ಯವಾಗಿರುತ್ತವೆ. ಜೀತ್ರಲೇಖನದಲ್ಲಿಯೂ ಕಸೂತಿಯಲ್ಲಿಯೂ ಅಡಿಗೆಯಲ್ಲಿಯೂ ಕವಿತ್ವರಚನೆಯಲ್ಲಿಯೂ ವಿಷಯ ಪ್ರತಿಪಾದನದಲ್ಲಿಯೂ ಆಕೆಯ ಬುದ್ಧಿಯು ಅದ್ವಿತೀಯವಾಗಿರುತ್ತದೆ. ಪಾಪ ! ಆಕೆಯ ತಾಯಿಯು ಜೀವಂತಿದ್ದರೆ ಆಕೆಯನ್ನು ನೋಡಿ ಎಷ್ಟು ಹಿಗ್ಗುತ್ತಿದ್ದಳೋ ದೇವರೇ ಬಲ್ಲ ! ಆಕೆ ಈಗ ಜೀವಂತಿದ್ದರೆ ನನ್ನ ಸಂಸಾರ ಸುಖಕ್ಕೆ ಪಾರವೇ ಇದ್ದಿಲ್ಲ !

ಗೆಳೆಯ—ನಿನ್ನನ್ನು ನೋಡಿ ನಾನು ಕನಿಕರಪಡುತ್ತೇನೆ. ದುರ ದೃಷ್ಟದಿಂದ ನಿನ್ನ ಹೆಂಡತಿಯು ಹರೆಯದಲ್ಲಿ ಮಡಿದಳು. ಸಾವು ಬದುಕು ದೈವಾಧೀನವಾದವು. ಅವುಗಳ ವಿಷಯದಲ್ಲಿ ನೀನು ಏನೂ ಮಾಡಲಾರೆ. ನಿನ್ನ ಕಯ್ಯಲ್ಲೇನೂ ಇಲ್ಲ. ದೇವರ ಮುನಿಸನ್ನು ತಡೆಯಲಿಕ್ಕೆ ಮನುಷ್ಯನಲ್ಲಿ ಸಾಮರ್ಥ್ಯವಿಲ್ಲ. ಆದರೆ ಮನುಷ್ಯನು ಮಾಡತಕ್ಕುದನ್ನು ನೀನು ಮಾಡದಿರುವುದಕ್ಕೆ ನಾನು ಬಹುಪರಿಯಿಂದ ಹಂಬಲಿಸುತ್ತೇನೆ.

ಅ—ಅದೇನು ? ನಾನು ಮಾಡತಕ್ಕುದನ್ನು ಏನು ಮಾಡಲಿಲ್ಲ ? ನನ್ನ ಮುದ್ದು ಮಗಳ ಜೋಕೆಜತನದ ಬಗ್ಗೆ ನಾನು ಪಟ್ಟ ಕಷ್ಟವನ್ನು ಬಣ್ಣಿಸಲಳವಲ್ಲ. ಆ ಕೂಸನ್ನು ಜೋಕೆಮಾಡಲಿಕ್ಕೆ ತನಗೆ ಕೂಡ ಜೀಕೆಂದು ಕಂದಹಾರದ ವ್ಯಾಪಾರಿಯ ಹೆಂಡತಿಯು ಅಂಗಲಾಜಿ ಬೇಡಿಕೊಂಡಳು. ಅದಕ್ಕೆ ನಾನು ಒಪ್ಪದೆ ನನ್ನ ಹೆಂಡತಿಗೆ ಮಾತು ಕೊಟ್ಟಂತೆ ನಾನೇ ಆ ಹೊರೆಯನ್ನು ಹೊತ್ತೆನು. ಳೆದ ಗಂ ವರುಷ ಅನ್ಯರಿಬೆಯು

ಪರವೆಯಿಲ್ಲದೆ ಹಗಲಿರುಳು ನನ್ನ ಮುದ್ದು ಮಗಳನ್ನು ಜೋಪಾನಮಾಡಿದೆನು. ಆಕೆಯು ನನ್ನ ಪ್ರಾಣಕ್ಕಿಂತ ಹೆಚ್ಚೆಂದು ಈಗಲಾದರೂ ತಿಳಿಯುತ್ತೇನೆ. ವಸ್ತುಸ್ಥಿತಿಯು ಹೀಗಿದ್ದ ನಾನು ಕರ್ತವ್ಯಪರಾಙ್ಮುಖನೆಂದು ಹೇಳಿದ್ದನ್ನು ಕೇಳಿ ನಾನು ಬಹಳ ನೊಂದುಕೊಂಡೆನು.

ಗೆಳೆಯ—ಅಯ್ಯಾಸ ಜೀವ! ನೀನು ನಿನ್ನ ಮಗಳಿಗೆ ಮಾಡಲಿಲ್ಲೆಂದೆನೇ? ಎಂದೂ ಇಲ್ಲ. ನೀನು ಮಗಳಿಗೆ ಪರಿಚರಿಯಿಂದ ಮಾಡುವುದನ್ನು ಕಣ್ಣಾರೆ ಕಂಡು ಹಾಗೆಂದಾದರೂ ಅನ್ನಬಹುದೇ? ಸರ್ವಥಾ ಇಲ್ಲ. ನೀನು ನಿನ್ನ ಸಂಬಂಧದಿಂದಲಿ ಕರ್ತವ್ಯಮಾಡಲಿಲ್ಲೆಂಬುದೇ ನನ್ನ ಅಭಿಪ್ರಾಯವು. ನಿನ್ನ ಕರ್ತವ್ಯವನ್ನು ನೀನು ಮಾಡಿದ್ದರೆ ನಿನ್ನ ಸಂಸಾರವು ಇದಕ್ಕೂ ಹೆಚ್ಚು ಸುಖಕರವಾಗುತ್ತಿತ್ತೆಂದು ನನ್ನ ನಂಬಿಕೆ.

ಅ—ನಾನಾವ ಕರ್ತವ್ಯ ಮಾಡಿಲ್ಲ? ಅದನ್ನಾದರೂ ಹೇಳು?

ಗೆಳೆ—ನೀನು ೫-೬ ವರ್ಷಗಳ ಹಿಂದೆ ಎನೆಯ ಮದುವೆ ಮಾಡಿಕೊಳ್ಳಬೇಕಾಗಿತ್ತೆಂದು ನನ್ನ ಅಭಿಪ್ರಾಯವು. ಹಾಗೆ ಮಾಡಿದ್ದರೆ ನೀನು ನಿನ್ನ ಕರ್ತವ್ಯ ಮಾಡಿದಂತಾಗುತ್ತಿತ್ತು. ಹಾಗೆ ಮಾಡದಿದ್ದುದೇ ನಿನ್ನ ಕರ್ತವ್ಯಪರಾಙ್ಮುಖತೆ.

ಅ—ನನ್ನ ಹೆಂಡತಿಯು ಸಾಯುವಾಗ ಈ ಕೂಸನ್ನು ಜೋಕೆ ಮಾಡಬೇಕೆಂದು ಮಾತು ತೆಗೆದುಕೊಂಡಿದ್ದಳು. ನಾನು ಎನೆಯ ಮದುವೆಯನ್ನು ನೀನು ಹೇಳಿದಂತೆ ಮಾಡಿಕೊಂಡಿದ್ದರೆ ಆ ಹೊಸ ಸಂಸಾರದಲ್ಲಿ ತೊಡಗಿ, ನನ್ನ ಮುದ್ದುಮಗಳ ಬಗ್ಗೆ ನನ್ನ ಲಕ್ಷ್ಯವು ಕಡಮೆಯಾಗ ಬಹುದಾಗಿತ್ತು. ಹಾಗಾಗಿದ್ದರೆ ನಾನು ವಚನಭ್ರಷ್ಟನಾಗುತ್ತಿದ್ದೆನು!

ಗೆಳೆಯ—ನೀನು ಮದುವೆ ಮಾಡಿಕೊಳ್ಳದ್ದರಿಂದ ಕೆಲಮಟ್ಟಿಗೆ ವಚನಭ್ರಷ್ಟನಾದಿ ಎಂದು ನನಗೆ ತೋರುತ್ತದೆ.

ಅ—ಅದು ಹೇಗೆ? ನಿನ್ನಭಿಪ್ರಾಯವು ತೀರ ವಿಪರೀತವಾಗಿ ತೋರುತ್ತದೆ!

ಗೆಳೆಯ—ಅಯ್ಯಾಸ ಜೀವ ನಿಟ್ಟಾಗ ಬೇಡ, ಶಾಂತಮನಸ್ಸಿನಿಂದ ವಿಚಾರಮಾಡು. ನಾನು ಹೇಳುವುದನ್ನು ಸಮಾಧಾನ ಚಿತ್ತದಿಂದ

ಕೇಳು. ನಿನ್ನ ಮಾತಿನಲ್ಲಿ ಏನಾದರೂ ತಪ್ಪಿದ್ದರೆ ಹೇಳು. ಹೆಣ್ಣು ಹುಡುಗಿಯರ ಜೋಪಾನವನ್ನು ಹೆಂಗಸರು ಮಾಡಿದಷ್ಟು ಗಂಡಸರು ಮಾಡಲಾರರು ಅವರಿಗೆ ಉಣಿಸುವುದು, ತಿನಿಸುವುದು, ಉಡಿಸುವುದು, ತೊಡಿಸುವುದು, ಅಲಂಕರಿಸುವುದು, ಕಲಿಸುವುದು, ರೀತಿ ನಡತೆ ತಿಳಿಸುವುದು, ಎರೆಯುವುದು ಎಣ್ಣೆ ಹೂಸುವುದು, ಬೇನೆ ಬೇಸರಿಕೆಯಲ್ಲಿ ಆರೈಕೆ ಮಾಡುವುದು ಇವುಗಳನ್ನೆಲ್ಲ ಹೆಂಗಸರು ಎಷ್ಟು ಚೆನ್ನಾಗಿ ಮಾಡಬಲ್ಲರು. ಆದ್ದರಿಂದ ನೀನು ದೊಡ್ಡ ಮನೆತನದ ಬಳ್ಳಿಯ ಹುಡುಗಿಯನ್ನು ಆರಿಸಿ ಮದುವೆಮಾಡಿಕೊಂಡಿದ್ದರೆ, ನೀನು ನಿನ್ನ ಸಕ್ಕ ಹೆಂಡತಿಯ ಮಾತನ್ನು ಸರಿಯಾಗಿ ನಡಿಸಿದಂತೆ ಆಗುತ್ತಿತ್ತು. ನಾನು ಹೇಳುವುದು ಸರಿಯೋ ತಪ್ಪೋ ನೀನೇ ಹೇಳು.

ಈ ಮಾತನ್ನು ಕೇಳಿ ಅಯ್ಯಾಸನು ಬೆರಗಾದನು. ಈ ತರದ ಎಣಿಕೆಗಳು ಅವನ ಕನಸುಮನಸಿನಲ್ಲಿ ಬಂದಿದ್ದಿಲ್ಲ. ಅವನು ಬೆಚ್ಚಿ ಬಿದ್ದು ಸುಮ್ಮನೆ ಕುಳಿತನು. ಅವನ ಬಾಯಿಂದ ಮಾತೇ ಹೊರಡಲಿಲ್ಲ. ಕೆಲಹೊತ್ತಿನ ಮೇಲೆ ಅವನು ಎಚ್ಚರಾಗಿ ನಾನು ನನ್ನ ಮುದ್ದುಮಗಳಿಗೆ ಮಾಡಬೇಕಾದ್ದನ್ನೆಲ್ಲ ಮಾಡಿರುತ್ತೇನೆ. ಹೆಂಗಸರು ಮಾಡತಕ್ಕ ಕೆಲಸವನ್ನೆಲ್ಲ ಹೆಣ್ಣಾಳಿನಿಂದ ಮಾಡಿಸಿರುತ್ತೇನೆ ನನ್ನ ಮಗಳನ್ನು ಬೆಳಸಲಿಕ್ಕೆ ದುಡ್ಡನ್ನು ನೀರಿನಂತೆ ವೆಚ್ಚಮಾಡಿರುತ್ತೇನೆ" ಎಂದುಸುರಿದನು.

ಗೆ—ಗೆಳೆಯನೇ ಹಂಬಲಿಸಬೇಡ. ನೀನು ಕರ್ತವ್ಯಮಾಡಲಿಲ್ಲೆಂದು ನಾನೆಂದೂ ನೆನಿಸಲಿಲ್ಲ. ಅದನ್ನು ಸರಿಯಾದ ಕ್ರಮದಲ್ಲಿ ಮಾಡಲಿಲ್ಲೆಂಬುದೇ ನನ್ನ ಆಕ್ಷೇಪವು. ಅದು ನಿನ್ನ ಅಂತಃಕರಣದ ತಪ್ಪಲ್ಲ; ನಿನ್ನ ತಿಳವಳಿಕೆಯ ತಪ್ಪು ಮಾತ್ರ ಆಗಿರುತ್ತದೆ. ಅಜ್ಞಾತದೋಷವು ಅಪರಾಧವಲ್ಲೆಂದು ಶಾಸ್ತ್ರಗಳು ಸಾರುತ್ತವೆ. ತಿಳದು ಮಾಡಿದ ತಪ್ಪುಗಳಿಗೆ ಮಾತ್ರ ದೋಷವಿರುತ್ತದೆ. ಈಗ ನಾನು ನಿನಗೆ ತಿಳಿಹೇಳಿರುತ್ತೇನೆ. ಇನ್ನು ತಿಳದೂ ತಿಳದೂ ನೀನು ನಿನ್ನ ಕರ್ತವ್ಯವನ್ನು ಮಾಡದಿದ್ದರೆ ನಿನಗೆ ಪಾಪ ತಟ್ಟುವುದು. ಆದ್ದರಿಂದ ನಾನು ಹೇಳಿದಂತೆ ಬೇಗನೆ ಮದುವೆ ಮಾಡಿಕೊ. ಅಂದರೆ ನಿನ್ನ ಸಂಸಾರವು ಹೆಚ್ಚು ಸುಖಕರವಾಗುವುದಲ್ಲದೆ ನಿನ್ನ ಕರ್ತವ್ಯವು ಸರಿಯಾಗಿ ನಡೆಯುವುದು.

ಅಯ್ಯಾಸ—ನನಗೆ ನನ್ನ ಸುಖಕ್ಕಿಂತ ನನ್ನ ಕರ್ತವ್ಯವೇ ಮೇಲಾದುದು. ಆ ಕರ್ತವ್ಯವನ್ನು ದಕ್ಷತೆಯಿಂದ ಮಾಡಬೇಕೆಂತಲೇ ಮದುವೆಮಾಡಿಕೊಳ್ಳುವುದನ್ನು ಬಿಟ್ಟುಬಿಟ್ಟೆನೆ. ನನ್ನ ಎನೆಯ ಹೆಂಡತಿಯು ಶರೀರಸಂಬಂಧದಿಂದ ತಾಯಿಯಾದರೂ ನೆಚ್ಚರದಿಂದ ತಾಯಿಯಾಗಲಾರಳು. ಮಲೆತಾಯಿಯು ಮಲೆಮಕ್ಕಳ ವೈರಿಯೆಂದು ಜನರೊಳಗೆ ಪ್ರಸಿದ್ಧಿಯಾಗಿಂಟು. ಆಕೆಯಲ್ಲಿ ಆ ಮಕ್ಕಳ ಬಗ್ಗೆ ಹೊಟ್ಟೆಕಿಚ್ಚು ಹುಟ್ಟುವ ಸಂಭವವಿದ್ದಷ್ಟು ಅಂತಃಕರಣ ಹುಟ್ಟುವ ಸಂಭವವಿಲ್ಲ. ನನ್ನ ಎನೆಯ ಹೆಂಡತಿಯು ನನ್ನ ಮುದ್ದು ಮಗಳನ್ನು ಗೋಳಾಡಿಸತೊಡಗಿದರೆ ನನ್ನ ನೋವಿಗೆ ತಡೆಯೇ ಇಲ್ಲ. ನಾನು ಆಕೆಯ ಬಲೆಗೆ ಸಿಕ್ಕರಂತೂ ತೀರ ಕರ್ತವ್ಯವಿಮುಖನಾಗುವೆನು. ಆದ್ದರಿಂದ ನನ್ನ ಮಗಳು ಮದುವೆಮಾಡಿಕೊಂಡು ಗಂಡನ ಮನೆಗೆ ಹೋಗುವವರೆಗೆ ನಾನು ಎನೆಯವಳನ್ನು ಮದುವೆಯಾಗಲಾರೆನು.

ಗೆ—ಅಯ್ಯಾಸಬೇಗ, ನೀನು ಹೇಳುವ ಮಾತಿನಲ್ಲಿ ತುಸುತ ಥ್ಯಾಂಕವುಂಟು. ಆದರೆ ಶಾಂತವೃತ್ತಿಯಿಂದ ವಿಚಾರಮಾಡು. ನಿನ್ನ ಸ್ಥಿತಿಗತಿಯಲ್ಲಿದ್ದ ಮನೆತನಗಳೊಳಗೆ ಎಷ್ಟೋ ಮಂದಿ ಮಲತಾಯಿಗಳೂ ಮಲಮಕ್ಕಳೂ ಇರುತ್ತಾರೆ ಅವರೊಳಗೆ ಬಡಿದಾಡದವರು ಹೆಚ್ಚೋ ಪ್ರೀತಿಯಿಂದಿರುವವರು ಹೆಚ್ಚೋ ?

ಅ—ನನ್ನ ಗೊತ್ತಿನವರೊಳಗೆ ಪ್ರೀತಿಯಿಂದಿರುವವರೇ ಹೆಚ್ಚಿರುತ್ತಾರೆ; ಆದರೆ ನನ್ನ ಹೊಸಹೆಂಡತಿಯು ಹಾಗಿರುವುಳೆಂಬ ಬಗ್ಗೆ ಪ್ರಮಾಣವೇನು ? ಆಕೆಯು ಕೆಟ್ಟವಳಾಗಿ ನನ್ನ ಮಗಳನ್ನು ದ್ವೇಷಿಸಬಹುದು.

ಗೆಳೆಯ—ಅಯ್ಯಾಸಬೇಗ, ಈ ಪ್ರಪಂಚದಲ್ಲಿ ನಿಶ್ಚಯಾತ್ಮಕವಾದ್ದು ಯಾವುದೂ ಇಲ್ಲ. ನಮ್ಮ ಎಲ್ಲ ವ್ಯವಹಾರಗಳೂ ಅತಿಸಂಭವ (probability) ದ ವಿಚಾರವನ್ನು ಅವಲಂಬಿಸಿ ಅನುಭವದಿಂದ ಇದು ಬಹುಃ ಹೀಗಾಗಬಹುದು ಅದು ಬಹುಃ ಹಾಗಾಗಬಹುದೆಂಬ ಎಣಿಕೆಯಿಂದಲೇ ನಮ್ಮ ಎಲ್ಲ ವ್ಯವಹಾರವೂ ನಡೆಯುತ್ತದೆ. ಸಾಧಾರಣವಾಗಿ ತಾಯಿಯ ಗುಣಗಳು ಮಗಳಲ್ಲಿರುತ್ತವೆಂದು ನಾವು ನಂಬಿ ನಡೆ

(ಸಶೇಷ)

ಓಂ

ಸರಸ್ವತಿ

ಸಂಪುಟ ೫ } ಕ್ರೋಧನ ವರ್ಷ - ಭಾದ್ರಪದ ಮಾಸ { ಸಂಚಿಕೆ ೫

ಭೂದೇವೀಸ್ತವ

(ಲೇಖಕ:—ಶ್ರೀಯುತ ಪಿ ಎಲ್. ಫನಿನ್ ಚಕ್ರತ್ಯ್ಯ, ಮಂಗಳೂರು.)

ವಂದೇ ವಸುಧರಂ ಎಂಬಂತೆ.

ರಾಗ—ದೇಶ, ತಾಳ—ತ್ರಿವಟ.

ದೇವಿ ಮಂಗಲಂ ॥

ಜಗತಿ । ಸುಗತಿ । ಭಗವತಿ ಭಾರತಿ ।

ಧಾತ್ರಿ । ಭಾಸ್ವತಿ ॥ ಮಂಗಲಂ ॥ ದೇವಿ ಮಂಗಲಂ ॥

ಸಸ್ಯಪರ್ಣ । ಸಮುದಯರಂಜಿನಿ ।

ಪುಷ್ಪಸಲಿಲ । ಫಲತರುಭೂಷಿಣಿ ।

ಸುವಾಸಿನಿ । ಧವಳಕರೀರಿಣಿ ।

ಧರಣಿ । ಜನನಿ ॥ ಮಂಗಲಂ ॥ ದೇವಿ ಮಂಗಲಂ ॥

ಬ್ರಹ್ಮಪುತ್ರಸಿಂಧು ವಂದಾಕಿಸೀಸುತೀರ್ಥೇ ।

ಕೈಲಾಸವಿಂಧ್ಯಾಚಲೇಂದ್ರಾದಿಸ್ವಭೂತೇ ।

ಸಕಲಸುಖಾ । ಸ್ಪದೇ ವರದೇ । ವಿವಿಧಫಲಪ್ರದೇ ।

ಪ್ರಸನ್ನದೇವತೇ । ಶಶಿರವಿರಾಜಿತೇ ॥ಮಂಗಲಂ॥ ದೇವಿ ಮಂಗಲಂ॥

ಜಯಶೀಲೇ । ನೃಪಲೋಲೇ ॥ ಜಯಜಲಧಿ ದುಕೂಲೇ ॥

ಸ್ವರ್ಗಾಪವರ್ಗದಾತೇ ।

ಸರ್ವಪ್ರಾಣಿವರ್ಗಾಧಾರೇ । ಅಹಿತಕತಧಾರೇ ।

ಚತುರ್ದಶಭುವನಾಧಿನಾಯಿಕೇ ನಾಯಿಕೇ ।

ಆದಿಯಜ್ಞವರಾಹ ಹೃದಯವೋದಿನಿ । ಮೇದಿನಿ ।

ಕರುಣಿತಶರಣಶ್ರೇಣಿ । ಕ್ಷೋಣಿ ।

ರತ್ನಗರ್ಭಿಣಿ ॥ ಪ್ರಣಾಮಿತ್ವಾಂ ॥

ಸುಕಳಾಂ । ಸಕಳಾಂ । ಸುಬಲಾಂ ॥ಮಂಗಲಂ॥ ದೇವಿ ಮಂಗಲಂ॥

ಅಜೇಯೇ ವಿಜಯೇ । ವಾಙ್ಮಯಿ ಜೆನ್ಮಯಿ ।

ಅವನಿ । ಜನನಿ ॥ ಮಂಗಲಂ ॥ ದೇವಿ ಮಂಗಲಂ ॥

ಹಿಂದೂ ಸ್ತ್ರೀ ರತ್ನಗಳು.

ನಮ್ಮೀ ಆರ್ಯಾವರ್ತದಲ್ಲಿದ್ದ ಪ್ರಾಚೀನ ಮಹಿಳೆಯರ ವಿಷಯವಾಗಿ ನಾವು ತಿಳಿದುಕೊಳ್ಳಬೇಕಾದ ಮುಖ್ಯ ವಿಷಯಗಳೆಷ್ಟೋ ಇವೆ. ಅವರು ಹೇಗೆ ಜೀವಿಸುತ್ತಿದ್ದರು, ತಮ್ಮ ಕರ್ತವ್ಯಗಳನ್ನು ಹೇಗೆ ನಡೆಸುತ್ತಿದ್ದರು, ಅವರ ಮುಖ್ಯವಾದ ಧ್ಯೇಯಗಳಾವುವು, ಪುರುಷರು ಸ್ತ್ರೀಯರ ವಿಷಯದಲ್ಲಿ ಹೇಗೆ ನಡೆದುಕೊಳ್ಳುತ್ತಿದ್ದರು, ಸ್ತ್ರೀಯರಿಂದ ಕುಟುಂಬ-ಗ್ರಾಮ-ದೇಶ-ನಗರ ಮೊದಲಾದವುಗಳು ಹೇಗೆ ಪ್ರಯೋಜನ ಹೊಂದಿ ಅಭಿವೃದ್ಧಿಯಾಗುತಿದ್ದವು, ಇತ್ಯಾದಿ ವಿಷಯಗಳನ್ನೂ ಈಗ ನಾವಿರುವ ಸ್ಥಿತಿಯಲ್ಲಿದ್ದರೋ ಅಥವಾ ಇನ್ನೂ ಅಭಿವೃದ್ಧಿಸ್ಥಿತಿಯಲ್ಲಿಯೇ ಇದ್ದರೋ ಎನ್ನುವ ವಿಷಯವಾಗಿ ನಾವು ಸ್ವಲ್ಪ ಯೋಚನೆ ಮಾಡಬೇಕಾಗಿರುವುದು ನಾವು ಯಾವ ಅಲ್ಪ ವಿಷಯಗಳನ್ನೂ ಅಲಕ್ಷ್ಯವಾಗಿ ಭಾವಿಸಬಾರದು. ನಾವು ಕಲಿಯುತಕ್ಕ ವಿಷಯಗಳೆಷ್ಟೋ ಇವೆ. ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ "ವಿದ್ಯಾವಂತರು, ಅವಿದ್ಯಾವಂತರು" ಎಂದೆರಡು

ಪಂಗಡದವರಿರುವರು. ವಿದ್ಯಾವಂತರಿಗಿಂತ ಅವಿದ್ಯಾವಂತರೇ ಹೆಚ್ಚು ಸಂಖ್ಯೆಯುಳ್ಳವರಾಗಿರುವರು. ಅದರಲ್ಲೂ ನಮ್ಮಾ ಭರತಖಂಡದಲ್ಲಿ ಎರಡನೆಯ ವರ್ಗದವರೇ ಹೆಚ್ಚಾಗಿರುವರು. ವಿದ್ಯಾವಂತರ ಸಂಖ್ಯೆಯನ್ನು ತೆಗೆದುಕೊಂಡರೂ ಕೂಡ ಅವರಲ್ಲೂ ಸಂಪೂರ್ಣ ವಿದ್ಯಾವಂತರು ತೀರ ಕಡಮೆ. ಆ ಅಲ್ಪ ಸಂಖ್ಯೆಯಲ್ಲಿ ಸಂಪೂರ್ಣ ವಿದ್ಯಾವಂತರು ಮತ್ತೂ ಕಡಮೆ. ಎಷ್ಟೇ ಕಲಿತವರೂ ಕೂಡ ಇನ್ನೂ ಹೆಚ್ಚಾಗಿ ಕಲಿಯತಕ್ಕವರೂ ಎಷ್ಟೋ ಜನರಿರುವರು. ಆದುದರಿಂದಲೇ ನಮ್ಮ ಹಿರಿಯರ "ಕಲಿತಿರುವುದು ಕೈ ಹಿಡಿಯಷ್ಟು, ಇನ್ನೂ ಕಲಿಯಬೇಕಾದದ್ದು ಸಮುದ್ರದಷ್ಟು" ಎಂದು ಹೇಳಿರುವರು. ಕಲಾಭಿಮಾನಿಯಾದ ಭಾರತಿಯೇ ಇನ್ನೂ ಕಲಿಯುತ್ತಿರುವಳೆಂದರೆ ಕೇವಲ ಮಾನವರಾದ ನಮ್ಮ ಪಾಡೇನು. ಅನೇಕರು "ರಾಮಾಯಣ, ಮಹಾಭಾರತಾದಿ ಗ್ರಂಥಗಳನ್ನೋದುವುದರಿಂದೇನು ಪ್ರಯೋಜನ? ಈ ಹಳೇ ಕಂತೆ ಪುರಾಣಗಳನ್ನೋದುವುದರಿಂದ ಹೊತ್ತು ಹಾಳೇ ಹೊರತು ಪ್ರಯೋಜನವೇನೂ ಇಲ್ಲ" ಎಂತಲೂ, ಮತ್ತೆ ಕೆಲವರು "ನಮ್ಮ ಹಿರಿಯರಲ್ಲನೇಕರಿಗೆ ಮಾಡಲು ಕೆಲಸವೇನೂ ಇಲ್ಲದ್ದರಿಂದ ಹೊತ್ತು ಕಳೆಯುವುದಕ್ಕಾಗಿ ರಾಮಾಯಣಾದಿ ಗ್ರಂಥಗಳನ್ನು ಬರೆದೂ ಓದಿಯೂ ಕಾಲ ಕಳೆಯುತ್ತಿದ್ದರು. ಅವರ ಊಟಕ್ಕೇನೂ ಕಷ್ಟವಾಗಿರಲಿಲ್ಲ. ನಮಗೂ ಹಾಗೆಯೇ ಇದ್ದರೆ ಎಷ್ಟೋಮಾಡಬಹುದು. ಬೆಳಗಾದರೆ ಆ ಚಿಂತೆ-ಈ ಚಿಂತೆ ತೊಂಭತ್ತೊಂಟು ತಾಪತ್ರಯಗಳಿವೆಯಲ್ಲ," ಎನ್ನುವರು. ಹೀಗೆ ಇವರುಗಳು ಹೇಳುವುದು ನ್ಯಾಯವೋ ಅನ್ಯಾಯವೋ ಎನ್ನುವ ವಿಷಯವನ್ನಿಲ್ಲಿ ವಿವರಿಸುವುದು ಅನಾವಶ್ಯವಾದುದರಿಂದ ಅದನ್ನಿಷ್ಟಕ್ಕೆ ನಿಲ್ಲಿಸೋಣ.

ಈ ಭರತಖಂಡವು ಮತ್ಯಾವದೇಶವೂ ಪಡೆಯದ ದೇವದತ್ತವಾದುದೊಂದು ಮಹಿಮೆಯನ್ನು ಹೊಂದಿದೆ. ಕೆಲವು ದಿನಗಳ ಕೆಳಗೆ ಪಾಶ್ಚಾತ್ಯ ಶ್ರೇಷ್ಠನೊಬ್ಬನು "ಭಕ್ತಿಯ ಶ್ರೇಷ್ಠತ್ವವನ್ನೂ, ಮತ ವಿಷಯವನ್ನೂ, ಆತ್ಮಶಕ್ತಿ ವಿಚಾರಣೆಯನ್ನೂ ಪ್ರಪಂಚವು ಅರಿಯಬೇಕಾಗಿದ್ದರೆ ಕಲಿಯಬೇಕಾಗಿದ್ದರೆ ಹಿಂದೂಸ್ಥಾನವೇ ನಮಗೆ ಕಲಿಸಬೇಕು. ಈ ಸಹಾಯಕ್ಕೆ ಮತ್ಯಾವ ದೇಶವನ್ನೂ ಎದಿರುನೋಡುವುದಕ್ಕಾಗುವುದಿಲ್ಲ" ಎಂದು ಹೇಳಿರುವನು. ಇದು ಎಷ್ಟರ ಮಟ್ಟಿಗೆ ನಿಶ್ಚಯವೆನ್ನುವುದನ್ನು ಇಲ್ಲಿ ವಿವರಿಸಬೇಕಾಗಿಲ್ಲ. ಆತನು ಹಾಗೆ ಹೇಳುವುದಕ್ಕೂ ಇತರ ಪಾಶ್ಚಾತ್ಯ ವಿಜ್ಞಾನಿಗಳು ಮೇಲ್ಕಂಡ ವಿಷಯವನ್ನೊಪ್ಪಿಕೊಳ್ಳುವುದಕ್ಕೂ ಕಾರಣವೇನೆಂಬುದನ್ನು ನಾವಿಲ್ಲಿ ಯೋಚಿಸಬೇಕಾಗಿದೆ. ಇವಕ್ಕೆ ಮುಖ್ಯಕಾರಣವು ನಮ್ಮ ದೇಶದ ನಾಶವಾಗದ ಅವಿನಾಶವಾದ ಮೂರು ಗ್ರಂಥಗಳೇ. ಇಂತಹ ಸದ್ಗ್ರಂಥಗಳು ಮತ್ಯಾವ ದೇಶದಲ್ಲಿಯೂ ದೊರೆಯದು. ಎಷ್ಟೊಂದು ಹಣ ಖರ್ಚುಮಾಡಿದರೂ ಸಿಗಲಾರದು. ಅವು ಯಾವುವೆಂದರೆ? 1. ಶ್ರೀಮದ್ರಾಮಾಯಣ, 2. ಶ್ರೀಮನ್ಮಹಾಭಾರತ, 3. ಶ್ರೀಮದ್ಭಗವದ್ಗೀತೆ, ಇವು ಮೂರೂ ಅನಮ್ಯ

ನಿನ್ನೆ ಬರೆಯಲ್ಪಟ್ಟವುಗಳಲ್ಲ. ಎಷ್ಟೋ ವರ್ಷಗಳ ಹಿಂದೆ ಮಹರ್ಷಿಗಳಿಂದ ಬರೆಯಲ್ಪಟ್ಟವುಗಳು. ರಾಮಾಯಣವು ವಾಲ್ಮೀಕಿ ಮುನಿಯಿಂದ ಬರೆಯಲ್ಪಟ್ಟದ್ದು. ಮತ್ತೆರಡು ಗ್ರಂಥಗಳೂ ಶ್ರೀ ಕೃಷ್ಣಪರಮಾತ್ಮನ ಕಾಲದಲ್ಲಿ ಬರೆಯಲ್ಪಟ್ಟವುಗಳು. ಶ್ರೀ ರಾಮಕೃಷ್ಣಾದ್ಯವತಾರಗಳಂಟಾಗಿ ಎಷ್ಟೊಂದು ವರ್ಷಗಳಾದವು? ನಮಗೆ ಮೊದಲು ಈ ಭೂಲೋಕದಲ್ಲಿ ಜನ್ಮವೆತ್ತಿದ್ದ ಮಹಾಪುರುಷರೆಷ್ಟೋ ಜನ, ವಿದ್ಯಾವೈಖರಿಯಿಂದ ವಿರಾಜಿಸುತ್ತಿದ್ದವರೆಷ್ಟೋಜನ, ಆಶ್ಚರ್ಯಪಡತಕ್ಕಂಥಾ ಎಷ್ಟೋ ಮಹತ್ಕಾರ್ಯಗಳನ್ನು ಸ್ತ್ರೀಯರು ಮಾಡಿರುವರು. ಇಷ್ಟಾದರೂ ಇವರಲ್ಯಾರೂ ಮೇಲೆ ಹೇಳಿದ ಮೂರು ಗ್ರಂಥಗಳನ್ನು ನಾವು ಪೂರ್ತಿಯಾಗಿ ಕಲಿತಿವೆಂದು ಎದೆತಟ್ಟಿ ಹೇಳುವದಿಲ್ಲ. ಈಗಲೂ ವಿದ್ಯಾವಂತರಾದವರೆಷ್ಟೋ ಜನರಿರುವರು. ಶ್ರೀಮದ್ಭಗವದ್ಗೀತೆಗೆ ಶ್ರೀಮತಾಚಾರ್ಯರೂ ಭಾಷ್ಯಸೂತ್ರಗಳನ್ನು ರಚಿಸಿರುವರು. ಆಗ್ರಂಥಗಳನ್ನು ನಾವೆಷ್ಟು ಸಲ ಓದಿದರೂ ಅವುಗಳ ಅಂತರಂಗವನ್ನರಿಯಲು ಶಕ್ತರಾಗೆವು. ಓದುತ್ತಾ ಓದುತ್ತಾ ಒಂದೊಂದು ಸಲವೂ ಹೊಸ ಹೊಸ ಅರ್ಥವು ಕೂಗುವುದು. ನಾವು ಕಲಿಯುತಕ್ಕದ್ದೆಷ್ಟೋ ಇರುವುದು. ಗ್ರಂಥದಲ್ಲಿ ಎಂತಹ ಅತ್ಯುತ್ತಮ ವಿಷಯಗಳು ಅಡಕವಾಗಿರುವುದೆನ್ನುವುದನ್ನು ನಾವು ಮರೆಯುತ್ತೇವೆ. ಹಿಂದೂ ದೇಶದ ಅಭಿವೃದ್ಧಿಗೂ ನಾಗರೀಕತೆಗೂ ಮುಖ್ಯಾಧಾರವಾಗಿರತಕ್ಕವರು ಪುರುಷರೇ ಎಂದು ಹೇಳಲಾಗುವುದಿಲ್ಲ. ಎಷ್ಟೋ ಮಹಕ್ಕಾರ್ಯಗಳನ್ನು ಪುರುಷರು ಮಾಡಿದುದೆನ್ನುವುದನ್ನು ನಾವು ಒಪ್ಪಿಕೊಳ್ಳಬೇಕಾದರೂ ಸ್ತ್ರೀಯರೂ ಕೂಡ ಎಷ್ಟೋ ಸಾಮಸಾಧ್ಯವಿಲ್ಲದ ಕಾರ್ಯಗಳನ್ನು ಜರಿಸಿ ಕೀರ್ತಿಹೊಂದಿರುವರು. ಸ್ತ್ರೀಯರ ಆಶ್ಚರ್ಯ ಕಾರ್ಯಗಳು ತಮ್ಮ ಪಾತಿವ್ರತ್ಯ ರಕ್ಷಣೆಗಾಗಿ ಅವರು ತೋರ್ಪಡಿಸಿದ ಸಾಹಸವೂ, ಕರ್ತವ್ಯ ಪಾಲನೆಯೂ ಈ ಭಗತಖಂಡಕ್ಕೆ "ಪುಣ್ಯಭೂಮಿ" ಯೆಂಬ ಅನ್ವರ್ಥನಾಮವನ್ನುಂಟು ಮಾಡಿವೆ. ಸ್ತ್ರೀಯರ ಮಹಿಮೆಯನ್ನು ಕೊಂಡಾಡದ ಶಾಸ್ತ್ರವಾಗಲಿ ಗ್ರಂಥವಾಗಲಿ ಇಲ್ಲವೇ ಇಲ್ಲವೆಂದು ಹೇಳಬಹುದಾಗಿದೆ. ಹಿಂದೂ ರಮಣಿಯರು ಅತಿ ಪತಿವ್ರತೆಯರು, ಪಾತಿವ್ರತ್ಯವೇ ಅವರ ಮುಖ್ಯಾಭರಣ. ಪ್ರಾಣವು ಎಷ್ಟು ಮುಖ್ಯವಾದುದೆಂದೆಣಿಸುವೆನೋ ಅದಕ್ಕಿಂತಲೂ ಪಾತಿವ್ರತ್ಯವೇ ಹೆಚ್ಚಾದುದೆಂದು ಭಾವಿಸತಕ್ಕವರು, ಪಾತಿವ್ರತ್ಯದ ಪವಿತ್ರ ಮಹಿಮೆಯನ್ನು ಜಗತ್ತಿಗೆ ವಿಶದಪಡಿಸಿದವರು ಭಾರತರಮಣಿಯರೇ. ಪಾತಿವ್ರತ್ಯಕ್ಕೆ ಭಂಗ ಬರುವುದೆಂಬುದು ತಿಳಿದಕೂಡಲೇ ತಮ್ಮ ಪ್ರಾಣವನ್ನೇ ತ್ಯಜಿಸುವರು, ಐಶ್ವರ್ಯ, ಆಭರಣ, ಅಲಂಕಾರಾದಿಗಳೆಲ್ಲವೂ ಪಾತಿವ್ರತ್ಯಕ್ಕೂ ಪತಿಗೂ ಅನಂತರವೇ. ಪತಿಯೇ ದೇವರು, ಪತಿಯೇ ಪರದೈವ, ಆದುದರಿಂದ ನಮ್ಮ ದೇಶದಲ್ಲಿ ಜೀವಿಸಿದ್ದ ಸ್ತ್ರೀಯರ ಔನ್ನತ್ಯವನ್ನೂ ಅವರ ಚರಿತ್ರೆಯಿಂದ ನಾವು ಕಲಿಯುವೇಕಾದ ನೀತಿಗಳನ್ನೂ ಈ "ಸರಸ್ವತಿ" ಯಲ್ಲಿ ಆಗಾಗ್ಗೆ ಪ್ರಕಟಿಸಲಾಗುವುದು. ಹಿಂದೂ ಮಹಿಳೆಯರ ಗುರಿ ಏತೇಹಗಳನ್ನು ಇಂತಹುದೇ ಎಂದು ಎವರಿಸುವುಹಶಕ್ಯ

ವಾದುದರಿಂದ ಈ ಲೇಖನಕ್ಕೆ " ಹಿಂದೂ ಸ್ತ್ರೀ ರತ್ನಗಳು " ಎಂದೇ ಹೆಸರಿಡ ಲಾಯಿತು. ಮುಂದಿನ ಸಂಚಿಕೆಯಲ್ಲಿ " ಸೀತೆ " ಯ ಚರಿತ್ರೆಯನ್ನು ಸಂಕ್ಷೇಪ ವಾಗಿ ವಿವರಿಸಲಾಗುವುದು.

ಭಕ್ತಸುಮಾಂಜಲಿ.

(ಹಿಂದಿನ ಸಂಚಿಕೆಯಿಂದ ಮುಂದರಿಸಿದ್ದು)

॥ ಏ ॥

ಏ! ಸುಳ್ಳೇ!! ಮಾನವರಲ್ಲಿ ಸೇರಿಕೊಂಡು ನೀನು ಅಧಿಪತ್ಯವಾಡಿ ಅವರನ್ನು ನಿನ್ನ ವೈಪರೀತ್ಯಕರವಾದ ಮಾತುಗಳಿಗೆ ಬೆರಗಾಗುವಂತೆ ವಶವಾಡಿ ಕೊಳ್ಳಲು ಅನುವಾಗಿ ಅವರನ್ನು ಸತ್ಯಮಾರ್ಗದಲ್ಲಿಡದೆ ಪಾಪರೀತಿಯಿಂದ ಪತೀತ ರಾಗುವಂತೆ ಮಾಡುವೆ? ನಿನ್ನ ಮಹಿಮೆ ಎಂತುಂಟೋ? ಆಹಾ! ನಿನ್ನನ್ನು ಹೊಂದುವಾತನಿಗೆ ಯಾವ ಸುಖವೂ ಇಲ್ಲ! ಕನ್ನನ್ನು ತಾನೇ ಹಾಳುಮಾಡಿ ಕೊಳ್ಳುವನಲ್ಲವೆ? ನೀನು ಸರ್ವರ ನಾಲಿಗೆಯಲ್ಲಿಯೂ, ಮನಸ್ಸಿನಲ್ಲಿಯೂ ಇದ್ದು ಗಂಭೀರವಾದ ನಿರ್ಮಲದಂತಿರುವ ಮನೋಸಾಗರವನ್ನು ಕಲಕಿ, ಕೆಸರಾಗುವಂತೆ ಮಾಡಿ ಹೀ! ಹೀ! ಎಂದು ನಗುತ್ತಾ ನಲಿಯುತ್ತಿರುವೆಯಲ್ಲವೆ? ನಿನ್ನಿಂದಲೇ ಅಲ್ಲವೆ ಅನೇಕರು ತಮ್ಮ ಅಪೃತ್ವವನ್ನು ' ಖುಲಾಯಿಸಿ ' ಕೊಂಡು ಈ ನಶ್ವರ ವಾದ ಪ್ರಪಂಚದಲ್ಲಿ ಬಾಳುತ್ತಿರುವರು?

ಅನೇಕಾನೇಕ ದುರ್ಗುಣಗಳು ಆವರಿಸಿದರೂ, ಉಪಾಯದಿಂದ ಗೆದ್ದು ನೀನೇ ಧ್ವಜಪತಾಕೆಯನ್ನು ಎತ್ತಿ ಜಯಭೇರಿಯನ್ನು ಹೊಡೆಯುವೆ? ನಿನ್ನ ಕಲ್ಯಾಣ ಗುಣ ಚರಿತ್ರೆಯನ್ನು ಹೇಳಲಾರಂಭಿಸಿದರೆ ವರ್ಷಗಳೇ ಕಳೆದು ಯುಗವೇ ಮುಗಿ ಯುವುದು. ನಿನ್ನಿಂದ ಎಷ್ಟು ಜನರು ಉದ್ಧಾರವಾಗಿಯೋ, ನೆಲಸಮನರಾ ಗಿಯೋ ಇರುವ ವಿಷಯವು ಭಕ್ತವತ್ಸಲನಾದ ಶ್ರೀ ಲಕ್ಷ್ಮೀವೆಂಕಟೇಶಸ್ವಾಮಿಗೇ ಗೊತ್ತು! ಎಲ್ಲರಲ್ಲಿಯೂ ನೀನಿದ್ದು, ಸಮಯದಲ್ಲಿ ಅವರ ಮಾನ ಪ್ರಾಣಾದಿ ಗಳನ್ನು ಕಾಪಾಡುವ ನಿನ್ನನ್ನು ಎಷ್ಟು ಹೊಗಳಿದರೂ ತೀರದು. ನಿನ್ನ ಚಾತು ರ್ಯವು ಬಹು ಪ್ರಶಂಸನೀಯವಾದುದೇ ಸರಿ! (ಸಶೇಷ)

ಅಕ್ಷಾನತೆ

ಇಂದೆನ್ನನಂದನರು ಬಡತನದೊಳಿಹರೆಂದು
ಕಂದಿ ಕುಂದುವ ತೆರವಿದೇತಕಮ್ಮ
ಅಂದು ಲಕ್ಷ್ಮೀಧವನ ದಯದಿ ನೀನಿರ್ದಾಗ
ನಿಂದು ನಿನ್ನನು ಬೇಡದಿರ್ದನಾಡುಂಟೆ
ನಿಖಿಭಾಗ್ಯವನೀವ ನಿಧಿಯೆ ನೀನು

ಎನ್ನ ಕುವರಿಯರಿಂದು ಬಿಜ್ಜೆಯರಿಕರಲ್ಲೆಂದು
ಖಿನ್ನತೆಯ ತಾಳುವೆ ಯೇತಕಮ್ಮ
ಮುನ್ನ ನೀಂ ಪಡೆದಿರ್ದ ಸೀತಾದಿ ಸತಿಯರ್ಗೆ
ಅನ್ಯದೇಶಾಂಗನೆಯರೆಣೆಯೆನಿಪರೆ
ಕುಲಕಾಮಿನೀ ಜನಕೆ ಜನನಿ ನೀನು

ಇವರಖಿಲ ಕಲೆಗಳಲಿ ಚತುರರಲ್ಲೆಂದೆಂಬ
ಬವಣೆಯಿಂ ಮರುಗುವೆ ಯೇತಕಮ್ಮ
ಅವನಿಯೊಳ್ ನಿನ್ನಿಂದ ಕಲಿಯದಿಹ ಕಲೆಗಳಿಂ
ನಿಬಿಡವಾಗಿಹ ನಾಡದಾವುದುಂಟು
ಸಕಲ ಕಲೆಗಳನಾಳ್ದ ನಾಥೆ ನೀನು

ಎನಗಿನ್ನು ಮುನ್ನಿನ ಘನತೆ ಬಾರದೆಂಬುವೀ
ಘನಶೋಕದಿಂ ಕಪಿಪೆ ಯೇತಕಮ್ಮ
ವಿನಯದಲಿ ವಿದ್ಯದಲಿ ಸಾತ್ವಿಕದ ಶಕ್ತಿಯಲಿ
ನಿನಗೆ ಸಾಟಿಯೆನಿಪ್ಪನಾಡುಮುಂಟೆ
ವಿಷಯ ವೈರಾಗ್ಯದ ವಸತಿ ನೀನು

ಮುನ್ನ ನಾನೆಲ್ಲರಿಗೆ ಮಾರ್ಗದರ್ಶಕಳಾಗಿ
ಎನ್ನದಾರಿಯ ನರಿಯೆ ನೀಗಲೆಂಬ
ಬಿನ್ನಣದ ನುಡಿ ಸಾಕು ನೋಡಖಿಲ ಲೋಕಮುಂ
ನಿನ್ನ ಸಾತ್ವಿಕಪಥದ ಬೆಂನೊಳಿಹುದು
ಸಕಲ ತತ್ವಾರ್ಥಕಾದರ್ಶ ನೀನು

"ಭಾರತೀ ಸುತ"

ಸ್ತ್ರೀಯರ ರೂಪ.

ಸೊಬಗಿನ ಗೆಳೆಯನಿಂದ

ಯಾಕೊ ಕಾಲವು ಕೆಟ್ಟುಹೋಯಿತು. ಮೊನ್ನೆ ನಮ್ಮ ಹುಡುಗನು ಒಂದು ಪುಸ್ತಕವನ್ನು ಕೈಲಿಟ್ಟುಕೊಂಡು ಓದುತ್ತಿದ್ದನು—ಏನೆಂದು ನೋಡಲಾಗಿ

ಎಲ್ಲಿದೆ ಸ್ತ್ರೀಯರಿಗೆ ರೂಪವು ಎಂದಿತ್ತು.

ನಾರಿಯರ ರೂಪವು ಪುರುಷರ ಕಲ್ಪನೆಯಲ್ಲಿ, ಕಾಮುಕರ ಕಣ್ಣಿನಲ್ಲಿ, ಪ್ರಿಯಜನರ ಹೃದಯದಲ್ಲಿ, ಹಾಗೂ ಕವಿಗಳಕಾವ್ಯದಲ್ಲಿ. ಇವುಗಳನ್ನು ಬಿಟ್ಟು ಅದು ಮತ್ತೆಲ್ಲಿ ಹೋದೀತು. ನಾಲ್ಕಾರು ಪುಟಗಳ ಆ ಸಣ್ಣ ಪುಸ್ತಕದಲ್ಲಿ ಅದಕ್ಕೆ ಖಂಡಿತ ಸ್ಥಳವಿರಲಾರದು. ಆದರೂ ಕುತೂಹಲದಿಂದ ಅದನ್ನು ತೆಗೆದುಕೊಂಡು ಓದಿದೆನು.

ಸ್ತ್ರೀಯರ ರೂಪನೇನು ಒಂದು ಸಾಮಾನ್ಯ ಯಃಕಿಂಚಿತ್ ವಸ್ತುವೇ! ಅದರ ಸಲವಾಗಿ ಎಷ್ಟೊಂದು ರಾಜಾಧಿರಾಜರ ರಾಜ್ಯಗಳು ಹಾಳಾಗಿ ಹೋದವು? ಎಷ್ಟೊಂದು ಹಣಾಹಣಿ, ಮಾರಾಮಾರಿ, ಕೇಶಾಕೇಶಿಗಳಾಗಿ ಹೋದವು. ಲಂಕೇಶ್ವರನು ಹಾಳಾದನು; ಚಿತ್ತೂರು ನಾಶವಾಯಿತು. ಕೃಷ್ಣಾರ್ಜುನರಂತ ಎಷ್ಟೋ ಜನ ವೀರಾಗ್ರೇಸರರು ಕಾಡುಪಾಲಾದರು, ವ್ಯಾಸ ವಾಲ್ಮೀಕಿಗಳಂತ ಮಹರ್ಷಿಗಳೂ, ಹೋಮರ್ (Homer) ವರ್ಜಿಲ್ (Virgil) ರಂತ ಕವಿಗಳೂ ಎಷ್ಟೋ ಕಾವ್ಯಗಳನ್ನು ಬರೆದರು. ಒಟ್ಟಿಗೆ ನಾರಿಯರ ಕೋರೆನೋಟದ ಸಲವಾಗಿ ಭಾರತವರ್ಷದ ಇತಿಹಾಸದಲ್ಲಿ ಎಷ್ಟೊಂದು ಅನಾಹುತಗಳು ನಡೆಯಿತೆಂಬ ವಿಷಯದಲ್ಲಿ, ಕೇವಲ ನಮ್ಮ ಪುರಾಣಕಾರರು ಮಾತ್ರವಲ್ಲ, ಅಲಗ್ಜಾಂಡರನ ಬೆನ್ನು ಹತ್ತಿ ಬಂದಿದ್ದ ಗ್ರೀಕ್ ಚರಿತ್ರಕಾರರು ಮೊದಲುಗೊಂಡು, ಪಕ್ಕಾ ಪ್ರಭುಗಳಾದ ಕೆಂಪುಮುಖದ ದೊರೆ ದೊರೆಸಾನಿಯರ ಸೆರಿಗೆಗೆ ಗಂಟುಬಿದ್ದ (Rudyard Kippling) ರಡ್ಯಾರ್ಡ ಕಿಪ್ಲಿಂಗ್‌ರಂತ ಇಚ್ಛ ಆಂಗ್ಲೇಯಕವಿಗಳವರಿಗೂ ಸಕಲರೂ ಸೌಖ್ಯವನ್ನು ಕೊಟ್ಟಿರುವರು. "ರೂಪವತೀ ಭಾರ್ಯಾ ಶತ್ರು" ಎಂಬ ಅವ್ಯಕ್ತೋ ಮಂತ್ರದಲ್ಲಿ, ಸಂಸಾರದ ಸಮಸ್ತ ರಹಸ್ಯವನ್ನೂ ಕಂಡು ಕೃತಾರ್ಥರಾದ ಸ್ಮೃತಿಕಾರರ ಅಸಂಸ್ಕೃತ ಹೃದಯವೂ (Woman) ಶಬ್ದಕ್ಕೆ (Woe-man) ಎಂದು ಪದ ವಿಭಾಗಮಾಡಿ (Woe to man) "ಮನುಷ್ಯನ ಕೊರಳಿಗೆ ಗಂಟುಬಿದ್ದ ಗುದೆ" ಎಂದು ಅರ್ಥಮಾಡಿದ ಆಂಗ್ಲೇಯ

ಜಾನಿಯು (Jhonny) ಸಂಸ್ಕೃತವಾದ ಮೆದುಳೂ ಒಂದೇ ವಿಧವಾದ ಮಣ್ಣಿನಿಂದ ಮಾಡಲ್ಪಟ್ಟಿರಬೇಕೆಂದು ತೋರುತ್ತೆ. ಇಷ್ಟೊಂದು ದೊಡ್ಡ ದೊಡ್ಡವರ ಸಹವಾಸವು ದೊರೆತಮೇಲೆ ನಮ್ಮ ಗ್ರಂಥಕಾರನಿಗೇನು, ಪೊದಲೇ ಅಂದರೆ ಅನೇಕಾನೇಕ ಶತಮಾನಗಳ ಹಿಂದೆಯೇ ನಿರ್ದಿಷ್ಟವಾದ ಗುರಿಯನ್ನು ಕಣ್ಣೆದುರಿಗಿಟ್ಟುಕೊಂಡು, ನಮ್ಮ ಅಜ್ಜಂದಿರ ಕಾಲದ ಪಳೆಯುವಾದಗಳನ್ನು ತಂಡೋಪ ತಂಡವಾಗಿ ಉದಹರಿಸುತ್ತಾ ಕೊನೆಗೆ, ಸ್ತ್ರೀಯರ ರೂಪವೇ ಪುರುಷರ ಸರ್ವನಾಶಕ್ಕೆ ಕಾರಣವೆಂದು ಸಿದ್ಧಾಂತಮಾಡಿ ಮಹಾಕಾಳದಂತ (ರಘುವಂಶ, ಮೂರನೆಸರ್ಗ) ದೊಡ್ಡದೊಂದು ಪ್ರಪಾತಕ್ಕೆ ತಾನೂ ಬಿದ್ದುದಲ್ಲದೆ ನಮ್ಮ ತಾಯಂದಿರನ್ನು ಕೆಡವುದರಲ್ಲಿದ್ದನು ಓದಿ ನನ್ನ ಮನಸ್ಸು ಕರಗಿ ನೀರಾಯಿತು. ಅಸಹಾಯ ಸ್ತ್ರೀ ಜಾತಿಯೆಂದು ಇಷ್ಟೊಂದು ಅತ್ಯಾಚಾರವೆ! ಈ ರೀತಿ ಕಂಡ ಕಂಡವರನ್ನು ಕಡಿಯುವ ಶಾನಕೋಪದಿಷ್ಟವಾದ(ಶುನ, ಶುನಕ, ಶಾನಕ, ಎಂದು latest derivation) ಕೆಟ್ಟ ಹುಚ್ಚು, ಒಮ್ಮೆ ಸ್ತ್ರೀಯರ ತಲೆಗೆ ಹತ್ತಿತೆಂದರೆ ; ಆಗೀ ಮೆದುಳಲ್ಲಿ ತಿರುಳಿಲ್ಲದ ಪುರುಷ ಜಾತಿಯು ಪಾಡೇನು ? ನಾಲ್ಕು ಗೋಡೆಗಳ ಮಧ್ಯೆ ಕಂಡೂ ಕಾಣದಂತೆ ಪರೋಕ್ಷದಲ್ಲಿ ನಡೆಯುತ್ತಿರುವ ಮುಖಕ್ಕೆ ಮಂಗಳಾರತಿ, ನೈವೇದ್ಯ ಮುಂತಾದ ಎಷ್ಟೋ ಸ್ವಾರಸ್ಯವಾದ ಸಾಂಪ್ರದಾಯಗಳು ನಿತ್ಯಗಟ್ಟಿಯ ಬೀದಿಯ ನೋಟಗಳಾಗಿ ಪರಿಣಮಿಸುವವು,

ನಾನು ಸ್ವಲ್ಪ ಅಸಮಾಧಾನಗೊಂಡವನಾಗಿ ಹುಡುಗನನ್ನು ಕುರಿತು, "ಇದನ್ನು ನಿನಗಾರೋ ಕೊಟ್ಟರು ? ಎಂದು ಕೇಳಿದೆನು.

ಅವನೇನು ರಾವಣನ ಕುಮಾರ ಇಂದ್ರಜಿತು. ಗಾಳಿಯು ಹೇಗೆ ಬೀಸುತ್ತದೆಂಬುದನ್ನು ತಿಳಿದುಕೊಂಡು, ನಿರಪರಾಧ ಸಜ್ಜನನಂತೆ ಸರಳ ಭಾವದಿಂದ "ಸ್ಕೂಲ್ ಲೈಬ್ರರಿಯಿಂದ ತಂದೆ" ಎಂದು ಹೇಳಿದನು.

ಈಗ ಸರಿಯಾಯಿತು ; ಕಳ್ಳತನಕ್ಕೆ ಪೋಲೀಸಿನವರು ಸಂಗಡ ಹೋದಂತೆ. ಇಂತ ಅಡನಾಡಿ ಪುಸ್ತಕಗಳನ್ನೆಲ್ಲಾ ಸರಳ ಹೃದಯದ ಹುಡುಗರಿಗೆ ಓದಕೊಡುವ ಸ್ಕೂಲ್ ಎಂತಾದ್ದೋ ದೇವರೇ ಬಲ್ಲ. ಅವರಿಗೆ ತಮ್ಮ ತಾಯಂದಿರನ್ನು ಪ್ರೀತಿಸಿ ಸನ್ಮಾನಿಸುವುದನ್ನು ಹೇಳಿಕೊಡುವ ಬದಲು, ಸ್ತ್ರೀಜಾತಿಯಲ್ಲಿ ಅಸಡ್ಡೆಯನ್ನು, ಅಮರ್ಯಾದೆಯನ್ನೂ ಹುಟ್ಟಿಸುವ ಇಂತಹ ಪುಸ್ತಕಗಳೆ! ಬಾಲ್ಯದಿಂದ ಇಂತ ರೂಪದ್ವೇಷದ ಹಾಗೋ ಕುರೂಪಸತ್ಕಾರದ ವಿಚಿತ್ರವಾತಾವರಣದಲ್ಲಿ ಬೆಳೆದ ಮಕ್ಕಳು ಮುಂದೇನಾಗುವರು. ಅವರ ಸಂಕುಚಿತಹೃದಯವು ಮನೆಯಲ್ಲಿ ಹೆಣ್ಣು ಮಕ್ಕಳು ಆಚೆಗಿನ ಹಚ್ಚಿ ಕೊಳ್ಳುವುದನ್ನು ನಿಷೇಧಿಸಿ ; ಇದ್ದಲನ್ನು ಅರೆದು ಬಳೆದುಕೊಳ್ಳುವ ಹೊಸಪದ್ಧತಿಯನ್ನು ಪ್ರಚಾರಮಾಡಲು, ಒಂದು ಸಮಾಜಸಂಸ್ಕಾರಕಸಂಘವನ್ನೇ ರ್ಪಡಿಸುವ ಪ್ರಯತ್ನಮಾಡಬಹುದೋ? ಹೂ ಗಂಧಗಳನ್ನು ಹಚ್ಚಿ ಕೊಳ್ಳುವ

ಬದಲು ಧಾರ್ಮಿಕ ಹಾಗೂ ಸ್ವಾಸ್ಥ್ಯರಕ್ಷಕ (Sanitary) ದೃಷ್ಟಿಯಿಂದ ಹಸುವಿನ ಸಗಣಿ, ಗಂಜಳವು ಹೆಚ್ಚು ಉತ್ತಮವೆಂದು ನಿರ್ಧರಿಸುವರೇನೋ? ಪಾಶ್ಚಾತ್ಯ ಸಚ್ಛಾತ್ರ ಸಮಾಜದಲ್ಲಿ (Student population) ಬಳಕೆಯಲ್ಲಿರುವ "ಜಾಡರ ಹುಳ, ಕೋಳಿಕಾಲು" ಇತ್ಯಾದಿ ಭಾವ ಪೂರ್ಣ ಸಂಬೋಧನೆಗಳು, ಅಭಿನವ ನಾಸ್ಪದವಾದ ಉಪನಾಮಗಳಾಗಿ ಪರಿಣಮಿಸುವವೋ? ಎಂಬಿನೇ ಮೊದಲಾದ ಭವಿಷ್ಯದ ಸಂಭವನೀಯ ದುರ್ಘಟನೆಗಳನ್ನು ಚಿಂತಿಸುತ್ತಾ ಮನಸ್ಸು ಕಲ್ಲಾಗಿಂತಿತು. ಧರ್ಮಪ್ರಿಯ ಆಂಗ್ಲ ಸರಕಾರದ ನಾಗರಿಕನಾಗಿ ಈ ವಿಧವಾದ ಕ್ರೂರ ಪೈತ್ತೇಜಿಕ ಬೊಲ್ಶೆವಿಕ್ (Bolshevic) ಚಳವಳಿಯನ್ನು ಎದುರಿಸುವುದು ನನ್ನ ಮುಖ್ಯಕರ್ತವ್ಯವೆಂದು ತಿಳಿದುಕೊಂಡು ಅಂದೇ ಸ್ತ್ರೀಯರ ರೂಪವನ್ನು ಹೊಗಳಿ ಒಂದು ಲೇಖನವನ್ನು ಬರೆಯಬೇಕೆಂದು ಸ್ವಗತಮಾಡಿಕೊಂಡೆನು. ನನ್ನಾ ಪ್ರತಿಜ್ಞೆಯ ಸುಖಾನುಭವವು ಇಂದು ವಾಚಕರ ಪಾಲಿಗೆ ಒದಗುತ್ತಿರುವುದು.

ಇಷ್ಟೊಂದು ದೊಡ್ಡ ಪೀಠಿಕೆಯನ್ನು ಹಾಕಿಕೊಂಡು ಪ್ರಬಂಧವನ್ನು ಪ್ರಾರಂಭಮಾಡಿದಮೇಲೆ, ನಮ್ಮ ಅಷ್ಟಾವಧಾನ - ಶತಾವಧಾನ ಗ್ರಂಥಕಾರರಂತೆ ಮೊಟ್ಟಮೊದಲು ಧರ್ಮಶಾಸ್ತ್ರವನ್ನು ಉದಹರಿಸುವದು ನೆಟ್ಟಗೆ, ಸ್ಮೃತಿಕಾರನಾದ ಮನುವು ಹೇಳಿರುವನು,

ಯತ್ರನಾರ್ಯಸ್ತು ಪೂಜ್ಯಂತೇ ರಮಂತೇ ತತ್ರದೇವತಾಃ|
ಯತ್ರೈತಾಸ್ತು ನಪೂಜ್ಯಂತೇ ಸರ್ವಾಸ್ತತ್ರಾ ಫಲಾಃಕ್ರಿಯಾಃ ||

ಎಂದು ಈ ಶ್ಲೋಕದ ವಿಧಿ ರೂಪವಾದ ಪೂರ್ವಾರ್ಧದ ಅರ್ಥವನ್ನು "ಸರಸ್ವತಿ" ಯ ಓದುಗರೆಲ್ಲರೂ ಬಲ್ಲರು. ಕೊಡೆಯು ಪೆಟ್ಟಿನಂತೆ ಕರ್ಕಶವಾದ ನಿಷೇಧಾತ್ಮಕ ಉತ್ತರಾರ್ಧದ ಅರ್ಥವು:— ಎಲ್ಲಿ ಸ್ತ್ರೀಯರಿಗೆ ಸನ್ಮಾನವಿಲ್ಲವೋ ಅಲ್ಲಿ ಸಮಸ್ತ ಕಾರ್ಯಗಳೂ ನಿಷ್ಫಲವಾಗುವವು ಎಂದು ನಮ್ಮ ಪುರಾತನರ ಮತವಾದರೂ ಹೀಗೆ. ಅವರ ಗೋತ್ರೋತ್ಪನ್ನರಾದ ನಮ್ಮಗಳ ಮತವೇನೆಂಬುದನ್ನು ನಿರ್ದೇಶಿಸುವ ಮೊದಲು ಆಧುನಿಕ ಪದ್ಧತಿಯಂತೆ, ಪಾಶ್ಚಾತ್ಯರ ಹಾಗೂ ಆಂಗ್ಲೇಯರ ಮತವೇನೆಂಬುದನ್ನು ಒಮ್ಮೆ ವಿಚಾರಮಾಡುವ. ಆಂಗ್ಲ ರಮಣಿಯರ ವಿಚಾರವಾಗಿ ಭಾರತವರ್ಷದ ಕವಿ ಸಾರ್ವಭೌಮ ರವೀಂದ್ರನಾಥ ಠಾಗೂರರವರು ಹೀಗೆ ಹೇಳಿರುವರು:

"ಈ ಸ್ಥಳದ (ಇಂಡನದ) ಬೀದಿಗಳಲ್ಲಿ ತಿರುಗಾಡುವುದೂ ಸಂತೋಷವೇ. ಎತ್ತ ನೋಡಿದರೂ ಸುಂದರವಾದ ಮುಖಗಳೇ ಕಾಣಬರುವವು .....ನನ್ನ ನಂಬುಗೆಯೇನಂದರೆ, ಆಂಗ್ಲ ನಾರಿಯರಂತಹ ಸುಂದರಿಯರು ಪ್ರಪಂಚದಲ್ಲಿ ಮತ್ತಾರೂ ಇಲ್ಲ. ಸಪನೀತದಂತೆ ತೋರುವಂತಹ ಶುಭ್ರ ಶ್ವೇತವರ್ಣದ ಮುಖದಮೇಲೆ ಗುಂಗುರು ಗುಂಗುರಾದ ಕೇಶರಾಶಿ, ಸುಸ್ಪಷ್ಟವಾದ ನಾಸಿಕ, ಭಾವ

ಪೂರ್ಣವಾದ ನೀಲವರ್ಣದ ನೇತ್ರಗಳು, ನೋಡಿದೊಡನೆ ದಾರಿಯ ಕಷ್ಟವೆಲ್ಲಾ ಕಳೆದುಹೋಗುವುದು " ಎಂದು.

ಗಾರ್ಹಸ್ಥ್ಯ ಜೀವನದ ಏಕಮಾತ್ರ ಅವಲಂಬನವೆಂದರೆ ನಾರಿಯರೆ. ಸ್ತ್ರೀಯರ ಹೊರತು ಪುರುಷನು ಅರ್ಧ ಸತ್ತಹಾಗೆ. ಹಾಗಿಲ್ಲದಿದ್ದರೆ ಮಹಾದೇವನ ನೊಡನೆ ಶಕ್ತಿಯು ಸರ್ವಕಾಲದಲ್ಲಿಯೂ ಇರುವಳೆಂದು ಸಕಲ ದೇವತೆಗಳೂ ಭಯಪಡಬೇಕಾದ ಕಾರಣವೇನು ? ಅಷ್ಟೇ ಅಲ್ಲ; ಎಷ್ಟೋಜನ ಯೋಗಿಗಳೂ, ಋಷಿಗಳೂ ನೂರಾರು ವರ್ಷಗಳು ಕಠೋರವಾದ ತಪಸ್ಸನ್ನು ಮಾಡಿ ಕಟ್ಟಕಡೆಗೆ ನಾರಿಯರ ನಿರ್ಮಲ ಕಟಾಕ್ಷದಿಂದ ಬಂಧಿತರಾಗಿ ಅವರ ರೂಪದಲ್ಲಿ ಮೋಹಿತ ರಾಗಿಲ್ಲ ? ಸ್ತ್ರೀವ್ಯಾಮೋಹದಿಂದ ಈ ರೀತಿ ಹುಚ್ಚರಾಗಿಹೋದವರು ಕೇವಲ ಇಂದ್ರ ಚಂದ್ರರು ಮಾತ್ರವಲ್ಲ. ಯೋಗಿಶ್ರೇಷ್ಠನಾದ ಪರಶಿವನೂ ಮೋಹಿನಿ ಯಲ್ಲನುರಕ್ತನಾಗಿ ಅವಳ ಹಿಂದೆ ಹಿಂದೆ ತಿರುಗುತ್ತಿದ್ದನು. ಇಂತಹ ಸ್ತ್ರೀಜಾತಿ ಯನ್ನು ಸ್ಕಾಟ್ ಸಾಹೇಬರು (Scot) ಈ ಕೆಳಗೆ ಹೇಳಿರುವಂತೆ ವರ್ಣಿಸಿರುವರು:

"O women, in our hours of ease
Uncertain coy and hard to please
And variable as the shade.
By the light quireving aspen made ;
When pain and anguish wring the brow
A miuistering angle thou."

" ರಮಣಿ ನಮ್ಮ ವಿರಾಮ ಕಾಲದೋಳ್ ನೀನು
ಲಜ್ಜೆ, ಗೌರವ, ಬಿಂಕ, ವಿನ್ಯಾಣಗಳಲಿ
ಗಾಳಿಗಿಟ್ಟಹ ಸಣ್ಣ ದೀವಿಗೆಯ ತೆಳಿಯ
ನೆಳಲಿನಂದದೆ ಚಪಲೆಯಾಗಿ ತೋರುವೆಯೆ !
ಬಂದ ದುಗುಡದೊಳೆಮ್ಮ ತಲೆ ನೀಡಿಯುತಿರಲು
ಉಪಚರಿಸೆ ಕೂಳಿಶ ದೇವತೆಯಂತೆ ತೋರ್ವೆ. "

ಬೈರನನು ಹೇಳಿರುವನು.—

"Man's love is of man's life a thing apart
T is woman's whole existence."

ಪುರುಷನ ಪ್ರೇಮವು ಅವನ ಜೀವನದ ಒಂದು ವಿಶಿಷ್ಟ ವಸ್ತುವಾತ್ರ. ಆ ಪ್ರೇಮ ನಾರಿಯ ಸಮಸ್ತ ಜೀವನದ ತಳಹದಿಯು.

(ಸಶೇಷ)

ಪುನರುಜ್ಜೀವನ

(ಹಿಂದಿನ ಸಂಚಿಕೆಯಿಂದ ಮುಂದುವರಿದ್ದು)

ಪ್ರತಾಪನಲ್ಲಿ ಹುದುಗಿದ್ದ ವೀರರಕ್ತವು ಹೊಲಕ್ಕೆ ಉಕ್ಕಿತು. ಯೋಷಿಯ ಶವದಮೇಲೆ ಹಸ್ತವನ್ನಿಟ್ಟು ಪ್ರತಾಪನಿಗೆ ಸಹಾಯಮಾಡುವೆನೆಂದು ಪ್ರಮಾಣ ಮಾಡಿದನು. ಪ್ರಮಾಣವು ಕೂಡಲೆ ಫಲಿಸಲೆಂದು ಅಕ್ಬರನ ನೇಮಕಕ್ಕೆ ನನುಸ್ಕರಿಸಿ ಪ್ರತಾಪನೆಡೆಗೆ ಪ್ರಯಾಣಮಾಡಿದನು. ರಾಣನ ಕೂಸಿಯಾದ ತಾರೆಯು ಮೃತಳಾಗಿದ್ದಳು. ಪ್ರತಾಪನು ಪೃಥ್ವಿಗೆ ಆದರದಿಂದ ಸ್ವಾಗತವನ್ನು ಕೊಟ್ಟನು. ಇಬ್ಬರೂ ನೊಂದವರು. ಒಬ್ಬನು ದೇಶಕ್ಕಾಗಿ ತನ್ನ ಪತ್ನಿಯನ್ನೂ, ಮತ್ತೊಬ್ಬನು ದೇಶಕ್ಕಾಗಿ ತನ್ನ ಪ್ರಾಣಪದಕವಾದ ಪ್ರಿಯಕುವರಿಯನ್ನೂ ಕಳೆದುಕೊಂಡಿದ್ದರು.

ಪ್ರತಾಪ:—ಪೃಥ್ವೀರಾಜರೇ, ಏನು! ತಾವಿಲ್ಲಿ ದಯಮಾಡಿಸಿದುದು?

ಪೃಥ್ವಿ:—ರಾಣಾಜೀ, ಅಕ್ಬರನಿಗೆ ಶರಣಾಗತನಾಗುವೆನೆಂದು ನೀವು ಪತ್ರವನ್ನು ಬರೆದುದು ನಿಜವೇ?

ಪ್ರತಾಪ:—ಹೌದು, ನಾನೇ ಬರೆದೆ. ದೇವಿಗೆ ತಿಳಿಸದೇ ಬರೆದೆ.

ಪೃಥ್ವಿ:—ರಾಣಾಜೀ, ತಮ್ಮ ಪತ್ರದ ತಾತ್ಪರ್ಯವನ್ನು ಮರೆಯಿರಿ. ಹಿಂದೂ ಸ್ಥಾನವೇ ಈಗ ನಿಮ್ಮ ಕಡೆಗೆ ಪೂರ್ಣವಾಗಿ ಅಗಲಿಸಿದ ದೃಷ್ಟಿಯಿಂದ ನೋಡುತ್ತಲಿದೆ ಸನಾತನವಾದ, ಪರಮಪೂಜ್ಯವಾದ ಆರ್ಯಮಹಿಳೆಯರ ಪಾತಿವ್ರತ್ಯಕ್ಕೆ ಕೊಡಲಿಯಪೆಟ್ಟು ಬೀಳಲಾರಂಭಿಸಿದೆ. ಅನೇಕ ಮಹಿಳೆಯರು ಪೆಟ್ಟುತಿಂದು ನರಳುತ್ತಿರುವರು; ಆದರೆ ಯೋಷಿ! ಆ ನನ್ನ ಯೋಷಿ! ಯೋಷಿಯೊಬ್ಬಳು ಆರ್ಯಸಂಸ್ಕೃತಿಗೋಸ್ಕರ ಪ್ರಾಣವನ್ನೊಪ್ಪಿಸಿದಳು.

ಪ್ರತಾಪ:—ಅರಸರೇ, ನಿಮ್ಮ ನುಡಿಗಳೊಂದೂ ನನಗೆ ಅರ್ಥವಾಗುತ್ತಿಲ್ಲ. ಪೂಜ್ಯಳಾದ ಯೋಷಿದೇವಿಯು ಮೃತಳಾದಳೇ?

ಪೃಥ್ವಿ:—ಸಹಜ; ಯೋಷಿಯು ಮೃತಳಾದಳು. ಖುಸ್‌ರೋಜ್ ಹಬ್ಬಕ್ಕೆ ನಾನೇ ಬಲವಂತದಿಂದ ಕಳುಹಿಸಿದೆ. ಪೈಶಾಚಿಕ ಆಶೆಯಿಂದ ಸಮ್ರಾಟನು ಯೋಷಿಯಮೇಲೆ ಕೈಹಾಕಲು ಮೊನೆಯಾದ ತನ್ನ ಚೂರಿಯಿಂದ ತನ್ನ ಅಮೂಲ್ಯವಾದ ಮಾನವನ್ನು ಕಾಪಾಡಿಕೊಂಡಳು. ನಿನ್ನೆಯದಿವಸ ನನಗೆ ತನ್ನ ಸಂದೇಶವನ್ನಿತ್ತು ಆತ್ಮಹತ್ಯಮಾಡಿಕೊಂಡಳು.

ಪ್ರತಾಪ:—ಏನು! ಪೂಜ್ಯಳು ಆತ್ಮಹತ್ಯಮಾಡಿಕೊಂಡಳೇ! ಏನು! ಹೀನನಾಯಿಯಾದ ಅಕ್ಬರನು ಭಾರತವೀರರಮೇಲೆ ಕೈಹಾಕಿದ್ದನ್ನು ಮುಗಿಸಿ

ಭಾರತರಮಣಿಯರಮೇಲೆ ಕೈಹಾಕತೊಡಗಿದನೇ! ಇರಲಿ; ಇದಕ್ಕೆ ಪ್ರತಿಶೋಧನೆಯನ್ನು ನಾನು ಮಾಡುವೆನು. ನನ್ನ ಜನ್ಮವಿರುವವರೆಗೂ ಅಳ್ಳರನಿಗೆ ಶರಣು ಹೋಗೆನು. ಇದಕ್ಕೆ ಲೋಕಮಾತೆಯಾದ ಭಾರತಾಂಬೆಯೇ ಸಾಕ್ಷಿ. ಪೃಥ್ವಿರಾಜರೇ! ದೃಢವಟುತ್ವದಿಂದ ನನಗೆ ಸಹಾಯವಾಡಿ, ಸಮ್ರಾಟನ ಸಾಮರ್ಥ್ಯವನ್ನು ನೋಡೋಣ.

೩

ದೃಢವಾದ ಪ್ರತಿಜ್ಞೆಯೊಂದೇ ಬೇಕಾಗಿದ್ದುದು. ದೈವಬಲವು ಹಿಂದೆಯೇ ಇತ್ತು. ಪ್ರತಾಪನ ಸಹೋದರನಾದ ಶಕ್ತಸಿಂಹನು ತನ್ನ ಭಿಲ್ಲಕೊಡನೆ ಅಣ್ಣನಿಗಾಗಿ ಕಾದಲು ಸಿದ್ಧನಾದನು. ರಾಣನ ಮಂತ್ರಿಯಾದ ಭೀಮನು ತಾನು ಇದುವರೆಗೆ ಗಳಿಸಿದ ಧನವೆಲ್ಲಾ ನಿರ್ಬಂಧನೆಯಾಗಿ ರಾಣನ ಪಾದಪದ್ಮಗಳಮೇಲೆ ಸುರಿಸಿದನು. ಪೃಥ್ವಿರಾಜನಲ್ಲಿ ಆಶ್ರಿತರಾಗಿದ್ದ ಕ್ಷತ್ರಿಯಧರ್ಮ, ಕ್ಷತ್ರಿಯತೇಜಸ್ಸೆಲ್ಲಾ ಪುನರುಜ್ಜೀವನವಾಗುತ್ತಾ ಬಂದಿತು. ಭಾಪು! ಭಾಪು! ಆರ್ಯಾವರ್ತಕ್ಕಾಗಿ ಪ್ರಾಣಕೊಡಲು ಸಿದ್ಧರಾಗುವ ವೀರಾಗ್ರಣಿಗಳಿಗೆಲ್ಲಾ ಸಹಾಯವು ಹೇಗೆ ಒಂದರ ನೇಲೊಂದು ಒದಗುವುದು. ಮುಖ್ಯವಾಗಿ ಪ್ರಜೆಯು ಸೇವೆಯುಳ್ಳ ಆ ವೀರರ ಅನಿರ್ವಚನೀಯವಾದ ಪ್ರೇಮವೇ ಇದಕ್ಕೆ ಕಾರಣ.

ಯುದ್ಧವೂ ಕೈ ಕೂಡಿತು. ಕೈಬಿಟ್ಟುಹೋಗಿದ್ದ ದುರ್ಗಗಳೆಲ್ಲಾ ಒಂದೊಂದಾಗಿ ಕೈಸೇರತೊಡಗಿದುವು. ಕಮಲಮೇರುವೂ ಕೈಸೇರಿತು. ಮಹಬತ್‌ಖಾನ್ ಮೊದಲಾದ ಸಮ್ರಾಟನಡೆಯ ಅತಿರಥ, ಮಹಾರಥರೆಲ್ಲರೂ ಸೆರೆಸಿಕ್ಕಿದರು. ಹಷಖಜ್‌ಖಾನನ ಸೈನ್ಯವನ್ನು ರಾಣನು ಬಿರುಗಾಳಿಯಂತೆ ಎಬ್ಬಿಸಿಕೊಂಡು ಹೋದನು. ಹೇಡಿಯಾದ ಮಾನಸಿಂಹನು ಹಳದೀಘಟ್ಟದ ಸಮರದ ಪರಿಚಯವನ್ನು ತಂದುಕೊಂಡು ಯುದ್ಧಕ್ಕಬರದೆ ಸುಮ್ಮನಿದ್ದನು. ದಯಾಳುವಾದ ರಾಣನು ಮಹಬತ್ಖಾನನನ್ನು ಸೆರೆಯಿಂದ ಬಿಡಿಸಿ ಮಾನಸಿಂಹನನ್ನು ರಣರಂಗಕ್ಕೆ ಕಳುಹಿಸುವಂತೆ ಹೇಳಿಕಳುಹಿಸಿದನು. ಅತ್ಯಲ್ಪಕಾಲದಲ್ಲಿಯೇ ಉದಯಪುರವು ರಾಣನ ವಶವಾಯಿತು. ಉಳಿದಿರುವುದಾವುವು? ಚಿತ್ತೂರು, ಅಜಮೀರ್, ಮಂಗಳಗಡ.

ಇಷ್ಟರಲ್ಲಿಯೇ ರಾಣನ ಶಿಬಿರದಲ್ಲಿ ಕಪ್ಪುಮೋಡುಗಳು ಕೂಡಲಾರಂಭಿಸಿದುವು. ಸಮ್ರಾಟನ ಮಗಳಾದ ದೌಲತ್ ಉನ್ನೀಸಳನ್ನು ಶಕ್ತಸಿಂಹನು ಪ್ರೀತಿಸುತ್ತಿದ್ದನು. ಸಮರವನ್ನು ನೋಡಲು ಬಂದಿದ್ದ ದೌಲತ್ತಳಿಗೆ ಪೆಟ್ಟುಬಿದ್ದು ಆಕೆಯು ವ್ಯಥಳಾದಳು. ಶಕ್ತಸಿಂಹನ ಜೀವನ ಸರ್ವಸ್ವವೇ ಹೋದಂತಾಯಿತು. ಕರ್ತವ್ಯಭ್ರಷ್ಟನಾದವನು ಹೆಣ್ಣಾದ ಒಬ್ಬ ಮೊಗಲರಮಳ ವ್ಯಾಮೋಹಕ್ಕಾಗಿ ದೇಶವನ್ನೂ, ದೇಶಬಂಧುವನ್ನೂ ಧಿಕ್ಕರಿಸಿ ಹೊರಟುಹೋದನು. ರಾಣನ ಬಲ ಕುಂಠಿತವಾಯಿತು. ಸುರಾಪಾನಿಶನಾದ ರಾಣನ ಕುವರನಾದ ಅಮರಸಿಂಹನು ಮೇಹರುನ್ನೀಸಾ ಎಂಬ ಬಾಲಿಕೆಯು ಮಾನಾಪಹರಣಮಾಡಬೇಕೆಂದಿ

ರುವವೇಳೆಗೆ ರಾಣನೂ ಮತ್ತು ಲಕ್ಷ್ಮೀದೇವಿಯರೂ ಅಲ್ಲಿಗೆ ಬಂದರು. ರಾಣನಿಗೆ ಪರಮಾಗ್ರಹವಾಯಿತು. ಅಮರನ ತಿರಚ್ಛೀದನವಮಾಡಲು ಬೀಸಿದ ರಸಿಯು, ಮಗ ನನ್ನು ಕಾಪಾಡಲು ತಲೆಕೊಟ್ಟ ಸಾಧ್ವೀಮಣಿಯಾದ ಲಕ್ಷ್ಮೀದೇವಿಗೆ ಬಿದ್ದಿತು. ಪತಿಯ ಪಾದಗಳಮೇಲೆ ತಲೆಯಿಟ್ಟು ಮಗನಿಗಾಗಿ ಪ್ರೇಮೆಯನ್ನು ಬೇಡಿ ವೀರ ಲಕ್ಷ್ಮೀದೇವಿಯು ಪರಲೋಕಪ್ರವಾಸಕ್ಕೆ ತೆರಳಿದಳು.

ಈ ಎರಡು ದೃಶ್ಯಗಳು ರಾಣನ ತೋಳುಗಳನ್ನು ಮುರಿದಂತಾದುವು. ರಾಣನಿಗೆ ಮನೋರೋಗವು ವ್ಯಾಪಿಸಿತು. ''ಕಡೆಗೂ ಚಿತ್ತೂರನ್ನು ಶತ್ರುಗಳ ಕೈಯಿಂದ ಬಿಡಿಸಲಿಲ್ಲವಲ್ಲಾ'' ಎಂಬ ಅಂಡಲೆಯು ರಾಜಿಸಿತು. ಸನ್ನಿಶ ವೈದ್ಯರೆಲ್ಲರೂ ತಮ್ಮ ವಿಶ್ವಪ್ರಯತ್ನಗಳನ್ನು ಮಾಡಿದರು. ರಾಣನಿಗಾಗಿ ತಮ್ಮ ದೇಹಗಳನ್ನು ಮೃತ್ಯುದೇವಿಗೆ ಬಲಿಕೊಡಲು ಸಿದ್ಧರಾದರು. ತಮ್ಮ ಎರೆಯನನ್ನುಳಿಸಲು ಬಹುಕಷ್ಟಪಟ್ಟರು. ಆದರೇನು? ಮಾನವ ಪ್ರಯತ್ನಕ್ಕಿಂತಲೂ ದೈವಪ್ರಯತ್ನವೇ ಹೆಚ್ಚಲ್ಲವೇ? ಫಲಿತಾಂಶಗಳು ಮಾನವರ ಅಧೀನವೇ?

ಒಂದುದಿನ ಮೇವಾರಿನ ಸೂರ್ಯನು ತನ್ನ ನಕ್ಷತ್ರಮಂಡಲಕ್ಕೆಲ್ಲಾ ಒಂದು ಸಂದೇಶವನ್ನಿತ್ತು ಪರಲೋಕಯಾತ್ರೆಗೆ ತೆರಳಿದನು. ಮೇವಾರಿನ ಆ ದಿವ್ಯಜ್ಯೋತಿಯು ಪರದಾಸ್ಯದ ಬಂಧನದಲ್ಲಿ ಸಿಲುಕಿದ ಭಾರತಾಂಬೆಯ ದುಃಖವನ್ನು ಉಪಶಮನ ಮಾಡುವುದಕ್ಕಾಗಿ ತೆರಳಿತು. ಆ ಅಪೂರ್ವವ್ಯಕ್ತಿಯ ದಿವ್ಯಸಂದೇಶವು ಇಂದಿಗೂ ಪ್ರತಿಯೊಬ್ಬ ಆರ್ಯಾವರ್ತದ ನಿಜ ಪುತ್ರ, ಪುತ್ರಿಯರ ಹೃದಯದಲ್ಲಿಯೂ ಇರಶಕ್ಯವಾಗಿದೆ.

''ನನ್ನ ಜೀವನಯಾತ್ರೆಯ ಕಾರ್ಯವನ್ನು ಸಂಪೂರ್ಣವಾಗಿ ಮಾಡಲಿಲ್ಲವೆಂಬುದೇ ನನ್ನ ದುಃಖ. ಅಯ್ಯೋ! ಅಶಕ್ತನಾದ ಮಗನನ್ನೂ, ಮಾತೆಯ ಮಾನವನ್ನು ಕಾಪಾಡಲಾರದಂತಹ ಪಾಮರನನ್ನೂ ಹಿಂದುಬಿಟ್ಟು ಹೋಗುತ್ತೇನಲ್ಲಾ ಎಂಬುದೇ ನನ್ನ ಪರಿತಾಪ. ವೀರ ಸರದಾರರೇ! ಅಮರನನ್ನು ಹುರಿದುಂಬಿಸಿ, ಮಾತೃಸೇವೆಯ ವಿಶ್ವಾಸವನ್ನು ಅವನಲ್ಲಿ ಉದ್ವೇಗಿಸಿ! ದೇಶಕ್ಕಾಗಿಯೇ ಸಾಯುತ್ತೇವೆಂದು ನಿರ್ಧಾರಮಾಡಿಕೊಳ್ಳಿರಿ. ನಿಮ್ಮ ನಿಮ್ಮ ವಂಶೀಯರ ಹೃದಯಗಳಲ್ಲಿ ಆರ್ಯಾವರ್ತದ ರಕ್ತವು ಹರಿಯುತ್ತಲಿರುವನರೆಗೆ ತುಚ್ಛನಾದ ಆ ಹೂಣನಿಗೆ ದಾಸರಾಗಬೇಡಿರಿ. ಅಮ್ಮನ ಮಾನದಕಡೆಗೆ ಲಕ್ಷ್ಯವಿಡಿರಿ. ಪ್ರಾಣಗಳಮೇಲಿನ ಆಶೆಯನ್ನು ತೊರೆಯಿರಿ.''

ಇದೇ ರಾಣನ ಸಂದೇಶ. ಭ್ರಾತೃಭಗಿನಿಯರೇ! ನೀವೂ ಸ್ವಲ್ಪ ಈ ಸಂದೇಶಕ್ಕೆ ನಿಮ್ಮ ಹೃದಯಗಳಲ್ಲಿ ಸ್ಥಳವನ್ನು ಕೊಡುವಿರಾ?

ಓಂ ತತ್ಸತ್.

ಮಾನವ ಸುಖಬೋಧಾಮೃತ

(ಹಿಂದಿನ ಸಂಚಿಕೆಯಿಂದ ಮುಂದರಿಸಿದ್ದು)

೩. ಪಿತನ ಕರ್ತವ್ಯ.

ಮಾನವನ ಸಂಸೃತಿಯೊಳು ಪಿತನ |
ತಾನವದುವೇ ಮುಖ್ಯಮೆನಿಸಿರೆ |
ನೀನುಧರೆಯೊಳು ಗೌರವಂಗಳನಾಂತುರಾಜಿಪೊಡೆ ||
ಮಾನಿತರೆನಿಪ ಸುತರನಾಂತಸ |
ಮಾನಪುಣ್ಯಕೆಬಿಡದೆ ನೀಸು |
ಮ್ಮಾನದೊಳವರಕಾಯ್ವಭಾರವು ನಿನ್ನದಾಗಿಹುದು ||೧||

ಜನಿಸಿದಾತ್ಮಜನುಗುಣೆದುರ್ಗುಣಿ |
ಯೆನಿಸಿಬಾಳಲು ನೀನೆಕಾರಣ |
ನೆನುತಪೇಳ್ವರುನೀತಿವಿದರೀತೆರದಕಾರಣದೆ ||
ಘನತರದಸಂಸಾರದೊಳಸಮ |
ತನುಜರತ್ನ ಮದೆಂದುಭಾವಿಸ |
ಲನುದಿನದೆನೀನಡೆವಮಾರ್ಗವುಯೋಗ್ಯಮೆನಿಸಿರಲಿ || ೨ ||

ಕಲಿಪಕಾಲವವ್ಯರ್ಥಗೈಸದೆ |
ಕಲಿಸುವುದುಸತ್ಕಲೆಗಳೊಲವಿಂ |
ವಿಲಸಿತನಿಜದದೆಲೆಯನರಿಯಲುಸುತನಿಗೊರೆಯುವುದು ||
ಕಲಿಯಲಿಷ್ಟ ಮದೆಂದುತೋರ್ಪಾ |
ಕಲೆಯಕಲಿಯುತೆಹರೆಯುದೊಳ್ಬರಿ |
ಗೆಲುಒಗಾಕರಮಾದವರ್ತನೆಯುಳಿಯೆಬೋಧಿಪುದು || ೩ ||

ಬಳಿವನಿತುದುರ್ಗುಣನಿಚಯವಂ |
ತಳೆಯುತಭ್ಯಾಸವೆನೆಮಾರ್ದಡ |
ಳಳವುತಾನಾಂಪ್ರದಕೆಡೆಯಳ್ಗುದಂತನೋಡುವುದು ||

ಆಳುತಿಕೋವಿದರೊಳಗೆನಡತೆಯ |
ತಿಳಿವನರಿಯುತೆಒಳಿದೊಡವನೇ |
ಇಳೆಯೊಳಗೆತಾವಿಟಪಿತರುವಂತಿರುತೆಧಾಜಿಪನು ॥ ೪ ॥

ದುರುಳತನದಿಂದಿಡಿದತನುಜಂ |
ದುರ್ಯಶವತಾಪಿತಗಮುರ್ವ್ವಿ |
ತಳದೆವರ್ತ್ತಪನೆಂಬುದಕೆಸಂದೆಗವಿನಿತಿಲ್ಲವು ॥

ಮೆರೆವಸದ್ಗುಣಸಾರದಿಂತಾ |
ನಿರುತಿರೆಯುಜನಕಂಗೊದವಿದಾ |
ಜರೆಯೊಳಗೆಮನ್ನಣೆಯಸೊಂದಿಪಪುತ್ರನವನಲ್ತೆ ॥ ೫ ॥

ನಿನ್ನಿ ದೈದಿಹದೇಹಪೊಲವಂ |
ಮುನ್ನಮೆಯದೆಂತಿರ್ಪುದೆಂಬುದ |
ನನ್ನಿಯಿಂದರಿದಿರುನೆಯುದರಿಂಬೀಜವಾಪೆಯಿನೆ ॥

ಸನ್ನುತಫಲಂಗಳೊದವಿಸಂ |
ಪನ್ನನೆಂಬುವಜನವದಕೆಫಲ |
ವೆನ್ನುವತೆರದೆತನುಜನತಿರ್ದಿಬಾಳ್ಮೆಯೊಂದಿಪುದು ॥ ೬ ॥

ಮೆರೆವವಿನಯವನರುಪೆತೋವಿಪ |
ಸರಸದಿಂವುರ್ಯ್ಯದೆಯಾಂಪುವ |
ತೆರದೆನಡೆಯಲುನಾಣ್ಜುದಾಪವಿರ್ತ್ತಿಪಾತ್ಮಜಗೆ ॥

ಪರರುಪಕೃತಿಯಮರೆಯದಿರ್ಪಾ |
ತೆರವಬಿಡದೆಕೃತಜ್ಞತಾಗುಣ |
ವರುಹುತಿರೆಪರಂಲೋಪವಧರ್ಮದಿನೆನಿಲವಾಂಪ ॥ ೭ ॥

ಮಿತದೊಳಿರ್ಪುದಮುಗ್ಧವರುಹಲು |
ಜತನದೊಳಗಾರೋಗ್ಯವಾಂಪನು |
ನುತವಿನೇಕದೋಧೆಯುಂಜಸಮಾಂತುಮೆರೆಯುವನು ॥

ಅತಿಶಯದಸತ್ಯದಿರವನರುಪೆ |
ಮತಿಯುವಂತರಪಿರಿಯರಹಸು |
ಸ್ತುತಿಗೆಪಾತ್ರನೆನಿಸುಶಲತಿಶಯಸೌಖ್ಯವಾಂತಿಹನು ॥ ೮ ॥

ಚತುರಮತಿಯುತನಾಗಲೆಡೆಗುಡ |
ಲತುಳಭಾಗ್ಯವವೃದ್ಧಿಗೈವನು |
ಹಿತವನೆಸಗುವಸಾಹ್ಯವೆನೆಯಲುದಾರನಾಗುವನು ||

ಕ್ಷಿತಿಯೊಳಂಪ್ರಾಕೃತಿಕಶಾಸ್ತ್ರವ |
ಹಿತದೆಕಲಿಸುತಲಿರ್ದೊಡಂಜೀ |
ವಿತವುಯೋಗ್ಯಮದಾಗಿಲೋಕದೆವಾನ್ಯನಾಗುವನು || ೯ ||

ದೇವನಿತ್ಯತ್ರಿಶಿರವನುವಿಂ |
ಭಾವದೊಳವಗಾಹನೆಗೆಬರ |
ಲಾವಕಾಲದೆವರ್ತಿಪಂತೆಯೆ ಮುತವಬೋಧಿವೊಡೆ ||

ಭೂವಲಯವಿದು ಮಿಥ್ಯೆಯೆಂಬಾ |
ಭಾವವಂಕುರಿಸುತ್ತೆಸಂತತ |
ದೇವನಡಿದಾವರೆಯನಂಬಲುಬಳುತಿಪುಟ್ಟುವುದು || ೧೦ ||

ಪಿತನುವಸುಮತಿಯೊಳಗೆವೊತನು |
ಪಿತನುತನುಜನದೇಹದಾಯಕ |
ಪಿತನುಧರೆಯೊಳುನೇತ್ರಯುಗ್ಮಕೆಕಾಣ್ಬದೇವನಲೆ ||

ಪಿತನುಸದ್ಗತಿಮಾರ್ಗದರ್ಶಕ |
ಪಿತನುಪುತ್ರನಜೀವರತ್ನವು |
ಪಿತನುಸರ್ವೋತ್ತಮನುನೆನ್ನುವರಿವನುಬೋಧಿಪುದು || ೧೧ ||

ಜನಾನಾ (Zenana)

(ಲೇಖಕರು—ಶ್ರೀಯುತ ಪಂಡಿತ ತಾರಾನಾಥರವರು)

ಮುಸಲ್ಮಾನ ಹೆಂಗಸರು ಇರುವ ಅಂತಃಪುರಕ್ಕೆ 'ಜನಾನಾ' ಎಂದು ಹೆಸರು. ಜನ್ ಅಂದರೆ ಹೆಂಗಸು. ಜನಾನಾ ಅಂದರೆ ಹೆಂಗಸರು ವಾಸಮಾಡುವಸ್ಥಳ. ಗಂಡಸರಿಗೂ ಹೆಂಗಸರಿಗೂ ಬೇರೆಬೇರೆ ಸ್ಥಳಗಳ ಏರ್ಪಾಡು ಮಾಡುವದಕ್ಕೇನು ಕಾರಣನೆಂಬುದನ್ನು ವಿಚಾರಿಸಬೇಕು. ಉಚ್ಚ ನೀಚಭಾವದಿಂದ ಈ ಏರ್ಪಾಡು ಉಂಟಾಯಿತೋ ಅಥವಾ ಗಂಡಸರಿಗೂ ಹೆಂಗಸಂಗೂ ಹಿತವಾಗುವಂತೆ ಅದು ಮಾಡಲ್ಪಟ್ಟಿತೋ? ಮುಸಲ್ಮಾನರ ಧರ್ಮಸ್ಥಾಪಕನಾದ ಮಹಮ್ಮದನ ವಾಕ್ಯಗಳನ್ನೇ ಪರಿಶೀಲಿಸಿ ನೋಡೋಣ. ಹೆಂಗಸರನ್ನು ಅವನು ನೀಚರೆಂದು ಭಾವಿಸುತ್ತಿದ್ದನೋ ಇಲ್ಲವೋ ಎಂಬ ಸಂಗತಿಯು ಒಡೆದುಕಾಣುವದು. ಅನುವಾದಿಸಲ್ಪಟ್ಟ ಈ ವಾಕ್ಯಾರ್ಥವನ್ನು ನೋಡಿ ವಾಚಕರು ತಾವೇ ತಿಳಿದುಕೊಳ್ಳುವದು ಉತ್ತಮ:—

1. "ಪವಿತ್ರನಾಗಿ ಪರಮಾತ್ಮನನ್ನು ಕಾಣಲು ಇಚ್ಛಿಸುವವನು ಯೋಗ್ಯಳಾದ ಮತ್ತು ಸ್ವತಂತ್ರಳಾದ ಸ್ತ್ರೀಯನ್ನು ವರಿಸಿಕೊಳ್ಳಬೇಕು".
2. "ಮುಸಲ್ಮಾನನು ತನ್ನ ಹೆಂಡತಿಯನ್ನು ದ್ವೇಷಿಸಬಾರದು".
3. "ನಿಮ್ಮ ಹೆಂಡಂದಿರನ್ನು ನೀವು ಹೊಡೆಯಬಾರದು".
4. "ತನ್ನ ಹೆಂಡತಿಯೊಡನೆ ಅತ್ಯುತ್ತಮವಾಗಿ ವರ್ತಿಸುವವನೇ ಉತ್ತಮನು".

ಇಂತಹ ಅನೇಕ ಉಪದೇಶಗಳನ್ನು ಮುಸಲ್ಮಾನ ಧರ್ಮಗ್ರಂಥಗಳಲ್ಲಿ ಕಾಣಬಹುದು. ಇಲ್ಲಿ ಅವತರಿಸಿದ ಕೆಲವು ವಾಕ್ಯಗಳಿಂದ ಹೆಂಗಸರಿಗೆ ಸನ್ಮಾನವು ಆ ಮತದಲ್ಲಿ ಧಾರಾಳವಾಗಿದೆ ಎಂಬುದು ಸ್ಪಷ್ಟವಾಗುವದಿಲ್ಲವೋ?

ಆದರೆ ಕೆಲವರು ಮುಸಲ್ಮಾನ ಹೆಂಗಸರ 'ಪೋಷಾ' ಪದ್ಧತಿಯನ್ನು ಕಂಡು ಪೋಷಾ ಮತ್ತು 'ಜನಾನಾ' ಎರಡೂ ಒಂದೇ ಎಂದುಕೊಂಡು ತಪ್ಪಿಹೋಗಿ "ಮುಸಲ್ಮಾನರು ಹೆಂಗಸರನ್ನು ಮುಚ್ಚಿಡುತ್ತಾರೆ" ಎಂದು ಹೇಳುತ್ತಾರೆ. ಇದು ಕೆಟ್ಟತಪ್ಪು. ಮನೆಯಲ್ಲಿ ಜನಾನಾ ವ್ಯವಸ್ಥೆಯು ಯೋಗ್ಯವೇ ಮತ್ತು ಹೊರಗೆ ಪೋಷಾಪದ್ಧತಿಯು ಮತಸ್ಥಾಪನೆಯ ಕಾಲದಲ್ಲಿ ಯೋಗ್ಯ ಮತ್ತು ಅಗತ್ಯವೇ ಆಗಿತ್ತು ಎಂಬುದೂ ವಿಚಾರಿಸಿನೋಡಿದರೆ ತಿಳಿದುಬರುವದು. ಮೊದಲು

ಗೋವಾ ಸದ್ಯಸ್ಥಿತಿಯವಿಷಯ ಚರ್ಚಿಸೋಣ: ಅದನ್ನು ಮಹಮ್ಮದನು ಸ್ಥಾಪಿಸಲಿಲ್ಲ. ಅದು ಆತನ ದೇಶದಲ್ಲಿಯು ಒಂದು ರೂಢಿ. ಆತನು ಇಸ್ಲಾಮು ಧರ್ಮವನ್ನು ಸ್ಥಾಪಿಸುವದಕ್ಕೆ ಮೊದಲು ಅರಬಸ್ಥಾನದ ಸ್ಥಿತಿಯು ಹಾಗಿತ್ತು ಎಂಬುದನ್ನು ಇತಿಹಾಸಮೂಲಕವಾಗಿ ತಿಳಿದುಕೊಳ್ಳಬೇಕು. ಅಗಿನ ಅರಬರಿಗೆ ನ್ಯಾಯನೀತಿಗಳ ವಾಸನೆಯು ಸಹ ಇರಲಿಲ್ಲ. ಹೆಂಗಸರನ್ನು ಇತರ ವಸ್ತುಗಳಂತೆಯೇ ಭೋಗ ಸಾಮಗ್ರಿಗಳೆಂದು ಅವರು ತಿಳಿದುಕೊಂಡಿದ್ದರು. ಬೇಕಾದಷ್ಟು ಹೆಂಡಂದಿರನ್ನು ಬೇಕಾದ ರೀತಿಯಿಂದ ಮಾಡಿಕೊಳ್ಳುವದೂ ಬಿಟ್ಟುಬಿಡುವದೂ ಅವರ ಸ್ವಚ್ಛಂದ ವೃತ್ತಿಯನ್ನವಲಂಬಿಸಿತ್ತು. ಇಲ್ಲಿಯೂ ರಾಕ್ಷಸ, ಪೈಶಾಚ್ಯ ವಿವಾಹಗಳು ಒಂದು ಕಾಲದಲ್ಲಿದ್ದವಷ್ಟೆ. ''ಜನತೆಯು ವಿಚಾರದಿಂದಲೇ ಪ್ರಗತಿಯನ್ನೈದಿ ಸುಖಪಡುತ್ತದೆ''. ಅಂತಹ ಕೆಟ್ಟಕಾಲದಲ್ಲಿ ಹೆಂಗಸರು ತಮ್ಮ ರೂಪವನ್ನು ಮರೆಮಾಚಿಕೊಂಡು ತಮ್ಮನ್ನು ಕಾಪಾಡಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿದ್ದರು. ಮಹಮ್ಮದನು ಧರ್ಮತತ್ವಗಳನ್ನೇನೋ ಸಾರಿದನು; ಆದರೆ ತತ್ವಗಳು ಜನರ ಆಚರಣೆಯಲ್ಲಿ ಬರಬೇಕಲ್ಲವೇ? ಅದಾದಮೇಲಲ್ಲವೇ ಹೆಂಗಸರಿಗೆ ಸ್ವಾತಂತ್ರ್ಯವು ತಾನೇಬರುವದು? ಗಂಡಸರ ನಡತೆಯು ಹತೋಟಿಗೆ ಬರುವವರೆಗಾದರೂ 'ಪರ್ದಾ' ಇರಲೇಬೇಕಷ್ಟೆ? ಇವೇ ಮೊದಲಾದ ವಿಚಾರಗಳನ್ನುಮಾಡುತ್ತ ಒಳ್ಳೇ ಕಾಲವು ಬರುವವರೆಗೂ ಆ ಗೋವಾ ಇದ್ದಂತಿರಲಿಯೆಂದು ಆತನು ಅದನ್ನು ಕುರಿತು ಮಾರ್ಪಾಡುಗಳನ್ನು ಮಾಡಲಿಲ್ಲ. ಇದರಿಂದ ಮುಸಲ್ಮಾನ ಹೆಂಗಸರಿಗೆ ಸ್ವಾತಂತ್ರ್ಯವಿಲ್ಲವೆಂದು ತಿಳಿದುಕೊಳ್ಳುವದು ಮೂರ್ಖತನ. ತಮ್ಮ ಮಾನವನ್ನು ಕಾಪಾಡುವದಕ್ಕಾಗಿ ಒಂದು ಮುಸುಕನ್ನು ಹಾಕಿಕೊಂಡರೆ, ಆ ಮುಸುಕು ಬಂಧನವಾಗುವದೆಂತು? ೧೯ನೆಯ ಅವತರಣದಲ್ಲಿ ಸ್ವತಂತ್ರ ಎಂಬ ಶಬ್ದವನ್ನು ನೋಡಿರಿ. ಅವಳ ತನು ಮನಸ್ಸುಗಳಿಗೂ ಸ್ವಾತಂತ್ರ್ಯವಿದೆ. ಅವಳು ಲೌಕಿಕ ವಿದ್ಯೆ, ಪಾರಮಾರ್ಥಿಕವಿದ್ಯೆ, ಧನ, ಇವುಗಳೆಲ್ಲವನ್ನೂ ಸಂಪಾದಿಸಬಹುದು. ಇಷ್ಟುಮಾತ್ರವೇ ಅಲ್ಲದೆ ಅತ್ಯುಚ್ಚವಾದ ಧರ್ಮೋಪದೇಶವನ್ನು ಇತರರಿಗೆ ಮಾಡುವ ಅಧಿಕಾರವು ಸಹ ಅವಳಿಗಿದೆ. ಮಹಮ್ಮದನ ಹೆಂಡತಿಯಾದ ಆಶಾಬೀಯು ಇಪ್ಪತ್ತು ಸಾವಿರ ಸಿಪಾಯಿಗಳ ಸೈನ್ಯವನ್ನು ಧರ್ಮಯುದ್ಧಕ್ಕಾಗಿ ರಣರಂಗಕ್ಕೆ ಕರೆದು ಕೊಂಡುಹೋದಳು. ಮತ್ತು ಯಾರೊಡನೆ ಯುದ್ಧವನ್ನಾಡಲಿಕ್ಕೆ? ತನ್ನ ಅಳಿಯನೊಡನೆಯೇ. ಅವನು ಅಧರ್ಮವನ್ನು ಮಾಡಿದನು ಎಂಬ ಒಂದು ತಪ್ಪುತಿಳುವಳಿಕೆಯು ಅವಳಿಗಿತ್ತು. ಮುಂದೆ ಸೈಜವು ತಿಳಿದಮೇಲೆ ಯುದ್ಧವು ಪ್ರಾರಂಭವಾಗಲಿಲ್ಲ. ಆಮಾತು ಬೇರೆ. ಆದರೂ ಇಪ್ಪತ್ತು ಸಾವಿರ ಸಿಪಾಯಿಗಳನ್ನೊಟ್ಟುಗೂಡಿಸಿ ಅವರನ್ನು ತನ್ನ ಆಜ್ಞೆಗೊಳಪಡಿಸುವದು ಸಾಮಾನ್ಯವಾದ ಕೆಲಸವೇ? ಇಂತಹ ಎಷ್ಟೋ ದೃಷ್ಟಾಂತಗಳು ಮುಸಲ್ಮಾನಸ್ತ್ರೀಯರ ಇತಿಹಾಸದಲ್ಲಿ ಕಂಡುಬರುತ್ತವೆ. ಶೋಶನ್ ಆರಾ, ಜೈಬುನ್ನಿಸಾ—ಔರಂಗಜೇಬನ ತಂಗಿ ಮತ್ತು ಮಗಳು, ಇವರಿ

ಬ್ಬರು, ಪಾಂಡಿತ್ಯದಲ್ಲಿಯೂ, ಕಾವ್ಯದಲ್ಲಿಯೂ, ರಾಜಕಾರಣದಲ್ಲಿಯೂ, ಕ್ಷಾತ್ರವೀರ್ಯದಲ್ಲಿಯೂ ಇವರ ಯೋಗ್ಯತೆಯನ್ನು ಎಷ್ಟು ವರ್ಣಿಸಿದರೂ ಕಡಿಮೆಯೇ! ಇವರಿಗೆ 'ಗೋಷಾ' ಇರಲಿಲ್ಲವೋ ? ಅದು ಅವರು ತಾವೇ ಆಗಿ ಅವಲಂಬಿಸಿಕೊಂಡದ್ದು. ಅಲ್ಲದೆ ಅವರಿಗೆ ಸ್ವಾತಂತ್ರ್ಯವು ಇಲ್ಲವೆ ಎಂದಿಗೂಹೋಗಲಿಲ್ಲ. ಈಗಲೂ ಅವರ ಮಧ್ಯಮ ತರಗತಿಯ ಸ್ತ್ರೀಯರಲ್ಲಿದ್ದಷ್ಟು ಧರ್ಮಜ್ಞಾನ ವಿನಯಸಂಪನ್ನರು ಉತ್ತಮತರಗತಿಯವರಾದ ಹಿಂದೂಸ್ತ್ರೀಯರಲ್ಲಿಲ್ಲವೆಂದು, ನಿಶ್ಚಯವಾಗಿ ಹೇಳಬಹುದು. ಉರ್ದು, ಫಾರ್ಸಿ ಭಾಷೆಗಳಲ್ಲಿ ಅದ್ಭುತವಾದ ಪದ್ಯ ಗದ್ಯಗಳನ್ನು ಬರೆಯುವವರು ಅವರಲ್ಲೆಷ್ಟೋಮಂದಿ ಇದ್ದಾರೆ. 'ಹಾಫಿಜಾ' ಅಂದರೆ ಸ್ವಧರ್ಮ ಗ್ರಂಥಗಳನ್ನು ಮುಖೋದ್ಗತವಾಗಿಟ್ಟುಕೊಂಡ ಹೆಂಗಸರು, ಹತ್ತು ಹನ್ನೆರಡು ವರ್ಷದೊಳಗಣ ಹುಡುಗಿಯರು ಅವರಲ್ಲೆಷ್ಟೋಮಂದಿ 'ಹಾಫಿಜಾ' ಇದ್ದಾರೆ ಧರ್ಮವೆಂದರೆ ಮಡಿ ಮೈಲಿಗೆಯ ಗೊಂದಲ ಒಂದೇ ಅಲ್ಲ. ಈ ಶಂಖಘಂಟಾನಾದಗಳು ಮಾತ್ರವಲ್ಲ. ವಿನಯ ವಿಜ್ಞಾನಗಳು ಅದರ ಮುಖ್ಯಾಂಗಗಳು. ಗೃಹಕೃತ್ಯಗಳಲ್ಲಿಯೂ ಸಮಾಜ ಸೇವೆಯಲ್ಲಿಯೂ ಆಚಾರವಿಚಾರಗಳೆರಡಲ್ಲಿಯೂ ಆವಶ್ಯಕವಾಗಿರುವದೇ ಧರ್ಮ. ಈ ದೃಷ್ಟಿಯಿಂದ ನೋಡಿದರೆ ಅಸಹಕಾರದ ದಿನಗಳಲ್ಲಿ ಮುಸಲ್ಮಾನಹೆಂಗಸರು ಮಾಡಿದ ಸಾಹಸವು ಎಷ್ಟು ಅದ್ಭುತವಾಗಿತ್ತು ಎಂಬದು ಕಂಡುಬರುವದು. ಉತ್ತರ ಹಿಂದೂ ಸ್ಥಾನಕ್ಕೆ ಸೇರಿದ ಮೌಲಾನಾ ಫಾಕಿರ್ ಎಂಬ ಒಬ್ಬ ಸ್ನೇಹಿತರ ಹೆಂಡತಿಯನ್ನು ಕುರಿತು ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಮೌಲಾನಾಯವರ ಪಾಂಡಿತ್ಯ, ವಾಗ್ಝೋರಣಿ, ಧೈರ್ಯ ಮುಂತಾದವುಗಳನ್ನು ಅನೇಕರು ಒಪ್ಪರು ಅವರನ್ನು ಖಿಲಾಫತ್ ವ್ಯಾಖ್ಯಾನಗಳಿಗಾಗಿ ಸೆರೆಹಿಡಿದಕಾಲದಲ್ಲಿ ಅವರ ಹೆಂಡತಿಯು ತನ್ನ ಧರ್ಮದ ರೂಢಿಯ ಪ್ರಕಾರ ಅನಂದದಿಂದ ಅವರ ಕಣ್ಣಿಗೆ ಸುರ್ಮಾ (ಪುಡಿಕಾಡಿಗೆ) ಹಚ್ಚಿದಳು. ಹೀಗೆ ಹಚ್ಚುವದು ಅನಂದದ ಚಿನ್ಹೆ. ಮೇಲೆ ಸೆರೆಮನೆಯು ಬಾಗಿಲಿನ ಹತ್ತರ 'ನೀವೀಗ ಧರ್ಮಕ್ಕಾಗಿ ಸುನ್ನತೆ-ಜೈನ.ಲಾಬುದೀನ್ ಮಾಡುತ್ತಿದ್ದೀರಿ. ಸುನ್ನತೆ-ಅಲಿಯನ್ನು ಮಾಡಿ ತೋರಿಸಿದರೆ ನನಗೆ ಯೋಗ್ಯನಾದಗಂಡನೆಂದು ನಾನು ತಿಳಿದುಕೊಳ್ಳುವೆನು' ಎಂದು ಅಲ್ಲಿ ಕೂಡಿದ ಜನಸಮೂಹದಲ್ಲಿ ಹೇಳಿದಳು. ಜೈನುಲಾಬುದೀನ ಎಂಬುವನು ಪೂರ್ವದಲ್ಲಿ ಧರ್ಮಕ್ಕಾಗಿ ಬಂಧಿಸಲ್ಪಟ್ಟನು. ಅಲಿಯು ಧರ್ಮಕ್ಕಾಗಿ ಕೊಲ್ಲಲ್ಪಟ್ಟನು. ಅವಳು ಗಂಡನಿಗೆ ಹೇಳಿದುದರ ಅರ್ಥವೇನೆಂದರೆ:— "ನಿಮಗೀಗ ಧರ್ಮಕ್ಕಾಗಿ ಒಣಬುಧನವು ಮಾತ್ರ ಪ್ರಾಪ್ತವಾಗುತ್ತಿದೆ. ಧರ್ಮಕ್ಕಾಗಿ ನನ್ನ ಪತಿಗೆ ಮರಣ ಪ್ರಾಪ್ತವಾದಾಗಲೇ ನನ್ನ ಜನ್ಮ ಸಾರ್ಥಕವಾಯಿತು ಎಂದು ನಾನು ತಿಳಿದುಕೊಂಡೇನು" ಎಂಬದೇ! ಅಲಿ ಬಂಧುಗಳ ತಾಯಿ, ಮುಹಮ್ಮದಲಿಯ ಹೆಂಡತಿ ಮಾಡಿದ ಧೈರ್ಯಯುತ ತ್ಯಾಗ ಸಾಹಸಗಳು ಸಾಧಾರಣವೋ ? ಮೌಲಾನಾ ಅಬ್ದುಲ್ ಮಜೀದ್ ಶರರ್ ಎಂಬುವರು ಮದ್ರಾಸ್ ಕಾಮಿನೋರ್ಸ್ ಎಂಬ ಪತ್ರಿಕೆಯ ಸಂಪಾದಕರಾಗಿದ್ದರು. ಅವರ ನಿರ್ಭಯತ್ವ

ಯೋಗ್ಯತೆಗಳನ್ನು ಅರಿಯದ ಮುಸಲ್ಮಾನರು ಬಹಳ ಕಡಿಮೆ. ಅವರು ನನ್ನ ಪರಮ ಸ್ನೇಹಿತರಾಗಿದ್ದುದರಿಂದ ಅವರ ಸ್ಥಿತಿಯನ್ನು ನಾನು ಚನ್ನಾಗಿ ಬಲ್ಲೆನು. ಅವರು ಖಿಲಾಫತಿಗಾಗಿ ಮತ್ತು ಮಹಾತ್ಮರಲ್ಲಿ ಕಮಗಿದ್ದ ಗೌರವಕ್ಕಾಗಿ ಮಾಡಿದ ತ್ಯಾಗವು ಎಂತಹದು! ಅವರು ಟ್ರಿಪ್ಲಿಕೇನಿನಿಂದ ಸೆಂಟ್ ಥಾಮಸ್ ಮೌಂಟಿಗೆ ವಾರಕೊಮ್ಮೆಂದು ಸಲ ತನ್ನ ಹೆಂಡತಿ ಮಕ್ಕಳನ್ನು ನೋಡಲಿಕ್ಕೆ ಹೋಗುತ್ತಿದ್ದರು. ಉಳಿಕೆಯ ಕಾಲವೆಲ್ಲ ಬರೆಯುವದಗಲ್ಲಿಯೂ, ವ್ಯಾಖ್ಯಾನನನ್ನು ಕೊಡುವದರಲ್ಲಿಯೂ ಹೋಗುತ್ತಿತ್ತು. ಅಹೋರಾತ್ರಿ ಕೆಲಸಮಾಡುತ್ತಿರುವದರಿಂದ ದೇಹವು ಕಟ್ಟುಹೋಗಿ ರಕ್ತವಾಂತಿಯು ಪ್ರಾರಂಭವಾಯಿತು. ಆವಾಗಲೂ ವ್ಯಾಖ್ಯಾನಗಳನ್ನು ಬಿಡಲಿಲ್ಲ. ಎಂಟೊಂಭತ್ತು ದಿನಗಳಾದ ಮೇಲೆ ನನಗೆ ಈ ಸುದ್ದಿಯು ತಿಳಿಯಿತು. ಅವರಿಗೆ ನನ್ನಲ್ಲಿರುವ ವಾತ್ಸಲ್ಯದಿಂದ ಧೈರ್ಯಪಟ್ಟು ನಾನವರನ್ನು ವಿಶ್ರಾಂತಿಗೊಳ್ಳುವಂತೆ ಕೇಳಿಕೊಂಡೆನು. "ದೇಶ ಧರ್ಮಸ್ವಾತಂತ್ರ್ಯಕ್ಕಿಂತ ಈ ದೇಹವು ಹೆಚ್ಚೇ?" ಎಂದು ನಗುತ್ತ ಕೆಮ್ಮುತ್ತ ಹೇಳಿದರು. "ನಿಮ್ಮ ಜವಾಬ್ದಾರಿಯನ್ನು ನಾನು ವಹಿಸಿಕೊಂಡು ಎಲ್ಲ ವ್ಯಾಖ್ಯಾನಗಳನ್ನೂ ನಾನು ಕೊಡುತ್ತೇನೆ. ನಿಮ್ಮ ಆಶೀರ್ವಾದ ಒಂದಿದ್ದರೆ ಸಾಕು. ಅಲ್ಲದೆ ನೀವು ಇನ್ನು ದೇಹವನ್ನು ಕೆಡಿಸಿಕೊಂಡರೆ ನಾನು ಸತ್ಯಾಗ್ರಹವನ್ನು ಮಾಡುತ್ತೇನೆ" ಎಂದು ಹೇಳಿದೆನು. ಹೀಗೆ ಹೇಳಿ ಅವರ ಕರ್ತವ್ಯವನ್ನು ನಾನು ವಹಿಸಿಕೊಳ್ಳಲುಪಕ್ರಮಿಸಿದ ಮೇಲೆ ತಾವು ವಿಶ್ರಾಂತಿಯನ್ನು ತಕ್ಕೊಂಡರು. ಮುಂದೆ ಅವರ ಮಗನಿಗೆ ಬಹಳ ಖಾಯಿಲೆ ಆಯಿತು. ಆದರೆ ತಮ್ಮ ಕೆಲಸವನ್ನು ಬಿಟ್ಟು ಅವರು ಸೆಂಟ್ ಥಾಮಸ್ ಮೌಂಟಿಗೆ ಹೋಗಲೇ ಇಲ್ಲ. ಬಹಳ ಅಪಾಯವು ಕಂಡುಬಂದಮೇಲೆ ಅವರ ಪತ್ನಿಯು ಹುಡುಗನನ್ನು ಬಂಡಿಯಲ್ಲಿ ಕರೆದುಕೊಂಡು ಟ್ರಿಪ್ಲಿಕೇನಿಗೆ ಬಂದಳು. ಆಗ ಒಂದು ಅಗತ್ಯವಾದ ಲೇಖನವು ಪ್ರೆಸ್ಸಿಗೆ ಹೋಗಬೇಕಾಗಿತ್ತು. ಅದನ್ನು ಬರೆಯುವಾಗ ಕೆಳಗಿನಿಂದ ಸುದ್ದಿಯನ್ನು ತಿಳಿಸಲಿಕ್ಕೆ ಒಬ್ಬನು ಮಾಳಿಗೆ ಮೇಲಿರುವ ಆಫೀಸಿಗೆ ಬಂದನು. ಪ್ರೆಸ್ಸಿಗೆ ಹೋಗುವ ಹೊತ್ತು ಹತ್ತಿರಕ್ಕೆ ಬಂದಿತ್ತು. ಲೇಖನವನ್ನು ಮುಗಿಸಿ ಬರುತ್ತೇನೆಂದು ಹೇಳು, ಎಂದು ಮನುಷ್ಯನನ್ನು ವಾಪಸು ಕಳುಹಿಸಿಕೊಟ್ಟರು. ಇಪ್ಪತ್ತು ನಿಮಿಷಗಳೊಳಗೆ ಮುಗಿಸಿ ಕೆಳಕ್ಕೆ ಬಂದರು. ತಾಯಿಯು ಗಂಡನಿಗೆ ಸಲಾಂ ಮಾಡಿ ರೋಗಿಯ ತಲೆಯಮೇಲಿನ ಬಟ್ಟೆಯನ್ನು ತೆಗೆಯುತ್ತಾಳೆ. ಅಯ್ಯೋ! ಹುಡುಗನ ಪ್ರಾಣವು ಹೋಗಿದ್ದಿತು. ಈ ಮಹಾತ್ಮನ ಕಣ್ಣಿನಲ್ಲಿ ನೀರಿಲ್ಲ. ತಾಯಿಯು ಶಾಂತಳಾಗಿ ಗಂಡನನ್ನೂ ಮಗನನ್ನೂ ನೋಡುತ್ತಿದ್ದಾಳೆ. "ದೈವ ಇಚ್ಛೆ. ಅನೇಕ ವಿಧಗಳಿಂದ ನಮ್ಮನ್ನು ಆಡಿಸುತ್ತಾನೆ. ಆದರೂ ಅವನು ಪರಮದಯಾಳು. ನಾವು ಶಾಂತರಾಗಿರಬೇಕು. ಅಳುವದು ಅಧರ್ಮ. ಮಗನನ್ನು ಸಮಾಧಿಯಲ್ಲಿಡುವುದಕ್ಕೆ ಬರಲು ನನಗೆ ಅವಕಾಶ ವಿಲ್ಲ. ಇಗೋ! ಈ ಐದು ರೂಪಾಯಿಗಳ ನೋಟು. ಇದರಿಂದ ಅವನನ್ನು

ನೀನು ಹೋಗಿ ದಫನಾಯಿಸು (ಹೊಂಡದಲ್ಲಿಡು)'' ಎಂದು ಹೆಂಡತಿಗೆ ಹೇಳಿ ತನ್ನ ವೆಸ್ಟ್‌ಕೋಟ್ ಜೇಬಿನಿಂದ ನೋಟು ತೆಗೆದುಕೊಟ್ಟು ಮಾಳಿಗೆಯನ್ನೇರಿದರು. ಆ ದಿವ್ಯ ಲಲನಾಮಣಿಯೋ ಹೆಣದೊಡನೆ ದೈವಧ್ಯಾನ ಮಾಡುತ್ತ ಶಾಂತಳಾಗಿ ಹಿಂತಿರುಗಿದಳು. ಇಂತಹ ಹೆಂಗಸರು ಹಿಂದೂಸಮಾಜದಲ್ಲೀಗ ಎಷ್ಟುಮಂದಿ ಕಂಡುಬರುತ್ತಾರೆ? ತಮ್ಮ ತಮ್ಮ ಸಂಸಾರದಲ್ಲಿ ಸ್ವಾನುಕೂಲತೆಗೆ ಎಷ್ಟುಬೇಕೋ ಅಷ್ಟೇ ವಿದ್ಯೆ ಅಲ್ಲ, ಕೆಲಸವನ್ನು ಹೆಂಡಂದಿರಿಗೆ ಕಲಿಸುತ್ತಾರಷ್ಟೇ ಅಲ್ಲದೆ ಇತರ ವಿಷಯಗಳ ಸುದ್ದಿಯೇ ಅವಳಿಗೆ ತಿಳಿಸುವದಿಲ್ಲ. ಮೇಲೆ ಪ್ರಪಂಚದ ಅನುಭವವು ಎಷ್ಟು ಕಡಿಮೆ ಇರುತ್ತದೋ ಅಷ್ಟು ಕೀರ್ತಿ ಅವಳಿಗೆ ಗಂಡನಕಡೆಯಿಂದ. "ನನ್ನ ಹೆಂಡತಿ ಒಳ್ಳೇ ಸಾಧ್ವಿ; ಪಾಪ! ಪ್ರಪಂಚದ ವಿಷಯ ಏನೇನೂ ಅರಿಯಳು'' ಎಂದು ದೊಡ್ಡ ದೊಡ್ಡ ವಕೀಲರಾದ, ಪ್ರೊಫೆಸರಾದ ನನ್ನ ಸ್ನೇಹಿತರೆಷ್ಟೋ ಮಂದಿ ತಮ್ಮ ಹೆಂಡಂದಿರನ್ನು ಕುರಿತು ನನ್ನೊಡನೆ ಹೀಗೆ ಮಾತನಾಡಿದ್ದಾರೆ! ಇದಕ್ಕಿಂತ ಹೀನ ದುರ್ದಶೆಯು ಉಂಟೇ! ಅಜ್ಞಾನವನ್ನೂ ಮೌಢ್ಯವನ್ನೂ ಭೂಷಣವೆಂದು ವಿದ್ಯಾವಂತರಿನಿಸಿಕೊಳ್ಳುವವರು ತಿಳಿದುಕೊಂಡಮೇಲೆ ದೇಶದ ದುರ್ಗತಿಯನ್ನು ಯಾರೂ ಊಹಿಸಬಹುದು.

ಜನಾನಾ ಎಂದರೆ ಸೆರೆಮನೆಯೆಂದು ಅನೇಕರ ಭಾವ. ಇದು ತಪ್ಪು ಹೆಂಗಸರಿಗೆ ಬೇಕಾದಷ್ಟು ಸ್ವಾತಂತ್ರ್ಯವನ್ನೊದಗಿಸಿಕೊಡುವದಕ್ಕಾಗಿ ಅದು ಏರ್ಪಟ್ಟಿದೆ. ಅಲ್ಲಿ ಹೆಂಗಸರು ಮಾತ್ರ ಅಪ್ಪಣೆಯಿಲ್ಲದೆ ಪ್ರವೇಶಿಸಬಹುದಲ್ಲದೆ ಮನೆಯ ಯಜಮಾನನೂ ಅಪ್ಪಣೆಯಿಲ್ಲದೆ ಪ್ರವೇಶಿಸಲಾರನು. ಹೆಂಗಸರಿಗೆ ಆಯಾಸವಿಲ್ಲವೋ? ಆಗ ಅವರು ಅಲ್ಲಿ ಮನಸ್ಸಿಗೆ ಬಂದಂತೆ ಹೊರಳಾಡಬಹುದು. ಅವರಿಗೆ ಆಟನಾಟಗಳಿಲ್ಲವೋ? ಜನಾನಾದೊಳಗೆ ಅವರು ಲಜ್ಜೆಯನ್ನು ಬಿಟ್ಟು ಸಂತೋಷವಾಗಿರಬಹುದು. ''ಉಲ್ಲಾಸವೇ ಆಗಲಿ, ಆಯಾಸವೇ ಆಗಲಿ ಹೆಚ್ಚಾದ ಕಾಲದಲ್ಲಿ ಲಜ್ಜೆಯನ್ನಿಟ್ಟುಕೊಳ್ಳುವದು ಪ್ರಕೃತಿಗೇ ವಿರುದ್ಧವಾದದ್ದು.'' ಅಹೋರಾತ್ರಿ ಗಂಡಸಂಗಾಗಿ ಮುದುರಿಕೊಂಡು ಮುಚ್ಚಿಕೊಂಡು ಕೂತುಕೊಳ್ಳಬೇಕೆಂದರೆ ಒಂದು ಆಜನ್ಮಶಿಕ್ಷೆಯೇ. ಸಾಮಾನ್ಯವಾಗಿ ಹಿಂದೂ ಜನರಲ್ಲಿ ಹೆಂಗಸರಿಗೆ ಪೂರ್ವಕಾಲದಲ್ಲಿದ್ದಂತೆ ಅಂತಃಪುರವು ಇಲ್ಲವೇ ಇಲ್ಲ. ಪ್ರಕೃತಿ ಗುಣ ಸ್ಥಿತಿಗತಿಗಳಿಗನುಕೂಲವಾಗುವಂತೆ ಪ್ರತಿಸ್ತ್ರೀಯಳಿಗಾಗಿ ಜಾಗವೇ ಇಲ್ಲ ದೇವರಮನೆಯಲ್ಲಿ ಏಕಾಂತವಿದೆ; ಅದರ ಅಲ್ಲಿ ಮಲಗಬಾರದು. ಮತ್ತೆ ಅಡಿಗೆಮನೆಯ ನೆಲವೇ ಗತಿ. ಯಾಕಂದರೆ ಹಾಸಿಗೆ, ಚಾಪೆ ಅಲ್ಲಿ ತಳ್ಕೊಂಡುಹೋದರೆ ಮೈಲಿಗೆ, ದೇವರಕಡೆಯಲ್ಲಿ ಗಂಡಸರಿದ್ದಾರೆ! ಅವರಿದಿರಿನಲ್ಲಿ ಮಲಗುವದು ಅಧರ್ಮ! ಅವರ ಒಳಿಗಾರಂ ಮರ್ಯಾದಗೆ ಕಮ್ಮಿ! ಇಂಥ ಹಿಂಸೆಯು ತುಳುಕರ ಹೆಂಗಸರಿಗೆ ಬಹಳ ಅಪರೂಪ. ಸ್ತ್ರೀಸ್ವಭಾವಕ್ಕನುಸಾರವಾಗಿ ಅವರು ತಮ್ಮ ಜನಾನಾದೊಳಗೆ ಬೇಕಾದಂತಿರಬಹುದು. ಅಲ್ಲಿ ಹಸಿ, ಒಣ ಸ್ವಚ್ಛತೆಯಿಲ್ಲ ಎಂಬಿನದು

ತಿಳುವಳಿಕೆಯಿಲ್ಲದವರ ಮಾತು. ನಾನು ನೈದ್ಯನಾಗಿ ಎಷ್ಟೋ ಜನಾನಾಗಳನ್ನು ನೋಡಿದ್ದೇನೆ. ಮುಸಲ್ಮಾನರಲ್ಲಿ ಗಂಡಸರಲ್ಲಿಯೂ ಹೆಂಗಸರಲ್ಲಿಯೂ ಸ್ವಚ್ಛತೆಯು ಕಡಿಮೆಯೆಂಬುದು ನಿಜ. ಆದರೆ ಹೆಂಗಸರನ್ನು ಮಾತ್ರ ಗಾಳಿಯಿಲ್ಲದ ಜಾಗೆಯಲ್ಲಿಡುತ್ತಾರೆ ಎಂಬ ಮಾತು ಸುಳ್ಳು. ಹಾಗೆಲ್ಲಿಯಾದರೂ ಇದ್ದರೆ ಮಧ್ಯಸ್ಥಿತಿಯವರ ಕೆಲವು ಮನೆಗಳಲ್ಲಿ ಮಾತ್ರ ಇವೆ. ಬಡವರಿಗೆ 'ಗೋಷಾ' 'ಜನಾನಾ' ಸಾಧಾರಣವಾಗಿ ಇಲ್ಲವೇ ಇಲ್ಲ. ದೊಡ್ಡವರಲ್ಲಿ ವಿಶಾಲವಾದ ಸುಖತರವಾದ ಜನಾನಾಗಳಿವೆ. ಮತ್ತು ಅಲ್ಲಿ ಅವರಿಗೆ ಬೇಕಾದಷ್ಟು ಸ್ವಾತಂತ್ರ್ಯವಿದೆ.

"ಅವರಲ್ಲಿ ಈಗಲೂ ಅನುಕೂಲತೆ ಇಲ್ಲದಿದ್ದರೆ ಮಾತ್ರ ಹುಡುಗಿಯರಿಗೆ ವಿದ್ಯೆ ಕಲಿಸುವದಿಲ್ಲ. ಅಲ್ಲದೆ ಸಾಧಾರಣವಾಗಿ ಮಧ್ಯಮ ಉಚ್ಚ ತರಗತಿಯ ಎಲ್ಲ ಹುಡುಗಿಯರಿಗೂ ಓದು ಬರಹಗಳನ್ನು ಧರ್ಮವೆಂದರಿತು ಕಲಿಸಿಯೇ ತೀರುತ್ತಾರೆ." ಹಿಂದೂ ಜನರಲ್ಲಿ ಹುಡುಗಿಯು ಹುಟ್ಟುವದು ವಿವಾಹಕ್ಕಾಗಿಯೇ; ಹುಡುಗನ ಗುಲಾಮಗಿರಿ ಒಂದನ್ನು ಮಾಡುವುದಕ್ಕಾಗಿಯೇ. ದೊಡ್ಡ ದೊಡ್ಡ ಪಂಡಿತರ ಮನೆಯ ಹೆಂಗಸರೂ ನಿರಕ್ಷರಕುಕ್ಷಿಗಳೇ. ಅಡಿಗೇಮನೆಯು, ದೇವರಮನೆಯು ಸಾಂಪ್ರದಾಯಗಳನ್ನು ಗಂಡಸರಿಗೆ ತೊಂದರೆ ಇಲ್ಲದಂತೆ ನಡೆಸುವಮಟ್ಟಿಗೆ ಯೋಗ್ಯತೆ ಇದ್ದರೆ ಸಾಕು. ಆ ಹೆಂಗಸು ಉತ್ತಮತರಗತಿಗೇ ಸೇರಿಬಿಡುತ್ತಾಳೆ. ಸ್ವಾನಸೂಕ್ಷ್ಮ ದೇವತೆಯ ಉಪಾಸಕರಾದ ಗಂಡಸರ ಆಶೀರ್ವಾದದಿಂದ ಇನ್ನೇನು ಕಡಿಮೆ? ಗಂಡನಿಗೆ ಸುಖ, ಹೆಂಡತಿಗೆ ಸಂತೋಷ! ಧರ್ಮ ಮುಗಿಯಿತು!

'ನಸ್ತ್ರೀಣಾಂಸ್ವಾತಂತ್ರ್ಯಮರ್ಹತಿ'. ಹೆಂಗಸರು ಸ್ವಾತಂತ್ರ್ಯಕ್ಕೆ ಅರ್ಹರಲ್ಲ ಎಂಬ ಮುಖ್ಯ ನಿರ್ಧಾರವು ಮನುಧರ್ಮಶಾಸ್ತ್ರದೊಳಗೆ ಯಾರೋ ತೋರಿಸುವದಕ್ಕೆ ಮೊದಲು ಹಿಂದೂ ಸ್ತ್ರೀಯರೂ, ಉತ್ತಮ ಮೇಧಾವಿಗಳೂ ಧಾರ್ಮಿಕರೂ ತೇಜಸ್ವಿಗಳೂ ಆಗಿದ್ದರು. ಈ ನೀಚವಿಚಾರವು ಬಂದಂದಿನಿಂದ ಅವರು ಕೇವಲ ಶಿಶೂತ್ಪಾದಕಯಂತ್ರಗಳಾಗಿ ಇಡಲ್ಪಟ್ಟಿದ್ದಾರೆಂದರೆ ಅತಿಶಯೋಕ್ತಿಯಾಗಲಾರದು.

"ಶುರ್ಕರು" ಮೂರ್ಖರು. 'ಮಹಾಮಡನ' ಅಂದರೆ 'ಮಹಾಮೂರ್ಖ' 'ಮಹಾ ಮಡೆಯ' ಎಂದು ಅವರನ್ನು ನಿಂದಿಸುವದು ಅವಿವೇಕ. ಅವರಲ್ಲಿರುವ ಅಜ್ಞಾನಿಗಳನ್ನು ಮಾತ್ರ ಕಂಡು ಅವಿವೇಕಿಗಳಂತೆ ಅವರ ಧರ್ಮಸಾಂಪ್ರದಾಯಗಳನ್ನು ಕುರಿತು ನಿರ್ಧರಿಸುವದು ಮೂರ್ಖತನ. ನಾನಾ ಮತಗಳಿಗೆ ಸೇರಿದ "ಸವರ್ಣಾನತರಗತಿಯ ಪುರುಷ ಸ್ತ್ರೀಯರುಗಳನ್ನು ಮಾತ್ರ ಸರಿಹೋಲಿಸಿ ನೋಡಬೇಕು. ಆಗ ಮಾತ್ರ ನೈಜವು ತಿಳಿದುಬರುವದು." ಮತ ಮತಗಳಲ್ಲಿರುವ ಪರಸ್ಪರ ಕ್ಷೇತಗಳಿಗೆ "ಅಜ್ಞಾನವೇ ಮುಖ್ಯಕಾರಣವಲ್ಲದೆ ಅನರ್ಹತೆ ಅಲ್ಲ." ಪರಸ್ಪರ ಪರಿಚಯವನ್ನು ಮಾಡಿಕೊಂಡು ಒಬ್ಬರನ್ನೊಬ್ಬರು ಜನ್ಮಕ್ಕಾಗಿ ತಿಳಿದು

ಕೊಳ್ಳುವವರೆಗೆ " ಕೂಪಮಂಡೂಕನ್ಯಾಯ " ವೇ ಪ್ರಬಲವಾಗಿದ್ದು ಎಲ್ಲರಿಗೂ ದುರ್ಭಿಕ್ಷ, ದುರ್ಗತಿ, ಭಯ, ಸಂತಾಪಗಳೇ ಲಭಿಸುವವಲ್ಲದೆ ಸುಖವು ಸುಕರಾಂ ಉಂಟಾಗಲಿಕ್ಕಿಲ್ಲ. ಸ್ವರಾಜ್ಯವು ಹಾಗಿರಲಿ; ಸಾಮಾನ್ಯವಾದ ಸದ್ಗುಣಗಳೂ ಸಹ ಬರಲಿಕ್ಕಿಲ್ಲ. ಪ್ರತಿಯೊಂದು ಸಂಸ್ಕೃತಿಯಲ್ಲಿಯೂ ಒಂದು ಸೌಂದರ್ಯವಿದೆ, ಬಲವಿದೆ. ಅದನ್ನು ತಿಳಿದುಕೊಳ್ಳುವದರಿಂದ ತಮ್ಮ ಬುದ್ಧಿಯೂ ಪ್ರಫುಲ್ಲಿತವಾಗುತ್ತದೆ. ಸಹಿಷ್ಣುತೆಯು ಹೆಚ್ಚಿ, ಪ್ರೇಮವು ಬೆಳೆದು ಸಮಾಜಕ್ಕೂ ಸುಖವಾಗುತ್ತದೆ. ದೊಡ್ಡಸ್ಥಿಕೆಯನ್ನು ಕಂಡಲ್ಲಿ ಪೂಜಿಸದೇಕು.

" ಜ್ಞಾನ ಧೈರ್ಯ ಶ್ರದ್ಧೆ ಮೌನದಿ, ಪರಮಶಿವ ತವಧ್ಯಾನ ಮಂತ್ರವ ಮಾಡಿಕೊಳ್ಳದೆ, ನಿಗ್ರಹವೆ ಗೃಹದೇವನೆನುತಲಿ, ಸಕಲಜನ ಮತಸ್ಥಾನದಲಿ ಗುರು (ಸ್ವೀಕೃತ್ಯ) ನನ್ನೆ ಕಾಣುತ, ಪ್ರೇಮರಸವನು ಕಾರ್ಯರೂಪದಿ, ಮಾಡಿಬದುಕೆಲೆ ಮೂಢಮತಿ ನೀನು, " ಎಂಬ ಸ್ವತಂತ್ರವಚನದ ಸಾರವನ್ನು ಹೀರಿ ' ಪ್ರೇಮಾಮೃತ ' ಲಹರಿಯಲ್ಲಿ ಲೀಲಾಲೋಲರಾಗಿ ಯಾತ್ರಿಸುವವರೇ ನಿಜವಾದ ಧರ್ಮಾಭಿಮಾನಿಗಳು.

ಗ್ರಂಥಪರಿಚಯ.

ಈ ಕೆಳಗಿನ ಗ್ರಂಥಗಳನ್ನು ವಿಮರ್ಶೆಗಾಗಿ ಕಳುಹಿಸಿಕೊಟ್ಟ ಮಹನೀಯರಿಗೆ ಸರಸ್ವತಿಯು ಕೃತಜ್ಞಳಾಗಿರುವಳು.

ಸ್ಕೌಟುಗಳ ಕನ್ನಡ ಕೈಪಿಡಿ :—ಕನ್ನಡದಲ್ಲಿ ಸ್ಕೌಟ್ ಪದ್ಧತಿಯ ವಿಷಯಗಳನ್ನು ತಿಳಿಸುವ ಗ್ರಂಥವೊಂದಿಲ್ಲದೆ ಬಹಳ ಕೊರತೆಯಾಗಿದ್ದಿತು. ಹಿಂದುಸ್ಥಾನೀ ಸೇವಾದಲದ ವ್ಯವಸ್ಥಾಪಕರಾದ ಶ್ರೀಯುತ ನಾರಾಯಣ ಸುಬ್ರಾಯ ಹಾರ್ಡಿಕರ್ ಅವರು, " ವಾಲಂಟಿಯರ್ " ಎಂಬಭಿದಾನದಿಂದ ಒಂದು ಮಾಸಪತ್ರಿಕೆಯನ್ನು ನಡೆಸುತ್ತಿರುವರಾದರೂ ಅದರಲ್ಲೂ ಬಾಲಚಮೂ ಪದ್ಧತಿಯ ವಿಚಾರಗಳು ಪೂರ್ತಿಯಾಗಿಲ್ಲ ಈ ಕುಂದನ್ನು ನೀಗಿಸಬೇಕೆಂಬ ಅಭಿಲಾಷೆಯಿಂದ, ಯದುವಿಜಯ, ಕಂಠೀರವ, ಮೊದಲಾದ ಗ್ರಂಥಗಳ ಕರ್ತರಾದ ಶ್ರೀಯುತ ಎಂ. ಆರ್. ಶ್ರೀನಿವಾಸಮೂರ್ತಿ, ಬಿ. ಎ. ಯವರು ಈ ಅಮೂಲ್ಯ ಗ್ರಂಥವನ್ನು ರಚಿಸಿ ನಮ್ಮಾ ವೈಸೂರು ದೇಶಕ್ಕೆ ದೊಡ್ಡ ಉಪಕಾರವನ್ನು ಮಾಡಿರುವರು. ಶೈಲಿಯು ಸುಲಭವಾಗಿಯೂ ಅಂದವಾಗಿಯೂ ಮುದ್ರಣವು ಅಚ್ಚುಕಟ್ಟಾಗಿಯೂ ನೋಡುವುದಕ್ಕೆ

ಅಂದವಾಗಿಯೂ ಇರುವುದು. ಗ್ರಂಥಕರ್ತರು ಪ್ರಾಚೀನ ಕರ್ನಾಟಕದ ಅನೇಕ ವಿಷಯಗಳನ್ನು ವಾಚಕರ ಮುಂದಿಟ್ಟು ತರುಣ ವೀರರನ್ನು ಹುರಿದುಂಬಿಸಲು ತೆಗೆದುಕೊಂಡಿರುವ ಶ್ರಮವು ಮೆಚ್ಚತಕ್ಕದ್ದು. ಈ ಮಹದುಪಕಾರಕ್ಕಾಗಿ ಕನ್ನಡ ನಾಡಿನವರೆಲ್ಲರೂ ಮೇಲ್ಕಂಡ ಗ್ರಂಥಕರ್ತರಿಗೆ ಕೃತಜ್ಞರಾಗಿರಬೇಕು. ಸ್ಕೌಟುಗಳು ಮಾತ್ರವಲ್ಲದೆ ಕನ್ನಡ ನುಡಿಯನ್ನು ಬಲ್ಲವರೆಲ್ಲರೂ ಈ ಗ್ರಂಥದ ನ್ನೋದಿ ಪ್ರಯೋಜನವನ್ನು ಪಡೆಯಬೇಕು.

ಇದರ ಬೆಲೆ 0—8—0 ಮಾತ್ರ.

ದೊರೆಯತಕ್ಕ ಸ್ಥಳ:—ಸ್ಕೌಟ್ ಹೆಡ್‌ಕ್ವಾರ್ಟರ್ಸ್,
ಟೀಪು ಸುಲ್ತಾನರ ಅರಮನೆ, ಕೋಟೆ, ಬೆಂಗಳೂರು ಸಿಟಿ.

ಮುದ್ದಣನ ಸಂಚಿಕೆ-ಪ್ರಬುದ್ಧ ಕರ್ನಾಟಕ-ಬೆಂಗಳೂರು.

ಪ್ರತಿವರ್ಷದಲ್ಲಿಯೂ 'ವಿನಾಯಕನ ಸಂಚಿಕೆ' ಯೆಂಬಭಿಧಾನದಿಂದ ಹೊರ ಹೊರಡುತ್ತಿದ್ದ ಸಂಚಿಕೆಯು ಈ ವರ್ಷ "ಪ್ರಸಿದ್ಧ ಕರ್ನಾಟಕ ಕವಿಪುಂಗ ನಾದ ಮುದ್ದಣನ" ಜ್ಞಾಪಕಾರ್ಥವಾಗಿ "ಮುದ್ದಣನ ಸಂಚಿಕೆ" ಯೆಂಬ ಭಿಧಾನದಿಂದ ವಾಚಕರ ಹಸ್ತವನ್ನಲಂಕರಿಸಿದೆ. ಪರದೇಶ ಸಂಸ್ಕೃತಿಯ ದಾಸಾನು ದಾಸರಾಗಿ ವಿಕ್ರಯಿಸಲ್ಪಟ್ಟಿದ್ದ ಕನ್ನಡಿಗರನ್ನೆಚ್ಚರಿಸಿ ಕರ್ನಾಟಕರಲ್ಲಿ ಪ್ರಾಚೀನ ಕವಿತಾಪ್ರೌಢಿಮೆಯು ಸತ್ತಿಲ್ಲವೆನ್ನುವುದನ್ನು ಜಗತ್ತಿಗೆ ವಿಶದಪಡಿಸಿದ ಕವಿ ಶ್ರೇಷ್ಠನೇ ಈ ಮುದ್ದಣ ಮಹಾಕವಿಯು. ಇದರಲ್ಲಿ ಶಿಷ್ಯಯುತರುಗಳಾದ ಪಂಜೆ ಮಂಗೇಶರಾಯರು, ಪ್ರಾಕ್ತನ ವಿಮರ್ಶನ, ರಾವ್ ಬಹದ್ದೂರ್ ಆರ್. ನರಸಿಂಹಾಚಾರ್ಯರು, ಜೆನಗಲ್ಲು ರಾಮರಾಯರು, ಮಾಸ್ತಿ ವೆಂಕಟೇಶಯ್ಯಂಗಾರ್, ಪಂಡಿತ ಪೂಜಾರವರು ಮೊದಲಾದವರಿಂದ ಬರೆಯಲ್ಪಟ್ಟ ಮುದ್ದಣನ ಕಾವ್ಯದ ವಿಮರ್ಶೆಯೂ, ಕವಿಯ ಭಾವಚಿತ್ರವೂ ಇವೆಲ್ಲವೂ ಕನ್ನಡಿಗರ ಕಣ್ತೆರೆಯುವಂತೆ ಮಾಡುತ್ತಿದೆ. ಇಷ್ಟೊಂದು ಮಹದುಪಕಾರವನ್ನು ಕನ್ನಡಿಗರಿಗೆ ಮಾಡಿದ ಕರ್ನಾಟಕ ಸಂಘದವರನ್ನು ಕನ್ನಡಿಗರೆಲ್ಲರೂ ಅಭಿನಂದಿಸಬೇಕಾಗಿದೆ. ಪ್ರಬುದ್ಧ ಕರ್ನಾಟಕದ ಸರಳಶೈಲಿಯು ಇಂಪನ್ನು ಅನುಭವಿಸಿದವರು ಆ ವಿರಳ ಇಂತಹ ಸೇವೆಯನ್ನು ನಿರಂತರವೂ ಈ ಪ್ರಬುದ್ಧ ಕರ್ನಾಟಕವು ಮಾಡುತ್ತಿರಲೆಂದು ಹಾರೈಸುವೆವಲ್ಲದೆ ಕನ್ನಡಿಗರೆಲ್ಲರೂ ಈ ಮುದ್ದಣನ ಸಂಚಿಕೆಯನ್ನು ಸಂಗ್ರಹಿಸುವ ಬೇಕಾಗಿ ಬೇಡುವೆವು.



ಮೆಹರುನ್ನೀಸಾ

ಮೊಗಲ್ ಸಾಮ್ರಾಜ್ಯದ ಪ್ರಸಿದ್ಧ ರಾಣಿಯಾದ ನೂರ್ಜಹಾನಳು ಪರ್ಷಿಯಾ ದೇಶದ ಒಬ್ಬ ಬಡಗೃಹಸ್ಥನ ಮಗಳು. ಮೆಹರುನ್ನೀಸಾ ತನ್ನ ಅಸಮಾನರೂಪದಿಂದಲೂ ಮತ್ತು ಬುದ್ಧಿಯಪ್ರತಿಭೆಯಿಂದಲೂ ಅಖಂಡ ಮೊಗಲ್ ಸಾಮ್ರಾಜ್ಯವನ್ನು ಯುಕ್ತರೀತಿಯಿಂದ ಶಾಸನಮಾಡಿದಳು. ಅನುಕೂಲವಾದ ಪರಿಸ್ಥಿತಿ ಒದಗಿದರೆ ಸ್ತ್ರೀಯರ ಪ್ರತಿಭೆಯು ಎಷ್ಟೊಂದು ವಿಕಾಸವನ್ನು ಹೊಂದಬಹುದೆನ್ನುವುದಕ್ಕೆ ಈಕೆಯು ಉಜ್ವಲನಿದರ್ಶನವಾಗಿರುವಳು.

["ಸರಸ್ವತಿ" ಯಲ್ಲಿ ಧಾರಾವಾಹಿಕವಾಗಿ ಹೊರಡುತ್ತಿರುವ ಈಕೆಯ ಚರಿತ್ರೆಯು ಕಾರಣಾಂತರದಿಂದ ನಿಲ್ಲಿಸಲ್ಪಟ್ಟಿದೆ. ಮುಂದಿನ ಸಂಚಿಕೆಯಿಂದ ಮತ್ತೆ ಪ್ರಕಟಿಸಲ್ಪಡುವುದು. ಸಂಪಾದಕಿ]

ಓಂ

ಸರಸ್ವತಿ

ಸಂಪುಟ ೫ | ಕ್ರೋಧನ ವರ್ಷ – ಆಶ್ವೀಜ ಮಾಸ | ಸಂಚಿಕೆ ೬

ಜನ್ಮಭೂಮಿ

ಸೀಸಪದ್ಯಗಳು.

ಬಹುರತ್ನಸಂಭೂತಮೆನಿಪ ಹಿಮಗಿರಿ ಈಕೆ
ಶಿರದೊಳಿಟ್ಟಿಹ ಮಣಿಕಿರೀಟವಾಯ್ತು |
ಸ್ವಚ್ಛಮೌಕ್ತಿಕದಂತೆ ನಿರ್ಮಲಾಂಬುವನಾಂತ
ಗಂಗೆ ಈ ಸತಿತಾಳ್ದ ಹಾರವಾಯ್ತು |
ಬಹುಶಿಖರಸಂಘಟಿತ ವಿಂಧ್ಯಾದ್ರಿಪಂಙ್ತಿಯೀ
ಈಕೆಯೊಪ್ಪುವ ಕಟಿಗೆ ಕಾಂಚಿಯಾಯ್ತು |
ಫಲಪುಷ್ಪಸಂಕುಲದೆ ಶೋಭಿಸುವ ಸಸ್ಯಾಳಿ
ಈಕೆಯುಟ್ಟಿಹ ಚಾರು ಚೇಲವಾಯ್ತು ||

ಈಕೆಗಾದುದು ಲಂಕೆ ಪದಪೀಠಮಬ್ಧಿ
ಇರ್ಕೆಳದೆ ಮುಚಾರವಿಡುವ ಸೇವೆಗಾಯ್ತು |
ಇಂತುಮೆರೆವೀ ಧಾತ್ರಿ ಯಖಿಲ ಜಗಕೆಲ್ಲ
ಎಂತುಟೆನಿಸಳೊ ರಾಣಿ ಆರ್ಯಧಾನಿ ||

***

ಭೀಷ್ಮಪ್ರಹ್ಲಾದಾದಿ ಪರಹಿತಪ್ರವಣೈಕ
ಭಾವುಕರಪಡೆದ ಗುಣಧಾತ್ರಿ ನೀನು |
ಬುದ್ಧಶಂಕರ ಬಸವರಾಮಾದಿ ಬಹುಮತ
ಸ್ಥಾಪಕರ ಪಡೆದ ಸುಸ್ತ್ರೀಕೆ ನೀನು |

ಭಾಸಭಾರವಿಕಾಳಿದಾಸಾದಿ ಕವಿಜನೋ
ತ್ತಂಸರನು ಪಡೆದ ಶ್ರುತವದೆ ನೀನು |
ಚಂದ್ರಗುಪ್ತಾಶೋಕ ಹರ್ಷಾದಿನೃಪತಿರೋ
ಮಣಿಗಳನು ಪಡೆದಿಹಾರಮಣಿ ನೀನು ||

ಸೀತಾದಿಸಾಧ್ವಿಯರ ದಿವ್ಯಚರಿತ್ರದಿಂ
ಪೂತೆಯಹ ಪರಮಪವಿತ್ರೆ ನೀನು |
ಇಂತುಮೆರೆವೀಧಾತ್ರಿ ಯಖಿಲಜಗಕೆಲ್ಲ
ಎಂತುಟಿನಿಸಳೊ ರಾಣಿ ಆರ್ಯಧಾನಿ ||

* * *

ಅನ್ಯಮತದ್ವೇಷವನ್ಯಮೃಗ ಸಂಕುಲವ
ಮನ್ನಿಸುತೆ ಸಲಿಪೊದ ಮಾತೆ ನೀನು |
ವಾಣಿಜ್ಯಲೋಭದಿಂ ದರ್ಣವವ ದಾಂಟಿಬರೆ
ನಿಖಿಲರಾಜ್ಯವನಿತ್ತ ಧಾತೆ ನೀನು |
ಭೋದಕರ ಭೇದಬುದ್ಧಿಯ ನಳಿಸಿತತ್ವಮಂ
ಭೋಧಿಸಿದ ಭುವನವಿಖ್ಯಾತೆ ನೀನು |
ಹಿಂಸಕರ ಹಿಂಸೆಯನು ಸಹಿಪಸಹಕಾರವನು
ದರ್ಶಿಸಿದ ಶಾಂತಮಯಸ್ವಾಂತೆ ನೀನು ||

ನಿನ್ನಮಹಿಮೆಯತೋರೆ ತಿಲಕ ಗಾಂಧೀ
ಮುಖ್ಯರಹ ದೇಶವತ್ಸಲರೆ ಸಾಕು |
ಇಂತುಮೆರೆವೀಧಾತ್ರಿ ಯಖಿಲಜಗಕೆಲ್ಲ
ಎಂತುಟಿನಿಸಲೊ ರಾಣಿ ಆರ್ಯಧಾನಿ ||

"ಭಾರತೀಸುತ"

ಒಂದು ಭ್ರಮರದ ದುರ್ದೆಶೆ.

ರಾತ್ರಿ ಪೋದಪುದಂತೆ ಬೆಳಕರಿವ ದಿನನ
ಉದಯದಿಂದೀತಿಮಿರ ಚಯಮುಳಿವ್ದೆಂದು |
ಹರುಷದಿರೆ ಕಮಲ ಮುಕುಳವನೇ ದರ್ಭ್ರಮರ
ಮುಕುಟಕಟಕತ್ಯಮುಖವೊಂದು ಮದಗಜಕೆ - ಕಬಳನೆನಿಸಿದುದು ||

"ಮುಲ್ಲಿಗೆ"

ಅರಿಕೆ

ಇಂದಿಗೆ ಸರಸ್ವತಿಯು ನೂತನವರ್ಷದ ಆರು ಸಂಚಿಕೆಗಳು ಪೂರ್ತಿಗೊಂಡವು. ಸಾಕಾದಷ್ಟು ಪ್ರೋತ್ಸಾಹದಮಾತು ಹಾಗಿರಲಿ, ಮುದ್ರಣ ಕಾರ್ಯವು ಸುಸೂತ್ರವಾಗಿ ನಡೆಯುವುದಕ್ಕೆ ಬೇಕಾದಷ್ಟು ಜನ ಚಂದಾದಾರರು ದೊರಕದೆ ಸರಸ್ವತಿಯ ಆರ್ಥಿಕಪರಿಸ್ಥಿತಿಯು ಬಹಳ ಶೋಚನೀಯಾವಸ್ಥೆಯಲ್ಲಿದೆ. ಈ ವಿಷಯದಲ್ಲಿ 'ಸರಸ್ವತಿ'ಯಮೇಲೆ ಅಭಿಮಾನವಿಟ್ಟ ಚಂದಾಧಾರರು ಪ್ರತಿಯೊಬ್ಬರೂ ಒಬ್ಬೊಬ್ಬ ನೂತನ ಚಂದಾದಾರರನ್ನು ಒದಗಿಸಿಕೊಡಲು ಬನ್ನಿನಿಸ್ಸಂದ ಪ್ರಯತ್ನಮಾಡಿದರೆ ಈ ಲೋಪವೂ ಹೋಗಿ '' ಸರಸ್ವತಿ '' ಯು ಸುಂದರರೂಪವನ್ನು ತಾಳಿ ಸಕಾಲಕ್ಕೆ ಮಾತೃಭಾಷೆಯ ಸೇವೆಗೊದಗಲು ಶಕ್ತಳಾಗುವಳು.

ಸರಸ್ವತಿಯು ಪುರುಷಪ್ರಯತ್ನವಿಲ್ಲ. ಸ್ತ್ರೀಯರಿಗೋಸುಗ ಸ್ತ್ರೀಯರಿಗೆ ಉಪಯುಕ್ತವಾದ ಲೇಖನಗಳಿಂದಕೂಡಿ ಸ್ತ್ರೀಸಮಾಜದ ಸೇವೆಯಲ್ಲಿ ತನ್ನನ್ನು ತೇಯ್ದಿಡಬೇಕೆಂಬುದೇ ಅದರ ಮುಖ್ಯ ಧ್ಯೇಯ. ಇನ್ನು ಮುಂದೆ ಸ್ತ್ರೀಯೋಪಯುಕ್ತವೂ, ಸ್ತ್ರೀಯರ ಉನ್ನತಿಯನ್ನು ಕೋರಿ ಬರದಂಥವುಗಳೂ ಆದ ಲೇಖನಗಳಿಗೆ ಅದರಲ್ಲಿ ಹಚ್ಚಾಗಿ ಎಡೆಗೊಡಬೇಕೆಂದು ಯೋಚಿಸಿರುವೆವು. ಮುಂದಿನ ತಿಂಗಳಿಂದ ಕೇವಲ ಗೃಹಜೀವನಕ್ಕೆ ಸಂಬಂಧಪಟ್ಟ '' ಮನೆತನದಮಾತುಗಳು '' ಎಂಬ ಒಂದು ಹೊಸಭಾಗವು ಪ್ರಾರಂಭಿಸಲ್ಪಡುವುದು. '' ಸರಸ್ವತಿ '' ಯು ನಿಮಗೆ ಅಗ್ರಾಹ್ಯಳಾದಂಥ, ನಿನ್ನ ಗೃಹಲಕ್ಷ್ಮಿಯರಿಗೂ ಅಕ್ಕ ತಂಗಿಯರಿಗೂ ಪ್ರಿಯಳಾಗಲಿ, ನಿಮಗೋಸುಗವಲ್ಲದಿದ್ದರೆ ಅವರಿಗೋಸುಗವಾದರೂ ನೀವು '' ಸರಸ್ವತಿ '' ಯನ್ನು ಆದರಿಸಲಿ ಎಂಬುದೇ ಅದರ ಮುಖ್ಯ ಉದ್ದೇಶ. ಹೇಗೂ ಕನ್ನಡನಾಡಿನ, ಕನ್ನಡಭಾಷೆಯ ಸೇವೆಗೆ ತನ್ನ ಪುಟ್ಟಕೈಯನ್ನು ಚಾಚಿ ನಿಂತ '' ಸರಸ್ವತಿ '' ಯು ನಿರಾಶಳಾಗದಂತೆ ನೋಡಿಕೊಳ್ಳುವುದು ನಿಮ್ಮಮೇಲೆ ಬಿದ್ದ ಭಾರ.

ಈ ಸಾರಿ '' ಸರಸ್ವತಿ '' ಯ ಐದು ಮತ್ತು ಆರನೆ ಸಂಚಿಕೆಗಳು ಒಟ್ಟಿಗೆ ತಮ್ಮ ಕೈಗಳನ್ನು ಸೇರಿಸುವುದಾದರೂ, ಒಂದೇ ರಕ್ಷಾಪತ್ರದಿಂದ ಧಂದಿತವಾಗಿರುವುದಾದರೂ ಅದಾವವಿಧದಲ್ಲೂ ಪಂಗುವಲ್ಲ. ಯಥಾಪ್ರತಿಯಾಗಿ ಅಂಚೆಪತ್ರಸಾಲುಪುಟಗಳೇ ಕೊಡಲ್ಪಟ್ಟವೆ. ಓದುಗರು ಇದನ್ನು ಕುಂದುಗೆಣಿಸದೆ '' ಸರಸ್ವತಿ '' ಯ ಪ್ರತ್ಯಕ್ಷದ ಆಸಹಾಯಸ್ಥಿತಿಗೆ ಅವಳ ಭಾವಾನೇವೆಯ ಉತ್ಕಟೇಚ್ಛೆಯಿಂದುಂಟಾದ ಪರಿಣಾಮವೆಂದು ತಿಳಿದು ಮನ್ನಿಸಮಾಡಬೇಕಾಗಿ ಕೋರಿಕೆ.

ಜೀವಮಾನದ ನಿಜಸ್ಥಿತಿ



(ಒಂದು ಚಿಕ್ಕ ಕಥೆ)

ಅನೇಕ ಸಹಸ್ರವರ್ಷಗಳ ಕೆಳಗೆ ಅಂಗದೇಶದಲ್ಲಿ ಆರ್ಯಮಿತ್ರನೆಂಬ ಅರಸನು ಪ್ರಜೆಗಳ ಸುಖವೇ ತನ್ನ ಸುಖವೆಂದೂ ಅವರ ಕಷ್ಟವೇ ತನ್ನ ಕಷ್ಟವೆಂದೂ ತಿಳಿದು ನೀತಿ ತಪ್ಪದೆ ಪ್ರಜಾವಾತ್ಸಲ್ಯದಿಂದ ರಾಜ್ಯವಾಳುತ್ತಿದ್ದನು.

ಪ್ರವಾಹವೂ ಮೃಗಪಕ್ಷಿಗಳೂ ಗಣಿಕೆಯರ ಮನಸ್ಸೂ ಚಂಚಲಗೊಳ್ಳದಷ್ಟು ನೀತಿಯಿಂದ ರಾಜ್ಯವಾಳುತಿದ್ದ ಅರಸನಿಗೂ ಅಕಾಲವೃತ್ಯುವು ಒದಗುವ ಸಂಭವವುಂಟಾಯಿತು. ಬೇಟೆಗೆ ಹೋಗಿ ಬಾಯಾರಿಕೆಯಿಂದ ಒಳಬರುವಾಗ ತಣ್ಣೀರನ್ನು ಕುಡಿದದ್ದರಿಂದ ಜ್ವರ ಬಂದು ಹಾಸಿಗೆಹಿಡಿದು ಮಲಗಿಬಿಟ್ಟನು. ದಿನದಿನಕ್ಕೂ ರೋಗವು ತೀವ್ರವಾಯಿತು. ಇಂದು ಅರಮನೆಯ ಬಾಗಿಲಿನಲ್ಲಿ ಎಳ್ಳು ಹಾಕಿದರೆಕೂಡ ಕೆಳಗೆ ಬೀಳಲು ಸ್ಥಳವಿಲ್ಲದಷ್ಟು ಜನಗಳು ಖಿನ್ನವದನರಾಗಿ ಅರಸನ ದೇಹಸ್ಥಿತಿಯ ವಿಷಯವನ್ನರಿಯಲು ಕುತೂಹಲರಾಗಿ ನಿಂತಿದ್ದರು. ಅರಸನು ಮಲಗಿದ್ದ ಕೊಠಡಿಯಲ್ಲಿ ಅಶ್ವಿನೀದೇವತೆಗಳಿಗೆ ಸಮರಾದ ವೈದ್ಯರಿಬ್ಬರು ಚಿಕಿತ್ಸೆಗೆ ಸಿದ್ಧರಾಗಿದ್ದರು. ರಾಜನ ಪಟ್ಟಮಹಿಷಿಯು ತೆರೆಯ ಮರೆಯಲ್ಲಿ ಕಣ್ಣೀರುಸುರಿಸುತ್ತ ಕುಳಿತಿದ್ದಳು. ಮಂತ್ರಿಯೇ ಮುಂತಾದ ಪ್ರಧಾನ ಉದ್ಯೋಗಸ್ಥರು ಒಂದುಕಡೆ ಗುಂಪಾಗಿ ನಿಂತಿದ್ದರು. ಅರಸನು ಜ್ಞಾನಶೂನ್ಯನಾಗಿ ಹಾಸಿಗೆಯಮೇಲೆ ನರಳುತ್ತ ಬಿದ್ದಿದ್ದನು. ವೈದ್ಯನ ಯಾತಾಯಾತದಂತೆ ಶ್ವಾಸವು ಮಾತ್ರ ನಿಧಾನವಾಗಿ ನಿರ್ಗಮಾಕಾಂಕ್ಷೆಯಾಗಿ ಬರುತಿದ್ದಿತು. ಜನರು ಕಾವಲುಗಾರರ ತಡೆಯನ್ನತಿಕ್ರಮಿಸಿ ಅರಸನು ಮಲಗಿದ್ದ ಕೊಠಡಿಯನ್ನು ಪ್ರವೇಶಿಸಿ ಸದ್ದಿಲ್ಲದೆ ಅರಸನನ್ನು ನೋಡಿಕೊಂಡು ಹೋಗುತ್ತಿದ್ದರು. ಅದರಿಂದು ಅರಸನೆಲ್ಲಿ? ಜನರು ಬಂದುಹೋಗುವುದರಿಂದಾಗುವ ಶಬ್ದದಿಂದ ಎಚ್ಚತ್ತನೇ? ಇಲ್ಲ. ಪ್ರಕಾಶವಾಗಿ ಉರಿಯುತ್ತಿರುವ ದೀಪದ ಜ್ಯೋತಿಯು ಅವನನ್ನೆಚ್ಚರಗೊಳಿಸಿತೇ? ಇಲ್ಲ. ರಾಜಾಂಗಣವನ್ನು ತುಳಿಯಲುಕೂಡ ಅನರ್ಹರಾದ ಅನೇಕರು ತನ್ನ ಕೊಠಡಿಯನ್ನು ಪ್ರವೇಶಿಸುವುದನ್ನಾದರೂ ಅರಿತನೇ? ಇಲ್ಲ. ಅವನ ಪಂಚೇಂದ್ರಿಯಗಳು ತಮ್ಮ ತಮ್ಮ ಕಾರ್ಯದಿಂದ ಶ್ರಮೇಣ ನಿವೃತ್ತಿಹೊಂದುತ್ತಿದ್ದವು. ಕಣ್ಣು

ಗಳು ದೃಷ್ಟಿಹೀನವಾನವಾದವು. ಬಾಯಿಯು ಮುಚ್ಚಿತು. ಹೃದಯದ ಶಬ್ದವು ಅಡಗಿತು. ಸ್ವಲ್ಪಹೊತ್ತಿಗೆಲ್ಲಾ ಶವವಿದ್ದ ಕೊಠಡಿಯು ನಿರ್ಮಾನುಷ್ಯವಾಯಿತು.

ಅರಸನಿಗೆ ಜ್ಞಾನೋದಯವಾದಾಗ ಎಲ್ಲೆಲ್ಲಿಯೂ ನಿಶ್ಶಬ್ದ. ಕಣ್ಣುತೆರೆದು ನೋಡಿದನು. ಐದಾರುದೀಪಗಳು ಪ್ರಕಾಶವಾಗಿ ಉರಿಯುತಿದ್ದವು. ಅವನ ಮುಖಹೊರ್ತು ಉಳಿದ ಭಾಗವೆಲ್ಲವೂ ರೇಷ್ಮೆ ವಸ್ತ್ರದಿಂದ ಮುಚ್ಚಲ್ಪಟ್ಟಿದ್ದಿತು. ಪುಷ್ಪಹಾರಗಳು ಸರಸರವಾಗಿ ಮಂಚದಮೇಲೆಲ್ಲಾ ಹಾಕಲ್ಪಟ್ಟಿದ್ದವು. ವಾಸನಾದ್ರವ್ಯಗಳ ಸುಗಂಧದಿಂದ ಅಂಗಣವು ನಿಬಿಡವಾಗಿತ್ತು. ಪ್ರಸುಪ್ತ ಪಾರಾವತದ ನಿಟ್ಟುಸಿರಿನಂತೆ ಅತಿಕಷ್ಟದಿಂದ ಪ್ರಯತ್ನಪುರಸ್ಸರವಾಗಿ ಪುಷ್ಪಭರದಿಂದ ಜಡಿತವಾದ ತಂಗಾಳಿಯು ಬೀಸುತ್ತಿತ್ತು. ಸ್ವಲ್ಪದೂರದಲ್ಲಿ ಅರು ಜನ ಸಿವಾಯಿಗಳು ಕೈಯಲ್ಲಿ ಧರಿಸಿದ ಆಯುಧದೊಡನೆ ಮಲಗಿ ನಿದ್ರಿಸುತಿದ್ದರು. ರಾತ್ರಿಯ ಶಾಂತಿಮಯವಾದ ಈ ನಿಸ್ತಬ್ಧತೆಯ ಸಂದರತೆಯಿಂದ ಮುಗ್ಧನಾಗಿ ಅರಸನು ಮುಹೂರ್ತಕಾಲ ಹಾಗೆಯೇ ಮಲಗಿದ್ದನು. ಆಗ ಅರಮನೆಯ ಹೊರಗೆ ಕಾವಲಿನವರು ಅರ್ಧರಾತ್ರಿಗೆ ಇನ್ನೂ ಒಂದು ಜಾಮವಿರುವುದಾಗಿ ಹೇಳಿದ್ದು ತನ್ನ ಕಿವಿಗೆ ಬೀಳುತ್ತಲೂ ಅರಸನು ಮಂಚದಮೇಲೆ ಮೆಲ್ಲಗೆ ಎದ್ದು ಕುಳಿತನು. ಕೂಡಲೇ ಅವನಿಗೆ ಮಹತ್ತಾದ ದುಃಖವಾಯಿತು. ತನ್ನ ಜೀವನವು ಎಷ್ಟೊಂದು ನಿರರ್ಥಕ! ಕಟ್ಟಲು ಪ್ರಾರಂಭಿಸಿದ ದೇವಾಲಯಗಳೊಂದೂ ಕಟ್ಟಿ ಪೂರೈಸದೆ ಅರ್ಧರ್ಧವಾಗಿದ್ದವು. ರಾಜ್ಯಾಡಳಿತದಲ್ಲಿ ಮಾಡಬೇಕಾದ ಕಾರ್ಯಗಳೂ, ತಿದ್ದು ಪಾಡುಗಳೂ ಎಷ್ಟೋ ಇದ್ದವು. ಮಾಡಬೇಕಾಗಿದ್ದ ದಾನಧರ್ಮಗಳೊಂದೂ ಪೂರ್ತಿಯಾಗಲಿಲ್ಲ. ತನ್ನನೇ ನಂಬಿದ್ದ ಅನೇಕ ಕುಟುಂಬಗಳು ಹಾಳಾಗಿಹೋಗುವವು. ಈ ಯೋಚನೆಗಳೆಲ್ಲವೂ ಅವನಿಗತ್ಯಂತ ದುಃಖವನ್ನುಂಟುಮಾಡಿದವು. ಆದುದರಿಂದ ಅವನು ಕೈಗಳೆರಡನ್ನೂ ಜೋಡಿಸಿ ಗದ್ಗದ ಸ್ವರದಿಂದ, "ಜಗದೀಶ್ವರಾ! ನನ್ನ ಜೀವನಮಾನವನ್ನು ಈರೀತಿ ಕುಗ್ಗಿಸಬೇಕೇ? ನನ್ನ ಪ್ರಜೆಗಳ ಸೌಖ್ಯಕ್ಕಾಗಿ ಮಾಡಬೇಕಾದ ಕಾರ್ಯಗಳೆಷ್ಟೋ ಮಾಡಲ್ಪಡದೆ ಅರ್ಧವಾಗಿ ಉಳಿದಿರುವುದು ನಿನ್ನ ಕಣ್ಣಿಗೆ ಕಾಣಲಿಲ್ಲವೇ" ಎಂದು ಪ್ರಾರ್ಥಿಸಿದನು. ಆ ಸಮಯದಲ್ಲಿ "ಅರಸನೇ! ನಿನ್ನ ಮರಣವು ಸಂಭವಿಸಿದ್ದಾಯಿತು. ಆದರೂ ನೀನು ಪ್ರಾರ್ಥಿಸಿದ್ದರಿಂದ ನಿನಗೆ ಒಂದು ಮುಹೂರ್ತಕಾಲಮಾತ್ರ ಅವಕಾಶ ಕೊಡುತ್ತೇನೆ. ಅಷ್ಟರಲ್ಲಿ ನೀನು ಜೀವಿಸಿರಬೇಕೆಂದಪೇಕ್ಷಿಸುವ ಮೂರು ಜನರನ್ನು ಕಂಡರೆ ನಿನ್ನ ಆಯುಸ್ಸನ್ನು ಹೆಚ್ಚಿಸುವುದಲ್ಲಿ ಸಂದೇಹವಿಲ್ಲ" ಎಂದು ಅಶರೀರವಾಕ್ಯವುಂಟಾಯಿತು.

ಈ ವಾಕ್ಯವನ್ನು ಕೇಳಿದ ಅರಸನಿಗೆ ಎರಡು ವಿಧದಲ್ಲಿ ಸಂತೋಷವುಂಟಾಯಿತು. ತನ್ನ ಮೊರೆಯನ್ನು ಭಗವಂತನು ಕೇಳಿದೆನೆನ್ನುವುದೊಂದು, ಪ್ರಜೆಗಳ ಕ್ಷೇಮವೇ ತನ್ನ ಕ್ಷೇಮವೆಂದು ಭಾವಿಸಿರುವ ತನಗೆ, ತಾನು ಜೀವಿಸಿರಬೇಕೆಂಬ

ಪೇಕ್ಷಿಸುವ ಮೂವರು ದೊರೆಯಲಾರರೇ'' ಎನ್ನುವುದೊಂದು. ತನಗೆ ಭಗವಂತನಿಂದ ಕೊಡಲ್ಪಟ್ಟಿರುವ ಮುಹೂರ್ತಕಾಲವನ್ನು ವ್ಯರ್ಥಚಿಂತೆಯಲ್ಲಿ ಕಳೆಯಬಾರದೆಂದು ನೆನೆದು, ದಿಂಬುಗಳನ್ನು ಮನುಷ್ಯನಂತೆ ಜೋಡಿಸಿ ಮೇಲೆ ಶಾಲನ್ನು ಮುಚ್ಚಿ ಕೊಠಡಿಯಿಂದ ಹೊರಟನು.

ಅರಮನೆಯ ಬಾಗಿಲಿಗೆ ಬಂದಕೂಡಲೇ ಮೊದಲು ಎಲ್ಲಿಹೋಗುವುದೆನ್ನುವ ಯೋಚನೆಯುಂಟಾಯಿತು. '' ಪ್ರಾಣನಾಥ! ಪ್ರಾಣಪ್ರಿಯ!'' ಎಂದು ಪ್ರತಿನಿಮಿಷದಲ್ಲಿಯೂ ತನ್ನನ್ನೇ ಕೂರಿಸು ಹಂಬಲಿಸುತ್ತಿರುವ ತನ್ನ ಪ್ರಾಣಕಾಂತೆಯ ಬಳಿಗೆ ಹೋಗೋಣವೆಂದು ಯೋಚಿಸಿದನು. ಆದರೆ ಅವಳು ಈಗ ದುಃಖಪೀಡಿತಳಾಗಿರುವುದರಿಂದ ಅಲ್ಲಿ ಹೋಗುವುದು ಉಚಿತವಲ್ಲವೆಂದು ಯೋಚಿಸಿ ಬೇರೆಮಾರ್ಗವಾಗಿ ಹೊರಟನು. ಚಂದ್ರಿಕೆಯ ಬೆಳಕಿನಲ್ಲಿ ಪಟ್ಟಣವೆಲ್ಲವೂ ಅತಿಮನೋಹರವಾಗಿ ಕಾಣಿಸಿತು. ''ನನ್ನಿಂದುಪಕೃತರಾಗಿರುವ ಲಕ್ಷೋಪಲಕ್ಷಜನರಲ್ಲಿ ನನಗಾಗಿ ಪ್ರಾಣತ್ಯಾಗಮಾಡುವವರು ಮೂವರಿಲ್ಲವೇ! ಮೂವರೇಕೆ? ಮೂರುಸಾವಿರ ಜನರು ತಾನು ತಾನೆಂದು ನನಗಾಗಿ ಪ್ರಾಣವನ್ನು ಕೊಡಲು ಮುಂದಾಗುವರು'' ಎಂದು ಯೋಚಿಸುತ್ತಾ ಬರುವಾಗ ಅರಮನೆಯ ಬಾಗಿಲನಲ್ಲಿ ಕುಳಿತು ಅಳುತಿದ್ದ ಮಗುವೊಂದನ್ನು ಕಂಡನು. ಅಲ್ಲಿ ಕಾವಲು ಕಾಯುತಿದ್ದ ಸಿಪಾಯಿಯು ಅಳುತಿದ್ದ ಮಗುವಿನ ಸಮೀಪಕ್ಕೆ ಬಂದು ''ಮಗೂ! ಅಳುತ್ತೀಯೇಕೆ?'' ಎಂದು ಕೇಳಿದನು. ಆದಕ್ಕೆ ಮಗುವು, ''ನನ್ನ ಅಮ್ಮನೂ ಅಪ್ಪನೂ ಅರಮನೆಗೆ ಹೋಗಿದಾರೆ. ಅರಸನನ್ನು ಸಕ್ಕತ್ತಹೋದನಂತೆ. ಹೋದವರು ಇನ್ನೂ ಹಿಂತಿರುಗಿಬರಲಿಲ್ಲ. ನನಗೆ ಹಸಿವಾಗುತ್ತಿದೆ, ನಿದ್ರೆ ಬರುತ್ತಿದೆ, ಅಯ್ಯೋ! ಅರಸನು ಬದುಕಿರಬಾರದಾಗಿತ್ತೇ'' ಎಂದಿತು. ಇದನ್ನು ಕೇಳಿದ ಅರಸನಿಗೆ ಅತ್ಯಾನಂದವುಂಟಾಯಿತು. ತನ್ನ ಪ್ರಜೆಗಳ ಪೈಕಿ ತಾನು ಜೀವಿಸಬೇಕೆಂದಪೇಕ್ಷಿಸುವರೊಬ್ಬರನ್ನು ಕಂಡನಲ್ಲವೇ! ಆರ್ಯಮಿತ್ರನಿಗೆ ಮಕ್ಕಳಿಲ್ಲ. ಹಸಿವಿನಿಂದಳುತ್ತಿರುವ ಮಗುವಿಗೆ ಏನಾದರೂ ತಿಂಡಿಯನ್ನು ತಂದುಕೊಡಬೇಕೆಂದಪೇಕ್ಷಿಸಿದರೂ ತನಗೆ ಕೊಡಲ್ಪಟ್ಟಿದ್ದ ಅವಕಾಶದಲ್ಲಿ ಕಾಲು ಮುಹೂರ್ತವು ಕಳೆದುಹೋದದರಿಂದ ಅಲ್ಲಿ ಹೆಚ್ಚು ಕಾಲಹರಣಮಾಡಲಿಷ್ಟವಿಲ್ಲದೆ ತನ್ನ ಮಿತ್ರನಾದ ಅಗ್ನಿಮಿತ್ರನಗೃಹಕ್ಕೆ ಹೊರಟನು. ದಾರಿಯಲ್ಲಿ 'ಅಯ್ಯೋ! ಪಾಪ! ಅಗ್ನಿಮಿತ್ರನು ನನಗಾಗಿ ಬಹಳ ದುಃಖಿಸುವನೆನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ನನಗೆ ಮೊದಲು ಅವನು ಸಕ್ಕತ್ತಹೋಗಿದ್ದ ಪಕ್ಷದಲ್ಲಿ ಆ ವಿಯೋಗದುಃಖವನ್ನು ನಾನು ಸಹಿಸುತ್ತಲೇ ಇರಲಿಲ್ಲ' ಎಂದು ಮನೋರಾಜ್ಯಮಾಡುತ್ತಾ ಹೋಗುತಿದ್ದನು.

ಅರಸನು ಅಗ್ನಿಮಿತ್ರನ ಮನೆಯನ್ನು ಪ್ರವೇಶಿಸುತ್ತಲೂ ಅಲ್ಲಿ ಆಳುಗಳು ದೀಪಗಳನ್ನು ಹಿಡಿದುಕೊಂಡು ಸಾಮಾನುಗಳನ್ನು ಬಂಡಿಗಳಿಗೆ ಹೇರುವುದನ್ನು

ಕರಡನು. ಎಲ್ಲೆಲ್ಲಿ ಹುಡುಕಿದರೂ ಅಗ್ನಿಮಿತ್ರನು ಕಾಣಸಲಿಲ್ಲ. ಅರಸನಿಗೆ "ಒಂದು ವೇಳೆ ನನ್ನನ್ನಗಲಿದ ದುಃಖದಿಂದ ಮರಣಹೊಂದಿರಬಹುದೋ ಏನೋ" ಎಂದು ಸಂಶಯವಾಯಿತು. ಎಲ್ಲೆಡೆಯಲ್ಲಿಯೂ ಹುಡುಕಿ ಕೊನೆಗೆ ಅಗ್ನಿಮಿತ್ರನ ಅಧ್ಯಯನಶಾಲೆಯನ್ನು ಪ್ರವೇಶಿಸಿದನು. ಆ ಕೊಠಡಿಯಿದ್ದ ಸ್ಥಿತಿಯನ್ನು ನೋಡಿದರೆ ಆಗತಾನೇ ಅಗ್ನಿಮಿತ್ರನು ಕೊಠಡಿಯನ್ನು ಬಿಟ್ಟು ಹೋಗಿರಬಹುದಾಗಿ ಕಂಡು ಬಂದಿತು. ದೀಪದ ಕೆಳಗೆ ಅರ್ಧ ಸುಟ್ಟುಹೋಗಿದ್ದ ಕಾಗದದ ಹೂರೊಂದು ಬಿದ್ದಿತ್ತು. ಅದು ತನ್ನ ಸ್ವಂತ ಕೈಬರಹವಾಗಿದ್ದುದರಿಂದ ಅರಸನು ಅದನ್ನು ತೆಗೆದು ಓದಲು ಪ್ರಜಾಸೌಖ್ಯಕ್ಕಾಗಿ ತಾನು ಮಾಡಬೇಕೆಂದಿದ್ದ ಕಾರ್ಯವಿವರವೊಂದು ಅದರಲ್ಲಿ ಬರೆಯಲ್ಪಟ್ಟಿದ್ದಿತು. ತಾನು ಮಾಡಲೆಳಸಿದ್ದ ಕಾರ್ಯವು ಈ ರೀತಿ ಹಾಳಾಗಿ ಹೋಗುವುದನ್ನು ಕಂಡು ವ್ಯಥೆಗೊಂಡ ಅರಸನು ಆ ಕಾಗದದ ಹೂರನ್ನು ಕೆಳಗೆ ಬಿಸಾಟನು. ಕೂಡಲೇ ಇಬ್ಬರು ಆ ಕೊಠಡಿಯನ್ನು ಪ್ರವೇಶಿಸಿ ಒಬ್ಬರಿಗೊಬ್ಬರು ಈ ರೀತಿ ಮಾತನಾಡ ತೊಡಗಿದರು.—

ಒಬ್ಬ:—ಅಗ್ನಿಮಿತ್ರನೆಲ್ಲಿ?

ಮತ್ತೊಬ್ಬ:—ಹೊಸರಾಜನ ಭೇಟಿಗೆ ಹೋಗಿದಾನೆ; ಈಗ ನಾವೆಲ್ಲರೂ ಒಹಳ ತೊಂದರೆಗೆ ಸಿಕ್ಕಿದೇವೆ. ಹೊಸರಾಜರಿಗೆ ಹಳೇರಾಜರ ಏರ್ಪಾಡೊಂದೂ ಸರಿದೀಳದು.

ಒಬ್ಬ:—ಅಗ್ನಿಮಿತ್ರನು ಹಳೆಯರಸನ ಆಪ್ತಮಿತ್ರನಾದುದರಿಂದ ಅವನನ್ನು ಕಂಡರೆ ಹೊಸ ಅರಸನಿಗೆ ಆಗುವುದಿಲ್ಲ. ಆದುದರಿಂದ ಸ್ವಲ್ಪ ಮುಂಜೆಯೇ ಹೋಗಿ ಅವನಿಗೇನಾದರೂ ಸಮಾಧಾನ ಹೇಳೋಣವೆಂದು ಹೋಗಿರಬಹುದು. ನಾವೆಲ್ಲರೂ ಸಮಯಕ್ಕೆ ತಕ್ಕ ವೇಷ ಹಾಕುವರೇ ಅಲ್ಲವೇ?

ಮತ್ತೊಬ್ಬ:—ಹೌದು, ನಿಶ್ಚಯ. ಅಗ್ನಿಮಿತ್ರನು ಮಾಡುವ ಕೆಲಸವು ನ್ಯಾಯವಾದದ್ದೇ. ನಾನೂ ಹೇಳುತ್ತೇನೆ. ಹಳೆಯ ರಾಜನಿಗೆ ಸ್ವಲ್ಪವಾದರೂ ತಾರತಮ್ಯವೇ ತಿಳಿಯುವುದಿಲ್ಲ. ವಂಗರಾಜನೊಡನೆ ಯುದ್ಧ ಮಾಡೋಣವೆಂದು ಹೇಳಿದೆ. ಕೂಡದೆಂದು ಹೇಳಿಬಿಟ್ಟರು. ಯುದ್ಧಕ್ಕೆ ಹೋಗಿದ್ದರೆ ನಮಗೆ ಮೂರು-ನಾಲು ವರ್ಷಗಳಿಗಾಗುವಷ್ಟು ದ್ರವ್ಯವು ದೊರೆಯುತಿತ್ತು. ನಾವೆಲ್ಲರೂ ಕುಬೇರರಾಗುತಿದ್ದೆವು. ಬಲಿಷ್ಠರು ಬಲಹೀನರೊಡನೆ ಯುದ್ಧ ಮಾಡಕೂಡದೆನ್ನುವುದು ಅವನ ನ್ಯಾಯ. ಈಗ ಬಲಿಷ್ಠರಿಗೆಲ್ಲವೇ ಕಾಲ. ಈ ರೀತಿ ಮಾತನಾಡುತಿದ್ದವರು ಅರವತ್ತೆಯು ದಳಕರ್ತನೂ ಕೊತ್ತವಾಲನೂ ಅಲ್ಲದೆಬೇರಿಲ್ಲ. ಇವರ ಸಂಭಾಷಣೆಯನ್ನು ಕೇಳಿ ದುಃಖಿತನಾದ ಅರಸನು ಹೊರಬರಹೋಗುತ್ತಾ, "ಉದ್ಯೋಗವಿಷಯದಲ್ಲಿ

ನಿನ್ನಿಂದ ಶಿಕ್ಷಿಸಲ್ಪಟ್ಟಿರುವ ಇವರೀ ರೀತಿ ಮಾತನಾಡಿಕೊಳ್ಳುವುದರಲ್ಲೇನಾಶ್ಚರ್ಯ! ನನ್ನ ಪ್ರಜೆಗಳು ಎಂದೂ ನನ್ನಲ್ಲಿ ಪೂರ್ಣವಿಶ್ವಾಸವುಳ್ಳವರೇ'' ಎಂದಂದುಕೊಂಡನು.

ಸಾಧಾರಣವಾಗಿ ಸಂತೆಯಾಗುವಕಡೆ ಜನರು ಕಾತ್ರೀ ಹಗಲೂ ಗುಂಪುಗೂಡಿರುವಕಾರ್ದ್ರಿಂದ ಆರ್ಮಿಮಿತ್ರನು ಅಲ್ಲಿಗೆ ಹೋದನು. ಅವನು ಊಹಿಸಿದಂತೆಯೇ ಅಸ್ಥಳದಲ್ಲಿ ನಾಲ್ಕೈದು ಜನರೊಂದುಗೂಡಿ ಜೂಜಾಡುತ್ತಿದ್ದರು. ಅವರ ಸಂಭಾಷಣೆಯನ್ನು ಕೇಳಬೇಕೆಂದು ಅರಸನು ಅಲ್ಲಿಯೇ ನಿಂತನು. ''ಪ್ರಾರಬ್ಧವು ತೊಲಗಿತು. ಧಾರಾಳವಾಗಿ ದುಡ್ಡು ಖರ್ಚುಮಾಡದ ಅರಸನಿದ್ದರೇನು? ಇಲ್ಲದಿದ್ದರೇನು? ಹೊಸ ಅರಸನಿದಾನಲ್ಲಾ ಭಲೇ! ಹೋಕ್! ಆಸಾಮಿ'' ಎಂದೊಬ್ಬನು ಹೇಳಲು ಅದಕ್ಕೆ ಮತ್ತೊಬ್ಬನು ''ಹೌದಪ್ಪಾ! ಇವನಿಗೆ ಯಾವಾಗಲೂ ಸಂದುಗೊಂದುಗಳೆಲ್ಲಾ ಅಲೆದಲೆದು ಎಲ್ಲೆಲ್ಲಿ ಏನೇನು ನಡೆಯುತ್ತದೆನ್ನುವುದನ್ನು ತಿಳಿಯುವುದೇ ಕೆಲಸ. ಧೊರೆಯಾದಮೇಲೆ ಗೌರವಕ್ಕೂ ಪದವಿಗೂ ತಕ್ಕಂತೆ ಅರಮನೆಯಲ್ಲೇ ಇರಬೇಕಲ್ಲವೇ?'' ಎಂದನು. ಇನ್ನೊಬ್ಬನು, ''ಏನಪ್ಪಾ! ಅದು, ಈ ಅರಸನ ಕಾಲದಲ್ಲಿ ಆಟವುಂಟೀ! ಪಾಟವುಂಟೀ! ವಿನೋದವುಂಟೀ! ಇವುಗಳನ್ನು ನೋಡುವುದೆಂದಿಗೆ?'' ಎನ್ನಿಸಿಬಿಟ್ಟಿದೆ ಎಂದು ಮತ್ತೊಬ್ಬನು, 'ಮರಣದಂಡನೆಯನ್ನೇ ಸಂಪೂರ್ಣವಾಗಿ ನಿಲ್ಲಿಸಬೇಕೆಂದು ಆಜ್ಞಾಪಿಸಿರುವನಂತೆ. ಹಾಗಾದರೆ, ಕಾರಾಗೃಹದಲ್ಲಿರುವ ಖೈದಿಗಳಿಂದೆಲ್ಲಕೆಲಸವನ್ನೂ ಮಾಡಿಸಬೇಕೆಂದಿರುವನೋ ಏನೋ! ಪ್ರಭುಚಿತ್ತವನ್ನರಿತವರ್ಯಾರು?' ಎಂದನು. ಅರಸನಿಗಿವರಮಾತು ರುಚಿಸಲಿಲ್ಲ ಯಾರಿಗಾಗಿ ತನ್ನ ತನು ಮನ ಧನಗಳನ್ನು ಧಾರೆಯೆರದನೋ ಅವರೇ ತಾನುಮಾಡಿದ ಉಪಕಾರವನ್ನು ಸ್ಮರಿಸದಿರುವಲ್ಲಿ ಈ ದುರಾಚಾರಿಗಳ ಮಾತೇನು? ಇಷ್ಟರಲ್ಲೇ ಅರ್ಧಮುಹೂರ್ತವು ಕಳೆದುಹೋಯಿತು. ಆಪ್ತರ ಹಿತವಾಕ್ಯಗಳಿಗಿಂತ ಶತ್ರುಗಳ ದೂಷಣೆಯೇ ಮೇಲೆಂದು ತಿಳಿದು ತನ್ನಿಂದ ಶಿಕ್ಷೆಗೆ ಗುರಿಯಾಗಿದ್ದ ಖೈದಿಗಳ ಕಾರಾಗೃಹಕ್ಕೆ ಹೋದನು. ಅಲ್ಲಿ ಒಬ್ಬನೇ ಒಬ್ಬನು ತನ್ನ ಪ್ರಾಚೀನಕಥ್ಯವನ್ನು ಕುರಿತು ಚಿಂತಿಸುತ್ತಾ ಆಕಾಶವನ್ನು ನೋಡುತ್ತ ಮಲಗಿದ್ದನು. ಆಗ ಸೆರೆಮನೆಯ ಅಧಿಕಾರಿಯು ಅಲ್ಲಿಗೆ ಬಂದು ಬಾಗಿಲು ತೆಗಿಯಲು ಆ ಶಬ್ದವನ್ನು ಕೇಳಿದ ಖೈದಿಯು ಅವನಕಡೆತಿರುಗಿ, 'ಏನು ಸ್ವಾಮೀ! ನಾಳೆಯದಿನವಲ್ಲವೇ ನನ್ನನ್ನು ಗಲ್ಲಿಗೆ ಹಾಕಬೇಕಾದದ್ದು. ಅಷ್ಟರೊಳಗೇ ಬಂದುಬಿಟ್ಟಿರಿ. ನಾನು ಅದಕ್ಕೂ ಹೆದರಲಿಲ್ಲ. ಸ್ವಲ್ಪ ಹೊತ್ತಾದನಂತರ ಹೋಗುವ ಪ್ರಾಣವು ಮುಂಜೆಯೇ ಹೋಗುವುದರಿಂದ ನಷ್ಟವೇನು? ನಾನು ಸಿದ್ಧನಾಗಿಯೇ ಇರುವೆನು. ನನಗೊಂದುಪಕಾರಮಾತ್ರವಾಡಿ. ಇದೋ ಒಂದು ಕಾಗದವನ್ನು ಬರೆದಿಟ್ಟಿದೇನೆ. ಅದನ್ನು ನನ್ನ ಪತ್ನಿಗೆ ತಲಪಿಸಿ' ಎಂದನು. ಅದಕ್ಕಾ ಕಾವಲುವನು, 'ಅಂಥದೇನೂ ಇಲ್ಲ. ಮಹಾರಾಜರು ಮರಣ ಹೊಂದಿದರು. ಹೊಸ ಅರಸನು ಪಟ್ಟಕ್ಕೆ ಬರುವನು. ಅವರ ಅಭಿಪ್ರಾಯವೂ ನಿನ್ನ

ಅಭಿಸ್ರಾಯದಂತೆಯೇ ಇರುವುದರಿಂದ ನಿನ್ನನ್ನು ಮುನ್ನಿಸಿರುವರು. ಯಾವನಿಮಿಷದಲ್ಲಿ ಮರಣಕ್ಕೆ ಸಿದ್ಧವಾಗಬೇಕಾಗಿತ್ತೋ ಆ ಕ್ಷಣದಲ್ಲಿಯೇ ಬಿಡುಗಡೆಹೊಂದಿದೆ ಎಂದನು, ಖೈದಿಯು ಆಶ್ಚರ್ಯ ಮತ್ತು ಗಾಬರಿಯಿಂದಕೂಡಿ ಮರಣಹೊಂದಿದರೇ ! ಎಂದನು 'ಹೌದು, ಮರಣಹೊಂದಿದರು' ಎಂದು ಕಾವಲನ ಜೊತೆಯಲ್ಲಿ ಬಂದಿದ್ದ ಅಗ್ನಿಮಿತ್ರನು ಉತ್ತರಕೊಟ್ಟನು. ಆಗಲಾಖೈದಿಯು, ದುಃಖದಲ್ಲಿನ್ನ ಬೆವರನ್ನು ಒರಸಿಕೊಂಡು. 'ಅಯ್ಯಾ ! ಅರಸನ ಮರಣವು ನನಗತ್ಯಂತ ದುಃಖವನ್ನುಂಟುಮಾಡಿದೆ. ಅರಸನಲ್ಲಿ ನನಗತ್ಯಂತವಿಶ್ವಾಸವು. ಅರಸನು ನನ್ನನ್ನು ಬಹಳವಾಗಿ ಪ್ರೀತಿಸುತ್ತಿದ್ದನು: ಏನೋ ಕಾಲವ್ಯತ್ಯಾಸದಿಂದ ನಾನು ಸೆರೆಯಾದೆನು. ಅದುಹೋಗಲಿ. ಪಾಪ ! ಚಿಕ್ಕವಯಸ್ಸಿನವಳಾದ ರಾಣಿಯು ಈ ದುಃಖವನ್ನು ಹೇಗೆ ಸಹಿಸಿಯಾಳು ? ಅಯ್ಯೋ ! ಪಾಪ ! ಮಹಾರಾಜನು ಬದುಕಿಬರಬಾರದೇ' ಎಂದು ಪ್ರಲಾಪಿಸಿದನು.

ಖೈದಿಯಕಣ್ಣುಗಳಿಂದ ಅಶ್ರುಧಾರೆಯು ಸುರಿಯುತ್ತಿದ್ದಿತು. ಈ ದೃಶ್ಯವನ್ನು ಕಂಡು ಸಹಿಸಲಾರದೆ ಅರಸನು ಬೇರೊಂದುಕಡೆ ಹೋಗುವಷ್ಟರಲ್ಲಿಯೇ ಮುಕ್ಕಾಲುಮುಹೂರ್ತವು ಕಳೆದುಹೋಯಿತು. ಅರಸನಿಗೆ ದುಃಖವುಂಟಾಯಿತು. ಯಾರಿಗಾಗಿ ತಾನು ಪಾಡುಪಟ್ಟನೋ ಅವರು ಇವನನ್ನು ಲಕ್ಷಿಸಮಾಡಲಿಲ್ಲ ಏನೂ ತಿಳಿಯದ ಚಿಕ್ಕಮಗುವೊಂದೂ, ತನ್ನಿಂದ ಶಿಕ್ಷಿಸಲ್ಪಟ್ಟ ಜನ್ಮಶತ್ರುವೊಬ್ಬನೂ ತನಗನುಕೂಲರಾಗಿದ್ದುದನ್ನು ಕಂಡು, 'ನಾನೇಕೆ ಇಂತಹಕಾರ್ಯದಲ್ಲಿ ಪ್ರವೇತಿಸಿದೆ' ಎಂದು ಚಿಂತಿಸಿದನು. ದೈವಕಾರ್ಯಕ್ಕೆ ಯಾರೇನುಮಾಡಲುಸಾಧ್ಯ. ತನ್ನ ಒಳ್ಳೆಯ ಕಾಲಕ್ಕಾಗಿಯೇ ತನಗೆ ಅಕಾಲ ಮರಣವುಂಟಾಯಿತೆಂದು ಧೈರ್ಯಕೊಂದಿದನು. ಮರಣದಲ್ಲಿ ಅನನ್ಯಿಗಿದ್ದ ಭೀತಿಯೂ ಉದಾಸೀನವೂ ನೀಗಿತಾದರೂ ಉಳಿದಿರುವ ಕಾಲುಮುಹೂರ್ತದಲ್ಲಿ ತನ್ನ ಪತ್ನಿಯನ್ನೂ ಶೋಧಿಸೋಣವೆಂದು ಹೊರಟನು.

ಅರಸನು ಅಂತಃಪುರವನ್ನು ಪ್ರವೇತಿಸಿ ನೋಡುವಾಗ ಅವಳು ಮುಖವನ್ನು ಬಟ್ಟೆಯಿಂದ ಮರೆಮಾಡಿಕೊಂಡು ಕುಳಿತಿದ್ದಳು. ಎಲ್ಲನೋಡಿದರೂ ದುಃಖ ಸೂಚನೆಯೇ ತುಂಬಿದ್ದಿತು. 'ಅಯ್ಯೋ ! ನನ್ನ ಪ್ರಾಣಪ್ರಿಯೆಯನ್ನು ಸಂತೈಸಲು ಒಬ್ಬರಾದರೂ ಅವಳ ಸಮೀಪದಲ್ಲಿಲ್ಲ; ಇದೆಂತಹ ಅನ್ಯಾಯ ? ಎಂದು ಅರಸನು ಚಿಂತಿಸುತ್ತಿದ್ದ ಮರುಕ್ಷಣದಲ್ಲಿಯೇ ಆ ಕೊಠಡಿಯ ಗೋಡೆಯಲ್ಲಿದ್ದ ಕಳ್ಳದ್ವಾರವು ತೆರೆಯಲ್ಪಟ್ಟು ಆ ಮಾರ್ಗವಾಗಿ ಯುವಕನೊಬ್ಬನು ಬಂದನು. ಇದನ್ನು ಕಂಡು ಅರಸನು ಭ್ರಮಿಸಿದನು. ಈಗುಪ್ತದ್ವಾರವಿರುವವಿಷಯವು ತನಗೂ ತನ್ನ ಹೆಂಡತಿಗೂ ಮಾತ್ರವೇ ತಿಳಿದಿತ್ತು. ಮುಖವನ್ನು ಮುಚ್ಚಿಕೊಂಡಿದ್ದ ರಾಣಿಯು ಬಂದವನನ್ನು ಮೌನನಾಗಿರುವಂತೆ ಸಂಜ್ಞೆಮಾಡಿ, 'ಇಲ್ಲಿ ಬರಲು ಇಷ್ಟುವಿಳಂಬವೇಕೆ ? ಪ್ರಾರಬ್ಧವು ತೊಲಗಿತಲ್ಲಾ ! ಇನ್ನು ನಮಗ್ಯಾಭಯ ? ನಾವು ಸುಖವಾಗಿ ಕಾಲಕಳೆಯಬಹುದು' ಎಂದಳು. ಈ ಪಾಪವಾಕ್ಯವನ್ನು ಕೇಳಿದರಸನು ಕ್ಷಣಮಾತ್ರವೂ ಅಲ್ಲಿ

ನಿಲ್ಲದೆ ಹಿಂತಿರುಗಿಬರುದು ಶನ್ನ ಮರಣಶಯ್ಯೆಯಲ್ಲಿ ಪವಡಿಸಿದನು. 'ದೈವ ಮಾಯೆಯೇ! ನಿನ್ನ ಕಾರ್ಯವನ್ನು ದೂಷಿಸುವ ಶಕ್ತಿಯು ಯಾರಿಗಿರುವುದು? ಈ ಒಂದು ಮುಹೂರ್ತಕಾಲಕೂಡ ನೀನು ನನ್ನ ಆಯುಸ್ಸನ್ನು ಹೆಚ್ಚಿಸದಿದ್ದರೆ ಚೆನ್ನಾಗಿರುತಿತ್ತು. ಕೋಟ್ಯಾನುಕೋಟಿ ಪ್ರಜೆಗಳಲ್ಲಿ ನನಗಾಗಿ ಅನುತಾಪಪಡುವವರು ಮೂವರಿಲ್ಲದೇಹೋದರಲ್ಲಾ! ಕೊನೆಯಲ್ಲಿ ಕಂಡ ದೃಶ್ಯವು ನಾನು ಕನಸಿನಲ್ಲಿಕೂಡ ಕಂಡಿರಲಿಲ್ಲ. ಇನ್ನೀಜೀವಿತವು ಸಾಕು' ಎಂದು ತನ್ನಷ್ಟಕ್ಕೆ ತಾನೇ ಹೇಳಿಕೊಂಡನು.

ಕೂಡಲೇ ಜಾಮವನ್ನು ಸೂಚಿಸುವವರು ಅರ್ಧರಾತ್ರಿಯಾಯಿತೆನ್ನುವದನ್ನು ಸೂಚಿಸಿದರು. ಪಹರೆಕೊಡುತ್ತಿದ್ದ ಸಿಪಾಯಿಗಳು ಹಠಾತ್ತಾಗಿ ಎಚ್ಚೆತ್ತರು. ಹಾಸಿಗೆಯಲ್ಲಿ ಮೊದಲಿನಂತೆಯೇ ಅರಸನು ಮಲಗಿದ್ದನು. ಆದರೆ ಅವನ ಮುಖವು ಮಾತ್ರ ಬಹಳ ಭಯಂಕರವಾಗಿದ್ದಿತು.

ಮಹಾರಾಣಿಯು ಮತ್ತೊಂದುಸಲ ಶವವನ್ನು ಬಂದುನೋಡಲವಕಾಶಕೊಡ ಕೂಡದೆಂದು ಅವರು ತಮ್ಮತಮ್ಮಲ್ಲಿ ಮಾತನಾಡಿಕೊಂಡರು.

"ಯಾರಿಗೆ ಯಾರು?"

ಸಿನೀಮಾ

ಕವಿಯಲ್ ಗಾಢಾಂಧಕಾರಂ ಚಲಿಪುದು ಸನಿವಾಯಂಶ್ರ ನಿರ್ಮುಕ್ತಮಾದೀ |
ವಿವಿಧ ಸ್ತ್ರೀಪು ಪುರಾದಿ ಪ್ರಚುರಮತಿಚಲಂನೋಡೆ ಮಾಯಾಪ್ರಪಂಚಂ |
ಜವದಿಂದಂತುಸ್ಮೈತೇಜಂ ಮುರೀಯಹುದು ಲಸತ್ತೇಜಸೋದ್ಭೂತಮಾಗು |
ತ್ತೆವಲಂ ನೋಡಲ್ಕಿದೇರೀತಿಯೊಳಿಹುದು ಜಗದ್ವೃತ್ತಿ ವಿಚಿತ್ರಾಸ್ವರೂಪಂ ||

"ಭಾರತೀಸುತ"

ಸ್ತ್ರೀಯರ ರೂಪ.

(ಹಿಂದಿನ ಸಂಚಿಕೆಯಿಂದ ಮುಂದರಿಸಿದ್ದು)

ಪ್ರಣಯವು ಪ್ರಣಯಿನಿಯನ್ನು ಹುಚ್ಚಳಾಗಿಮಾಡುವುದು. ಏಕೆಂದರೆ, ದೇವರು ನಾರಿಯರನ್ನು ಪ್ರೇಮದ ಪವಿತ್ರ ವೃತ್ತಿಕೆಯಿಂದ ಸೃಷ್ಟಿಸಿರುವನು.

ನಾರಿಯು ಪ್ರೇಮದಸಲುವಾಗಿ ಮಾಡಲಾಗದ ಕಾರ್ಯವಾವುದೂ ಪ್ರಪಂಚದಲ್ಲಿಲ್ಲ. ಅವಳು ಒಬ್ಬ ಪಾಷಂಡನಾದವನನ್ನು ದೇವಸಮನಾಗಿ ಮಾಡಬಲ್ಲಳು. ದೇವ ಸಮನಾದವನನ್ನು ಅತಿ ಶುಚ್ಛ ಪಾಷಂಡನನ್ನಾಗಿ ಮಾಡಬಲ್ಲಳು. ಪ್ರೇಮಾ ಸ್ಪದನಿಗೋಸ್ಕರ ತನ್ನ ಸರ್ವಸ್ವವನ್ನೂ ಒಮ್ಮಗೆ ತ್ಯಜಿಸಬಲ್ಲಳು. ಪ್ರೇಮಕ್ಕೆ ಬಳ್ಳಿ ಯುದು ಕೆಟ್ಟದು ಎಂಬ ವಿಚಾರವಿಲ್ಲ. ಆದುದರಿಂದಲೆ ನಾರಿಯರು ತಮಗೆ ಪ್ರಿಯರಾ ದವರ ದೋಷಗಳನ್ನು ಕಾಣಲಾರರು ಪುರುಷರು ಇದಕ್ಕೆ ವಿಪರೀತ. ಅವರ ಪ್ರೇಮವು ಪ್ರಥಮದಲ್ಲಿ ರೂಪ ಮತ್ತು ಮೋಹದ ತಶ್ಯದಿಂದ ಹುಟ್ಟುವುದು. ಆ ಪ್ರೇಮದ ನಿತ್ಯ ಜೀವನವೆಂದರೆ ಕಾಮವಾಸಕ್ತಿಯೇ. ಆದುದರಿಂದಲೇ ಯಾವಾ ಗಲೂ ಪುರುಷನು ನಾರಿಯರಂತೆ ಪ್ರೇಮದಲ್ಲಿ ತಲ್ಲೀನನಾಗಲಾರನು. ''ಅವನ ಪ್ರೇಮವು ನಾರಿಯಪ್ರೇಮದ ಪ್ರತಿಧ್ವನಿಮಾತ್ರ''. ಇದರ ಮೂಲಕಾರಣವು ಬೇರೆ ಬೇರೆ ಕೇಂದ್ರಗಳನ್ನೊಳಗೊಂಡು, ಪರಸ್ಪರವಿರುದ್ಧವಾದ ಬೇರೆ ಬೇರೆ ಭಾವ ಗಳನ್ನು ಆಕರ್ಷಿಸುವ ನಾರಿಯವ್ವಿಮುಖವಾದರೂಪವೇ! ಆ ರೂಪುಗಳಲ್ಲೊಂದು 'ದೈಹಿಕ' ಮತ್ತೊಂದು 'ಮಾನಸಿಕ'. ಸಾಮಾನ್ಯವಾಗಿ ಪುರುಷರು ನಾರಿಯರ 'ದೈಹಿಕ' ರೂಪವನ್ನುನೋಡಿ ಸೊಂಕೊಳ್ಳಗಾಗುವರು. 'ದೈಹಿಕ' ರೂಪವು ಸ್ತ್ರೀಯರ ಬಾಹ್ಯಸೌಂದರ್ಯ. 'ಮಾನಸಿಕ' ರೂಪವು ಅವರ ಆಂತರಿಕಸೌಂದರ್ಯ. ಈಗಿನಕಾಲದಲ್ಲಿ ಸ್ತ್ರೀಯರು ತಮ್ಮ 'ದೈಹಿಕ' ರೂಪದಕಡೆ ಮನವಿಡುವಷ್ಟು 'ಮಾನಸಿಕ' ರೂಪದಲ್ಲಿಸುತ್ತಿಲ್ಲವೆಂಬುದು ಬಹುಶೋಚನೀಯವಾದಮಾತು. ಪಾಶ್ಚಾತ್ಯದೇಶಗಳಲ್ಲಿ ಹಾಗೂ ಇಂಗ್ಲೆಂಡ್ ಮತ್ತು ಫ್ರಾನ್ಸ್‌ದೇಶಗಳಲ್ಲಿ ಸ್ತ್ರೀಯರು ತಮ್ಮ ದೈಹಿಕಸೌಂದರ್ಯವನ್ನು ಅಶ್ಯಕ್ಷಿಯದೆ ಇಟ್ಟುಕೊಳ್ಳಲು ಎಷ್ಟೆಂದು ಪ್ರಯಾಸಪಡುವುದೆಂಬುದನ್ನು ಭಾರತರಮಣಿಯರು ಚಿಂತಿಸಲೂ ಆರರು.

ನಾರಿಯರ ಪ್ರಕೃತಿದತ್ತವಾದ ಸೌಂದರ್ಯದಲ್ಲಿ ವಿಶೇಷವಾಗಿ ಪುರುಷರ ಮನ ಸ್ಸನ್ನು ಒಲಿಸುವುದೆಂದರೆ ಅವರ 'ನೋಟ' ಮತ್ತು 'ನಗು' ಇವೆರಡಲ್ಲದೆ ಸ್ತ್ರೀಯರ ಮತ್ತೊಂದು ಅಸಾಧಾರಣ ತಯುಧವು 'ಕಣ್ಣೀರು'. ಸಮಯಾಸಮಯಗಳನ್ನು ನೋಡಿ ಪ್ರಯೋಗಿಸಿದರೆ ಇದೊಂದರ ಸಹಾಯದಿಂದ ಪ್ರಪಂಚದ ಎಲ್ಲಾ ದೊಡ್ಡ ಕೆಲಸಗಳನ್ನೂ ಕೊನೆಗಾಣಿಸಬಹುದು. ಆದುದರಿಂದಲೇ ಮಹಾಕವಿ ಷೇಕ್ಸ್‌ಪಿಯರನು

A beauty's tears are lovelier than her smile.

''ಸುಂದರಿಯ ನಲಿನಗುವ ಮೀರಿಪುದವಳ ಕಣ್ಣೀರು'' ಎಂದು ಹೇಳಿರುವನು.

ಇಂತಹ ಕಣ್ಣೀರಿನಿಂದ ಸಾಧ್ಯವಾಗದ ಕಾರ್ಯವು ಪ್ರಪಂಚದಲ್ಲಾವುದೂ ಇಲ್ಲ. ಇನ್ನು 'ನೋಟದ' ವಿಚಾರವಾಗಿ ಮಹಾಕವಿ ಭವಭೂತಿಯು ಹೇಳುವುದನ್ನು ಕೇಳಿ—

ಅಲಸವಲಿತ ಮುಗ್ಧ ಸ್ನಿಗ್ಧ ನಿಸ್ಪಂದಮಂದೈಃ
ರಭಸವಿಕಸಿತಾಂತಃ ವಿಸ್ಮಯಸ್ಮೇರತಾರೈಃ
ಹೃದಯಮಶರಣಂ ತೇಪ ಪ್ಲೈಲಾಕ್ಷ್ಯಾಃ ಕಟಾಕ್ಷೈಃ
ರಪಹೃತಮಪವಿದ್ಧಂ ಪೀತಮುನ್ಮೂಲಿತಂವಾ ॥

ವಾ॥ ಪ॥ ಅಲಸತೆಯ ಪೆಂಪು ಕಣ್ಣಾಲಿಗಳ ಕಾಂತಿಯಂ ।
ನಲವಿನೊಂದಿಂಪು ತನ್ಮುಧುರ ದೃಷ್ಟಿಯುಂ ಸಂ ।
ಕಲಿತ ವಿಸ್ಮಯಸಂಶಸಂಗಳಿರದದರ ಬಗೆಗಣ್ಣಿಯ ವಿಶದತೆಯುಸು ॥

ಬಳೆಯಿಸಿರೆ ಚಲ್ವೆಯ ಕಟಾಕ್ಷೆ ಸಂಹತಿಯೆನ್ನ ।
ಮೆಲುನುನವ ಕಳ್ದುದೋ ಕವರ್ದುದೋ ಪೀರ್ದುದೋ ।
ಸಲೆ ಸಾವಿಗೊಯ್ದುದೋ ಕಾಣೆ ಕಂಗಾಲಿಗಳ ಶರಣಿಲ್ಲ ಭೂತಲದಲಿ॥

ನಾರಿಯರು ಬೇರೆ ಬೇರೆ ವಿಧವಾದ ನೋಟದಿಂದ ತಮ್ಮ ಹೃದಯದ ಬೇರೆ ಬೇರೆ ಭಾವಗಳನ್ನು ಪ್ರಕಟಮಾಡಬಲ್ಲರು. ಕೇಳಲ್ಲವೇ ಕಣ್ಣು ಕಣ್ಣಿನ ಮಾತೆಂದು. ಮಧ್ಯಾಹ್ನವಾಯಿತೆಂದರೆ ಹೆಂಗಳುಹಾಕಿಕೊಳ್ಳುವನವದಿಂದ ಅವರು ಕನ್ನಡಿಯ ಮುಂದ ನಿಂತುಕೊಂಡು, ರಂಗಮಂಚದ ನಾಟ್ಯಗಾತಿಯರಂತೆ, ಪ್ರೇಮಕಟಾಕ್ಷ, ತೀರ್ವಕಟಾಕ್ಷ, ಕುಟಿಲಕಟಾಕ್ಷ ಇವೇ ಮುಂತಾದ ಎಷ್ಟೋ ಕಟಾಕ್ಷಗಳನ್ನು ಅಭ್ಯಾಸಮಾಡುವರು. ಇಷ್ಟೊಂದು ಪ್ರಯಾಸದಿಂದ ಕಲಿತ, ಕಣ್ಣಿಲ್ಲೆಯ ಪರೀಕ್ಷಣವು ಯಾರಲ್ಲಾಗುವದೂ ಅವನೇ ಧನ್ಯನು।

ಇನ್ನುಳಿದುದು ನಗು. ನಗುವೆಂದರೆ, ಹಾಸ್ಯಾಸ್ಪದವಾದ ಪುರುಷರ ಅರ್ಥ ಹೀನ ಕೇಕೆಯಲ್ಲ. ಪದಗ್ಯರಾದ ಲಕ್ಷಣಕಾರರು ಅದಕ್ಕೆ ಪ್ರೀತಿಯಿಂದ ನಾಮ ಕರಣಮಾಡಿರುವರು, 'ಮಂದಸ್ಮಿತ' 'ಮುಗುಳುನಗೆ' ಎಂದು ಮುಂತಾಗಿ. ಅದು ಅರೆಬರಿದ ಮಲ್ಲಿಗೆಯಂತೆಗೆ, ತನ್ನ ಅಂತರಿಕ ಪರಿಮಳದ ಅತ್ಯಲ್ಪ ಪರಿಚಯ ವನ್ನು ಕೊಟ್ಟು ಕುತೂಹಲಪೂರ್ಣರಾದ ಪ್ರೇಕ್ಷಕರನ್ನು ಮುಗ್ಧರನ್ನಾಗಿ ಮಾಡಿ ಬಿಡುವುದು. ಅದಂ ಲೀಲಾಲಂಗನವೇ ಅಮೃತದ ಜೇನುಹುಟ್ಟು, ಪ್ರಾಯದ ಚಂದುಟಿ. ಅರ್ಧ ವಾತ್ರ ಪ್ರಕಾಶಿತವಾಗಿ ಒಂದೆರಡು ಹಲ್ಲುಗಳು ಅದರ ಸೊಬಗಿಗೆ ಹಿರೆ ಕಾಣಿಕ್ಕೆಯಂತೆ ತೋರಿಸುವುದು. ಆ ದಂತಗಳ ಕಾಂತಿಯನ್ನು ಕುರಿತು ಜಯದೇವನು ಹೇಳಿರುವನು

" ವದಸಿ ಯದಕಿಂಚಿದಪಿ ದಂತರುಚಿಕೌಮುದೀ |
ಹರತಿ ದರತಿಮಿರಮತಿ ಘೋರಂ " ಎಂದು

" ನಗುವೆಯಾದೊಡೆ ನಿನ್ನ ದಂತರುಚಿಯೆಂಬ
ಮಧುರ ಕೌಮುದಿ ಹರಿಪುದೆನ್ನ ತಾಪವನು "

ನಾರಿಯರು ಸ್ಥೂಲಾಂಗಿಯರಾದರೆ ಅವರ ಸೌಂದರ್ಯಕ್ಕದು ದೊಡ್ಡ ಲಾಂಛನವೆ. ಅವರ ಮಧ್ಯದಲ್ಲಿ ಯಾವಳು ಅಲ್ಪಕಾಯಳೋ, ಯಾವಳು ಪುಷ್ಪಿತ ಲತೆಯಂತೆ ಕೋಮಲಶರೀರಳೋ ಅನಳೇ ಧನ್ಯೆ. ಸೌಂದರ್ಯದ ಪರಕಾಷ್ಠತೆಯು ಅವಳಲ್ಲಿ. ಕವಿಗಳು ಸುಂದರಿಯರನ್ನು ಲತೆಗೆ ಹೋಲಿಸಿರುವುದನ್ನು ಕೇಳಿಲ್ಲವೆ? ಲತಾಂಗಿ ತನ್ವಂಗಿ ಮುಂತಾದ ಗುಣವಾಚಕಗಳು ಸ್ತ್ರೀಯರ ಸೌಂದರ್ಯಪೋಷಣೆಗೆ ಅತ್ಯಂತ ಅವಶ್ಯಕವಾದ ಆಧ್ಯವಸ್ತುಗಳು (Essentials).

ಇವುಗಳಲ್ಲದೆ ಸ್ತ್ರೀಯರ ಸೌಂದರ್ಯದ ಮುಖ್ಯಾವಲಂಬನವೂ, ಅವರ ನಾರೀ ಶಬ್ದದ ಹೆಗ್ಗುರುತೂ ಆದುದು ಮತ್ತೊಂದುಂಟು. ಆದುದರಿಂದಲೇ ಕಾಂಕಕವಿ ಜಗನ್ನಾಥನು, ತನ್ನ ಪ್ರೇಯಸಿ ಲವಂಗಿಯನ್ನು ವರ್ಣಿಸಲು ಪ್ರಾರಂಭಮಾಡಿ ಆದಿಯಲ್ಲೇ ಹೇಳಿದನು 'ಇಯಂಸುಸ್ತನೀ' ಎಂದು. ಒಮ್ಮೆಗೆ ಚಕ್ರವರ್ತಿಯಂತಹ ವಿಲಾಸಪ್ರಿಯನೂ, ಸನ್ಯಾಸಿಯಂತಹ ವಿಷಯದ್ವೇಷಿಯೂ ಆಗಿದ್ದ ಭರ್ತೃಹರಿಯು " ಸ್ತನಪತನಾವಧಿ ಬೇವಿತಂ ರತಂವಾ " ಎಂಬ ಹಾರ್ದಿಕ ಉದ್ಗಾರಗಳು ಅದನ್ನು ದೃಢೀಕರಿಸಿಯೇ. ಇವೆಲ್ಲದರ ಮೊತ್ತ ಅಥವಾ ಸಮಷ್ಟಿಯೇ ನಾರಿಯರ ದೈಹಿಕರೂಪ. ಪುರುಷರು ಇದಕ್ಕೆ ಮುಗ್ಧರಾಗಿಯೇ ಅವರನ್ನು ಪ್ರೀತಿಸತೊಡಗುವರು.

ನಾರಿಯರ ಮಾನಸಿಕರೂಪವು, ಅವರ ದಯೆ, ಮಾಯೆ, ಸ್ನೇಹ, ಕರುಣೆ, ಪರರ ದುಃಖದಲ್ಲಿ ಕಾತರತೆ ಇವುಗಳೇ. ಪುರುಷರಿಗೆ ಮೊದಲು ಇವುಗಳ ಪರಿಚಯವಾಗುವುದೇ ಇಲ್ಲ. ಯಾವಾಗ ರಮಣಿಯೊಡನೆ ನಿಸ್ಸಂಕೋಚವಾಗಿ ಮನಸ್ಸನ್ನು ಬಿಚ್ಚಿ ವರ್ತಿಸುವ ಸುಯೋಗವು ದೊರಕುವುದೋ ಆಗವನಿಗೆ ಸ್ವಲ್ಪ ಸ್ವಲ್ಪವಾಗಿ ಅವುಗಳ ಪರಿಚಯವಾಗುವುದು. ಬಳಿಕ, ಅವನ ಮೋಹಮಯವಾದ ಪ್ರೇಮವು ಹೋಗಿ ಪವಿತ್ರವಾದ ನಿಸ್ವಾರ್ಥಪ್ರೇಮವು ಹುಟ್ಟುವುದು. ಸ್ತ್ರೀಯು ತನ್ನಿಂದ ವಿಶಿಷ್ಟಳಾದ ದೇಹವೊಂದು ವ್ಯಕ್ತಿಯೆಂಬುವುದು ಸುರಹುಹೋಗುವುದು. ಅವಳು ತನ್ನ ಉಪಭೋಗಕ್ಕೆ ಸೇವೆಗೂ ಮಾತ್ರ ಅರ್ಹಳೆಂಬ ತುಚ್ಛ ದೃಷ್ಟಿಯು ಮಾಯ್ವುದು. ಅವರೆಲ್ಲರಿಂದು ವಿಧವಾದ ಶ್ರದ್ಧೆಯೂ ಗೌರವವೂ ಹುಟ್ಟುವುದು. ಅವಳ ಆ ಅಧ್ಯಾತ್ಮಿಕ ಗುಣಗಳ ಮಾಧುರ್ಯದಿಂದ ಮುಗ್ಧನಾಗುವನು.

ನಾರಿಯು ಕೇವಲ ಶಕ್ತಿಮಯಿ! ಇಹಸಂಸಾರದಲ್ಲಿ ತನ್ನಾಶಕ್ತಿಯನ್ನು ಅವಳು ಎಷ್ಟೊಂದು ಸಂಯಮಮಾಡಿ ನಡೆಯುವಳೆಂಬುದನ್ನು ಹೇಳಬೇಕಾದರೆ ತುಂಬಿದ ಪ್ರವಾಹದಿಂದ ಕೂಡಿದ ತೀರ್ಥಗಾಮಿನಿಯಾದ ನದಿಯನ್ನು ಆಟದ ಚಿಳ್ಳಂಗೋವಿಯಲ್ಲಿ ಹರಿಯಬಿಟ್ಟಹಾಗೆ. ಇಹಸಂಸಾರವು ಸುಸೂತ್ರವಾಗಿ ನಡೆಯಬೇಕಾದರೆ, ಕ್ಷಣಕ್ಷಣಕ್ಕೂ ಹೆಜ್ಜೆಹೆಜ್ಜೆಗೂ ಅವಳು ಮಾಡುವ ಶಕ್ತಿ ಸಂಯಮದಿಂದಲೆ. ಪುರುಷನಿಗೆ ಈ ಶಕ್ತಿಯ ಪರಿಚಯವಾದೊಡನೆಯೇ ಅವನ ಮನಸ್ಸು ತಲ್ಲಣಿಸ ಹತ್ತುವುದು. ತನಗೋಸುಗ ತನ್ನ ಪ್ರೀತಿಯಸಲುವಾಗಿ ಅಡಿಗೆನುನೆಯಲ್ಲಿ ಮುಸುರೆಯನ್ನು ತಿಕ್ಕುವ ಕೈಗಳು ಎಂತಹ ರಾಜರಾಜೇಶ್ವರಿಯ ಕೈಗಳೆಂಬುದನ್ನು ಮಸಕು ಮಸಕಾಗಿ ಕಾಣಹತ್ತುವನು. ಅಲ್ಲಿಗೆ ಅವನ ಪರಾಜಯವು ಪೂರ್ಣವಾದಂತೆ. ಆಮೇಲವನು ಅವಳ ದೈಹಿಕ ಸೌಂದರ್ಯದಕಡೆ ದೃಷ್ಟಿಹಾಕುವುದೂ ಇಲ್ಲ.

ನಾರಿಯರ ಸತ್ಯವಾದ ಪ್ರಕೃತಿಸೌಂದರ್ಯವು ಅವರ ಮನಸ್ಸಿನಲ್ಲಿ; ದೇಹದಲ್ಲಲ್ಲ. ದೇಹದ ಸೌಂದರ್ಯವು ಅಶಾಶ್ವತ ಸೀಮಾಸಹಿತವಾದ್ದು. ಅದಕ್ಕೆ ನಿರ್ದಿಷ್ಟವಾದ ಆದಿ ಅಂತ್ಯಗಳುಂಟು. ಮಾನಸಿಕರೂಪವು ಅನಂತ; ಮೇರೆ ಇಲ್ಲದ್ದು; ಹಾಗೂ ಅಪಾರಶಕ್ತಿಯ ನೆಲೆಕಟ್ಟು. ನಾರಿಯರ ಬಾಹ್ಯಸೌಂದರ್ಯದಲ್ಲಿ ನಾವು ಕಾಣುವ ಶಕ್ತಿಯು, ಅವರ ಮಾನಸಿಕ ಶಕ್ತಿಯ ಪ್ರತಿಬಿಂಬಮಾತ್ರ. ಇದನ್ನು ನಮ್ಮ ಭಾರತ ರಮಣಿಯರು ಚನ್ನಾಗಿಬಲ್ಲರು. ಇಂದ್ರಿಯಗಳನ್ನು ಹೋದಹಾಗೆ ಬಿಡುವ ಅಸಂಯತನಾದ ನಿರ್ಬಲಪುರುಷನನ್ನು ವಶಪಡಿಸಿಕೊಳ್ಳುವುದರಲ್ಲಿ ಅದು ಉಪಯುಕ್ತವಾಗಬಹುದು. ಇಂದ್ರಿಯಗಳನ್ನಾಳಬಲ್ಲ, ಸಬಲನಾದ ಸಂಯತನಾದ ಯಥಾರ್ಥ ಪುರುಷನನ್ನೊಲಿಸಬೇಕಾದರೆ ಅವರ ಮಾನಸಿಕ ಸೌಂದರ್ಯವೇ. ಕಾಳಿದಾಸನು ಈ ಭಾವವನ್ನು ತನ್ನ ಕಾವ್ಯಗಳಲ್ಲಿ ಬಹು ಚನ್ನಾಗಿ ವ್ಯಕ್ತಪಡಿಸಿರುವನು. ದೇಹದ ರೂಪಡಲ್ಲಿ ತೃಪ್ತಿಯಿಲ್ಲ. ಘೃತಾಹುತಿನ್ಯಾಯದಂತೆ ದಿನದಿನವೂ ಆಸಕ್ತಿಯು ಹೆಚ್ಚುವುದೇ ಹೊರತು ಕಡಿಮೆಯಾಗುವುದಿಲ್ಲ. ನಿತ್ಯವೂ ಹೊಸಹೊಸದನ್ನು ಅಪೇಕ್ಷಿಸುವುದು. ಭ್ರಮರಂದಂತೆ ಹೂವು ಹೂವಿನಲ್ಲಿಯೂ ಹಾರಾಡಲಿಚ್ಛಿಸುವುದು. ರೂಪ ಪ್ರಭೆಯಿಂದ ಹುಚ್ಚನಾಗಿಯೇ ಯಕ್ಷನು ಹೇಳುವನು.—

" ತನ್ವೀತಸ್ಯಾಮಾ ತಿಖರಿ ದಶನಾ ಪಕ್ವ ಬಿಂಬಾಧರೋಷ್ಠೀ
ಮಧ್ಯೇಕಾ ಮಾ ಚಕಿತಹರಿಣೇ ಪ್ರೇಕ್ಷಣಾ ನಿಮ್ನನಾಭಿಃ "
ಶ್ರೋಣೀಭಾರಾ ದಲಸಗಮನಾ ಸ್ತೋಕನಮ್ರಾಸ್ತನಾಭ್ಯಾಂ |
ಯಾತಶ್ರಸ್ಯಾ ದ್ಯುವತಿವಿಷಯೇ ಸೃಷ್ಟಿರಾದ್ಯೇವಧಾತುಃ ॥

ಧಾ॥ ಷ॥ ಒರೆಬಳುಕು ತಂಗದಿಂ ತಾವಲಯದ ಕಾಂತಿಯಿಂ |
ಬಿರಿಮುಗುಳ ಪಲ್ಲಳಿಂ ಬಿಂಬಾಧರೋಷ್ಠದಿಂ |
ಕೆಳೆದರಿ ಕಂಗಳಿಂ ಬಡವಾದ ನಡುವಿನಿಂ ನಿಮೆಬೆಸೆವ ನಾಭಿಯುತಿಕೆ ॥

ಗುರುಜಘನ ಭಾರದಿಂ ನೆಲ್ಲನಿಡುವಡಿಗಳಿಂ |
ಮೆರೆವ ಕುಚಯುಗಳದಿಂ ದಿನಿತುಬಾಗಿದ ತನುವಿ |
ನೆರಕದಿಂ ಶೋಧಿಸುವ ಲಬಲೆ ಕಮಲಜ ನಾದಿ ಸೃಷ್ಟಿಯಂತೆ ||

ಮೇಘದೂತವು ಕಾವ್ಯಾಲಸನಾದ ಕೇವಲ ಇಂದ್ರಿಯಸುಖಗಳಲ್ಲೇ ಜೀವನದ ಪರಕಾಷ್ಠತೆಯನ್ನು ಕಂಡ ನಿರ್ಬಾಧವುರ ಷದ ಕಾವ್ಯವು ಇದನ್ನು ಕವಿಯು ತನ್ನ ಮೊದಲನೇ ಪದ್ಯದಲ್ಲಿಯೇ 'ಪ್ರಮತ್ತ' 'ಕಾಮೋನಾಸ್ತ್ವಂಗಮಿತ ಮಹಿಮಾ' ಎಂಬ ಮಾತುಗಳಿಂದ ಸೂಚಿಸಿರುವನು ಇಂದಿಯಗಳ ಉಚ್ಚ ಲಂಖಲ ವೃತ್ತಿಯೇ ಪ್ರಮತ್ತತೆಯ ಮುಖ್ಯ ಲಕ್ಷಣವು ಇಂತ ಪ್ರಮತ್ತತೆಯ ದೋಷದಿಂದವನು ತಾನು ಯಕ್ಷನೆಂಬುದು ವ ತ್ರವಲ್ಲ, ಬುದ್ಧಿ ತೀಕ್ಷ್ಣಗಳನ್ನು ಟಾದ ಸದಸದ್ವಿವೇಚನೆಯುಳ್ಳ ಪುರುಷನೆಂಬುದನ್ನೂ ಕೂಡ ಮರೆತು ಉನ್ಮತ್ತನಂತೆ ಮೇಘವನ್ನು ಸಂಬೋಧಿಸಿ ದೊಡ್ಡದೊಂದು ಕಾವ್ಯಕ್ಕೆ ಪ್ರಾರಂಭವಾಡುವನು. ಅವನ ಆಸಕ್ತಿ ಕೇವಲ ಚಕ್ಷುಗತ ; ತನ್ನ ಸಂದೇಶದ ಪ್ರಾರಂಭದಲ್ಲೇ ಹೇಳುವನು.—

ತ್ವಾಮಾಲಿಖ್ಯ ಪ್ರಣಯಕುಪಿತಾಂ ಧಾತುರಾಗೈಃ ಶಿಲಾಯಾ |
ಮಾತ್ಮಾನಂತೇ ಚರಣಪತಿತಂ ಯಾವದಿಚ್ಛಾಮಿಕರ್ತುಂ ||

ಪ್ರಣಯಕೋಪವನಾಂತ ತೆರದೆ ನಿನ್ನನುಬರೆದು
ವನಿತೆ ಶಿಲೆಯಲಿ ಧಾತು ರಾಗದಿಂದೆ |
ಎನ್ನ ನಿನ್ನಡಿಗಳಲಿ ಮೊರೆವೊಂದಮಾಳ್ಕೆಯಿಂ
ಚಿತ್ರಿಸಲ್ಕೆಂದು ನಾನಿಚ್ಛಿಸುವೆನು || ಎಂದು.

ಇಂತಹ ಆಸಕ್ತಿಯು ತೀರ್ವಜ್ವಾಲೆಯು ಪೂರ್ಣವಾಗಬೇಕಾದರೆ 'ಪರಿಣತಶರ ಚ್ಚಂದ್ರಿಕಾಸುಕ್ಷ ಪಾಸು' ; ಶರದೃತುವಿನ ಪೂರ್ಣಚಂದ್ರನ ಮೋಹಕ ಬೆಳದಿಂಗಳಿಂದ ತುಂಬಿದ ರಾತ್ರಿಗಳಲ್ಲಿಯೇ.

"ಪಶ್ಚಾದಾವಾಂ ವಿರಹಗುಣಿತಂ ತಂತವಾತ್ಮಾಭಿಲಾಷಂ
ನಿರ್ವೇಕ್ಷ್ಯಾವಃ ಪರಿಣತಶರ ಚ್ಚಂದ್ರಿಕಾಸು ಕ್ಷ ಪಾಸು"

ಬಳಿಕ ನಮ್ಮಯ ವಿರಹದಿಂ ಬಹು
ಬಳೆದ ಮನದಭಿಲಾಷೆಗಳ ಕೈ
ಗೊಳಲಹುದು ಪರಿಣತ ಶರಚ್ಚಂದ್ರಿಕೆಯ ನಿತಿಗಳಲಿ ||

(ಸಶೇಷ)

ವಿಲಕ್ಷಣ ಪ್ರೇಮ.

ಸಂಧ್ಯಾ ಸಮಯ. ಭಗವಾನ್ ಸೂರ್ಯನಾರಾಯಣನು ವಿಶ್ರಾಂತಿಗಾಗಿ ಅಸ್ತಾಚಲವನ್ನಿಳಿದನು. ಸಂಧ್ಯಾಸುಂದರಿಯು ಹಸಿರ್ಕಾಶ್ಮೀರಳಾಗಿ ಸಹಸ್ರ ಕಸ್ತೂರಿಯನ್ನು ಇದಿಗೊರಂಡಳು. ಪಕ್ಷಿಗಳು ಕಿಲಿಬಿಲಿ ಶಬ್ದ ಮಾಡುತ್ತ ಆನಂದದಿಂದ ತಮ್ಮ ತಮ್ಮ ಗೂಡಿನಕಡೆಗೆ ಹೊರಟಿದ್ದವು. ಇಂಥ ಸುಂದರವಾದ ಸಮಯದಲ್ಲಿ ಉಪವನದೊಳಗಿನ ಲತಾಮಂಟಪದಲ್ಲಿ ಅಪ್ಸರೆಯಂತಹ ಬಾಲೆಯೊಬ್ಬಳು ಸೃಷ್ಟಿ ಸೌಂದರ್ಯವನ್ನು ನಿರೀಕ್ಷಿಸುತ್ತ ಕುಳಿತಿದ್ದಳು. ಅವಳಿಗೆ ಅದೇ ಬಾಲ್ಯವು ಮುಗಿದು ಯೌವನವು ಪ್ರಾಪ್ತ ಭಾವವಾಗುತ್ತಿತ್ತು. ಸಂಧ್ಯಾಕಾಲದ ಸೃಷ್ಟಿಸೌಂದರ್ಯವೂ ಬಾಲೆಯ ರೂಪಸೌಂದರ್ಯವೂ ಎಂಥ ಅರಸಿಕನನ್ನಾದರೂ ಮೋಹಗೊಳಿಸುತ್ತಿದ್ದವು. ಇರಲಿ; ಅಷ್ಟರಲ್ಲಿ ಹಿಂದಿನಿಂದ ಚಪಲೆಯಾದ ಬಾಲೆಯೊಬ್ಬಳು ಬಂದು ಅವಳ ಕಣ್ಣುಮುಚ್ಚಿ ನಗುತ್ತ, ಅಕ್ಕಾ! ನಾನು ಯಾರು? ಹೇಳು ಎಂದಳು ಅದಕ್ಕೆ ಅವಳು, ನಾನು ನಿನ್ನನ್ನು ಗುರ್ತಿಸಿದೆನು. ವೀರಮತೀ! ನನ್ನ ಕಣ್ಣುಗಳನ್ನು ಬಿಡು ಎಂದು ನಗುತ್ತ ನುಡಿದಳು. ವೀರಮತಿಯು ಕಣ್ಣುಗಳನ್ನು ಬಿಟ್ಟು ತನ್ನ ಪ್ರಿಯ ಅಕ್ಕನನ್ನು ಅಪ್ಪಿಕೊಂಡಳು.

ಹಿಂದಕ್ಕೆ ದಕ್ಷಿಣದಲ್ಲಿ ಯಾದವರೆಂಬ ಅರಸರು ದೇವಗಿರಿಯಲ್ಲಿ ಆಳುತ್ತಿದ್ದರು. ಅವರೊಳಗೆ ಶೌರ್ಯ, ಧೈರ್ಯ, ಸಾಹಸಾದಿ ಸಕಲ ಗುಣಗಳಿಂದ ಶೋಭಿಸುವ "ರಾಮರಾಜ" ನೆಂಬ ಅರಸನು ಪ್ರಸಿದ್ಧನು. ಅವನಿಗೆ ಅತ್ಯಂತ ಲಾವಣ್ಯವತಿಯಾದ "ರೂಪವತಿ" ಎಂಬ ಒಬ್ಬ ಮಗಳಿದ್ದಳು. ಅವಳು ಉಪವನಕ್ಕಾಗಲು, ಇವಳ ಸೌಂದರ್ಯಕ್ಕೆ ಮೋಹಿಸಿ ಅನೇಕ ರಾಜರು ಇವಳನ್ನು ಮದುವೆಯಾಗ ಬೇಕೆಂದು ಹಾರೈಸಿದರು. ಆದರೆ ಅವಳು ಯಾರನ್ನೂ ವರಿಸಲಿಲ್ಲ. ಆಗ ಅವರೆಲ್ಲರೂ ಸಿಟ್ಟಾಗಿ ಒಟ್ಟುಗೂಡಿ ರಾಮರಾಜನ ಪಟ್ಟಣವನ್ನು ಮುತ್ತಿ ಒಳ್ಳೇ ನಿಕರದಿಂದ ಕಾದಿದರು. ಕಡೆಗೆ ವಿಜಯಶ್ರೀಯು ರಾಮರಾಜನ ಕೊರಳಿಗೆ ಮಾಲೆಯನ್ನು ಹಾಕಿದಳು. ಆದರೆ ಅತನ ಸ್ವಾಮಿನಿಷ್ಠನಾದ ಸೇನಾನಾಯಕನು ಪ್ರಭುಸೇವೆಗಾಗಿ ವೀರ ಸ್ವರ್ಗವನ್ನು ಹೊಂದಬೇಕಾಯಿತು.

ಶೂರಸೇನನು ತೀರಿಕೊಂಡಾಗ ಅತನ ಮಗಳಾದ "ವೀರಮತಿ" ಯು ತೀರ ಚಿಕ್ಕವಳಿದ್ದಳು. ಆದ್ದರಿಂದ ಅರಸನು ಅವಳನ್ನು ತನ್ನ ಅರಮನೆಗೆ ಕರತಂದು ತನ್ನ ಮಗಳಾದ "ರೂಪವತಿ" ಎಂತೆಯೇ ಅವಳನ್ನು ರಕ್ಷಿಸುತ್ತಿದ್ದನು. ಮೇಲೆ ಹೇಳಿದ ನೊಂದಲನೆಯ ಬಾಲೆಯು ರಾಮರಾಜನ ಮಗಳಾದ ರೂಪವತಿಯು. ಎರ

ಜನೇಯವಳು ಶೂರಸೇನನ ಮಗಳಾದ ವೀರಮತಿಯು ಮುಂದೆ ರೂಪವತಿಗೆ ಅನು ರೂಪನಾದ ವರನನ್ನು ಹುಡುಕಿ ಬಹು ಸಡಗರದಿಂದ ಮದುವೆಯನ್ನು ಮಾಡಿದರು. ವೀರಮತಿಯು ಇನ್ನೂ ಚಿಕ್ಕವಳಾದ್ದರಿಂದ ಈಗಲೇ ಮದುವೆಯನ್ನು ಮಾಡದೆ, ಕೃಷ್ಣರಾಯನೆಂಬ ವೀರನಿಗೆ ಅವಳನ್ನು ಕೊಡುವುದಾಗಿ ನಿಶ್ಚಯಿಸಿದನು. ಬರ ಬರುತ್ತ ವೀರಮತಿಯ ಸೌಂದರ್ಯವು ವಸಂತಕಾಲದ ವೊಗ್ಗೆಯಂತೆ ವಿಕಸಿತವಾಗ ತೊಡಗಿತು. ಅವಳ ಹೃದಯದಲ್ಲಿ ಪ್ರಣಯಲೀಲೆಯ ಕಲ್ಪನೆಗಳು ಹುಟ್ಟಹತ್ತಿ ದವು. ಕೃಷ್ಣರಾಯನಾದರೂ ಅವಳ ಲೀಲೆಗೆ ಚಲನೆಯನ್ನು ಕೊಡುತ್ತಿದ್ದನು. ಪರ ಸ್ಪರರ ಚಿತ್ತವನ್ನು ಪ್ರೇಮವು ಆಕರ್ಷಿಸಿತು. ಇದನ್ನರಿತು ರಾಮರಾಜನು ಇವ ರಿಬ್ಬರ ವಿವಾಹವನ್ನು ಮಾಡಬೇಕೆಂದು ನಿಶ್ಚಯಿಸಿ ಎಲ್ಲಾ ಸಿದ್ಧತೆಯನ್ನೂ ಮಾಡಿ ದನು. ಆದರೆ ''ಒಂದು ಲಗ್ನಕ್ಕೆ ಅನೇಕ ವಿಘ್ನಗಳೆಂಬಂತೆ'' ಆಯುತ ಸಮಯಕ್ಕೆ ವಿಘ್ನವು ಬಂದೊದಗಿತು.

ಶೂರಸಾಹಸಿಯೂ, ಕುಟಿಲಘಾತಕಿಯೂ ಆದ ಅಲ್ಲಾವುದ್ದೀನನು ರಾಜ್ಯ ಲೋಭದಿಂದಲೂ, ಧನಲೋಭದಿಂದಲೂ, ಸುಂದರ ತರುಣಿಯರ ಆಶೆಯಿಂದಲೂ, ಅನೇಕ ರಾಜ್ಯಗಳನ್ನು ಗೆದ್ದು, ದಕ್ಷಿಣದಲ್ಲಿ ದೇವಗಿರಿಯನ್ನು ಮುತ್ತಿದನು ರಾಮ ರಾಜನಾದರೂ ಈತನ ಸ್ವಾಗತವನ್ನು ಮಾಡಲಿಕ್ಕೆ ತನ್ನ ಸೈನ್ಯದೊಡನೆ ಸಿದ್ಧನಾಗಿ ಯೇ ನಿಂತಿದ್ದನು. ಅನೇಕ ರಾಜರನ್ನು ಗೆದ್ದು, ಅವರನ್ನು ತನ್ನ ದಾಸಾನುದಾಸ ರಂತೆ ನಡಿಸಿಕೊಳ್ಳುತ್ತಿದ್ದ ಅಲ್ಲಾವುದ್ದೀನನು ಈತನ ಪಾಡೇನೆಂದು ಒಳ್ಳೇ ಗರ್ವ ದಿಂದ ರಾಮರಾಜನವೇಲೆ ಸಾಗಿಬಂದನು. ಆದರೆ ದೇವಗಿರಿಯ ವೀರರೇನು ಹೇಡಿಗಳೇ ? ಮೊದಲನ ಪೆಟ್ಟಿಗೇ ಅಲ್ಲಾವುದ್ದೀನನ ಸೈನ್ಯವನ್ನು ಚದರಿಸಿಬಿಟ್ಟರು. ಇದನ್ನು ನೋಡಿ ಎಂದೂ ಸೋಲೆಂಬದನ್ನು ಅರಿಯದ ಅಲ್ಲಾವುದ್ದೀನನು ಹತಾಶ ನಾದನು. ಹಿಂದಕ್ಕೊಮ್ಮೆ ರಜಪೂತರು ಈತನೊಡನೆ ಶೌರ್ಯದಿಂದ ಕಾದಿ, ಸೋಲಿಸಿ ಅವಮಾನಮಾಡಿದ್ದರು. ಈಗಾದರೂ ಅದರಂತೆಯೇ ಆಯಿತೆಂದು ಅವನು ಮನಸಿನಲ್ಲಿ ತಳಮಳಿಸಹತ್ತಿ, ಇದರ ಸೇಡು ಯಾವಬಗೆಯಿಂದ ತೀರಿಸಿ ಕೊಳ್ಳದೇಕೆಂದು ಯೋಚಿಸತೊಡಗಿದನು. ಕೌಟಿಲ್ಯದ ಮೂರ್ತಿಯಾದ ಅತನಿಗೆ ಕುಟಿಲ ತಂತ್ರಗಳ ಅಭಾವವೇ ! ಸ್ವೀಣದಲ್ಲಿ ಏನನ್ನೋ ನಿಶ್ಚಯಿಸಿ ತನ್ನ ಸೈನ್ಯವನ್ನು ಹಿಂತಿರುಗಿಸಿ, ಯವನ ಸೈನ್ಯವು ರಾಯನ ಸೈನ್ಯಕ್ಕೆ ಹೆದರಿ ಹಿಂತಿರುಗಿತೆಂದು ನಾಲ್ಕು ಕಡೆಗೂ ಸುದ್ದಿಯನ್ನು ಹಬ್ಬಿಸಿದನು. ಯವನ ಸೇನೆಯು ಸೋತು ಹಿಂತಿರುಗಿ ಓಡಿ ಹೋದದ್ದನ್ನು ಕಂಡು ರಾಯನ ಸೇನೆಯು ವಿಜಯೋಲ್ಲಾಸದಿಂದ ಕೋಟೆಯ ಹೊರಗೆ ಸಾಗಿತು ಅಷ್ಟರಲ್ಲಿ ಅಲ್ಲಾವುದ್ದೀನನು ಸಮೀಪದಲ್ಲಿಯೇ ತಳವೂರುವ ನೆಂಬ ಸುದ್ದಿಯು ಹತ್ತಲು, ರಾಮರಾಜನು ಇವರಲ್ಲಿ ಏನೋ ಕಪಟವಿರುವದೆಂದು ತಿಳಿದು, ತನ್ನ ಎಲ್ಲಾ ಸರದಾರರನ್ನೂ ಕರಿಸಿ, ಅವರಿಗೆ ಈ ವೃಂತ್ತಾತನನ್ನು ತಿಳಿಸಿ,

ಮುಂದೆ ಏನುಮಾಡಬೇಕೆಂದು ಕೇಳಿದನು. ಅದನ್ನು ಕೇಳಿ ಅವರೆಲ್ಲರೂ, ನಾವು ಈಗಲೇ ಹೋಗಿ ಶತ್ರುವಿನ ಮೇಲೆ ಬಿದ್ದು ಶತ್ರುವನ್ನು ಗಡೀಪಾರು ಮಾಡಿಬರುವೆವು ಎಂದು ಹೇಳಿದರು. ರಾಮನಿಗಾದರೂ ಈ ವಿಚಾರವು ಸರಿದೋರಿತು. ಆದರೆ ಕೃಷ್ಣರಾಯನಿಗೆ ಮಾತ್ರ, ಈ ವಿಚಾರವು ಸರಿದೋರಲಿಲ್ಲ. ಆಗ ಅತನು ಎದ್ದು ನಿಂತು ಕೈಜೋಡಿಸಿ, ಒಡೆಯರೇ! ನನ್ನ ಮನದಲ್ಲಿ ಒಂದು ಹೊಸವಿಚಾರವು ಬಂದಿರುವುದು. ಅದೇನಂದರೆ, ಶತ್ರುವಿನ ಪಾಳಯದೊಳಗೆ ಯಾರಾದರೂ ಗುಪ್ತರೀತಿಯಿಂದ ಹೋಗಿ, ಶತ್ರುವಿನ ಸ್ಥಿತಿಗತಿಗಳನ್ನು ತಿಳಿದು ಆಮೇಲೆ ಸ್ಥಾರೀ ಮಾಡಬಹುದು. ಈ ಕಾರ್ಯವನ್ನು ನಾನು ತಮ್ಮ ಪುಣ್ಯಪ್ರಭಾವದಿಂದ ಮಾಡಿ ಕೊಂಡು ಬರುವೆನು. ನನಗೆ ಆಜ್ಞೆಯನ್ನು ಕೊಡಬೇಕೆಂದು ಅತಿ ವಿನಯದಿಂದ ಬೇಡಿಕೊಂಡನು. ರಾಯನಿಗೆ ಈ ವಿಚಾರವು ಸರಿದೋರಿ. ಕೃಷ್ಣರಾಯನಿಗೆ ಅನುಮತಿಯನ್ನು ಕೊಟ್ಟನು. ಕೃಷ್ಣರಾಯನು ತನ್ನ ಮನಃಕಾಮನೆಯು ಪೂರ್ಣವಾಯಿತೆಂದು ಹರ್ಷಿತನಾಗಿ ಶತ್ರುವಿನ ಪಾಳಯಕ್ಕೆ ತೆರಳಿದನು.

(೨)

ಪ್ರಾಸಾದದೊಳಗಿನ ಉಪ್ಪರಿಗೆಯಮೇಲೆ ಬೆಳದಿಂಗಳೊಳಗೆ ಸುಂದರ ರಮಣಿಯೊಬ್ಬಳು ಆಕಾಶದೊಳಗಿನ ತಾರಕೆಗಳನ್ನು ರಜನೀನಾಥನನ್ನೂ ನೋಡುತ್ತ ಕುಳಿತಿದ್ದಳು. ಆ ಇಂದುವದನೆಯು ಚಂದ್ರಬಿಂಬಕ್ಕೂ ತನ್ನವದನಚಂದ್ರಕ್ಕೂ ಎಲ್ಲಿ ಸರಿಹಚ್ಚಿನೋಡುವಳೋ! ಎಂಬ ಭೀತಿಯಿಂದಲೋ ಏನೋ ಎಂಬಂತೆ ರಜನೀನಾಥನು ಮೋಡದೊಳಗೆ ಮರೆಯಾದನು. ಚಂದ್ರನ ಈ ಭೀತಿಯನ್ನು ಕಂಡು ವಿಸ್ಮಿತಳಾಗಿ ಅವಳು ಹಿಂತಿರುಗಿನೋಡಿದಳು. ಕೃಷ್ಣರಾಯನು ನಗುತ್ತ ತನ್ನ ಸಮೀಪದಲ್ಲಿ ನಿಂತಿದ್ದಾನೆ. ಕೃಷ್ಣರಾಯನು ಶತ್ರುವಿನ ಪಾಳಯಕ್ಕೆ ಹೋಗುವ ಮೊದಲು ತನ್ನ ಭಾವೀಪತ್ನಿಯ ನಿರೂಪವನ್ನು ಸೆಗೆದುಕೊಂಡುಹೋಗಬೇಕೆಂದು ಬಂದಿದ್ದನು. ಕೃಷ್ಣರಾಯನನ್ನು ಕಂಡು ವೀರಮತಿಗೆ ಒಂದುಬಗೆಯಿಂದ ಆನಂದವೂ ಒಂದುಬಗೆಯಿಂದ ಖೇದವೂ ಉಂಟಾಗಿ, ಗದ್ಗದ ಕಂಠದಿಂದ ಪ್ರಿಯರೇ! ನೀವು ಶತ್ರುವಿನ ಪಾಳಯಕ್ಕೆ ಜೀವದಾಸೆಯನ್ನು ಬಿಟ್ಟು ಒಬ್ಬರೇ ಹೊರಟಿರುವಿರಿ. ಇಂಥ ಸಮಯದಲ್ಲಿ ನಾನು ಅರಮನೆಯಲ್ಲಿ ಹ್ಯಾಗೆ ಇರಲಿ? ವಿಧಿಪೂರ್ವಕವಾಗಿ ನಮ್ಮಿಬ್ಬರ ವಿವಾಹವು ಆಗದಿದ್ದರೂ, ಪರಸ್ಪರ ಹೃದಯವು ಪ್ರೇಮದಿಂದ ಒಂದಾಗಿರುವವು. ಆದ್ದರಿಂದ ನಾನು ನಿಮ್ಮ ವೈಗಾವಲಿಗಾಗಿ ಪುರುಷವೇಷದಿಂದ ನಿಮ್ಮ ಸಂಗಡ ಬರುವೆನು. ನನ್ನನ್ನು ಸಂಗಡ ಕರೆದುಕೊಂಡು ಹೋಗಬೇಕೆಂದು ಬೇಡಿಕೊಂಡಳು. ಅದಕ್ಕೆ ಕೃಷ್ಣರಾಯರು, ಪ್ರಿಯೇ! ನಿನ್ನನ್ನು ಸಂಗಡ ಕರೆದು ಕೊಂಡುಹೋದರೆ ರಾಮರಾಜನು ಏನಂದಾನು? ಕೈಹಿಡಿದ ಕಾರ್ಯವನ್ನು ಮಾಡದೆ

ಜೋಲುಮೋರೆಯಿಂದ ಹಿಂತಿರುಗುವಷ್ಟು ಈ ಕೃಷ್ಣರಾಯನು ಹೇಡಿಯೇ! ನೀನು ಆನಂದದಿಂದ ನನಗೆ ಅಪ್ಪಣೆಯನ್ನುಕೊಡು, ವಿಜಯಿಯಾಗಿ ಬರುವೆನು ಎಂದು ಹೇಳಿ ಅವಳ ಅನುಮತಿಯನ್ನು ಪಡೆದು ಶತ್ರುವಿನ ಪಾಳಯಕ್ಕೆ ಹೊರಟನು.

(೩)

ಮಧ್ಯರಾತ್ರಿಯ ಸಮಯವು. ಮೋಡವು ಕವಿದು ಕಗ್ಗತ್ತಲೆಯು ಮುಸುಕಿದೆ. ಇಂಥ ಹೊತ್ತಿನಲ್ಲಿ ಮನೆಯನ್ನು ಬಿಟ್ಟು ಯಾರಾದರೂ ಹೊರಬೀಳಬಹುದೇ ಅದೋ ಅಲ್ಲಿ ನೋಡಿರಿ! ಕೃಷ್ಣವರ್ಣದ ಕುದುರೆಯಮೇಲೆ ಕುಳಿತು ಇಂಥ ಗಾಢಾಂಧಕಾರದಲ್ಲಿ ಯಾವನೋ ಹೊರಟಿರುವನು. ನಾಚಕರೇ, ಇವನನ್ನು ಗುರ್ತಿಸಿದಿರಾ! ಈತನು ಶತ್ರುಗಳ ಸ್ಥಿತಿಗತಿಗಳನ್ನು ತಿಳಿಕೊಂಡುಬರುವೆನೆಂದು ಪ್ರತಿಜ್ಞೆಯನ್ನು ಮಾಡಿದ ಕೃಷ್ಣರಾಯನು. ಆತನು ಶತ್ರುವಿನ ಸ್ಥಿತಿಯನ್ನು ನೋಡಿಕೊಂಡುಬರುವೆನೆಂದು ರಾಯನಮುಂದೆ ಪ್ರತಿಜ್ಞೆಯನ್ನುಮಾಡಿ ಆತನನ್ನು ಸಂಪೂರ್ಣವಾಗಿ ಮೋಸಗೊಳಿಸಿದನು. ಮತ್ತು ತಾನೇ ದೇವಗಿರಿಯ ರಾಜನಾಗಬೇಕೆಂದು ಆಲೋಚಿಸುತ್ತ ಮಾರ್ಗವನ್ನು ಕ್ರಮಿಸುತ್ತಿದ್ದನು. ಆತನು ತನ್ನ ವಿಚಾರದಲ್ಲಿಯೇ ಲೀನನಾದ್ದರಿಂದ ತನ್ನ ಹಿಂದೆ ಯಾರು ಒರುವರೆಂಬ ಅರಿವು ಸಹ ಆತನಿಗೆ ಇದ್ದಿಲ್ಲ.

ಇತ್ತ ವೀರಮತಿಯು ಕೃಷ್ಣರಾಯನಿಗೆ ನಿರೂಪನನ್ನು ಕೊಟ್ಟು ಕಳುಹಿಸಿದಳು, ಆದರೆ ಅವಳಿಗೆ ಮನೆಯಲ್ಲಿ ಸುಮ್ಮ ಕೂಡಲಿಕ್ಕೆ ಮನಸ್ಸಾಗದೆ ತಳಮಳಿಸಹತ್ತಿದಳು. ನನ್ನ ಪತಿಯು ಶತ್ರುವಿನ ಪಾಳಯಕ್ಕೆ ಒಬ್ಬನೇ ನಡೆದಿರಲು ನಾನು ನಿಶ್ಚಿಂತೆಯಿಂದ ಇಲ್ಲಿರುವುದು ನ್ಯಾಯವೆ? ಕ್ಷತ್ರಿಯ ಕನ್ಯೆಯಾದ ನಾನು ಸಮರಕ್ಕೆ ಹೆದರಬೇಕೆ? ಎಂದು ಯೋಚಿಸಿ, ಏನನ್ನೋ ನಿಶ್ಚಯಿಸಿ, ಪುರುಷವೇಷವನ್ನು ತೊಟ್ಟು, ಅಶ್ವಾರೂಢಳಾಗಿ ಪತಿಯನ್ನು ಹಿಂಬಾಲಿಸಿ ನಡೆದಳು ಕೃಷ್ಣರಾಯನ ಹಿಂದಿನಿಂದ ಅವನಿಗೆ ತಿಳಿಯದಂತೆ ಇವಳೇ ನಡೆದಿದ್ದಳು ಪ್ರೇಮದ ಪ್ರಭಾವವು ಅಗಾಧವಾದದ್ದು. ರಾತ್ರಿಯ ಗಾಢಾಂಧಕಾರಕ್ಕೂ, ನಿರ್ಜನವಾದ ಅರಣ್ಯಕ್ಕೂ ಹೆದರದೆ, ಅಬಲೆಯಾದರೂ ಅವಳು ತನ್ನ ಪ್ರಿಯವಸ್ತುವಿನ ಕಡೆಗೆ ನಡೆದಿದ್ದಳು. ಪ್ರೇಮಕ್ಕೆ ಪಾತ್ರಾಪಾತ್ರವಿಚಾರವೇ? ಯೋಗ್ಯಾಯೋಗ್ಯಸಮಯವೇ?

(೪)

ದಟ್ಟವಾದ ಗಿಡದ ಝುಡುಪಿನಲ್ಲಿ ಯಾರೋ ಮೆಲ್ಲಮೆಲ್ಲನೆ ಮಾತಾಡುವದು ಕೇಳಿ ಹಿಂದೆಬರುವ ಅಶ್ವಾರೋಹಿಣಿಯಾದ ಯುವಕನು ತನ್ನ ಅಶ್ವವನ್ನು ನಿಲ್ಲಿಸಿ ಅವರ ಗುಪ್ತಭಾಷಣವನ್ನು ಮರೆಗೆ ನಿಂತು ಕೇಳಹತ್ತಿದನು. ಇದುರಿಗೆ ನಿಂತಿದ್ದ ವ್ಯಕ್ತಿಯನ್ನು ಕುರಿತು, ಕೃಷ್ಣರಾಯನು ಛಲೆ! ನೀವುತಂದ ಸಮಾಚಾರವೇನು? ಎಂದು ಬಹು ಉತ್ಕಂಠೆಯಿಂದ ಕೇಳಿದನು. ಇದಕ್ಕೆ ಆ ವ್ಯಕ್ತಿಯು, ಕೃಷ್ಣರಾಯಾ

ಇನ್ನು ಸಂಶಯವೇಕೆ? ಒಮ್ಮೆ ವಚನವನ್ನು ಕೊಟ್ಟಿಲ್ಲವೇ! ಬೆಳಗಾಗುವದರೊಳಗೆ ನೀನು ದೇವಗಿರಿಯ ಅರಸನು! ರಾಮರಾಜನು ನಿನ್ನನ್ನು ಇಷ್ಟು ನಂಬಿದ್ದು ನಮಗೂ ನಿನಗೂ ಹಿತವನ್ನುಂಟುಮಾಡಿತು. ಕೃಷ್ಣರಾಯನು ಶತ್ರುವಿನ ಸಮಾಚಾರವನ್ನು ತರುವನೆಂದು ಎಣಿಕೆಹಾಕುತ್ತ ಅವನು ಸುಮ್ಮನೆ ಕೂಡಲಿ ನಾವು ಅಕಸ್ಮಿತವಾಗಿಹೋಗಿ ಆತನನ್ನು ಕುಳ್ಳಿರಿಸಿ ನಿನ್ನನ್ನು ಪಟ್ಟಗಟ್ಟುವೆನೆಂದು ಹೇಳಿದನು. ಮರೆಗೆ ನಿಂತು ಕೇಳುತ್ತಿದ್ದ ಯುವಕನಿಗೆ ಇವರ ಭಾಷಣವನ್ನು ಕೇಳಿ ತಲೆಯಮೇಲೆ ವಜ್ರಘಾತವಾದಂತಾಯಿತು. ಕ್ರೋಧದಿಂದ ಆತನ ಸರ್ವಾಂಗವೂ ಥರಥರ ನಡುಗುತ್ತಿತ್ತು. ಕೂಡಲೆ ಅವನಿಗೆ ದಿವ್ಯಶಕ್ತಿಯು ಬಂದಂತಾಗಿ ತನ್ನ ಕತ್ತಿಯನ್ನು ವರೆಯಿಂದ ಹಿರಿದು, ಸಂಕಾಪದಿಂದ ನೀಚಾ! ವಿಶ್ವಾಸಘಾತಕಾ!! ಕುಲಾಂಗಾರಾ!!! ಸ್ವಾರ್ಥಲೋಲುಪನಾಗಿ ಸ್ವಾಮಿದ್ರೋಹವನ್ನು ಬಗದೆಯಾ ಎನ್ನುತ್ತ ತನ್ನ ಹಿರಿದ ಖಡ್ಗದಿಂದ ಕೃಷ್ಣರಾಯನ ಎದೆಗೆ ಕಸುವಿನಿಂದ ತಿವಿದನು. ಕೃಷ್ಣರಾಯನು ಗಾಯಹೊಂದಿ, ಕುದುರೆಯಿಂದ ಕೆಳಗೆಬಿದ್ದು "ಹಾಯ್ ವೀರಮತೀ" ಎಂದು ದೀನಸ್ವರದಿಂದ ಕೂಗುತ್ತಿರಲು, ಪುರುಷವೇಷಧಾರಿಯಾದ ವೀರಮತಿಯು ಅವನನ್ನು ಕಡೆದು, ನೀಚಾ! ಸುಮ್ಮನಿರು ಯಾವ ಮುಖದಿಂದ ನೀನು ಸ್ವಾಮಿದ್ರೋಹವನ್ನು ಬಗೆಯಲು ಎಣಿಕೆಹಾಕುತ್ತಿದ್ದಿಯೋ ಆ ನಿನ್ನ ಅಪವಿತ್ರವಾದ ಮುಖದಿಂದ ನನ್ನ ನಾಮೋಚ್ಚಾರನವನ್ನು ಮಾಡಬೇಡ ಎಂದು ತಿರಸ್ಕಾರದಿಂದ ನುಡಿದಳು. ಅದನ್ನು ಕೇಳಿ ಕೃಷ್ಣರಾಯನು ಪಶ್ಚಾತ್ತಾಪಪಟ್ಟು ಪ್ರಿಯೇ! ನಾನು ಸ್ವಾಮಿದ್ರೋಹಿಯೂ, ದೇಶದ್ರೋಹಿಯೂ ಆಗಿ ಘೋರವಾದ ನರಕದಲ್ಲಿ ಬೀಳುತ್ತಿದ್ದೆನು. ಅದನ್ನು ನೀನು ತಪ್ಪಿಸಿದಿ. ನನಗೆ ಶಿಕ್ಷೆಯಾದರೂ ಬಹು ಚನ್ನಾಗಿಯೇ ಆಯಿತು. ಕ್ಷಣದಲ್ಲಿ ನಾನು ಪರಲೋಕಕ್ಕೆ ತೆರಳುವೆನು. ನನ್ನ ಸರ್ವಾಪರಾಧಗಳನ್ನೂ ಕ್ಷಮಿಸು ಎನಲು, ವೀರಮತಿಯು ದುಃಖದಿಂದ ಕನಿಕರಪಟ್ಟು ನಾಥಾ! ನೀವು ಕಾರ್ಯಾಗದಿಂದ ಹೋಗುತ್ತಿದ್ದಿರಿ. ನಾನು ನಿಮ್ಮನ್ನು ಪಾಪಕರ್ಮದಿಂದ ಪರಾವೃತವಾಡಿದನು. ಆದರೆ ಪರಲೋಕಕ್ಕೆ ನಿಮ್ಮನ್ನೊಬ್ಬರನ್ನೇ ಹೋಗಗೊಡದೆ ನಾನೂ ನಿಮ್ಮ ಸಂಗಡ ಒರುವೆನು. ಎಂದು ಹೇಳಿ ಪತಿಯ ಹೃದಯದ ರಕ್ತದಿಂದ ಮುಣುಗಿದ ಖಡ್ಗವನ್ನು ತನ್ನ ಹೃದಯದಲ್ಲಿ ತಿವಿದು ಕೊಂಡಳು. ವೀರಮತಿಯ ದೇಹವು ಕೃಷ್ಣರಾಯನಮೇಲೆ ಬಿದ್ದಿತು. ಅವರಿಬ್ಬರ ಪ್ರಾಣಜ್ಯೋತಿಗಳು ವಾತಾವರಣದಲ್ಲಿ ಲೀನವಾದವು. ಪ್ರೇಮದ ಮಹಿಮೆಯು ಅಗಾಧವಾದದ್ದು!

ಕೃಷ್ಣಾಬಾಯಿ ಕುಲಕರ್ಣಿ, ಸವಣೂರ.

ಮಾನವ ಸುಖಬೋಧಾಮೃತ

(ಹಿಂದಿನ ಸಂಚಿಕೆಯಿಂದ ಮುಂದರಿಸಿದ್ದು)

೪. ಸತಿಯ ಕರ್ತವ್ಯ.

ವಿಧಿವಿಹಿತದಿಂ ಕರ್ಮವೆಸಗುತೆ |
ಸದಯನಾಗಿಹ ಪತಿಯ ನೊಲಿಯುತೆ||
ಮದವಿವರ್ಜಿತಳಾಗಿ ದೇವನ ಪದವ ಪೂಜಿಸುತೆ ||
ಮುದದಿಭಕ್ತಿಯ ನಾರ್ಜಿಸುತೆ ಧುರ |
ನದೊಳು ಸಂಸೃತಿಯನ್ನು ಪಾಲಿಪ |
ವಿಧವನರಿವಾಸತಿಯು ಮನ್ನಣೆಯಾಂತು ಮೆರೆಯುವಳು ||೧||

ಆವುದು ಪರಿಕಿಪ್ಪುದು ಮೊದಲೊಳ್ |
ಗಾವುದರೊಳಂ ಮನವನಿಡುವುದ |
ದಾವುದದು ಮುಂದಣಭಿವೃದ್ಧಿಗೆ ಹೇತುವೆಂದೆನುತೆ ||
ಭಾವಿಸುತೆ ಸಜ್ಜನರ ನೀನುರ |
ಸೇವಿಸುತವರ ನೀತಿವಚನವ |
ಭಾವದೆ ಮನನಗ್ಗದು ಕೀರ್ತಿಯನಾಂತು ಬಾಳುವುದು ||೨||

ಉಡುಗೆ ತೊಡಿಗೆಗಳಲ್ಲಿ ಕಾಲವ |
ಬಿಡದೆ ಕಳೆಯುತೆ ತನ್ನ ರೂಪವ |
ನಡಿಗಡಿಗೆ ನೋಡಿಕಳುತತಿಗರ್ವವನು ತಾಳುತಲೆ ||
ಎಡರಿನೊಳು ಪತಿಯಿರ್ಪ ಗೃಹವಂ |
ಬಿಡುತಜನಕನ ನಿಲಯದೆ ಸುಖದ |
ಗಡಣದೊಳಿರುತೆ ಪರಪುರುಷರೊಳು ಬೆಡಗತೋರುತಿಹ ||೩||

ವನಿತೆಯಿಂಪರಿ ವೃತ್ತಿಯಾನುತ |
ಲನುಪಮ ಸುರೂಪನತಿ ತಾನೆಂ |
ಬೆನಿಸಿಕೊಳ್ಳುತೆ ಮೆರೆಯುತಿರಲೇಂ ಯೋಗ್ಯಳೆನಿಸುವಳೆ ||

ಜನಿಯನೊರೆಯುವ ದುರುಳಮಾತಿಗೆ |
ಮನವತೆರದಂತಿರುತೆ ಮೋಹಕ |
ಘನತೆಯಂ ತಾನೀಗಿ ಕೊಳ್ವಾರಮಣಿ ಹೇಯಳಲೆ ||೪||

ಕರುಣೆಯಿಂ ಸನ್ನಡತೆಯಿಂದಂ |
ತಿರೆಯದನು ಭವವಾಂತು ರೂಪವ |
ದಿರದೆ ಮನಕುರಿನಲವತಾಪುಟ್ಟಿಸುವ ತೆರಮಿರುತೆ ||
ಅರಿವಿಗೆಡೆಯಹ ಕಾರ್ಯಗಳ ನಾ |
ಹರಿಸಿ ಗುರುಹಿರಿಯರೊಳು ಬಳುತಿಯ |
ನಿರಿಸಿ ಜೀವಿತ ಯಾತ್ರೆಗೈವಳು ಸಾಧ್ವಿಯೆನಿಸಿಹಳು ||೫||

ಆವಗಂ ತಾನಿಂತಿರುವವಳ |
ಸೋವದಲೆ ನಲವಿಂದೊರತಿಸ |
ದೇವನೆಂದತಿಶಯದ ತೋಷದೊಳವಳ ಪೋಷಿಸುತೆ ||
ಕಾವುಶಂಮೋದವ ನನುಗೊಳಿಸಿ |
ಭಾವತೆಯು ತಾನೆಳಸಿದ ಮನೋ |
ಭಾವಗಳ ಸಲ್ಲಿಪುದು ದಿನಿಯನ ಸೌಖ್ಯವೃದ್ಧಿಗಳೆ ||೬||

ಮನೆಗವಳ ಯಜಮಾನಿಯೆನಿಸುತೆ |
ಘನತೆಯಿಂ ಕಾಣುತ್ತ ಸೇವಕ |
ಕನುವ ನರಿದವಳಾಣತಿಯ ವಿಾರ್ದಪರಿನಡೆಸುವುದು ||
ಮನಕೆಕಾರಣ ತೋರದಿರ್ದೊಡೆ |
ವನಿತೆಯಾಸೆಯ ಸಲ್ಲಿಸುತಿರು |
ಸನುಮತದೊಳಂ ನಿನ್ನ ಸೌಖ್ಯಕೆ ಮುಖ್ಯ ಭಾಜಳಳು ||೭||

ಕಂಡತಪ್ಪನು ನಯದೆತಿರ್ದುತೆ |
ಪಂಡಿಸದ ಪರಿವತಗೊಳಿಸಿ ಭೂ |
ಮುಂಡಲದೆ ತನಸೌಖ್ಯವೆಲ್ಲವ ವಳನೆಸಾರುತಿದೆ ||
ಕೊಂಡಿತನವಂ ಬಿಟ್ಟು ನಿನ್ನ |
ಷ್ಟಂಡ ಗೋಪ್ಯವಿಷಯಗಳೊರೆಯುತೆ |
ಪಂಡಿತವಕ್ಕೆಯಂತೆ ಪೊರೆವುದು ಭವದರತ್ನವನು ||೮||

ಅಪರವ ನೀಡಿರುವ ಶುಕಂಗೆ |
ಭಾಷುರನಿರಗೆಯವನು ಬಿಟ್ಟೊಡೆ |
ತೋಷವಾಸುತೆ ಕೊನೆಗೆ ತಾ ಭೃತ್ಯತೆಯುಣಾಂತವೊಲು ||

ಭಾಸುರಾರಿಗಿಯೊಳಾದ ತಿಮಿಗಳ |
ಗಾಸರೆಯಳಾದವಳುಳಿಯುತೆ ದು |
ರಾತೆಯುಂ ಪರಸತಿಯು ನೇದೊಡೆ ನಾಶವೊಂದುವೆಯೊ ॥೯॥

ಇಂತುಮೆರೆದಿಹ ಕಾಂತೆ ಸದ್ಗುಣ |
ವಂತೆಯಾಗಿರೆ ರೋಗವಾರದೊ |
ಳಂ ತಪಿಸುತಾರೋಗ್ಯಹೀನೆಯಳಾದ ಕಾಲದೊಳು ||
ಸಂತವಿಸಿ ಸವಿನುಡಿಯೊಳಾಕೆಯ |
ಮುಂತಣದ ವೃದ್ಧಿಯನು ಬಯಸುತೆ |
ಸಂತಸವಗೊಸಸುತಿರೆ ಶತವೈದ್ಯರಿಗೆ ಸರಿಯೆನಿಪೆ ॥೧೦॥

ಮೆರೆವ ಜಾತಿಗನುಗುಣಮೆಂದೆನಿ |
ಸಿರುವ ಸನುವುಂ ಬುದ್ಧಿದಯೆಯುಂ |
ಕರುಣದಿಂದಂ ದೇವನೀಡಿಹುದಂ ನಿರುತಿಸುತಲಿ ||
ಚರಿಪಳಜ್ಜದ ತಪ್ಪನುಳಿಯುತೆ |
ಕೊರತೆಗಳಿಗತಿ ಕುಪಿತನಾಗದೆ |
ಮರೆಯುದಲೆ ನಿನ್ನೊಳಿಹ ಲೋಪವತಿದ್ದಿ ಕೊಳುತಿಹುದು ॥೧೧॥

ಗ್ರಂಥಪರಿಚಯ.

"ಸುಬೋಧ":—ಅನೇಕ ವರ್ಷಗಳಿಂದ ಸುಪ್ರಸಿದ್ಧರಾದ ಶ್ರೀಯುತ ಎಂ. ರಾಮರಾವ್ ಅವರು, ಸುಧೋದ ಕುಸುಮಾಂಜಲಿ ಎನ್ನುವ ಗ್ರಂಥಮಾಲೆಯನ್ನು ಪ್ರಾರಂಭಿಸಿ ಅನೇಕ ಭಕ್ತರ ಸಾಧುಸಂತರ ಚರಿತ್ರೆಗಳನ್ನು ಪ್ರಕಟಿಸುತ್ತಿರುವ ವಿಷಯವು ನಮ್ಮ ಕನ್ನಡಿಗರಿಗೆ ಹೊಸದಲ್ಲ. ಇಷ್ಟರಲ್ಲೇ ಕೃಪ್ತರಾಗದೆ ನವರಾತ್ರಿಯಿಂದ "ಸುಬೋಧ" ಎನ್ನುವ ಮಾಸಪತ್ರಿಕೆಯನ್ನು ಪ್ರಾರಂಭಿಸಿರುವುದು ಸ್ತೋತ್ರಾರ್ಹವಾದುದು. ಮೊದಲನೆಯ ಸಂಚಿಕೆಯು ನಮ್ಮ ಕಾರ್ಯಸ್ಥಾನವನ್ನಲಂಕರಿಸಿರುವುದು. ಈ ಸಂಚಿಕೆಯಲ್ಲಿ ಬರೆಯಲ್ಪಟ್ಟಿರುವ ಪ್ರತಿಯೊಂದು ಲೇಖನಗಳೂ ಅತಿ ಶ್ಲಾಘ್ಯವಾದುದು. ಕನ್ನಡ ಭಾಷಾಭಿಮಾನಿಗಳೆಲ್ಲರೂ ಈ ಪತ್ರಿಕೆಗೆ ಚಂದಾದಾರರಾಗಿ ಶನ್ಮೂಲಕ ಮಹನೀಯರಾಗಿ ಸಂಪಾ

ಹಳೆಯ ಕೈಗೊಂಡಿರುವ ಮಹತ್ಕಾರ್ಯದ ಸದುದ್ದೇಶವನ್ನು ಸಫಲಗೊಳಿಸ ಬೇಕಾಗಿ ಪ್ರಾರ್ಥನೆ ಕರ್ನಾಟಕದಲ್ಲಿ ದಿನೇ ದಿನೇ ನೂತನವಾದ ಮಾಸಪತ್ರಿಕೆ ಗಳು ಜನಿಸುತ್ತಿರುವುದು ಶುಭಸುದ್ದಿಯಾದರೂ ಅವುಗಳಲ್ಲನೇಕವುಗಳ ದುರವ ಸ್ಥಿಯನ್ನು ಸ್ಮರಿಸಿದಾಗ ಮಾತ್ರ ವಿಷಾದವಾಗುವುದು. ಅಂತಹ ದುರವಸ್ಥೆಗೆ ಸಿಕ್ಕದೆ ಜಗನ್ಮಾತೆಯ ಪರಮಾನುಗ್ರಹದಿಂದ ಈ ಪತ್ರಿಕೆಯು ಸ್ಥಿರವಾಗಿ ನಡೆಯ ಲೆಂದು ಪ್ರಾರ್ಥಿಸುವೆವು. ಬೇಕಾದವರು.

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.


ಸಂಪಾದಕ "ಸುಬೋಧ"
ಹೊಸಮಾರ್ಕೆಟ್, ಬೆಂಗಳೂರು.

"ಸುವಾಸಿನಿ":—ತಿಳಿಗನ್ನಡದ ಮಾಸಪತ್ರಿಕೆ. ವಾರ್ಷಿಕ ಚಂದಾ ರೂ. ೭-೫-೦.

ಈ ಪತ್ರಿಕೆಯು ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ಈಗ ಮದರಾಸ್ ಸರ್ಕಾರದ ಕನ್ನಡ ಪರಿವರ್ತಕರಾಗಿರುವ ಶ್ರೀಯುತ ಬೆನಗಲ್ ರಾಮರಾಯರ ಸಂಪಾದಕತ್ವದಲ್ಲಿ ಹುಟ್ಟಿ ಎರಡು ವರ್ಷಗಳು ಮಾತ್ರ ನಡೆದು ಕೆಲವು ಅನಾನು ಕೂಲದಿಂದ ವರ್ಷಗಳವರೆಗೂ ಅಜ್ಞಾತವಾಗಿದ್ದು ಕಳೆದಶಿಂಗಳಿನಿಂದ ಪುನಃ ಪ್ರಕಟ ವಾಗುತ್ತಲಿರುವುದು. ಅನೇಕ ಮಹಾನುಭಾವರುಗಳಿಂದಲೂ ಪಂಡಿತವರ್ಯರಿಂದಲೂ ಬರೆಯಲ್ಪಟ್ಟ ಲೇಖನಗಳು ಈ ಪತ್ರಿಕೆಯಲ್ಲಿ ಕಂಗೊಳಿಸುತ್ತಿರುವುವು. ಇಂತಹ ಪತ್ರಿಕೆಗಳ ಅವಶ್ಯಕತೆಯು ಕನ್ನಡನಾಡಿಗೆ ಇದ್ದರೂ ಕೂಡ ಕನ್ನಡ ಪತ್ರಿಕೆಗಳಿಗೆ ಸಾಕಾದಷ್ಟು ಪ್ರೋತ್ಸಾಹವಿಲ್ಲವೆಂದು ವಿಷಾದದಿಂದ ಹೇಳಬೇಕಾಗಿರುವದು. ಕನ್ನಡ ಭಾಷಾಭಿಮಾನಿಗಳು ಮೇಲ್ಕಂಡ ಪತ್ರಿಕೆಗೆ ತಮ್ಮ ಉದಾರವಾದ ಹಸ್ತವನ್ನಿತ್ತು ರಕ್ಷಿಸಬೇಕೆಂದು ಹಾರೈಸುವೆವಲ್ಲದೆ ಜಗತ್ತಿಯು ಅಂತಹ ಸದ್ಬುದ್ಧಿಯನ್ನು ನಮ್ಮ ಕನ್ನಡಿಗರಿಗೆ ಕೊಡಲೆಂದು ಬೇಡುವೆನು. ಈ ಪತ್ರಿಕೆಯು ನಿರಂತರವಾಗಿ ಕನ್ನಡಿ ಗರ ಸೇವೆಗೈಯಲಿ.

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಮ್ಯಾನೇಜರ್ "ಸುವಾಸಿನಿ"
ಮಂಗಳೂರು.



ಸರಸ್ವತಿ

ಸಂಪುಟ ೫ } ಕ್ರೋಧನ ವರ್ಷ – ಕಾರ್ತೀಕ ಮಾಸ

ಮಾತೃಪೂಜೆ

ಪ್ರಾರ್ಥನೆ

ಸುಡಿವೆ ಸತ್ಯಮುಂ ಜನನಿಯೆ ಕೇಳ್‌ನೀ
ನೆನ್ನವಳಾನುಂ ನಿನ್ನ ಸುತಂ ।
ಎನ್ನಯ ಸರ್ವಸ್ವವು ನೀನಾಗಿಹೆ
ನಿನ್ನ ದೇಹಮಿದು ರತ್ನಯುತಂ ॥

ನಿನ್ನಯ ಜೀರ್ಣಾಸನಮಿದು ಸ್ವರ್ಗದ
ಸಿಂಹಪೀಠದೋಲ್ ರಮ್ಯತರಂ ।
ನಿನ್ನ ಪಾದರಜದೊಂದೊಂದುಂ ಕಣ
ಕೆಣೆಯೆಣಿಪುದೆ ಮೌಕ್ತಿಕನಿಕರಂ ॥

ಧರ್ಮವು ನೀನೇ ಕರ್ಮವು ನೀನೇ
ನೀನೆ ಯೋಗಭೋಗವ ನೀವಳ್ ।
ನಿನ್ನಸುಳಯಲಾರೀ ಲೋಕದೆಪೇಳ್
ಮುಂಡಿತರೆನಿಪರು ಗೌರವದೋಳ್ ॥

ತಾಯಾಗಿರೆ ನೀನೆಮಗೆ ನಿನ್ನತುಳ
ಮಮತೆಯತೋರಾ ಕರುಣದಲಿ ।
ಕಕ್ತಿರೂಪದಿಂ ಬಂದು ನಿಂದು ನೀ
ನನ್ನಪೂರ್ಣೆ ಯೆಂಬಂದದಲಿ ॥

೨೦ ಕಲ್ಯ

ನನಿಯು ಪದತಲವುಂ ಸೇರುತೆ ನಾವ್
ದೀಕ್ಷಾಗ್ರಹಣವ ಗೈಯುವ ಬಾ ।
ಬಾರತೇಯರೆಂಬೀ ನಾಮಾಕ್ಷರ
ಗಳನೆ ಸ್ವರ್ಣದೋಳ್ ಕಡೆಯುವ ಬಾ ॥

ಕಾಲಕುಂಡದೋಳ್ ತೇಜೋಗ್ನಿಯ ನಿ
ಟ್ಟುದ್ಯಮವೆಂಬಿಂಧನವ ನುರಿಸುತ್ತೆ ।
ದುರ್ಮತಿ ದುರ್ಗತಿ ದುಃಖದರಿದ್ರತೆ
ಯೆಲ್ಲವನದರೋಳ್ ತ್ಯಜಿಸುತ್ತೆ ॥

ಜೈನ ಹಿಂದು ಪಾರಸೀಯ ಹೋದಿ
ಮುಸಲ್ಮಾನ ನಿಕ ಈಸಾಯಿ ।
ಕೋಟಿಕಂಠನುಂ ಕಲೆಯುತೆ ಪೇಳರಿ
" ಹಮಸಬಹೈ ಭಾಯಿ ಭಾಯಿ " ॥

ಪುಣ್ಯಭೂಮಿಯಿದು ಸ್ವರ್ಣಭೂಮಿಯಿದು
ಧನ್ಯಧಾತ್ರಿ ಯೆಮಗಿವಳೆಂದು ।
ಇದಕೆಣೆ ಎನಿಸಿಹ ದೇಶವಾವುದೀ
ಜಗತೀತಲಯ ದೊಳಿಲ್ಲೆಂದು ॥

ರಾಷ್ಟ್ರೀಯ ಶಿಕ್ಷಣಸ್ವರೂಪವು.

ಇಂದಿನವರೆಗೆ "ರಾಷ್ಟ್ರೀಯಲಕ್ಷಣದ" ವಿಷಯವಾಗೆಷ್ಟೋ ವಿಚಾರಗಳು ಪ್ರಕಾಶವಾದರೂ ಆ ವಿಚಾರಗಳಿಂದ ಯಾವುದನ್ನು "ರಾಷ್ಟ್ರೀಯ ಶಿಕ್ಷಣ" ವೆನ್ನಬೇಕೋ ಎನ್ನುವುದೇ ಸ್ಪಷ್ಟವಾಗಿ ತಿಳಯದಂತಾಗಿದೆ. ಪ್ರಚಲಿತಶಿಕ್ಷಣಕ್ರಮವನ್ನೇ ರಾಷ್ಟ್ರೀಯಶಿಕ್ಷಣವಲ್ಲವೆಂದು ಹೇಳಬಹುದಾದರೂ ಯಾವಶಿಕ್ಷಣವನ್ನು ರಾಷ್ಟ್ರೀಯ ಶಿಕ್ಷಣವೆಂದು ಹೇಳಬೇಕೋ ಆ ವಿಷಯವನ್ನಾದರೂ ಯೋಚಿಸಬೇಕಾಗಿದೆ. "ರಾಷ್ಟ್ರೀಯ" ವಿಶಿಷ್ಟತೆಯನ್ನು ಹೊಂದಲು ಶಿಕ್ಷಣಕ್ರಮದಲ್ಲಿ ಎರಡು ಪ್ರಧಾನವಾದ ವಿಷಯಗಳು ಇರಬೇಕೆನ್ನುವುದು ನಮ್ಮಭಿಪ್ರಾಯವು. ಅತ್ಯಾವಶ್ಯಕವಾದ ಮೊದಲನೆಯ ವಿಷಯವು, ರಾಷ್ಟ್ರೀಯಗುಣಗಳ, ಪರಂಪರಾಗತ ರಾಷ್ಟ್ರೀಯ ಆದರ್ಶಗಳ ಪರಿಪೋಷಣೆಯು ಪ್ರಥಮತಃ ಆಗಬೇಕು. ಬಂದುವೇಳೆ ಬಂದು ರಾಷ್ಟ್ರವು ಮತ್ತೊಂದು ರಾಷ್ಟ್ರದಿಂದ ಯಾವುದಾದರೂ ಪ್ರಧಾನ್ಯವಾದ ವಿಷಯದಲ್ಲಿ ಭಿನ್ನವಾದರೆ ಆ ರಾಷ್ಟ್ರವು ತನ್ನ ಆದರ್ಶದಲ್ಲಿ ಇತರ ರಾಷ್ಟ್ರದ ಆದರ್ಶದಿಂದ ಭಿನ್ನವಾಗುವುದು. ರಾಷ್ಟ್ರವು ರಾಷ್ಟ್ರೀಯ ಆದರ್ಶದಿಂದ ಎಷ್ಟು ವಿಶಿಷ್ಟವಾಗುವುದೋ ಜಾತಿ, ಧರ್ಮ, ವರ್ಣಾದಿಗಳಿಂದ ಅಷ್ಟಾಗಲಾರದು. ಈ ರಾಷ್ಟ್ರೀಯಾದರ್ಶವು (ರಾಷ್ಟ್ರಪ್ರೇಮ) ಕರೀರದಲ್ಲಿ ಪ್ರವಹಿಸುತ್ತಿರುವ ರಕ್ತದೊಡನೆ ಸೇರಿ ಜಾಗ್ರತಸ್ವಪ್ನಾವಸ್ಥೆಯಲ್ಲಿಯೂ, ಎದ್ದು ಕೂಡುವಾಗಲೂ ಎಲ್ಲ ಕಾಲ ಅವಸ್ಥೆಗಳಲ್ಲಿಯೂ ನಮ್ಮಲ್ಲಿ ತುಂಬಿಯೇ ಇರುವುದು. ಪಾಶ್ಚಾತ್ಯದೇಶದ ಪ್ರತಿಯೊಂದು ಸ್ಥಳದಲ್ಲಿಯೂ ಭೌತಿಕತೆಯು ವ್ಯಾಪಿಸಿದ್ದರೆ, ಭಾರತವರ್ಷದ ಪ್ರತಿಯೊಂದು ಕಣದಲ್ಲಿಯೂ ಆಧ್ಯಾತ್ಮಿಕತೆಯು ತನ್ನ ಸಿಂಹಾಸನವನ್ನೂರಿರುವುದು. ಎರಡು ಜಾತಿಗಳು ಯಾವುದಾದರೊಂದು ವಿಷಯದಲ್ಲಿ ವಿಕಲ್ಪಭಾವವನ್ನು ಹೊಂದಿದಾಗಲೆ ಅವು ಭಿನ್ನಜಾತಿಗಳೇ ಆಗುವವು.

ಎರಡನೆಯ ವಿಷಯವು:—ರಾಷ್ಟ್ರೀಯ ಅವಶ್ಯಕತೆಯೂ, ಇವುಗಳಲ್ಲಿ ಭೌತಿಕ ಆವಶ್ಯಕತೆಗಳ ಸಮನ್ವೀಕರವೂ ಆಗುವುದು. ಇಂದು

ರಾಷ್ಟ್ರಕ್ಕೆ ಬಂದರ ಅವಶ್ಯಕತೆಯಿದ್ದರೆ ಮತ್ತೊಂದು ರಾಷ್ಟ್ರಕ್ಕೆ ಬೇರೊಂದು ವಸ್ತುವಿನ ಅವಶ್ಯಕತೆ ಇರಬಹುದು, ಯಾವರಾಷ್ಟ್ರಕ್ಕೆ ಯಾವುದರ ಆವಶ್ಯಕತೆಯಿರುವುದೋ ಆ ವಸ್ತುವಿನ ಪರಿಪೂರ್ಣತೆಯು ಯಾವ ವಿಧವಾದ ಶಿಕ್ಷಣದಿಂದಾಗುವುದೋ ಆ ಶಿಕ್ಷಣವೇ ರಾಷ್ಟ್ರೀಯ ಶಿಕ್ಷಣವೆನಿಕೊಳ್ಳಲು ಯೋಗ್ಯವಾಗುವುದು. ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಅಮೆರಿಕಾ, ಹಿಂದೂಸ್ಥಾನ ಮೊದಲಾದ ದೇಶಗಳಿಗೆ ಬೇಕಾದ ಆವಶ್ಯಕತೆಗಳು (wants) ಬಂದಕ್ಕೊಂದು ವಿರೋಧವಾಗಿರುವುದರಿಂದ ಅಲ್ಲಲ್ಲಿಗೆ ತಕ್ಕಂತೆ ಬೇಕಾಗುವಂಥ ಅವಶ್ಯಕತೆಗಳು ಬೇರೆ ಬೇರೆ ಇರುವುದರಿಂದ ಆ ಮುಖ್ಯವಾದ ಆವಶ್ಯಕತೆಗಳನ್ನು ಪೂರ್ಣಗೊಳಿಸಲು ಯಾವಶಿಕ್ಷಣವು ಉಪಯೋಗವಾಗುವುದೋ ಅದೇ ವಂಶಪಾರಂಪರ್ಯ ರಾಷ್ಟ್ರೀಯಗುಣಗಳ ಪರಿಪೋಷಣ, ರಾಷ್ಟ್ರೀಯ ಅವಶ್ಯಕತ್ವಗಳ ಸಂಪೂರ್ಣ ಇತ್ಯಾದಿ ಫಲಗಳನ್ನು ಕೊಡುವ ಶಿಕ್ಷಣವು. ಇದರ ಹೆಸರೇ "ರಾಷ್ಟ್ರೀಯಶಿಕ್ಷಣ" (National Education). ಇಕ್ಕೆ "ರಾಷ್ಟ್ರೀಯಶಿಕ್ಷಣ" ವೆಂಬಭಿಧಾನದಿಂದ ಶಾಲೆಗಳಲ್ಲಿ ಕೊಡುತ್ತಿರುವ ಶಿಕ್ಷಣ ಅಷ್ಟೇನೂ ಉತ್ತಮವಾದುದಲ್ಲವೆಂದು ಹೇಳಬಹುದಾಗಿದೆ. ಏಕಂದರೆ ನಮ್ಮ ರಾಷ್ಟ್ರೀಯ ಗುಣಗಳು ಪೂರ್ಣವಾಗಿ ಸ್ಫೂರ್ತಿಸುವಂತಹ ಪ್ರಯೋಜನವು ಅದರಲ್ಲಿ ಎಳ್ಳಷ್ಟೂ ಇಲ್ಲವೆನ್ನುವುದು ಎಲ್ಲರೂ ವಿದಿತ ವಿಷಯವೇ ಆಗಿರುವುದು. ಈ ಕಾರಣದಿಂದಲೇ ನಾವುಸಂಪೂರ್ಣ ಪಾಶ್ಚಾತ್ಯರೂ ಅಥವಾ ಸಂಪೂರ್ಣ ಭಾರತೀಯರೂ ಎನಿಸಿಕೊಳ್ಳಲಾರದೆ ಇಬ್ಬಂದಿಯಾಗಿ ತ್ರಿಶಂಕುಸ್ವರ್ಗದಲ್ಲಿ ತೂಗಾಡುತ್ತಲಿರುವೆವು.

ಆಧ್ಯಾತ್ಮಿಕ ಸ್ಥಾನಗಳಲ್ಲಿ ಕರ್ಮಣ್ಯತೆಯೂ ನಿಜವಾದ ಭೌತಿಕ ಉನ್ನತಿಯು ಇಚ್ಛೆಯ ಸ್ಥಾನದಲ್ಲಿ ವಿಷಯವಾಸನಾಸಕ್ತಿಯೂ ಉತ್ಪನ್ನವಾಗಿ ಅಕರ್ಮಣ್ಯತೆಯ ಕಾರಣದಿಂದ ದ್ವಿಗುಣವಾದ ಪ್ರಗತಿಗಳು ನಿಂತು ಹೋದವು. ಭೋಗವಿಲಾಸಾಡಂಬರಪ್ರಿಯರಾಗಿ ದುಂದು ಖರ್ಚುಮಾಟಾಗಿ ಅದರಾವಶ್ಯಕಗಳು ದಿನೇ ದಿನೇ ಅಧಿಕವಾಗಿ ಬೆಳೆಯುತ್ತಬಂದರೂ ದ್ರವ್ಯಾರ್ಜನೆಗೆ ಮಾತ್ರ ಅನ್ಯಮಾರ್ಗವಿಲ್ಲವಾಯಿತು. ನಮ್ಮಿಷ್ಟಾರ್ಥ ಸಾಧನೆಗೆ ನಾವು ಅನೇಕ ಉಪಾಯಗಳನ್ನು ಹುಡುಕತೊಡಗಿದೆವು. ಇದರ ಫಲವೇನಾಯಿತು ? ನಮ್ಮ ಉನ್ನತ ಉಚ್ಚಾದರ್ಶದಿಂದ ಅಧೋಗತಿಗೆ ಬಿದ್ದಮಾತ್ರವಲ್ಲದೆ ಅನೇಕ ಶತಾಬ್ದಗಳಿಂದ ನಮ್ಮ ಹಿರಿಯರು

ಕಷ್ಟಪಟ್ಟು ಕೂಡಿಸಿದ್ದ ಆದರ್ಶಗಳಿಗೆ ತಿಲತರ್ಪಣವನ್ನು ಬಿಟ್ಟೆವು. ಈಗಲಾದರೂ ನಮ್ಮ ಹಿರಿಯರು ನಮಗೆ ಅಸ್ಥಿಯಾಗಿ ಬಿಟ್ಟುಹೋದ ಪೂರ್ಣಾದರ್ಶಗಳ ಹಕ್ಕನ್ನು ಮತ್ತೆ ಗಳಿಸಿ ಉದ್ಧಾರವಾಗುವುದು ಆರ್ಯಾವರ್ತದ ಪ್ರಜೆಗಳ ಕರ್ತವ್ಯವು. ಭೌತಿಕ (Science) ತೆಯು ವಿನಹ ಮತ್ತ್ಯಾವುದರ ಕಡೆಗೂ ಲಕ್ಷ್ಯಗೊಡದೆ ಭೌತಿಕಸಾಗರದಲ್ಲೇ ಮುಳುಗಿರುವವರಿಗೆ ಈ ವಿಷಯವು ಹೇಳನವಾಗಿ ತೋರಬಹುದು. ಈ ಕಾರಣದಿಂದವರು ಅಧ್ಯಾತ್ಮಿಕ ಉನ್ನತಿಯ ಹೆಸರು ಕೇಳಿದ ಕೂಡಲೇ ಸಿಟ್ಟಾಗುವರು. ಆದರೆ ಇದು ಮೂಢತನವೆನ್ನುವುದನ್ನು ನಾವಿಲ್ಲಿ ಹೇಳಬೇಕಾದುದಿಲ್ಲ. ಎಲ್ಲೆಲ್ಲಿಯೂ ಯಾವಾಗಲೂ ಭೌತಿಕತೆಯೇ ಅಗ್ರಾಸನವನ್ನು ಪಡಿಸಿದರೆ, ಆತ್ಮಿಕ, ಗೃಹಸ್ಥ, ಸಾಮಾಜಿಕ, ರಾಷ್ಟ್ರೀಯ, ಶಾಂತಿಯೂ ಉನ್ನತಿಯೂ ಎಂದಿಗೂ ಆಗಲಾರದಾದ್ದರಿಂದ ಈ ಚತುರ್ವಿಧಕಾಂತಿಗಾಗಿ ಯಾದರೂ ಅಧ್ಯಾತ್ಮಿಕ ಉನ್ನತಿಯ ಆದರ್ಶವಾಗುವದು ಅತ್ಯಾವಶಕ್ಯವು. ಈ ಕಾರಣದಿಂದಲಾದರೂ "ಅಧ್ಯಾತ್ಮಿಕ ಉನ್ನತಿಯು ಕಡೆಗೆ ನಿಮ್ಮ ಲಕ್ಷ್ಯವಿಲ್ಲವೋ" ಎಂದು ಕೇಳಬಹುದು. ಅಧ್ಯಾತ್ಮಿಕವಿಲ್ಲದ ಶರೀರ, ಗೃಹ, ಸಮಾಜ, ರಾಷ್ಟ್ರಗಳಿರುವುದು ಅಸಂಭವವೇ ಸರಿ. ಅದಕ್ಕೆ ನನ್ನ ಉತ್ತರವೇನೆಂದರೆ "ಹೌದು, ನಾವು ಭೌತಿಕ ಉನ್ನತಿಯನ್ನು ಅಪೇಕ್ಷಿಸುವುದು ಮಾತ್ರವಲ್ಲ, ಆದರ ಉನ್ನತ ಶಿಖರದಮೇಲೆ ಕುಳಿತುಕೊಳ್ಳಲು ಅಪೇಕ್ಷಿಸುತ್ತೇವೆಯಾದರೂ ಭೌತಿಕ ಮತ್ತು ಅಧ್ಯಾತ್ಮಿಕ ಉನ್ನತಿಗಳಲ್ಲಿ ನಮ್ಮ ಗಾವ ವಿರೋಧವೂ ಇಲ್ಲ. ಅಧ್ಯಾತ್ಮಿಕ ಉನ್ನತಿಯು ಸಲುವಾಗಿಯೇ ಭೌತಿಕ ಉನ್ನತಿಯು ಅತ್ಯಾವಶ್ಯಕವೆಂದು ಭಾವಿಸುವೆವು. "ಶರೀರ ಮಾದ್ಯಂ ಖಲುಧರ್ಮ ಸಾಧನಂ" ಎಂಬಂತೆ ಶರೀರಪೋಷಣೆ ಮಾತ್ರವಲ್ಲದೆ ಶರೀರವಿಕಾಸವೂ ಕೂಡ ಆಗಬೇಕು. ಆದರೆ ಅಧ್ಯಾತ್ಮಿಕ ಉನ್ನತಿಯು ಸಾಧನಗಳಾದ ಇವುಗಳು ಭೌತಿಕ ಉನ್ನತಿಗೂ ಸಾಧನಗಳೆಂದು ನಾವು ಭಾವಿಸಬೇಕು. "ತಸ್ಮಾತ್ ಸಕ್ತಃ ಸತತಂ ಕಾರ್ಯಕರ್ಮ ಸಮಾಚರ" ಎನ್ನುವುದೇ ನಮ್ಮಾಚರಣೆಯು ಆದರ್ಶವಾಗಿರಬೇಕು. ಭೌತಿಕ ಕಾರ್ಯಗಳನ್ನು ನಾವು ಅವಶ್ಯವಾಗಿಮಾಡಿದರೂ ಆಚರಣೆಯು ಅಧ್ಯಾತ್ಮಿಕವಾಗಿರಬೇಕು. ಯದ್ಯಪಿ ಪ್ರತ್ಯೇಕವ್ಯಕ್ತಿಯ ಹೃದಯದಲ್ಲಿ, ಗೃಹದಲ್ಲಿ, ರಾಷ್ಟ್ರದಲ್ಲಿ ಮತ್ತು ಸರ್ವಜಗತ್ತಿನಲ್ಲಿ ಶಾಂತಿಯು ಸರ್ವತ್ರ ನೆಲಸಿರಬೇಕಾದರೆ

ಮತ್ತು ಇತರ ಯಾವಪ್ರಕಾರದ ಉನ್ನತಿಗಾದರೂ ಇದರ ಅವಶ್ಯಕತೆಯು ಬೇಕಾಗಿದ್ದರೆ ನಮ್ಮಾದರ್ಶಗಳನ್ನು ಭೌತಿಕಕ್ಕನುಸಾರವಾಗಿ ತೆಗೆದುಕೊಂಡುಹೋಗಬೇಕು. ಸ್ವರ್ಗದಲ್ಲಿ ಕುಳಿತು ಈ ಜಗತ್ತಿಗವಶ್ಯಕವಾದ ಎಲ್ಲಾ ಕಾರ್ಯಗಳನ್ನೂ ನಾವು ಮಾಡಬೇಕು.

ಇದಕ್ಕಾಗಿ ನಮಗೀಗ ನಮ್ಮ ನಿಜವಾದ ಧರ್ಮದ ಶಿಕ್ಷಣವು ದೊರೆಯುವುದು ಅತ್ಯಾವಶ್ಯಕವಾಗಿರುವುದು. ಧಾರ್ಮಿಕಶಿಕ್ಷಣದ ಪ್ರಬಂಧವು ಅತಿಕಠಿಣವಾಗಿರುವುದರಿಂದ ಆ ಧಾರ್ಮಿಕಶಿಕ್ಷಣವು (Religious Education) ಅನಾವಶ್ಯಕವೆಂದು ಕೆಲವರು ಹೇಳಬಹುದು. ನಮ್ಮಾದರ್ಶ ರಕ್ಷಣೆಯಾಗಬೇಕಾದರೆ, ನಾವು ನಿಜವಾದ ಭಾರತೀಯರೆನಿಸಿಕೊಳ್ಳಬೇಕಾದರೆ ಮಾತ್ರ ನಮಗೆ ಉಪನಿಷತ್ತು ಮತ್ತು ಗೀತೆಯು ಕರ್ಮಯೋಗದ ಶಿಕ್ಷಣವು ಕೂಡಲೇ ಬೇಕಾಗುವುದು. ಅದರ ಪ್ರಬಂಧವಾದರೋ ರಾಷ್ಟ್ರಕ್ಕೆ ಅತ್ಯಾವಶ್ಯಕವಾಗಿ ಬೇಕಾಗುವುದು. ಧಾರ್ಮಿಕ ಪ್ರಬಂಧವು ಶಿಕ್ಷಣವು ಕಷ್ಟವೆಂದು ಹೇಳುವುದು ಒಪ್ಪತಕ್ಕದ್ದಲ್ಲ. ಪ್ರತಿಯೊಂದು ಪಾಠಶಾಲೆಯಲ್ಲಿ, ಪ್ರತಿಯೊಂದು ಭ್ರಾತೃನಿವಾಸದಲ್ಲಿ, ಪ್ರತಿಯೊಂದು ಗ್ರಾಮ ಅಥವಾ ಪಟ್ಟಣದಲ್ಲಿ ಇದರ ಪ್ರಬಂಧವು ಉಚಿತವಾಗಿ ದೊರೆಯುವಂತೆ ಮಾಡಬಹುದು. ಪಾಶ್ಚಾತ್ಯ ಸಭ್ಯತೆಯ ಸಂಪರ್ಕದಿಂದ ನಾವು ನಮ್ಮ ಧರ್ಮವನ್ನು ಬೇರೆ ಬೇರೆಯಾಗಿ ಭಾವಿಸಿರುವೆವಲ್ಲದೆ ಹಿಂದೂಧರ್ಮದ ಕಾರಣದಿಂದ ಈ ದೇಶದೊಳಗೆ ಅಕರ್ಮಣ್ಯತೆಯು ಹಬ್ಬಿರುವುದೆಂದು ಅನೇಕರು ಭಾವಿಸಿರುವರು. ಆದರೆ ಇದಕ್ಕೆ ಮೂಲಕಾರಣವು "ಹಿಂದೂ ಧರ್ಮವಲ್ಲ, ಆ ಶಿಕ್ಷಣದ ಅಭಾವವು" ಆದುದರಿಂದ ಹಿಂದೂ ಧರ್ಮಶಿಕ್ಷಣದ ಅಭಾವವನ್ನು ಹೋಗಲಾಡಿಸುವುದು ಪ್ರಥಮ ಕರ್ತವ್ಯ. ಅಧರ್ಮಸಾಂಬ್ರಾಜ್ಯವು ಯಾವಾಗ ತಾನೇತಾನಾಗಿ ವ್ಯಾಪಿಸತೊಡಗಿತೋ ಆಗ ನಿಜಧರ್ಮದ ಶಿಥಿಲತೆಯು ಆಗುವುದರಲ್ಲಡ್ಡಿಯೇನು? ಈ ವಿಷಯವು ಈಗ ಪರಿಷ್ಕಾರವಾಗಿ ತಿಳಿದಂತಾಯಿತು. ನಿಜಧರ್ಮದ ಪುನರುದ್ಧಾರವಾಗಬೇಕಾದರೆ ಈ ದೋಷಗಳನ್ನು ದೂರಮಾಡುವುದು ಮುಖ್ಯವಾದ ಕಾರ್ಯವು. ಇದಕ್ಕಾಗಿ ಉಪನಿಷತ್ ಮತ್ತು ಗೀತೆಯುಂತಹ ಗ್ರಂಥಗಳ ಅನುವಾದ ಅಥವಾ ಮೂಲರೂಪದಿಂದ ಪ್ರಚಾರವಾಗಬೇಕಾದುದ್ದು ಅತ್ಯಾವಶ್ಯಕವು. ಅವುಗಳ ಆಧಾರದಿಂದ ಬರೆಯುಲ್ಪಟ್ಟ ವ್ಯಾಖ್ಯಾನ

ಗಳೂ ಲೇಖನಗಳೂ ಅತ್ಯಾವಶ್ಯಕವು. ಈಗಿನಕಾಲದ ವಿದ್ಯಾನಿಪುಣ "ಬಿ. ಎ., ಎಂ. ಎ." ಪದವೀಧರರಾದ ಅನೇಕರಿಗೆ "ಜಾನ್ ಜೋಸೆಫ್" (John Joseph) ವಿನಹ ಅರ್ಜುನ ಯಾರು? ಯುಧಿಷ್ಠಿರನಾರು? ಎಂಬುದು ಕೂಡ ಸ್ಮೃತಿಗೆ ಬರುವುದು ಕಷ್ಟವಾಗಿರುವುದು. ಧಾರ್ಮಿಕ ಮತ್ತು ನೈತಿಕ ದೃಷ್ಟಿಯಿಂದ ಅವಲೋಕಿಸಿದಲ್ಲಿ ಇದು ಕೇವಲ ಕೋಚ ನೀಯವಾದುದೆನ್ನುವುದು ವ್ಯಕ್ತವಾಗುವುದು. ಹಿಂದೂಸ್ಥಾನದ ಪ್ರಾಕೃತ ಭಾಷೆಗಳ ಉತ್ಪತ್ತಿಸ್ಥಾನವು ಸಂಸ್ಕೃತವಾಗಿರುವುದರಿಂದಲೂ ಇವುಗಳ ಸಾಹಿತ್ಯ ಮತ್ತು ಶಬ್ದ ಸಂಖ್ಯೆಯನ್ನು ಹೆಚ್ಚಿಸಲು ಸಂಸ್ಕೃತದ ಸಹಾಯವು ಅತ್ಯಾವಶ್ಯಕವಾದುದರಿಂದಲೂ ಅಲ್ಲದೆ ನಮ್ಮ ಪ್ರಾಚೀನ ಇತಿಹಾಸದ ಬಹು ಭಾಗವು ಸಂಸ್ಕೃತದಲ್ಲಿರುವುದರಿಂದಲೂ ಸಂಸ್ಕೃತಾಭ್ಯಾಸದಿಂದ ನಾವು ಪಡೆಯುವ ಪ್ರಯೋಜನವಿಷ್ಟೇಯೆಂದು ಹೇಳಲಾಗುವುದಿಲ್ಲ. ಪಾಶ್ಚಾತ್ಯ ವಿದ್ವಾಂಸರು ಸಂಸ್ಕೃತಭಾಷೆಯನ್ನು ಈಗಲೂ ಕೂಡ ಶೋಧಿಸುತ್ತಲೇ ಇರುವರು. ನಮ್ಮದಾದ ಈ ಕೆಲಸವನ್ನು ಪರದೇಶೀಯರು ಕಲಿತು ಅದರ ಫಲವನ್ನುಣ್ಣುತ್ತಿರುವಂತೆ ಬಿಟ್ಟು ಅದನ್ನು ನೋಡುತ್ತಲಿರುವ ನಾವೆಂತಹ ಕೂರರು? ನಮ್ಮ ಹಕ್ಕಾದ ಈ ಕೆಲಸವನ್ನು ನಾವು ಸ್ವತಃ ಮಾಡತೊಡ ಗಿದೆವಾದರೆ, ಆಗ "ಇಷ್ಟು ದಿನವೂ ನಾವು ಕೇವಲ ವ್ಯಕ್ತಿಮಾತ್ರವಾಗಿದ್ದೆವು. ಇನ್ನು ಮುಂದೆಯಾದರೂ ಸ್ವಲ್ಪ ರೂಪ ಬರಬಹುದೆಂದು" ತಿಳಿಯಬಹುದು. ಯಾರಲ್ಲಿ ಆತ್ಮಾಭಿಮಾನವಿಲ್ಲವೋ ಅವರು ಉಚ್ಚ ಮತ್ತು ಸ್ವತಂತ್ರ ಕಾರ್ಯಗಳನ್ನು ಸಾಧಿಸಲು ಯೋಗ್ಯರಲ್ಲ. ಅವರು ಯಾವಾಗಲೂ ಇತರರ ನೆರಳನಕೆಳಗೇ ನಡೆಯುತಕ್ಕವರು. ಆದ್ದರಿಂದ ಆತ್ಮಾಭಿಮಾನವುಳ್ಳ ನಮ್ಮವರಿಂದ ಈ ಇತಿಹಾಸಶೋಧನಾ ಕೆಲಸವು ನಡೆಯಬೇಕಾಗಿರು ವುದು. ವೃಥಾ ಅಭಿಮಾನವು ಮಾತ್ರ ಇರುವುದರಿಂದ ಪ್ರಯೋಜನವಿಲ್ಲ; ಅದರೊಡನೆ ಕಾರ್ಯತತ್ಪರತೆಯೂ ಇರಬೇಕು. ಆತ್ಮಾಭಿಮಾನಾಭಾವದಿಂದ ಕಾರ್ಯ ಶಿಥಿಲತೆಯು ಹೇಗುಂಟಾಗುವುದೋ ಹಾಗೆಯೇ ವೃಥಾಭಿಮಾನ ದಿಂದಲೂ ಆಗುವುದು. ಆಗಿಂದಾಗ್ಗೆ ಪಾಶ್ಚಾತ್ಯ ದೇಶೋನ್ನತಿಯೊಡನೆ ನಮ್ಮ ಉನ್ನತಿಯನ್ನು ಹೋಲಿಸಿ ನೋಡಿಕೊಳ್ಳಬೇಕು. ಇಂತಹ ಆತ್ಮೋನ್ನತಿಯನ್ನೂ ಆತ್ಮಾಭಿಮಾನವನ್ನೂ ಬಾಲಕರಲ್ಲಿ ತುಂಬುವ ಭಾರವು ಶಿಕ್ಷಕನನ್ನು ಸೇರಿರುವುದಾದ್ದರಿಂದ ಶಿಕ್ಷಕನು ವೃಥಾ ಅಭಿ ಮಾನವು ಬಾಲಕರ ಮನವನ್ನು ಪ್ರವೇಶಿಸದಂತೆ ನೋಡಿಕೊಳ್ಳಬೇಕು.

ಪ್ರತಿಯೊಬ್ಬ ಭಾರತೀಯನೂ ಸಂಸ್ಕೃತವನ್ನು ಕಲಿತೇ ತೀರ ಬೇಕೆಂದು ನಾವು ಬಲಾತ್ಕರಿಸುವುದಿಲ್ಲವಾದರೂ ಪ್ರತಿಯೊಂದು ಪ್ರಾಂತ್ಯದಲ್ಲಿಯೂ ಕೊನೆಗೆ ಕೆಲವರಾದರೂ ಕಲಿತರೆ ಪ್ರಯೋಜನವೆಂದು ಮಾತ್ರ ಹೇಳುವೆವು. ಅನೇಕರು ಸಂಸ್ಕೃತವನ್ನು "ಮೃತಭಾಷೆ" (Dead language) ಎಂದು ಹೇಳುವರು. ಮೃತರು ಯಾರು? ಭಾಷೆಯೋ? ನಾವೋ? ಎನ್ನುವುದನ್ನವರಿಗೆ ಹೇಳಬಲ್ಲವರಾರು? ಕೊನೆಗೆ ನಮ್ಮ ರಾಷ್ಟ್ರೀಯಾದರ್ಶಗಳ ಪರಿಪೂರ್ಣತೆಗಾಗಿಯಾದರೂ ಸಂಸ್ಕೃತಾಭ್ಯಾಸವನ್ನು ಸ್ವಲ್ಪ ಮಾಡಬೇಕಾಗಿರುವುದು.

ಆತ್ಮಾಭಿಮಾನದ ವಿಷಯದಲ್ಲಿ ಹಿಂದೆ ನಾವು ಚರ್ಚಿಸಿದ್ದೆವಲ್ಲ. ಇದರ ಸಂಬಂಧವು ನಮ್ಮ ಇತಿಹಾಸದೊಡನೆ ಸೇರಿರುತ್ತದೆ. ಆತ್ಮಾಭಿಮಾನದ ಎರಡನೆಯ ಸ್ವರೂಪದ ಅರ್ಥವು ಸ್ವದೇಶಪ್ರೇಮ, ಸ್ವಾತಂತ್ರ್ಯ ವಿಚಾರವಾಗಿರುತ್ತದೆ. ಮೊದಲು ನಾವು ಹಿಂದೂಸ್ಥಾನದ ಶಿಕ್ಷಣದ ವಿಚಾರಮಾಡಲಪೇಕ್ಷಿಸುವೆವು. "ಹಿಂದೂಸ್ಥಾನದ ಇತಿಹಾಸ" ವೆಂಬ ಹೆಸರಿನಿಂದ ಯಾವ ಗ್ರಂಥಗಳು ಪ್ರಚಾರದಲ್ಲಿರುವವೋ ಅವುಗಳ ಸತ್ಯಾಸತ್ಯದ ವಿಷಯವಾಗಿ ನಾವಿಲ್ಲಿ ಹೆಚ್ಚಾಗಿ ಹೇಳಲಾರೆವು. ಈ ಸತ್ಯಾನ್ವೇಷಣದ ಕೆಲಸವು ಇತಿಹಾಸಶೋಧಕರ ಕೆಲಸವಾಗಿರುವುದು.

ಇಗ ನಾವು ಇತಿಹಾಸಬೋಧನಾಕಾರ್ಯಕ್ಕೆ ಮಾತ್ರ ಸಂಬಂಧಿಸಿರುತ್ತೇವೆ. ಪಾಶ್ಚಾತ್ಯದೇಶಗಳ ಹಾಗೆ ಪ್ರಜಾತಂತ್ರಾತ್ಮಕ ಸಂಸ್ಥೆಗಳು ನಮ್ಮಾ ಹಿಂದೂಸ್ಥಾನದಲ್ಲಿ ಬಹಳವಾಗಿಲ್ಲದಿದ್ದರೂ ಕೆಲವಾದರೂ ಇದ್ದೇ ಇದ್ದವು. ಆದರೂ ಇವುಗಳ ವಿಕಾಸವೂ ಪತನವೂ ಬಹು ಶೀಘ್ರಕಾಲದಲ್ಲಿಯೇ ಆಗಿಹೋದವು. ಇವುಗಳ ಇತಿಹಾಸವನ್ನೂ ಪತನದ ಕಾರಣವನ್ನೂ ನಮ್ಮ ಬಾಲಕರಿಗೆ ತಿಳಿಸುವುದು ಅತ್ಯಾವಶ್ಯಕವಾಗಿರುವುದು. ಪ್ರಕೃತ ವಿದ್ಯಾಭ್ಯಾಸಕ್ರಮದಲ್ಲಿ ಮಿಡಲ್ ಸ್ಕೂಲ್ ತರಗತಿಯವರೆಗೆ ಬಾಲಕರಿಗೆ ಹಿಂದೂಸ್ಥಾನದ ಇತಿಹಾಸವು (ಹಿಂದೂ ದೇಶದ ಚರಿತ್ರೆ) ಸ್ವಲ್ಪಮಟ್ಟಿಗೆ ಸ್ವಾರಸ್ಯವಾಗಿರುತ್ತದೆ. ಹೈಸ್ಕೂಲಿಗೆ ಹೋದ ನಂತರ ಅದೇ ಇತಿಹಾಸವು ಅವರಿಗೆ ಅಸಹ್ಯವಾಗಿ ತೋರುವುದು. ಇದರ ಮುಖ್ಯ ಕಾರಣವು ಬಾಲಕರ ಪ್ರವೃತ್ತಿಯು ಈ ಸಮಯದಲ್ಲಿ ಕಾರ್ಯ-

ಕಾರಣ ವಿಷಮಾಂಸೆಯು ಕಡೆಗೆ ಸಾಗುವುದು. ಸರಂತು ಹಿಂದೂಸ್ಥಾನದ ಇತಿಹಾಸವು ಓದಿ ಬರೆಸಲ್ಪಡುವ ರೀತಿಯನ್ನು ನೋಡಿದರೆ ಅದರಿಂದ ಬಾಲಕರ ಮನೋವಿಕಾಸಕ್ಕೆ ತಕ್ಕ ಹುರುಪು ಅದರಲ್ಲಿಲ್ಲವೆಂದು ಹೇಳಬಹುದು. ರಾಜ ಮತ್ತು ಬಾದಷಹರ ಚರಿತ್ರೆಗಳು (ಪಾಶ್ಚಾತ್ಯರಿಂದ ಬರೆಯಲ್ಪಟ್ಟುದು) ಮೊದಲಾದ ಕಥೆಗಳನ್ನು ಪದೇ ಪದೇ ಓದುವುದರಿಂದ ಮನಸ್ಸಿಗುಂಟಾಗುವ ಬೇಸರವೇ ಇದರ ಪರಿಣಾಮವು. ಇಂಥಾ ವಿಚಾರಗಳು ಅವರ ಮನಸ್ಸು ಪ್ರವೇಶಿಸುವುದಿಲ್ಲವಾದ್ದರಿಂದ ಈ ಇತಿಹಾಸಗಳಲ್ಲಭಿರುಚಿಯುಂಟಾಗುವಂತಹ ಚರಿತ್ರೆಗಳನ್ನು ನಮ್ಮ ಆರ್ಯಸತ್ಪುರುಷರಿಂದಲೇ ಬರೆಸಿ ಓದುವಂತೆ ಮಾಡಬೇಕು. ಹೀಗೆ ಮಾಡುವುದರಿಂದ ಚರಿತ್ರೆಯ ಪ್ರಥಮ ಪಠನಕಾಲದಲ್ಲಿಯೇ ನಮ್ಮ ಜನರಲ್ಲಿ ದ್ವೇಷವನ್ನು ಮಾಡುವ ಭಾವನೆಯು ಅಳಿದುಹೋಗುವದು. (ಹಿಂದು ಮುಸಲ್ಮಾನರ ದ್ವೇಷಕ್ಕೆ ಈ ಚರಿತ್ರಕಾರರ ಕುಯುಕ್ತಿಯೇ ಕಾರಣನೆಂದು ಹೇಳಿದರೂ ಹೇಳಬಹುದು.) ಈರೀತಿ ಪ್ರಥಮದಲ್ಲಿಯೇ ಇವರ ಮನಸ್ಸಿನಲ್ಲಿಂತಹ ದ್ವೇಷಭಾವ ಉತ್ಪನ್ನವಾದರೆ ಅದು ಜೀವಾವಧಿ ಹೋಗುವುದಿಲ್ಲ. ಸ್ವದೇಶಪ್ರೇಮದ ಶಿಕ್ಷಣಕ್ಕೂ ಇತಿಹಾಸಕ್ಕೂ ಸಮೀಪ ಸಂಬಂಧವಿರುವುದು. ಶಿಕ್ಷಕನು ಬೇಕಾದರೆ ತನ್ನ ಇತಿಹಾಸ ಬೋಧನೆಯು ಮೂಲಕ ಬಾಲಕರಲ್ಲಿ ದ್ವೇಷವನ್ನೋ ಅಥವಾ ಪ್ರೀತಿಯನ್ನೋ ಹುಟ್ಟಿಸಬಹುದು. ಸ್ವದೇಶಪ್ರೇಮ ಮತ್ತು ಸ್ವಾಭಿಮಾನಗಳನ್ನುತ್ಪನ್ನಮಾಡಬೇಕಾದರೆ ದೇಶದ ಇತಿಹಾಸವೇ ಮುಖ್ಯಸಾಧನವು. ಪಾಜೀನಾರ್ಯರ ಸಭ್ಯತೆಯು ಇತರ ಈಗಿನಕಾಲದ ಜನರ ಸಭ್ಯತೆಯೊಡನೆ ಹೋಲಿಸಲ್ಪಡುತ್ತಿದ್ದರೆ ಆಗ ನಮ್ಮ ಬಾಲಕರಲ್ಲಿ ಆತ್ಮಾಭಿಮಾನವು ಸ್ವಭಾವತಃ ತಾನಾಗಿಯೇ ವಿಕಾಸವಾಗುವುದು. ಇದಕ್ಕಾಗಿಯೇ ಪಾಶ್ಚಾತ್ಯರ ಉನ್ನತಿಯನ್ನು ನಮ್ಮ ಉನ್ನತಿಯೊಡನೆ ಆಗಾಗ್ಗೆ ಹೋಲಿಸಿ ಬಾಲಕರಿಗೆ ತಿಳಿಸುತಿದ್ದರೆ ಸತ್ಯವಾಗಿಯೂ ಸ್ವಾಭಿಮಾನವೂ ಸ್ವದೇಶಪ್ರೇಮವು ಅವರಲ್ಲಿ ಮೂರ್ತೀಭವಿಸುವವು. ಇದಲ್ಲದೆ ದೇಶವಾತ್ಸಲ್ಯವನ್ನು ವಾತ್ಸಲ್ಯವೆಂದು ರೀತಿಯಲ್ಲಿ ಕಲಿಸಬಹುದು. ಈ ವಿಷಯಕ್ಕಾಗಿ ಇತರ ದೇಶದವರು ಏನು ಮಾಡುತ್ತಿರುವರೆನ್ನುವುದನ್ನು ತಿಳಿದು ನಾವೂ ಹಾಗೆಯೇ ಮಾಡಬಹುದು.

(ಸಕೇಪ)

ಓಂ

ಮಾತೃಭಾಷೆ.

ಪ್ರಿಯಮಾತೆಯರೆ ! ಪ್ರಿಯಸಹೋದರಿಯರೆ !

ಕ್ರಿಸ್ತಶಕ ೧೯ನೆಯ ಶತಾಬ್ದದಲ್ಲಿ ಒಬ್ಬ ಮಹಮ್ಮದೀಯ ವಿದ್ವಾಂಸನು "ಭಾರತೀಯರು ಅನೇಕ ಶಾಸ್ತ್ರಗಳನ್ನೂ, ಕಲಾವಿಷಯಗಳನ್ನೂ, ವೇದಾಂತಾದಿ ದರ್ಶನಾದಿಗಳನ್ನೂ ಬಹುವಿಧವಾಗಿ ತಿಳಿದುಕೊಂಡಿದ್ದಾರೆ. ಇದರಿಂದ ಅವರು ತಾವೇ ಎಲ್ಲವನ್ನೂ ಅರಿತವರೆಂತಲೂ, ತನ್ನ ಭಾಷೆಯೇ ಶ್ರೇಷ್ಠವಾದುದೆಂತಲೂ ಭಾವಿಸಿಕೊಂಡು ಇತರ ದೇಶೀಯರನ್ನು ತಿರಸ್ಕಾರದೃಷ್ಟಿಯಿಂದ ನೋಡುತ್ತಾರೆ" ಎಂದು ಬರೆದಿದ್ದಾನೆ.

ಅಷ್ಟು ಅಭಿಮಾನಪೂರಿತರಾಗಿದ್ದವರ ವಂಶದಲ್ಲಿ ಹುಟ್ಟಿದ ನಾವು ಮಾತೃಭಾಷೆಯಲ್ಲಿ ಓದೋದುವದೂ ಕೊನೆಗೆ ಮಾತನಾಡುವುದೂ ಲಜ್ಜಾಕರವೆಂದು ಭಾವಿಸುತ್ತಿದ್ದೇವೆ. ಕೆಲವು ವರ್ಷಗಳಕೆಳಗೆ ಪುರುಷರಿಗೆ ಇಂಥಾ ದುರಭಿಪ್ರಾಯವಿದ್ದರೂ ಸ್ತ್ರೀಯರಿಗೋಸ್ಕರ ಮನೆಯಲ್ಲಿ ಯಾದರೂ ಮಾತೃ ಭಾಷೆಯಲ್ಲಿ ಮಾತನಾಡುತ್ತಿದ್ದರು. ಈಗ ಸ್ತ್ರೀಯರಲ್ಲಿ ಇಂಗ್ಲೀಷು ವಿದ್ಯಾಭ್ಯಾಸವು ಹರಡಿದಹಾಗೆಲ್ಲಾ ಮನೆಯಲ್ಲಿಯೂ ಇಂಗ್ಲೀಷು ಭಾಷೆಯಲ್ಲಿ ಮಾತನಾಡುವುದು ಹೆಚ್ಚುತ್ತಿದೆ. ಸುಧಾರಕರೆಂದೆನಿಸಿಕೊಂಡಿರುವವರ ಮನೆಗಳಲ್ಲಿ ಹಾಲುಕುಡಿಯುವ ಮಗುವಿಗೂ ಇಂಗ್ಲೀಷನ್ನೇ ಕಲಿಸುತ್ತಿದ್ದಾರೆ. ಸ್ತ್ರೀಯರ ವಿಶ್ರಾಂತಿನಿಲಯ (ಲೇಡಿಸ್ ಕ್ಲಬ್) ವೇ ಮೊದಲಾದ ಸ್ಥಳಗಳಿಗೆ ಇಂಗ್ಲೀಷನ್ನರಿಯದವರು ಪ್ರವೇಶಿಸುವದು ಅಸುಜ್ಞಿತವೆಂಬ ಭಾವನೆಯು ಉಂಟಾಗಿದೆ.

ಸೋದರಿಯರೆ ! ನಾವು ಅಲ್ಪಸ್ವಲ್ಪ ಇಂಗ್ಲೀಷನ್ನು ಕಲಿತ ಮಾತ್ರದಿಂದ ಎಂದಿಗೂ ಇಂಗ್ಲೀಷ್ ಸ್ತ್ರೀಯರಾಗಲಾರೆವು. ನಾವು ಮಾತೃಭಾಷೆಯನ್ನು ಪೂರ್ತಿಯಾಗಿ ಮರೆತುಹೋದರೂ ಇತರರು ನಮ್ಮನ್ನು ಕರ್ನಾಟಕ ರಮಣಿಯರೆಂದೇ ಕರೆಯುವರಲ್ಲವೆ ? ಯಾವ ಭಾಷೆಯಿಂದ ಲೋಕವು ನಮ್ಮನ್ನು ಗುರ್ತಿಸುವ ಬಂದು ಹೆಸರುಂಟಾಯಿತೋ ಆ ಮಾತೃಭಾಷೆಯನ್ನು ಮರೆಯುವದು ಮಹಾಪಾತಕವಲ್ಲವೆ?

ಭಾರತೀಯರು ಇಂಗ್ಲೀಷನ್ನು ಸಹಸ್ರ ವರ್ಷಗಳು ಓದಿದರೂ ಇವರಿಗೆ ವಾಙ್ಮಯ ನಿರ್ಣಯಾಧಿಕಾರವು ಬೊರೆಯಲಾರದು. ಮತ್ತು ಇವರು ರಚಿಸಿದ ಗ್ರಂಥಗಳು ಭಾಷಾದೃಷ್ಟಿಯಿಂದ ನೋಡಿದರೆ ಲಾಲಿತ್ಯ, ಮಾಧುರ್ಯಾದಿ ಗುಣಸಂಪನ್ನಗಳಾಗಿರಲಾರವೆಂದು ತಿಳಿದವರು ಹೇಳುತ್ತಾರೆ. ಇದರಿಂದ ನಾವು ಅವನೂನಿತರಾದೆವೆಂದು ಎಣಿಸಬಾರದು.

ಏಕೆಂದರೆ, ಆಸ್ಟ್ರೇಲಿಯ ಮೊದಲಾದ ಅಧಿನಿವೇಶ ರಾಷ್ಟ್ರಗಳಲ್ಲಿ ವಾಸವಾಗಿರುವವರು ಇಂಗ್ಲೆಂಡ್ ದೇಶೀಯರ ವಂಶಸ್ಥರಾದರೂ ಅವರಲ್ಲಿ ಉತ್ತಮ ಕವಿಗಳಾಗಲಿ, ಗ್ರಂಥಕರ್ತರಾಗಲಿ ಹುಟ್ಟಲಿಲ್ಲವೆಂತಲೂ, ತಮ್ಮ ದೇಶವನ್ನು ಬಿಟ್ಟು ಇಂಡಿಯಾದೇಶದಲ್ಲಿ ಎರಡು ಪುರುಷಾಂತರಗಳು ವಾಸಮಾಡಿದವರಿಗೆ ಗ್ರಂಥನಿರ್ಮಾಣಶಕ್ತಿಯು ಲೋಪವಾಗಿ ಹೋಗುವ ದೆಂತಲೂ ಯೂರೋಪ್ ದೇಶದ ವಿಜ್ಞರು ಹೇಳುತ್ತಾರೆ. ಅನೇಕ ವರ್ಷಗಳು ಸಂಸ್ಕೃತವನ್ನು ಓದಿದ ಮ್ಯಾಕ್ಸ್ ಮುಲ್ಲರ್ ಮೊದಲಾದ ಪಾಶ್ಚಾತ್ಯ ವಿದ್ವಾಂಸರು ಸಂಸ್ಕೃತದಲ್ಲಿ ಬಂದು ಶ್ಲೋಕವನ್ನಾಗಲಿ, ಬಂದು ವಾಕ್ಯ ವನ್ನಾಗಲಿ ರಚಿಸಲಿಲ್ಲವೆಂತಲೂ, ಕೊನೆಗೆ ಆ ಭಾಷೆಯಲ್ಲಿ ಚನ್ನಾಗಿ ಮಾತ ನಾಡುವದಕ್ಕೂ ಅವರಿಗೆ ಸಾಧ್ಯವಾಗಲಿಲ್ಲವೆಂತಲೂ ಹೇಳುತ್ತಾರೆ. ಅದೇ ಸಂಸ್ಕೃತ ಭಾಷೆಯಲ್ಲಿ ಭಾರತರಮಣಿಯರು ಅನೇಕ ಕಾವ್ಯಗಳನ್ನು ರಚಿಸಿದ್ದಾರೆ. ಪ್ರತಿಯೊಂದು ಜಾತಿಗೂ ಸ್ವಭಾಷೆಯಲ್ಲಿರುವಷ್ಟು ಶಕ್ತಿಯು ಪರಭಾಷೆಯಲ್ಲಿರುವದಿಲ್ಲವೆಂಬುದು ಇದರಿಂದ ಚನ್ನಾಗಿ ತಿಳಿಯು ಬರುತ್ತದೆ.

ಮೊದಲಿನಿಂದಲೂ ಇಂಗ್ಲೀಷು ಭಾಷೆಯನ್ನೇ ಕಲಿತವರಿಗೆ ತಮ್ಮ ಪೂರ್ವಿಕರಲ್ಲಿದ್ದ ಕವಿಗಳು, ಜ್ಞಾನಿಗಳು ಮೊದಲಾದ ಪ್ರಖ್ಯಾತರಾದವರ ಹೆಸರುಗಳೇ ತಿಳಿದಿರುವುದಿಲ್ಲ. ಬಂದುವೇಳೆ ತಿಳಿದಿದ್ದರೂ ಆಂಗ್ಲೇಯ ಭಾಷೋಚ್ಚಾರಣೆಯಿಂದ ವಿಕೃತನಾಮರಾಗಿ "ಹೋಮರ್ ಆಫ್ ಇಂಡಿಯಾ" "ಷೇಕ್ಸ್‌ಪಿಯರ್ ಆಫ್ ಇಂಡಿಯಾ" ಇತ್ಯಾದಿ ಪಾಶ್ಚಾತ್ಯ ಕವಿಪ್ರಖ್ಯಾತಾನ್ಯಪೂರ್ವಕವಾಗಿ ತಿಳಿದುಕೊಂಡಿರುತ್ತಾರೆ. ಹೋಮರ್ ಕವಿಯು ಬರೆದಿರುವ ಕಾವ್ಯಕಥಾನಾಯಕನಾದ "ಮೆನಿಲಸ್" ದುರ್ಬಲ ನೆಂಬ ಕಾರಣದಿಂದ ಅವನ ಪತ್ನಿಯಾದ "ಹೆಲೆನಾ" ಬುದ್ಧಿಪೂರ್ವಕವಾಗಿ

ಉಪಪತಿಯನ್ನನುಸರಿಸಿ ಮನೆಯನ್ನು ಬಿಟ್ಟು ಹೋದಳೆಂತಲೂ, ಇಂತಹ ಹೆಂಡತಿಯನ್ನು ಬಿಟ್ಟುರಲಾರದೆ ಅವನು ತನ್ನ ಅಣ್ಣ ಅಕಿಲೀಸ್ ಮೊದಲಾದ ವೀರರೊಡನೆ ಯುದ್ಧಕ್ಕೆ ಹೊರಟನೆಂತಲೂ ತಿಳಿಯಬರುತ್ತದೆ. ಇವರನ್ನೂ, ಇವರ ಚರಿತ್ರೆಗಳನ್ನೂ, ಇಂತಹ ಕಾವ್ಯವನ್ನು ರಚಿಸಿದ ಕವಿಯನ್ನೂ ಪ್ರಮಾಣವಾಗಿಟ್ಟುಕೊಂಡು ಅಕಳಂಕ ಚರಿತ್ರರಾದ ಸೀತಾರಾಮರನ್ನೂ, ಪರಮಪಾವನನಾದ ರಾಮಾಯಣನನ್ನೂ, ತತ್ಕರ್ತನಾದ ವಾಲ್ಮೀಕಿಯನ್ನೂ ಪರಿಗಣಿಸುವದೇ ವಿಶೇಷ ಕೀರ್ತಿಕರವೆಂದು ಭಾವಿಸುವಷ್ಟು ದುಸ್ಥಿತಿಗೆ ನಾವು ಇಳಿದಿದ್ದೇವೆ. "ಪೂಜನೀಯಳಾದ ಸೀತಾದೇವಿಯನ್ನು ಬಿಟ್ಟು" "ಹೆಲೆನಾ" ಎಂಬಾಕೆಯನ್ನು ಭಾರತೀಯರು ಆದರ್ಶವಾಗಿ ತೆಗೆದುಕೊಳ್ಳುವರೇ ? ಎಂದು ಬಂದುಸಲ ನಿವೇದಿತಾ ಸೋದರಿಯು ಕೇಳಿದಳಂತೆ.

ತಾಯಿಯ ಹಾಲು ಕುಡಿದು ಬೆಳೆದ ಮಗುವಿಗೂ, ಹಸುವಿನಹಾಲು ಕುಡಿದು ಬೆಳೆದ ಮಗುವಿಗೂ ಎಷ್ಟು ಭೇದವಿರುತ್ತದೆಯೋ ಸ್ವಭಾಷೆಯಲ್ಲಿ ಶಾಸ್ತ್ರಾಭ್ಯಾಸವನ್ನು ಮಾಡಿದವರಿಗೂ, ಪರಭಾಷೆಯಲ್ಲಿ ಶಾಸ್ತ್ರಾಭ್ಯಾಸವನ್ನು ಮಾಡಿದವರಿಗೂ ಅಷ್ಟು ಭೇದವಿರುತ್ತದೆ. ಅನ್ಯಭಾಷೆಗಳನ್ನು ಪ್ರಥಮದಲ್ಲಿ ಕಲಿತು ಅನಂತರ ಆ ಭಾಷೆಯಲ್ಲಿ ಶಾಸ್ತ್ರಾಭ್ಯಾಸವನ್ನು ಮಾಡುವದು ದ್ರಾವಿಡ ಪ್ರಾಣಾಯಾಮದಂತೆ ಇದೆ. ಈಗ ಇಂತಹ ಪ್ರಾಣಾಯಾಮವೇ ನನ್ನ ದೇಶದಲ್ಲಿ ನಡೆಯುತ್ತಿದೆ. ತರ್ಕ, ವೇದಾಂತ ಮೊದಲಾದ ಪೂರ್ವಶಾಸ್ತ್ರಗಳನ್ನು ಕಲಿಯಬೇಕಾದರೆ ಸಂಸ್ಕೃತವನ್ನು ಕಲಿಯಬೇಕು. ರಸಾಯನ, ವಿಜ್ಞಾನಾದಿ ಶಾಸ್ತ್ರಗಳನ್ನು ಕಲಿಯಬೇಕಾದರೆ ಇಂಗ್ಲೀಷನ್ನು ಕಲಿಯಬೇಕು. ಇವುಗಳನ್ನೆಲ್ಲಾ ಮಾತೃಭಾಷೆಯಲ್ಲಿಯೇ ಕಲಿಯಲು ಅನುಕೂಲವಿದ್ದರೆ, ಕಾಲವೂ, ಧನವೂ ಇಷ್ಟು ಹೆಚ್ಚಾಗಿ ವ್ಯಯವಾಗುತ್ತಿರಲಿಲ್ಲ ; ಎತ್ತು ಎಲ್ಲ ಪರಿಶ್ರಮದಿಂದ ಇವುಗಳನ್ನು ಅಪೇಕ್ಷಿಸಿದವರೆಲ್ಲರೂ ಕಲಿಯಬಹುದು. ಎಷ್ಟು ಕಠಿನವಾದ ಶಾಸ್ತ್ರ ವಿಷಯವಾದರೂ, ಕಲಾವಿಷಯವಾದರೂ ತನ್ನ ಭಾಷೆಯಲ್ಲಿದ್ದರೆ ಸುಸೂಕ್ಷ್ಯ ಸುಲಭವಾಗಿ ತಿಳಿದುಕೊಳ್ಳಬಲ್ಲನು; ಮತ್ತು ಆ ಭಾಷೆಯನ್ನರಿತವರೆಲ್ಲರಲ್ಲಿಯೂ ಆಯಾ ವಿದ್ಯೆಗಳು ಸುಲಭವಾಗಿಯೂ, ಶೀಘ್ರವಾಗಿಯೂ ಪ್ರಸಾರವಾಗಿ ಜನರ ಉನ್ನತಸ್ಥಿತಿಗೆ ಕಾರಣಭೂತಗಳಾಗುತ್ತವೆ.

ಸ್ವಭಾಷೆಯಲ್ಲಿ ವಿಜ್ಞಾನ, ರಸಾಯನ, ವಿದ್ಯುಚ್ಛಾಸ್ತ್ರ ಇವೇ ಮೊದಲಾದ ವಿದ್ಯೆಗಳು ಇಲ್ಲದೆ, ಪರಭಾಷೆಯನ್ನು ಅಭ್ಯಾಸಮಾಡಿ, ಇವುಗಳನ್ನು ಕಲಿಯಬೇಕಾದವರು ಮನೆಯಲ್ಲಿ ಅನ್ನವಿಲ್ಲದೆ, ನೆರೆಹೊರೆಯವರ ಮನೆಗಳಿಗೆ ತಿರುಗಿ ಅನ್ನವನ್ನು ಸಂಪಾದಿಸಿಕೊಳ್ಳುವವನೊಡನೆ ಸಮಾನರು. ನಮ್ಮ ದೇಶದಲ್ಲಿ ಅನೇಕರಿಗೆ ಪರಾನ್ನವನ್ನು ಅಪೇಕ್ಷಿಸುವದು ವಿಹಿತಧರ್ಮವೆಂಬ ಭಾವವು ಇರುವುದರಿಂದ ನಮಗೆ ಅದೊಂದು ತಪ್ಪಾಗಿ ತೋರಲಾರದು. ಆದರೆ ಈಗ ಪ್ರಾಣಸಹಿತವಾಗಿರುವ ಪಾಶ್ಚಾತ್ಯದೇಶಗಳ ಕಡೆಗೆ ದೃಷ್ಟಿಯನ್ನು ತಿರಿಗಿಸಿ ನೋಡಿರಿ. ವಿದ್ಯಾವಿಷಯದಲ್ಲಿ ಇತರ ದೇಶಗಳಿಗಿಂತಲೂ ಹಿಂದೆ ಬೀಳದಿರಲು ಅವರು ಮಾಡುತ್ತಿರುವ ಪ್ರಯತ್ನಗಳನ್ನು ನೋಡಿದರೆ ಯಾರಾತಾನೇ ಆಶ್ಚರ್ಯಾನಂದಪೂರಿತರಾಗದೆ ಇರಬಲ್ಲರು ? ವಿದ್ಯಾವಿಷಯದಲ್ಲಿ ಅವರಿಗೆ ಇಷ್ಟು ಸ್ಪರ್ಧೆ ಏಕೆ ? ಕಾರಣವು ಗೊತ್ತೇ ಇದೆ. ಪ್ರಸ್ತುತದಲ್ಲಿ ಅಪೇಕ್ಷಿಸಿದ ಶಾಸ್ತ್ರವಿಷಯಗಳನ್ನು ಕಲಿಸುವ ವಿದ್ಯಾಪೀಠಗಳೂ, ಗ್ರಂಥಗಳೂ ಇಂಗ್ಲೆಂಡು ದೇಶದಲ್ಲಿಯೇ ಇರುವದರಿಂದ ಅವರು ಬೇರೆ ದೇಶಗಳಿಗೆ ಹೋಗದೆ, ಬೇರೆಭಾಷೆಯನ್ನು ಕಲಿಯದೆ, ಸಕಲ ವಿದ್ಯೆಗಳನ್ನೂ ಕಲೆಗಳನ್ನೂ ವೃತ್ತಿಗಳನ್ನೂ ಅಭ್ಯಾಸಮಾಡಲು ಅವಕಾಶವಿದೆ. ಇಂಗ್ಲೀಷಿನವರಿಗೆ ಶಾಸ್ತ್ರಸಂಬಂಧವಾದ ಗ್ರಂಥಗಳೊಂದೂ ಇರಲಿಲ್ಲವೆಂದು ಭಾವಿಸೋಣ. ಆಗ ಅವರ ವಿದ್ಯಾಸ್ಥಿತಿಯು ಹೇಗೆ ಇರುತ್ತಿತ್ತು? ಯಾವ ವಿದ್ಯೆಯನ್ನು ಕಲಿಯಬೇಕಾದರೂ ಪರಭಾಷೆಗಳಾದ ಜರ್ಮನ್ನೋ ಫ್ರೆಂಚನ್ನೋ ಕಲಿತು ಅಮೇಲೆ ಅವರಿಗೆ ಇಷ್ಟವಾದ ವಿದ್ಯೆಯನ್ನಾಗಲಿ, ವೃತ್ತಿಯನ್ನಾಗಲಿ ಕಲಿಯಬೇಕಾಗಿತ್ತು, ಅಲ್ಲವೆ? ಆಗ ಅವರ ಸಂಪತ್ತು ಈಗ ಇರುವಂತೆ ಇರುತ್ತಿತ್ತೇ? ಹೊಗೆಗಾಡಿಯನ್ನು ನಡಿಸುವ ವಿಧವನ್ನು ತಿಳಿಯಲು ಜರ್ಮನಿಗೂ, ನಾವಿಕಾಶಾಸ್ತ್ರವನ್ನು ಕಲಿಯಲು ಫ್ರೆಂಚ್‌ದೇಶಕ್ಕೂ ಆಕಾಕಯಾನ ವಿಷಯವನ್ನು ಅರಿಯಲು ಇಟಲಿ ದೇಶಕ್ಕೂ "ದೇಹಿ" ಎಂದು ಹೋಗಬೇಕಾದ ಆಂಗ್ಲೇಯರು ಸ್ವದೇಶಾಭಿವೃದ್ಧಿಯನ್ನು ಹೇಗೆ ಮಾಡುತ್ತಿದ್ದರು ? ಆದುದರಿಂದ ಮಾತೃಭಾಷೆಯಲ್ಲಿ ಸಕಲ ವಿದ್ಯಾಸಾಧನೆಗಳಿರುವದು ನಾಗರಿಕ ರಾಷ್ಟ್ರಗಳ ಪ್ರಥಮಲಕ್ಷಣವೆಂದು ತಿಳಿಯಬೇಕು.

ಕೆಲವರು ಹಾಗಾದರೆ ಸಂಸ್ಕೃತವನ್ನೂ ಇಂಗ್ಲೀಷನ್ನೂ ಕಲಿಯು ಬಾರದೆ ಎಂತಲೂ, ಆಯಾ ಭಾಷೆಗಳನ್ನು ಕಲಿಯಲು ಅನುಕೂಲವಿರು ವಾಗ ಮಾತೃಭಾಷೆಯನ್ನು ಕುರಿತು ಇಷ್ಟು ವಿಚಾರವೇಕೆ ಎಂತಲೂ, ಕೇಳಬಹುದು. ಇಂಗ್ಲೀಷು, ಸಂಸ್ಕೃತ, ಫ್ರೆಂಚ್ ಮೊದಲಾದ ಇತರ ಭಾಷೆಗಳನ್ನು ಕೈಲಾದವರು, ಧನವಂತರು ಕಲಿತುಕೊಳ್ಳುವುದೇ ಉತ್ತಮ. ರಾಜಭಾಷೆಯು ಲೋಕದಲ್ಲಿರುವ ಎಲ್ಲಾ ಭಾಷೆಗಳಿಗಿಂತಲೂ ಹೆಚ್ಚು ಗ್ರಂಥ ಭಂಡಾರವನ್ನುಳ್ಳದ್ದೂ, ಪ್ರಖ್ಯಾತಿಯುಳ್ಳದ್ದೂ ಆದ ಇಂಗ್ಲೀಷು ಭಾಷೆಯನ್ನು ಕಲಿಯುವದು ನಾಗರೀಕವನ್ನು ಹೆಚ್ಚಿಸುವದಕ್ಕೂ ದೇಶಾಭಿ ವೃದ್ಧಿಗೂ ಅತ್ಯವಶ್ಯಕವಾಗಿದೆ ಆದರೆ ಸಾಮಾನ್ಯ ಜನರೆಲ್ಲರೂ ಇಂಗ್ಲೀ ಷನ್ನು ಕಲಿತು ಶಾಸ್ತ್ರಗಳನ್ನು ಓದಲು ಭರವಸೆಮಾಡಬಲ್ಲಿ ಇನ್ನು ಸಾವಿರ ವರ್ಷಗಳಾದರೂ ಸಂಭವಿಸಬಹುದೇ? ಸಂಸ್ಕೃತವೂ ಇಷ್ಟೆ. ದೇವ ಭಾಷೆಯೆಂದು ನನಗೆ ಅದರಲ್ಲಿ ಭಕ್ತಿಯೇನೋ ಇಹೆ. ಆದರೆ ದೇಶ ದಲ್ಲಿ ಸಂಸ್ಕೃತ ಪಂಡಿತರೆಷ್ಟು ಜನರಿದ್ದಾರೆ? ಸಂಸ್ಕೃತವು ನಮ್ಮ ಕರ್ನಾಟಕಭಾಷೆಗೆ ಸಹಾಯವಾಗುವದೇಹೊರತು ಎಂದಿಗೂ ನಮ್ಮ ಭಾಷೆಯಾಗಲಾರದು. ಆದಕಾರಣ ಅವರವರ ಮಾತೃಭಾಷೆಗಳಲ್ಲಿಯೇ ವಿದ್ಯಾದಾನವನ್ನು ಮಾಡುವ ಮಾರ್ಗಗಳನ್ನು ಏರ್ಪಾಟು ಮಾಡತಕ್ಕದ್ದು ಅವಶ್ಯಕವು.

ಈಗ ನಮ್ಮ ದೇಶದಲ್ಲಿ ಅನೇಕ ಯುವಕರು ಜರ್ಮನಿ, ಅಮೇರಿಕಾ, ಇಂಗ್ಲೆಂಡ್ ಮೊದಲಾದ ದೇಶಗಳಿಗೆ ಹೋಗಿ ವಿವಿಧ ವಿದ್ಯೆಗಳನ್ನು ಕಲಿತು ಬರುತ್ತಿದ್ದಾರೆ. ಇದು ದೇಶದ ಮುಂದಿನ ಅಭ್ಯುದಯಕ್ಕೆ ಒಳ್ಳೆಯ ಲಕ್ಷಣವೇಸರಿ ಆದರೆ ಈ ವಿಧವಾಗಿ ಎಷ್ಟು ಜನರು ಪರ ದೇಶಕ್ಕೆ ಹೋಗಿ ವಿದ್ಯಾಭ್ಯಾಸವನ್ನು ಮಾಡಬಲ್ಲರು? ವಿಶೇಷ ಹಣ ವನ್ನು ಖರ್ಚುಮಾಡಿ, ಇತರ ಕಷ್ಟಗಳನ್ನು ಸಹಿಸಿಕೊಂಡು, ಲಕ್ಷ ಜನ ರಿಗೆ ಒಬ್ಬನು ಹೋದರೆ ಮಿಕ್ಕವರಿಗೆ ಇವುಗಳೆಲ್ಲ ತಿಳಿಯುವಬಗೆ ಹೇಗೆ? ಜ್ಞಾನಾರ್ಜನೆಯನ್ನು ಮಾಡಬೇಕೆಂಬ ಅಭಿಲಾಷೆಯನ್ನುಳ್ಳವರಿಗೂ ಜ್ಞಾನವು ದೊರೆಯುವ ಮಾರ್ಗವಿಲ್ಲದಿರುವದು ಕೋಚನೀಯ ವಾದುದು. ದೇಶದಲ್ಲೆಲ್ಲಾ ಶಾಸ್ತ್ರಜ್ಞಾನಾಭಿವೃದ್ಧಿಯುಂಟಾಗಬೇಕಾದರೆ

ದೇಶಭಾಷೆಗಳಲ್ಲಿ ತಕ್ಕ ಗ್ರಂಥಗಳೂ, ಆಯಾ ಶಾಸ್ತ್ರಗಳನ್ನು ಬೋಧಿಸುವ ಪಾಠಶಾಲೆಗಳೂ ಇರಬೇಕು.

ಈಗ ಪಾಠಶಾಲೆಗಳಲ್ಲಿ ನಡೆಯುತ್ತಿರುವ ವಿದ್ಯಾಭ್ಯಾಸದ ಪದ್ಧತಿಯನ್ನು ನೋಡೋಣ; ಗಣಿಯ ಫಾರಂ ಮೊದಲುಗೊಂಡು ನಮ್ಮ ಮುಕ್ಕಳಿಗೆ ಭೂಗೋಳವನ್ನೂ, ಅಂಕಗಣಿತ, ರೇಖಾಗಣಿತ, ಪದಾರ್ಥವಿಜ್ಞಾನ ಮೊದಲಾದ ವಿಷಯಗಳನ್ನೆಲ್ಲಾ ಇಂಗ್ಲೀಷಿನಲ್ಲಿ ಬೋಧಿಸುತ್ತಾರೆ. ಆಗ ವಿದ್ಯಾರ್ಥಿಗಳಿಗೆ ಇಂಗ್ಲೀಷು ಭಾಷೆಯಲ್ಲಿ ತಪ್ಪಿಲ್ಲದೆ ಎರಡು ವಾಕ್ಯಗಳನ್ನು ಬರೆಯುವದಕ್ಕೂ ಬರುವದಿಲ್ಲ. ತನ್ನ ಮನಸ್ಸಿನ ಭಾವವನ್ನು ಇಂಗ್ಲೀಷಿನಲ್ಲಿ ಹೇಳುವದಕ್ಕಾ ಬರುವದಿಲ್ಲ. ಇಂತಹವರಿಗೆ ರೇಖಾಗಣಿತವೇ ಮೊದಲಾದ ವಿಷಯಗಳನ್ನು ಇಂಗ್ಲೀಷಿನಲ್ಲಿ ಬೋಧಿಸುವದರಿಂದ ಪ್ರಯೋಜನವೇನು? ಇದರಿಂದ ವಿದ್ಯಾರ್ಥಿಗಳು ತಮ್ಮ ಪಾಠಗಳನ್ನು ಕಂಠಪಾಠಮಾಡಿ ತೇರ್ಗಡೆಯನ್ನು ಹೊಂದಬೇಕಾಗಿದೆ. ಇಂತಹ ಕಠಿಣ ವಿಷಯಗಳನ್ನೆಲ್ಲಾ ಇಂಗ್ಲೀಷಿನಲ್ಲಿ ಕಲಿಸಿ ಹುಡುಗರ ಮೇಧಾಶಕ್ತಿಯನ್ನು ಹಾಳುಮಾಡುತ್ತಿದ್ದೇವೆ. ಈಗ ಸ್ಕೂಲ್ ಫೈನಲ್ ಪರೀಕ್ಷೆಗೆ ಓದುವವರ ಧಾರಣಾಶಕ್ತಿಯೆಲ್ಲಾ ಇಂಗ್ಲೀಷಿನಲ್ಲಿರುವ ಭಿನ್ನ ಭಿನ್ನ ವಿಷಯಗಳನ್ನು ಗಟ್ಟಿಮಾಡುವದರಲ್ಲಿಯೇ ವ್ಯಯವಾಗುತ್ತಿದೆ.

ಇಂತಹ ಕಠಿನವಾದ ಶಾಸ್ತ್ರವಿಷಯಗಳನ್ನು ಮಾತೃಭಾಷೆಯಲ್ಲಿ ಬೋಧಿಸಿದರೆ ವಿದ್ಯಾರ್ಥಿಗಳು ಸುಲಭವಾಗಿ ಗ್ರಹಿಸಿ ಗುರುವಿನ ಪ್ರಶ್ನೆಗೆ ಉತ್ತರವನ್ನು ತಮ್ಮ ಮಾತಿನಲ್ಲಿ ಹೇಳಬಲ್ಲರು. ಈ ವಿಧವಾದ ವಿದ್ಯಾಭ್ಯಾಸದಿಂದ ಈಗ ಬಿ. ಎ. ವಿದ್ಯಾರ್ಥಿಗಳಿಗಿರುವಷ್ಟು ಜ್ಞಾನವನ್ನು ಸ್ಕೂಲ್ ಫೈನಲ್ ವಿದ್ಯಾರ್ಥಿಗಳಿಗೆ ಉಂಟುಮಾಡಬಹುದು.

ಬೀಜಗಣಿತ ಶಿಲ್ಪ ಮೊದಲಾದವುಗಳನ್ನೆಲ್ಲಾ ಆಂಗ್ಲೇಯ ಭಾಷೆಯಲ್ಲಿ ಕಲಿಯದಿದ್ದರೆ ಆ ಭಾಷೆ ಚನ್ನಾಗಿ ಬರಲಾರದೆಂದು ಭಾವಿಸುವದು ಸರಿಯಲ್ಲ. ಕಾವ್ಯಗಳು, ಉಪನ್ಯಾಸಗಳು, ತತ್ವಗಳು, ರಾಜಕೀಯೋಪನ್ಯಾಸಗಳು ಇವೇಮೊದಲಾದವುಗಳನ್ನು ರಾಜಭಾಷೆಯಲ್ಲಿ ಓದುವದರಿಂದ ಅದರಲ್ಲಿ ಪ್ರವೀಣರಾಗಬಹುದು. ವಿದ್ಯಾರ್ಥಿಗಳು ಇಂಗ್ಲೀಷು ಭಾಷೆಯಲ್ಲಿ ಶಾಸ್ತ್ರವಿಷಯಗಳನ್ನು ಕಲಿಯಲು ಉಪಯೋಗಮಾಡುವ ಕಾಲ

ವನ್ನು ಇಂಗ್ಲೀಷು ವಾಙ್ಮಯವನ್ನು ಪಕಪಮಾಡಿಕೊಳ್ಳಲು ಉಪಯೋಗಿಸಿದರೆ ಇಂಗ್ಲೀಷು ಗ್ರಂಥಕಾರರೊಡನೆ ಸಮಾನವಾದ ಆಂಗ್ಲಸಾಹಿತ್ಯವನ್ನು ಪಡೆಯಬಹುದು.

ಇಂಗ್ಲೀಷನ್ನರಿಯದವರು ಬೀಜಗಣಿತ, ರೇಖಾಗಣಿತ, ವೃತ್ತ, ದೀರ್ಘವೃತ್ತ ಸಂಬಂಧಗಳಾದ ಸಿದ್ಧಾಂತಗಳು ಇತ್ಯಾದಿ ವಿಷಯಗಳನ್ನು ಕುರಿತು ತಾಯ್ನುಡಿಯಲ್ಲಿ ಪರಸ್ಪರ ಮಾತನಾಡಿಕೊಳ್ಳುವಕಾಲ ಬಂದರೆ ಅದು ನಿಶ್ಚಯವಾಗಿ ದೇಶಾಭ್ಯುದಯದ ಚಿನ್ಹವೆಂದು ತಿಳಿಯಬಹುದು. ಶರೀರದ ರಕ್ತವು ಕೆಟ್ಟುಹೋದರೆ ಮನುಷ್ಯನು ರೋಗಗ್ರಸ್ತನಾಗುವಂತೆ ಮಾತೃಭಾಷೆಯು ಹೀನಸ್ಥಿತಿಗೆ ಬಂದರೆ ಮಾತೃಭೂಮಿಯು ದುರ್ದಶಾಗ್ರಸ್ತವಾಗುತ್ತದೆ. ಮಾತೃಭಾಷೆಯನ್ನು ಆಂಗ್ಲೇಯಭಾಷೆಯೊಡನೆ ಸಮಾನವಾದ ಸ್ಥಿತಿಗೆ ಬರುವಂತೆ ಮಾಡಿ ತಸ್ಮೂಲಕ ಮಾತೃಭೂಮಿಯ ದುಸ್ಥಿತಿಯನ್ನು ತೊಲಗಿಸಬೇಕಾದ ಭಾರವು ಆಂಗ್ಲ ವಿದ್ಯಾವಿಚಾರದರಾದ ಕರ್ನಾಟಕ ಸೋದರ ಸೋದರಿಯರಮೇಲಿದೆ.

ಪ್ರಿಯಮಾತೆಯರೆ! ಪ್ರಿಯಸಹೋದರಿಯರೆ! ನನ್ನ ಸೋದರರು ಸತತವೂ ಉದ್ಯೋಗ ನಿರತರಾಗಿರುವದರಿಂದ ಅವರಿಗೆ ಈ ವಿಷಯಗಳನ್ನು ಆಲೋಚಿಸಲು ವಿಶೇಷ ಅವಕಾಶವು ದೊರೆಯುವದಿಲ್ಲ. ಆದ ಕಾರಣ ವಿದುಷೀಮಣಿಯರಾದ ನೀವುಗಳು ಸಮಾಜಗಳಲ್ಲಿ ಆಲೋಚಿಸಿ ಭಾಷೆಯ ಸ್ಥಿತಿಯನ್ನು ನವೀನಕಾಲಕ್ಕೆ ಸರಿಹೋಗುವಂತೆ ತಿದ್ದಿಕೊಂಡು ಅದರಲ್ಲಿರುವ ಲೋಪಗಳನ್ನು ಸರಿಪಡಿಸಿಕೊಳ್ಳಬೇಕು. ಮೇಲೆ ಹೇಳಿದಂತೆ ಪಾಠಶಾಲೆಗಳಲ್ಲಿ ಶಾಸ್ತ್ರವಿಷಯಗಳನ್ನು ಮಾತೃಭಾಷೆಯಲ್ಲಿ ಬೋಧಿಸುವಂತೆಯೂ, ಇತಿಹಾಸಗಳು, ಉಪನ್ಯಾಸಗಳು ಇತ್ಯಾದಿಗಳನ್ನು ಇಂಗ್ಲೀಷಿನಲ್ಲಿ ಬೋಧಿಸುವಂತೆಯೂ ಏರ್ಪಾಟು ಮಾಡಬೇಕೆಂದು ಪಾಲಕರನ್ನು ಪ್ರಾರ್ಥಿಸಬೇಕು. ಭೂಪತನವಾದ ನೊದಲ್ಗೊಂಡು ಭೂಕಯಸವಾಗುವವರೆಗೂ ಯಾವಭಾಷೆಯನ್ನು ಮಾತನಾಡುತ್ತೀವೆಯೋ ಅಂತಹ ಮಾತೃಭಾಷೆಯನ್ನು ಉದ್ಧಾರಮಾಡಲು ಸೋದರಿಯರು ವಿಶೇಷ ಶ್ರದ್ಧೆಯನ್ನು ವಹಿಸಬೇಕೆಂದು ಪ್ರಾರ್ಥಿಸುತ್ತೇನೆ

ಓಂ

ಕುರೂಪ

(ಒಂದು ಸಣ್ಣ ಕಥೆ)

ಅನುವಾದಕ.—ಸಂಪಾದಕ.

ನಗರದಲ್ಲೆಲ್ಲಿಯೂ ಹಾಹಾಕಾರವೆದ್ದಿತು. ಕಳಿಂಗರಾಜನ ಆಸ್ಥಾನದ ರಾಜಪುರೋಹಿತನೂ ರಾಜಕರ್ಮಚಾರಿಯೂ ಸಪರಿವಾರರಾಗಿ ಪ್ರಾಣದಂಡನೆಯ ಶಿಕ್ಷೆಯನ್ನು ವಹಿಸಬೇಕೆಂದು ರಾಜಾಜ್ಞೆಯಾಗಿದ್ದಿತು. ಈ ವರ್ತಮಾನವನ್ನು ತಿಳಿದ ನಗರವಾಸಿಗಳು ಹಾಹಾಕಾರಗೈಯಿಸುತ್ತಿದ್ದರು.

ಪ್ರಥಮ ಮಂತ್ರಿಯೂ ಆಸ್ಥಾನದ ಉಚ್ಚಪದವೀಧರರೂ ದಂಡಿತ ವ್ಯಕ್ತಿಗಳಪರವಾಗಿ ಮಹಾರಾಜನಲ್ಲಿ ಭಿಕ್ಷಾರ್ಥಿಯಾಗಿ ಹೋಗುತಿದ್ದರು. ಹೀಗೆ ಹೋದವರು ಕೋಪಾಗ್ನಿಯಿಂದ ಜ್ವಲಿಸುತ್ತಿರುವ ಮಹಾರಾಜನ ಕಣ್ಣುಗಳನ್ನು ನೋಡಿ ಹೆದರಿ ಬಾಯಿಬಿಟ್ಟು ಹೇಳಲಸಮರ್ಥರಾಗಿ ಮುಂದಿಟ್ಟ ಹೆಜ್ಜೆಯನ್ನು ಹಿಂತಿರುಗಿಸಿದರು.

ಯಥಾಸಮಯದಲ್ಲಿ ಲಕ್ಷೋಪಲಕ್ಷ ಸ್ತ್ರೀಪುರುಷರ ಸಮುಖದಲ್ಲಿ ಮುಖ್ಯೋದ್ಯೋಗಸ್ಥ ಮತ್ತು ಪುರೋಹಿತನ ವಮುಂಡವು ಮುಂಡದಿಂದ ಬೇರೆ ಮಾಡಲ್ಪಟ್ಟಿತು. ನೆರೆದಿದ್ದ ಜನಸ್ತೋಮವು ತಾಹಿ! ತಾಹಿ! ಎಂದು ಮೊರೆಯಿಡುತ್ತಾ ಎದ್ದಿತು.

ಈರೀತಿ ಶಿರವನ್ನರ್ಪಿಸಲು ಈ ಹತಭಾಗ್ಯರಾದ ಪುರೋಹಿತನೂ ರಾಜಕರ್ಮಚಾರಿಯೂ ಮಾಡಿದ ಅಂತಹ ಕ್ರೂರ ಅಪರಾಧವಾದರೂ ಏನಿರಬಹುದು? ದ್ರವ್ಯಕ್ಕೆ ಆಸೆಬಿದ್ದು, ಮಿಥ್ಯಾಪ್ರಕಂಸೆಗೊಳಪಟ್ಟು ಮಹಾರಾಜನಿಗೆ ಕುರೂಪಿಯಾದ ಕನ್ಯೆಯನ್ನು ವಿವಾಹಮಾಡಿಸಿದ್ದೇ ಪುರೋಹಿತನ ಮತ್ತು ರಾಜಕರ್ಮಚಾರಿಯ ಮಹಾಪರಾಧ. ಇಷ್ಟುಮಾತ್ರಕ್ಕೆ ಆ ಹತಭಾಗ್ಯನು ತನ್ನ ಜೀವಕ್ಕೆ ತರ್ಪಣ ಬಿಡಬೇಕಾಯಿತು. ಪುರೋ

ಪಿತನ ಮತ್ತು ರಾಜಕರ್ಮಚಾರಿಯ ರಕ್ತಬಲಿಯಿಂದ ಕೂಡ ಮಹಾರಾಜನ ಕೋಪಾಗ್ನಿಯು ಶಾಂತವಾಗಲಿಲ್ಲ. ಅಂದಿನಿಂದ ಸದಾ ಚಿಂತೆಯಲ್ಲಿಯೇ ಮುಳುಗಿದ್ದನು. ಮಾತುಮಾತಿಗೂ ರೇಗುತಿದ್ದುದರಿಂದ ಯಾವ ಅಧಿಪನೂ ಇವನೊಡನೆ ಮಾತನಾಡಲು ಧೈರ್ಯವುಳ್ಳವನಾಗಲಿಲ್ಲ.

ಯಾವ ರಾಜಪತ್ನಿಯು ಕಾರಣದಿಂದ ಇಂತಹ ಭೀಷಣ ಕಾಂಡವು ಸಡೆಯುತ್ತಿದ್ದಿತೋ ಆ ಹತಭಾಗಿನಿಯ ವಿಷಯವನ್ನು ಬರೆಯಬೇಕೆಂದರೆ ಹೃದಯಕಂಪದಿಂದ ಲೇಖನಿಯು ಮುಂದರಿಯಲಾರದು. ಪಾಪ! ಅವಳು ಹಾಲಿಗೆಬಿದ್ದ ನೊಣದಂತೆ ತಲ್ಲಣಿಸುತ್ತಿದ್ದಳು. ನೊಂದ ಮನವುಳ್ಳ ರಾಣಿಯು ತನ್ನ ದುರ್ದೈವವನ್ನು ನಿಂದಿಸಿಕೊಳ್ಳುತ್ತ, ತದ್ದುಃಖಕಮ ನಾರ್ತವಾಗಿ ಕಣ್ಣೀರು ಸುರಿಸುತ್ತಾ ಕಾಲಕಳೆಯುತ್ತಿದ್ದಳು.

ಈರೀತಿ ಕೆಲವು ದಿನಗಳು ಕಳೆದವು. ತಾನು ಪ್ರಪಂಚ ಸುಖದಿಂದ ಪಂಚಿತಳಾಗಿದ್ದರೂ ಪತಿಸೇವೆಯಾದರೂ ದೊರೆತರೆ ಸಾಕೆಂದೆಣಿಸಿ ಅನುನಯ ವಿನಯ ಭಕ್ತಿ ವಿಶ್ವಾಸದಿಂದ ಕಷ್ಟಪಟ್ಟು ಪತಿಯ ಉಚ್ಛಿಷ್ಟ ಅನ್ನಾದರೂ ಉಣ್ಣುವ ಅಧಿಕಾರವನ್ನು ಪಡೆದಳು. ಇಷ್ಟು ಅಧಿಕಾರವನ್ನು ಪಡೆದ ರಾಣಿಯು ತನಗೆ ಸ್ವರ್ಗವು ಕೈಗೆಟುಕಿದಷ್ಟು ಸಂತೋಷಪಟ್ಟಳು. ಸ್ನೇಹ, ಪ್ರೀತಿ ಮತ್ತು ಶ್ರದ್ಧೆಯಿಂದ ಪತಿಯ ಚಿತ್ರಪಠವನ್ನು ಪೂಜಿಮಾಡುತ್ತಾ ಪತಿಯುಚ್ಛಿಷ್ಟದಿಂದಲೇ ತೃಪ್ತಳಾಗಿ ಕಾಲ ಕಳೆಯುತಿದ್ದಳು.

ಮಹಾರಾಜನ ಹೃದಯದಲ್ಲಿ ಕೋಕವು ಮನೆಮಾಡಿಕೊಂಡಿತು. ದಿನೇದಿನೇ ರಾಜನು ಕ್ಷಯಿಸಹತ್ತಿದನು. ರಾಜವೈದ್ಯನು ರೋಗಪರೀಕ್ಷೆ ಮಾಡಲು ಬಂದನು. ಮಂತ್ರಿಯು ರೋಗಿಯ ಪರ್ಯಂಕದ ಬಳಿ ನಿಂತು ನೀರವವಾಗಿ ಅಶ್ರುವರ್ಷವನ್ನು ಸುರಿಸುತ್ತಿದ್ದನು.

ಮಂತ್ರಿಯು ಹೊರಟುಹೋದನಂತರ ವೃದ್ಧದಾಸಿಯ ರಾಜನ ಬಳಿ ಬಂದು, "ಮಹಾರಾಜ! ರಾಣಿಯು ಕೇವಲ ನಿನ್ನುಚ್ಛಿಷ್ಟವನ್ನು ಮಾತ್ರ ತಿಂದು ಕಾಲ ಕಳೆಯುತ್ತಿರುವಳು. ಅವಳ ದುಃಖವನ್ನು ನೋಡುವುದಕ್ಕೆ ಕಷ್ಟವಾಗಿದೆ" ಎಂದು ಹೇಳಲು, ಮಹಾರಾಜನು ಹೊದ್ದಿಕೆಯಿಂದ ಮುಖವನ್ನು ಮುಚ್ಚಿಕೊಂಡು ಮತ್ತೊಂದು ಕಡೆ

ತಿರುಗಿ ಮಲಗಿದ್ದನ್ನು ಕಂಡ ದಾಸಿಯು ಬಂದದಾರಿಯಲ್ಲಿಯೇ ಹಿಂತಿರುಗಿದಳು. ಆ ಕೊಠಡಿಯೆಲ್ಲವೂ ನಿಶ್ಶಬ್ದತೆಯಿಂದ ತುಂಬಿದ್ದಿತು.

ಮಹಾರಾಜನು ವಿಷಪಾನನಮಾಡಿರುವನೆಂಬ ಸುದ್ದಿಯು ನಿಮಿಷ ಮಾತ್ರದಲ್ಲಿ ಅರಮನೆಯಲ್ಲೆಲ್ಲಾ ವ್ಯಾಪಿಸಿತು. ರಾಜಪತ್ನಿಯು ಒಂದೇ ಉಸಿರಿಗೆ ಮಹಾರಾಜನ ಬಳಿಗೆ ಓಡಿಬಂದಳು. ಪರ್ಯಂಕದ ಕೆಳಗೆ ಬಂದು ಸ್ವರ್ಣಪಾತ್ರದಲ್ಲಿ ಅರಸನು ಕುಡಿದು ಮಿಕ್ಕಿದ್ದ ಸ್ವಲ್ಪ ವಿಷವಿರುವುದನ್ನು ರಾಣಿಯು ಕಂಡಳು. ರಾಜನು ಕುಡಿದ ನಂತರ ಬಟ್ಟಲನ್ನು ಮಂಚದ ಕೆಳಗೆ ಬಿಸಾಡಿದ್ದನು.

ರಾಣಿಯು ಪರ್ಯಂಕದ ಬಳಿಗೆ ಹೋಗಿ ನೋಡಲು ಪ್ರಾಣಹೀನವಾದ ರಾಜನ ದೇಹವು ಹಾಸಿಗೆಯ ಬಂದು ಮೂಲೆಯಲ್ಲಿ ಉರುಳಿದ್ದಿತು. ರಾಣಿಯು ಕೈಜೋಡಿಸಿಕೊಂಡು "ದೇವ! ತಮ್ಮ ಚರಣಸ್ಪರ್ಶ ಮಾಡುವ ಯೋಗ್ಯತೆಯು ಇಂದಿನವರೆಗೂ ಈ ಹತಭಾಗಿನಿಗೆ ದೊರೆಯಲಿಲ್ಲ; ತಮ್ಮ ಅಂತಿಮ ಕಾಲದಲ್ಲಿ ತಮ್ಮ ಪವಿತ್ರದೇಹವನ್ನು ಸ್ಪರ್ಶಮಾಡುವುದೂ ಮಹಾಪರಾಧವೇ! ಈ ಅಧಿಕಾರವು ನನಗಿಲ್ಲದಿದ್ದರೂ ತಮ್ಮ ಜ್ಞಿಷ್ಟ ವಸ್ತುವನ್ನು ಉಣ್ಣುವ ಅಧಿಕಾರವಾದರೂ ಇದೆ. ಆದುದರಿಂದ ಈ ದಾಸಿಯು ಇಂದು ತಮ್ಮ ಜ್ಞಿಷ್ಟವನ್ನು ತಿಂದು ತನ್ನ ಜನ್ಮಸಾರ್ಥಕತೆಯನ್ನು ಮಾಡಿಕೊಳ್ಳುವಳು" ಎಂದು ಹೇಳಿ ವಿಷದಬಟ್ಟಲನ್ನು ತೆಗೆದುಕೊಂಡು ವಿಷವನ್ನು ಕುಡಿಯಲು ಬಾಯಿಯಸಮೀಪಕ್ಕೆ ತೆಗೆದುಕೊಂಡುಹೋದಾಗ ಪರ್ಯಂಕದಲ್ಲಿ ಕಯನಿಸಿದ್ದ ಮಹಾರಾಜನೆದ್ದ ರಾಣಿಯ ಕೈಯಲ್ಲಿದ್ದ ವಿಷದಬಟ್ಟಲನ್ನು ಕಿತ್ತು ದೂರ ಬಿಸಾಟು ಇಷ್ಟುದಿನವೂ ಕಣ್ಣೆತ್ತಿ ಸಹ ನೋಡದಿದ್ದ ಕುರೂಪಿ ರಾಣಿಯನ್ನು ತನ್ನ ಬಾಹುಗಳಲ್ಲಿ ಬಂಧಿಸಿದನು. ರೋದಿಸುತ್ತ ಪರ್ಯಂಕದಬಳಿ ನಿಂತಿದ್ದ ಇತರ ರಾಣಿಯರು ಭೀಪ್ಪಾಗಿ ನೋಡುತ್ತಿದ್ದರು.

ಹೊರಗೆ ವಸಂತಕಾಲದ ತಂಗಾಳಿಯಿಂದ ನಿಂಬೆಯು ಎಲೆಗಳು ನಿಧಾನವಾಗಿ ಅಲ್ಲಾಡುತ್ತಿದ್ದವು. ಪ್ರಾಸಾದದ ಶಿಖರದಲ್ಲಿ ಕುಳಿತಿದ್ದ ಕೋಗಿಲೆಯು "ಕುಹೂ! ಕುಹೂ!" ಎಂದು ಕಬ್ಬಿಸತೊಡಗಿತು.

ಈಗ ಮಹಾರಾಜನ ಪುನಸ್ಸಿಗೆ ಕುರೂಪಳಾಗಿದ್ದ ಪತ್ನಿಯು ಹುಟ್ಟಿ ಬಿಂಬವು ಪೂರ್ಣಚಂದ್ರಸದೃಶವಾಗಿ ಕಂಡುಬಂದಿತು. ಮಾಸುಪಾಡಿದ್ದ

ಹತ್ಯೆಯಸಲುವಾಗಿ ಚಿಂತಿಸಿದನು. ಮತ್ತೆ ಚಿಂತಿಸಿ ಫಲವೇನು? ಪ್ರಪಂಚವಾಯೆ ಇಷ್ಟೇ. ಗುಣವು ಪೂಜ್ಯವಲ್ಲದೆ ರೂಪಿನಲ್ಲಿಯೂ, ಸೌಂದರ್ಯದಲ್ಲಿಯೂ ಏನಿದೆ? ಇದನ್ನು ತಿಳಿದೂ ತಿಳಿದು ಮೋಹಪರವಶವಾಗುವ ಮಾನವಪ್ರಕೃತಿ ಯೆಂತಹದು

" ಗುಣವೇ ಪೂಜ್ಯವಲ್ಲದೆ ರೂಪವಲ್ಲ. "

ಅಂಬಕೆಮನೆಯಿಂದ

ಪತ್ರಾಂಕ ೧.

ನನ್ನ ಜೆಕ್ಕತಂಗಿಯಲೆ,

ಈ ಕಾಗದವನ್ನು ನಿನಗೆ ಬರೆಯುವುದು. ನಿಮ್ಮನ್ನು ಕುರಿತು ಬಂದೆರಡು ಅವಶ್ಯಕವಾದ ಮಾತುಗಳನ್ನು ನಿಸ್ಸಂಕೋಚವಾಗಿ ಹೇಳಬೇಕೆಂಬ ಉದ್ದೇಶದಿಂದ. ಉಪದೇಶವು ನನ್ನ ಕಾರ್ಯವಲ್ಲ. ಪ್ರೀತಿಯ ಗೆಳೆಯರಂತೆ ಸರಳಚಿತ್ತದಿಂದ ಸಂಭಾಷಿಸುವುದೇ ಇದರ ಮುಖ್ಯ ಧ್ಯೇಯವು. ಆದುದರಿಂದ ನಾನು ಬರೆಯುವುದೆಲ್ಲವೂ ನಿಮ್ಮ ಮೇಲಿನ ಪವಿತ್ರ ಸೋದರಿಸ್ನೇಹ, ಮರ್ಯಾದೆ, ಹಾಗೂ ಅನುಕಂಪದಿಂದಲೇ ಎಂದು ತಿಳಿಯುವುದು.

ಮೊಟ್ಟಮೊದಲು ಇಹಸಂಸಾರಕ್ಕೆ ನೀವೆಷ್ಟೊಂದು ಅವಶ್ಯಕರು ಮತ್ತು ಎಂತಹ ಅಗ್ರಸ್ಥಾನವನ್ನು ಹೊಂದಿರುವಿರೆಂಬುದನ್ನು ನಿಮ್ಮ ನೆನಪಿಗೆ ತರಲಿಚ್ಛಿಸುವೆನು. ಏಕಂದರೆ, ನಿಮ್ಮಲ್ಲನೇಕರು ಎಷ್ಟೋಬಾರಿ ನಿರಾಶ ಚಿತ್ತರಾಗಿ ಮನಸ್ಸಿನಲ್ಲಿ "ನಾನು ಹುಡುಗಿಯಾಗಿ ಹುಟ್ಟಿದೆನೇಕೆ? ಏಕೆ ಹುಡುಗನಾಗಿ ಹುಟ್ಟಲಿಲ್ಲ" ಎಂದು ಹೇಳಿಕೊಳ್ಳುವಿರೆಂದು ನಾನು ಬಲ್ಲೆನು. ಅಷ್ಟೇಕೆ, ಎಷ್ಟೋಬಾರಿ ನನ್ನ ಬಾಯಿಂದಲೂ ಅಂತಹ ಉದ್ಗಾರಗಳು ಹೊಂಟರುಪವು. ಇದರ ಕಾರಣವೇನೆಂದರೆ, ನಮ್ಮ ಸಮಾಜದ ಮತ್ತು ಸಂಸಾರದ ಪರಿಸ್ಥಿತಿ ಅಥವಾ ಸಮಾವರಣವು, ಬಾಲಿಕೆಯರ ಹೃದಯ ವಿಕಾಸಕ್ಕೆ ಎಡೆಗೊಡದಿರುವುದು ಎಷ್ಟೋಜನ ತಂದೆ ತಾಯಿಗಳು, ನಮಗೆನು ಹುಟ್ಟಲಂದು ಅಪೇಕ್ಷಿಸುವರು. ಅದರೆ ಹೆಣ್ಣು ಹುಟ್ಟಿಕೊಂಡಕ್ಷಿ

ಆದರಿಸ ವಮೂತು ಹಾಗಿರಲಿ, ಕಣ್ಣೆತ್ತಿ ನೋಡುವುದೂ ಇಲ್ಲ. ಹುಡುಗಿಯರು ಕೇವಲ ಪಾತ್ರ ಪದಾರ್ಥಗಳೆಂದೂ, ತಂದೆ ತಾಯಿಗಳ ಇಷ್ಟವೆಂದಂತೆ ಯಾರಾದರೊಬ್ಬ ವರನಿಗೆ ಅವಕಾಶವು ದೊರತೊಡನೆಯೇ ದಾನಮಾಡಿ ಕೊಟ್ಟುಬಿಟ್ಟರಾಯಿತೆಂದು ಭಾವಿಸುವ ಎಷ್ಟೋ ಜನರನ್ನು ನಾನು ನೋಡಿರುವೆನು. ಇಷ್ಟೊಂದು ಅಂತರಾಯಗಳಿದ್ದರೂ ನೀವು ನಿಮ್ಮ ಜನ್ಮವನ್ನು ನಿಂದಿಸಿಕೊಳ್ಳಬೇಕಾದ ಅವಶ್ಯಕತೆ ಇಲ್ಲವೆಂದು ಮತ್ತೆ ನಿಮಗೆ ಒತ್ತಿಹೇಳುವೆನು. ಹುಡುಗಿಯರು ಹೆಚ್ಚೆಲ್ಲದಿದ್ದರೆ ಹುಡುಗರಷ್ಟೇ ಪ್ರಧಾನರೆಂಬುದನ್ನು ನೀವು ಅರಿತುಕೊಳ್ಳಬೇಕಾದುದು ಮೊದಲನೆಯ ಕೆಲಸ.

ಬಾಲ್ಯವೇ ನಿಮ್ಮ ಮುಂದಿನ ಹೆಣ್ತನದ ಹಾಗೂ ತಾಯ್ತನದ ತಳಹದಿಯು. ನೀವೆಂತಹ ಗೃಹಿಣಿಯರು ಮತ್ತು ತಾಯಿಯರಾಗುವಿರೆಂಬುದು ನಿಮ್ಮ ಎಳೆತನದ ಪರಿಸ್ಥಿತಿಯನ್ನನುಸರಿಸಿರುವುದು. ಅದುದರಿಂದಲೇ ಈಗ ನೀವು ನಿಮ್ಮ ಆತ್ಮೋನ್ನತಿಯ ವಿಷಯದಲ್ಲಿ ಉದಾಸೀನರಾಗುವುದು ಒಳ್ಳೆತಲ್ಲ. ಬಂದು ಜನಾಂಗದ ಲಾಲನೆ ಪಾಲನೆಗಳ ಪವಿತ್ರಭಾರವು ನಿಮ್ಮದು. ಅದರ ಸಂಸ್ಕೃತಿಯ ರಕ್ಷಣೆಯ ಕಾರ್ಯವು ನಿಮ್ಮದು. ಜನಾಂಗದ ಮೇಲ್ಮೆಯನ್ನು ಕಾಯ್ದುಕೊಂಡು, ಅದರ ಪ್ರಗತಿಯನ್ನು ಉದ್ದೀಪನಗೊಳಿಸುವುದು ನಿಮ್ಮ ಕೈಯಲ್ಲಿ. ತಾಯಿಯರೇ ಬಂದು ದೇಶದ ಮುಂದಿನ ವೀರರನ್ನೂ, ಸಾಧ್ವಿಯರನ್ನೂ ತರಬೇತುಮಾಡುವ ವಿದ್ಯಾಶಾಲೆಯು; ಹೃದಯವು ಹೊಸಹೊಸ ವಿಷಯಗಳನ್ನು ತಿಳಿದುಕೊಳ್ಳುವಹಾಗೂ ಬಹು ಸುಲಭವಾಗಿ ಆಳಲ್ಪಡಬಹುದಾದ ಸ್ಥಿತಿಯಲ್ಲಿರುವಾಗ ಅವರು ನಿಮಗೆ ದೊರಕುವರು.

ಪ್ರತಿಯೊಬ್ಬ ಮಹಾತ್ಮನೂ, ಪ್ರತಿಯೊಬ್ಬ ವೀರಪುರುಷನೂ, ತಾಯಿಯ ಅಡಿಗಳಲ್ಲಿಯೇ ತನ್ನ ಪ್ರತಿಭೆಯನ್ನು ಹೊಂದಿರುವನು. ಆ ದೇಶವತ್ಸಲತೆಯ ಕಿಡಿಯನ್ನು, ಬಿಮ್ಮಿಗೆ ಹತ್ತಿಕೊಂಡ ಕೂಡಲೆ ಬೊಗಲ್ ಸಾಮ್ರಾಜ್ಯವನ್ನು ತನ್ನ ಉರಿಗಳಿಂದ ಅರ್ಧಪಾಲು ಸುಟ್ಟು ಹಾಕಿದ ದೇಶವತ್ಸಲತೆಯು ಕಿಡಿಯನ್ನು, ಛತ್ರಪತಿ ಶಿವಾಜಿಯ ಹೃದಯದಲ್ಲಿಟ್ಟವಳು ವೀರಮಾತೆ ಜೀಜಾಬಾಯಿಯಲ್ಲವೆ ?

ನಿಮ್ಮಲ್ಲಿ ಕೆಲವರು "ನಾನು ಹೆಣ್ಣುತನದ ಹಂಗೂ ತಾಯ್ತನದ ಹೊರೆಯನ್ನು ಹೊರಲಾರೆ" ನೆಂದು ಹೇಳಬಹುದು. ಆದರೆ ಜ್ಞಾಪಕದಲ್ಲಿರಲಿ; ನಾನು ತಾಯ್ತನವೆಂದು ಹೇಳುವದು ಕೇವಲ ಮಕ್ಕಳನ್ನು ಹೆತ್ತ ತಾಯಿಯರಿಗಲ್ಲ ಪ್ರತಿಯೊಬ್ಬ ಸ್ತ್ರೀಯೂ ಪತ್ನಿಯಾಗದಿರಬಹುದು; ಆದರೆ ಪ್ರತಿಯೊಬ್ಬ ಸ್ತ್ರೀಯೂ ತನ್ನ ನೈಸರ್ಗಿಕವಾದ ಗುಣಗಳಿಂದ ತಾಯಾಗಿರುವಳು. ನಿಮ್ಮಲ್ಲಿ ಪ್ರತಿಯೊಬ್ಬರೂ ಆ ತಾಯ್ತನದ ಗುರುತುಗಳಾದ ಸದ್ಗುಣಗಳನ್ನು ಹೊಂದಿರುವಿರಿ. ನಿಮ್ಮ ವಾತ್ಸಲ್ಯಕ್ಕೂ ಅನುಕಂಪಕ್ಕೂ ವಶೀಭೂತರಾಗದಿರಲು ಯಾರಿಂದಲೂ ಸಾಧ್ಯವಿಲ್ಲ. ತಾಯ್ತನದ ಶಕ್ತಿಯು ಬಹು ಮುಖ್ಯವಾದುದು, ಅಪಾರವಾದುದು. ಪ್ರತಿಯೊಂದು ರಾಷ್ಟ್ರದಲ್ಲಿಯೂ ಪ್ರತಿಯೊಂದು ಜನಾಂಗದಲ್ಲಿಯೂ ಒಂದಲ್ಲೊಂದು ವಿಧದಿಂದ ಪವಿತ್ರವಾದ ತಾಯ್ತುತನದ ಪೂಜೆಯು ನಡೆಯುತ್ತಿರುವುದನ್ನು ನೋಡುವಿರಿ. ಆದುದರಿಂದ ಇನ್ನಾದರೂ ನೀವು ಮುಂದಿನ ತಾಯಿಯಾಗಬೇಕೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಿ. ಮತ್ತು ನಿಮ್ಮ ಆ ಉಚ್ಚ ಪದವಿಗೆ ಯೋಗ್ಯರಾಗುವಂತೆ ನಿಮ್ಮ ಜೀವನವನ್ನು ತಿದ್ದುಕೊಳ್ಳಿ.

"ಪ್ರೇಮಾಯತನ" ಇತಿ ನಿಮ್ಮ
ತುಂಗಭದ್ರಾ, 14-10-25 ಸು ಹು ತಿ.

ಮಾನವ ಸುಖಬೋಧಾಮೃತ

(ಹಿಂದಿನ ಸಂಚಿಕೆಯಿಂದ ಮುಂದರಿಸಿದ್ದು)

ಪ್ರ. ಪಾ ತಿ ವೈ ತ್ಯ.

ಮರೆಯುದಿರು ಮಾನವ! ವಿವೇಕವ |
ಸೂರೆವೆ ಸತ್ಯದಮಾರ್ಗ ಮುಳಿಯುವೆ |
ಮಿರುಪ ಧನ್ಯಯುಜ್ಜೀವನದೊಳಿಹ ವಿವೇಕಬೋಧೆಗಳ ||

ಧರದೆ ನಿನ್ನಂಗಳವು ಕಾಂತಿಯು |
ಧರಿಸಿ ಸೌಂದರ್ಯವನ್ನು ಪೆರ್ಚಿಸಿ |
ಕರಜದಂದದಿಗೈಸಿ ಮನ್ನಣೆಯುತ್ತು ಮೆರೆಯಿಪುವು ||೧||

ನಿರುಪಮಾನಂದಕರಮೆನಿಪಾ |
ಸುರಭಿಯೆಂಬಾ ಯೌವನದೆ ನೀ |
ಮೆರೆಯುತಿರೆ ಮಾನವರ್ಕಳ ದಿಟ್ಟಿಗಳರ್ಥಮೇನೆನುತ ||
ಭರದೊಳರಿಯೌ ನಿನ್ನ ಚಿತ್ತತೆ |
ನುರುಳವೂಡಿಸುತಿರುವ ಮೋಹಾ |
ಕರದನೂತ ಹೃದಯವನಂ ನೀಡದಲೆ ಕಾಯುತಿರು ||೨||

ವುರುಷನಿಗೆ ನಿಜಗೆಳತಿಯಲ್ಲದೆ |
ವಿರಹಪುರುಷನ ದಾಸ್ಯಳಲ್ಲತ |
ನಿರುತವಲ್ಲಧಗೊದಗಿದಳಲನು ನೀನು ವಾರಿಸುತ ||
ಮುರುಕದಿಂ ಸರಸೋಕ್ತಿಯಾಡುತ |
ಹರಿಸಿಯಾತನ ಕೋಟಲೆಯನಾ |
ತರದೊಳಿನಿಯಗೆ ಧರ್ಮಮಾರ್ಗದ ಬೋಧೆಯೊರೆಯುತಿರು ||೩||

ನಿಜಸತಿಯಳಾದವಳ ಪತಿಯಂ |
ಭಜಿಸುತವನಂ ತನ್ನೊಲುಮೆಗೆ ಸ |
ಹಜತನದೊಳೇವಶ್ಯಗೈದಿಸಿ ತನ್ನ ಹೃದಯದೊಳು ||
ಅಜನು ತಾ ಸರಸಿಜದೊಳಿಹರಿ |
ನಿಜಮಮತೆಯಿಂ ತೋರಿ ನಿರ್ಜರ |
ಕುಜದವೊಲು ಪತಿಯಿಸ್ವವೆಲ್ಲವ ಸಲ್ಲಿಸುತ್ತಿಹಳು ||೪||

ಗಮನದಲಿ ಹಂಸೆಯನು ಪೋಲುತೆ |
ವಿಮಲಮಾನಸಳಾಗಿ ಪದಪಿನೊ |
ಳೆ ಮೆರೆವನಿಗರ್ವವನು ತೋರುತೆ ಗೃಹದಕಾರ್ಯಗಳ ||
ಸಮಯವರಿತೆಸೆಯುತಲಿ ಕರೆಯದ |
ರಮನೆಗಂ ತಾಪೋಗದಲೆ ಪ್ರ |
ವಿಮಲಸುಗುಣ ಕಿರೀಟವಾಂತುರೆಸಂತ ಮೆರೆಯುವಳು ||೫||

ಪತಿಯಸುಗುಣಾವಳಿಯ ಗಣಿಸುತೆ |
ಸತಿಗೆ ಪತಿಯೇ ದೈವವೆನ್ನುತೆ |
ಹಿತವಚನರುಧೆಯನ್ನು ಪಾನವಗೈದು ಸತ್ಯವನು ||

ಸತತಬಿಡದಂತಿರುತತಿವಿಧೇ |
ಯತೆಯತೋರುತೆ ಸಾಹ್ಯವೀಯುತೆ |
ಚತುರಕಲೆಗಳನರಿದ ಸಾಧ್ವೀಮಣಿಯು ಮಾನ್ಯಳಲೆ ॥೬॥

ಪತಿಯುಳಲವಾರಿಸುತೆ ಸುತರಿಗೆ |
ಹಿತದೆಬುದ್ಧಿಯ ನೊರೆವುತಂ ಗೃಹ |
ಕೃತ್ಯದಮರ್ಮವಾರೊಳುಸಿರದೆ ತನ್ನಿರುವಿಕೆಯನು ॥
ಸುತರುಕಂಡನು ಸರಿಪರಿಯನು |
ಮತಿಸಿ ನಡೆವಂತೆ ನಡೆದೊಡೆ ಮಾ |
ನಿತೆಯಿವಳೆಂಬರ್ದೊಳಿಹಳ್ಳೆ ಸಾಧ್ವಿಪತಿಸುಖದೆ ॥೭॥

ಮಾರ್ದನ್ನೆಯ ಚಾರುನೋಡುವ |
ನೋಡಿಕಾರ್ಯವ ಜವದೆಮಾಡಲು |
ಮೂಡಿದಾಮಮತೆಯದು ಕಾರಣಮಲ್ತೆಮಾನಿನಿಗೆ ॥
ನಾಡಿಗಚ್ಚರಿಯಾಗಿ ಪಾಡುತೆ |
ಬೇಡಿಕೊಂಬಳು ಗೈದಕಪ್ಪಿಗೆ |
ಮಾಡುತಿಹಾಸ್ಯವನು ಶಾಂತದೆನೋಡಿ ನಗುತಿಹಳು ॥೮॥

ಜನುಮಸಾರ್ಥಕಗೊಳಿಸೆನೀ ಸ |
ಜ್ಜನರಸೇವಿಸುತ ವರಸದ್ಭೋ |
ಧನೆಯಹ ಮಧುವನೀಂಟಿ ಮನಕೆಶಾಂತಿಯನು ॥
ಅನುಗೊಳಿಸುತಲಿ ವೇದಗೋಚರ |
ನೆನಿಸಿ ಭಕ್ತರಭೀಷ್ಟ ಸಲ್ಲಿಸು |
ತನುಪಮಪದವನೀವದೇವನ ಕೃಪೆಯನಾರ್ದಿಸರು ॥೯॥

ಅವನಿಂತಪ್ಪಸುದತಿಯ ತಾ |
ನೋವದಲೆ ಸಂಸೃತಿಯನಾನುತ |
ಜೀವಿಸುತ್ತಲೆ ಭಾವಜಾರಿಯ ಪದವವೊಜಿಸಿರೆ ॥
ಭೂವರರಿಗಿಂತಧಿಕಸೌಖ್ಯವ |
ಭಾವದೊಳು ತಾಳುವಗೆ ಜನನಂ |
ಸಾವುಗಳಿಲ್ಲದಾಪದದ ಪತಿಕಾಣ್ಬುದಚ್ಚರಿಯೆ ॥೧೦॥

ಭೂಭಾರಭಂಜನಭಗವಂತನ ಲೀಲಾಭೂಮಿಯೆನಿಸಿದ ಕರ್ಮಕ್ಷೇತ್ರ ಭಾರತವರ್ಷದ ಭಾವೀಭಾಗ್ಯೋದಯವು ದೃಗ್ಗೋಚರವಾಗುತ್ತಲಿದೆ. ಈಗ ಲೀಗ ಭಾರತೀಯ ಅಂತರಾತ್ಮನ ಆಕೆಯು ಅಣತೀತ ಸಫಲತೆಯನ್ನು ಸಾಧಿಸುವ ಶಕ್ತಿಯನ್ನುಳ್ಳುದೆಂದು ಕಾಣುತ್ತಲಿದೆ. "ಕುಲಕಮಲ" ಯರೆನಿಸಿದ ಮಹಿಳಾಮಣಿಗಳ ಮಾನವು ಅಭಿಮಾನವನ್ನಾಡಗೊಳ್ಳುತ್ತಲಿದೆ. ಭಾರತ ಮಾತೆಯು ಮಾತೃಸ್ಥಾನವನ್ನುಳ್ಳ ಮಾನಿನಿಯರ ಮನ್ನಣೆಯನ್ನು ಮನಃ



ಅಖಿಲ ಭಾರತ ರಾಷ್ಟ್ರಮಹಾಸಭೆಯ (ಕಾರ್ಯಕರ) 40 ನೇ ಅಧಿವೇಶನದ ಮಾನ್ಯ ಅಧ್ಯಕ್ಷರು.

ಪೂರ್ವಕ ಆಜ್ಞೆಸುತ್ತಿದ್ದಾಳೆ. ಸುದೈವದಿಂದ, ಆ ಸತ್ಕಾರ್ಯ ಸಂಯೋಗವು ಸಮೀಪಿಸುತ್ತಿದೆ. ಆದ್ದರಿಂದಲೇ ಜಗಜ್ಜನನಿಯ ಜೀವಜ್ಯೋತಿಯು ಜನ ಜಾಗೃತಿಯನ್ನುಂಟುಮಾಡಿರುವುದು. ಜನವೀಜನ್ಮಭೂಮಿಯ ಲವಮಾತ್ರ ಲಜ್ಜೆಯನ್ನಾದರೂ ಉಳಿಸಿದ ಲಜ್ಜಾವತಿ ಲಲನೆಯರ ಚಾರುಚರಿತಾರ್ಥವು ಕೃತಾರ್ಥವೆನಿಸಿತು. ಧನ್ಯ ಸ್ತ್ರೀಜನ್ಮ ! ಧನ್ಯ ಭಾರತ !!

"ಭಾರತ ಕೋಗಿಲೆ" ಶ್ರೀಮತಿ ಸರೋಜಿನಿದೇವಿಯವರ "ಚರಿತ್ರ ಚಿತ್ರಣ" ದ ಆವಶ್ಯಕತೆಯಿಲ್ಲ. ಕಾರಣ, ಆ ಮಹಿಳಾಮಣಿಯ ಸ್ವನಾಮಧನ್ಯತೆಯು ಸಮಸ್ತರಿಗೂ ತಿಳಿದದ್ದೇ ಆಗಿದೆ. ಆದ್ದರಿಂದ ಅವರ "ಗುಣಗಾನ" ವನ್ನು ಮಾಡುವುದೆಂದರೆ ಸೂರ್ಯನಿಗೆ ನೀರಾಜನವನ್ನೆತ್ತಿದಂತೆ ಎಂದರೂ ತಪ್ಪಲ್ಲ. ಭಾರತೀಯ ಭವಿಷ್ಯವನ್ನು ಉಜ್ವಲಗೊಳಿಸುವ ರಾಷ್ಟ್ರಮಹಾಸಭೆಯು ಪೂರ್ವಮಹಿಳೆಗಿಂತಹ ಮಹಾನುಭಾವರ್ದಾದೆಯನ್ನಿತ್ತುವು ಸಹಸ್ರಮುಖ ಕ್ಲಾಸೆ

ನೀಯವೇಸರಿ ! ಆ ಮನ್ನಣೆಯು ಶ್ರೀಮತಿ ಸರೋಜಿನಿಯನರಿಗಲ್ಲ, ಅದು ಭಾರತೀಯ ಭಗಿನೀಮಂಡಳಕ್ಕೆ ! ದೇಶಸೇವೆಯೇ ಈಶಸೇವೆಯೆಂದು ಗ್ರಹಿಸಿ ನಿಜಪ್ರಾಣವನ್ನರ್ಪಿಸಿದ ಘನಮಹಿಮರಿಗೆ ದೊರೆಯುವ ಈ ಪುಣ್ಯಪದವು ಇಂದು ಶ್ರೀಮತಿಯವರಿಂದ ಸಮಸ್ತ ಸ್ತ್ರೀಸಮುದಾಯಕ್ಕೆ ಲಭಿಸುವುದಾಯಿತು. ತತ್ಪ್ರಯುಕ್ತ ಅವರಿಗೆ ನಾವು ಚಿರಕೃತಜ್ಞರಾಗಬೇಕಾಗಿದೆ. ನಾಲಿಗೆಯಿಂದಲ್ಲ ಕಾರ್ಯದಿಂದ. "ತಾಯಿತಂಗಿಯರೇ, ಗೃಹವಿಜ್ಞಾನಕ್ಕೆ" ಗಮನಕೊಡಿರಿ. ನಿಮ್ಮಿಂದಾಗುವ ಕೆಲಸಕ್ಕೆ ನೀವೇಕೆ ಪರಮುಖಾಪೇಕ್ಷಿಗಳಾಗಬೇಕು ? ಅಡಿಗೆ ಮಾಡುವ ಕೆಲಸವು ಹೇಗೆ ನಿಮ್ಮ ಜನ್ಮಸಿದ್ಧ ಅಧಿಕಾರವೋ ಹಾಗೆಯೇ ಭಾಗ್ಯಚಕ್ರ (ಜರಕ) ವೂ ನಿಮ್ಮ ಕೈಯಿಂದ ಸ್ಪರ್ಶಿಸಲ್ಪಡಲಿ" ಎಂದು ಅವರು ಬೃಹತ್ ಭಗಿನೀಮಂಡಳದಲ್ಲಿ ಹೇಳಿರುವರು. ಅದ್ದರಿಂದ ಇವಿಪ್ಪರ ಇಂಗಿತವನ್ನರಿತು ನಾವು "ಗೃಹಿಣೀಗೌರವ" ವನ್ನುಳಿಸಿದಂತಾಯಿತು.

"ಸ್ವಪ್ನಗಳನ್ನು ನೋಡುತ್ತಿರುವ ನಾನು ಇಂದು "ವ್ಯವಹಾರವಿಧಿಗಳಿಯೂ ಹೇಳುತ್ತೇನೆ—ಸೋದರರೇ ಮುಂದುವರಿಯಿರಿ. ಮುಂದುವರಿಯಿರಿ ಜಯವಾದವನ್ನು ಹೊಂದಿರಿ."

"ಸನ್ಮಾನ್ಯರೇ! ನೀವು ನಿಮ್ಮ ನ್ಯಾಯವಾದ ವೀರತ್ವವನ್ನು ಮತ್ತು ಸ್ತ್ರೀಜ್ಞಾತಿಯಾದ ಸಜ್ಜನತನವನ್ನು ಹೀಗೆಂದು ಹೇಳಿ ಪ್ರೌಢ್ಯಪಡಿಸುವುದಿಲ್ಲವೇ ? ನೀವು ನಮ್ಮ ಗೃಹಲಕ್ಷ್ಮಿಯರು, ಉಪಾಸಕಿಯರು, ಸಮ್ಯಂತಃಕರಣದಿಂದ ಶ್ರದ್ಧೆಯ ಸಂಚಾರಮಾಡುವವರು, ನಮ್ಮ ಆಕೆಯ ಆಸ್ಥಿರತೆಯನ್ನು ತೊಲಗಿಸುವವರು, ನಮ್ಮ ಹೃದಯದ ಕೋಮಲ ಕುಸುಮಗಳು. ತಾಯಂದಿರೇ! ತಂಗಿಯರೇ !! ಓ ಪತಿಪರಾಯಣರೇ !!! ನಾವುಗಳು ಸ್ವತಂತ್ರ ಮಾರ್ಗದರ್ಶಿಗಳೆಂದೆ ಹೆಜ್ಜೆಯನಿಟ್ಟಿದ್ದೇವೆ. ನಮಗೆ ನಿಜದೃಷ್ಟಿಯಿದೆ. ಗುಣಗೌರವದ ದೂರದೃಷ್ಟಿಯಿದೆ. ನೀನು ನಿನ್ನ ಪ್ರತಿಭೆಯಿಂದ ನಮ್ಮ ಪ್ರಕಾಶವನ್ನು ಪ್ರಜ್ವಲಿತಗೊಳಿಸು. ಮತ್ತು ಆ ದೂರವರ್ತಿ ಧ್ಯೇಯವನ್ನು ಸಾಧಿಸಲು ನಮ್ಮ ಉನ್ನತಿಯ ದೇವೋತ್ತಮ ವೇಶದೊಡನೆ ಪೂರ್ಣಾಕೃತಿಯ ಪುರಸ್ಕಾರವಾಗಿ ಸೇರಿಸಿ ಬಿಡು."

"ಬೇಕಾದರೆ ನೀನು ನನ್ನ ಜೀವನದ ಸಮಸ್ತ ಆಕೆಗಳನ್ನೂ ಅಂತ್ಯಗೊಳಿಸು ಅಥವಾ ನನ್ನ ಪ್ರೇಮದೊಡನೆ ವಿಶ್ವಾಸಘಾತನವನ್ನುಮಾಡಿ ಸಕಲ ಸುಂದರ ಸ್ವಪ್ನಗಳನ್ನೂ ನಷ್ಟಮಾಡು ! ಆದರೂ ನಾನು ನಿಜದುಃಖವನ್ನು ಸಾರ್ವಜನಿಕ ಸುಖಸಮುದ್ಭವದಲ್ಲಿ ಶಾಂತಗೊಳಿಸುವೆನು. ದೈವ (fate) ವೇ ! ನೀನು ನನ್ನ ಅಸ್ಥೂಲ, ಅಚಲ, ಅಜೇಯ ಆತ್ಮವನ್ನು ಸ್ವಾಧೀನಪಡಿಸುವ ವ್ಯರ್ಥಾಯತ್ನವನ್ನು ಮಾಡುತ್ತೀಯೆ ! "

ಓಂ

ಸರಸ್ವತಿ

ಸಂಪುಟ ೫ } ಕ್ರೋಧನ ವರ್ಷ · ಮಾರ್ಗಶಿರ ಮಾಸ { ಸಂಚಿಕೆ ೮

ನಿವೇದನ

ಮಾನ್ಯ ಚಂದಾದಾರರಲ್ಲಿ ವಿನಂತಿ:—

ಈಗ ಎರಡು ತಿಂಗಳುಗಳಿಂದಲೂ ಪ್ರವಾಸದಲ್ಲಿದ್ದುದರಿಂದ ಎರಡು ಮೂರು ಸಂಚಿಕೆಗಳು ಹೊರಡಲು ತಡವಾದುವು. ಇದಕ್ಕಾಗಿ ಸರಸ್ವತಿಯು ತಮ್ಮಲ್ಲಿ ಕ್ಷಮೆ ಬೇಡುವಳು. ಇನ್ನು ನಾಲ್ಕು ಸಂಚಿಕೆಗಳಾದರೆ ಸರಸ್ವತಿಗೆ ಐದು ವರ್ಷಗಳು ತುಂಬುವವು. 6 ನೆಯ ವರ್ಷದಿಂದ ಕೆಲವು ಬದಲಾವಣೆಗಳನ್ನು ಮಾಡಬೇಕೆಂದಿದೆ. ಈಗ ನಾಲ್ಕು ಫಾರಂಗಳು ಅಂದರೆ 32 ಪುಟಗಳುಮಾತ್ರ ಕೊಡುತ್ತಲಿದೆ. 6ನೆಯ ಸಂಪುಟದಿಂದ 5 ಫಾರಂಗಳು ಅಂದರೆ 4 ೦ ಪುಟಗಳು ಕೊಡಬೇಕೆಂದು ನಿಶ್ಚಯಿಸಿದೆ. ಅಲ್ಲದೆ ಸಾಧ್ಯವಾದಷ್ಟು ಚಿತ್ರಪಠಗಳನ್ನೂ, ಸ್ತ್ರೀಯರಿಗೆ ಮುಖ್ಯವಾದ "ಗೃಹವಿಜ್ಞಾನ" "ಸುಲಭಚಿಕಿತ್ಸೆ" "ಮಾತೃವಿಜ್ಞಾನ" "ಸ್ಫೂರ್ತಿ ಸ್ಥೈರ್ಯ ಧೈರ್ಯ" ವನ್ನುಹೆಚ್ಚಿಸುವ ಕಾದಂಬರಿಗಳನ್ನೂ "ಸುಲತಾ" ಎನ್ನುವ ನಾವಲೂ "ಷಾಜಹಾನ್" ಎನ್ನುವ ವಂಗಕವಿ ದ್ವಿಜೇಂದ್ರಲಾಲ್ ರಾಯರವರಿಂದ ರಚಿತವಾದ ವಂಗನಾಟಕದ ಭಾಷಾಂತರವನ್ನೂಮತ್ತು ಅನೇಕ ಮುಖ್ಯ ವಿಷಯಗಳನ್ನೂ ಪ್ರಕಟಿಸುವೆವು. ಚಂದಾ ಎಂದಿನಂತೆ ಮೂರು ರೂಪಾಯಿಗಳು ಮಾತ್ರವೇ. ವಿದ್ಯಾರ್ಥಿಗಳಿಗೂ, ವಾಚನಾಲಯಗಳಿಗೂ, ಬಡವರಾದ ಸ್ತ್ರೀಯರಿಗೂ ಎರಡು ರೂಪಾಯಿಗಳ ಚಂದಾಕ್ಕೆ ಕೊಡಲು ನಿರ್ಧರಿಸಿರುವೆವು. ಸ್ತ್ರೀಯರು ಈ ಸರಸ್ವತಿಗೆ ಬೇಕಾದ ಲೇಖನಗಳನ್ನು ಬರೆದುಕಳುಹಿಸಿದಲ್ಲಿ ಅವುಗಳನ್ನು ಅತ್ಯಾನಂದದಿಂದ ಪ್ರಕಟಿಸುವೆವು. ಇದುವರೆವಿಗೂ ಆದರಿಸಿದ ಸೋದರ ಸೋದರಿಯರು ಮುಂದೆಯೂ ಸರಸ್ವತಿಯನ್ನಾದರಿಸಬೇಕೆಂದು ಪ್ರಾರ್ಥನೆ.

ರಾಷ್ಟ್ರೀಯ ಶಿಕ್ಷಣಸ್ವರೂಪವು.

(ಹಿಂದಿನ ಸಂಚಿಕೆಯಿಂದ ಮುಂದರಿಸಿದ್ದು)

ಇಲ್ಲಿಯವರೆಗೆ ರಾಷ್ಟ್ರೀಯ ಆದರ್ಶಗಳ ಪರಿಪೋಷಕ ಶಿಕ್ಷಣವು ಸಂಕ್ಷೇಪವಿಚಾರ ಮಾಡಿದ್ದಾಯಿತು. ಈಗ ರಾಷ್ಟ್ರೀಯ ಆವಶ್ಯಕತೆಗಳ (National wants) ವಿಚಾರ ಮಾಡೋಣ: ಎಲ್ಲದ್ದಕ್ಕಿಂತಲೂ ಪ್ರಾಥಮಿಕ ಶಿಕ್ಷಣ (Primary Education)ವು ಅತ್ಯಾವಶ್ಯಕವಾಗಿರುವುದು. ಹಿಂದುಸ್ಥಾನದಲ್ಲಿ ಓದುಬರಹ ತಿಳಿದವರ ಸಂಖ್ಯೆಯು ತೀರ ಕಡಿಮೆಯೆನ್ನುವುದು ಎಲ್ಲರೂ ಅರಿತ ವಿಷಯವಾಗಿರುವುದು. ಓದುಬರಹ ಕಲಿಯುವುದು ಆತ್ಮಿಕ ಮತ್ತು ಭೌತಿಕ ಉನ್ನತಿಯ ಮುಖ್ಯ ಸಾಧನವು. ಕೇವಲ ಈ ದೃಷ್ಟಿಯಿಂದಲಾದರೂ ಸರ್ವರೂ ಓದುಬರಹ ಕಲಿಯುವುದು ಅತ್ಯಾವಶ್ಯಕವು. ಪ್ರತಿಯೊಬ್ಬ ಮನುಷ್ಯನಿಗೂ ತನ್ನ ಕೆಲಸಕಾರ್ಯಗಳು ಪೂರೈಸಿದ ನಂತರ ಪ್ರತಿನಿತ್ಯವೂ ಸ್ವಲ್ಪಕಾಲ ವಿರಾಮ ದೊರೆಯುವುದು. ಈಕಾಲದ ಸತ್ ಅಥವಾ ದುರ್ವಿನಿಯೋಗವು ಶಿಕ್ಷಣವನ್ನವಲಂಬಿಸಿರುವುದು. ಅನೇಕರು ಈಕಡೆ ದೃಷ್ಟಿಯಿಡುವುದಿಲ್ಲ. ಆದರೆ ಯಾರು ಶಿಕ್ಷಣದ ಮುಖ್ಯ ತತ್ವವನ್ನು ತಿಳಿದಿರುವರೋ ಅವರು ಇದನ್ನು ಮುಖ್ಯವಾಗಿ ಎಂದೂ ಮರೆಯಲಾರರು. ಮುಖ್ಯಮುಖ್ಯವಾದ ಪ್ರಾಂತಿಕ ಸರ್ಕಾರದವರು ಪ್ರಾಥಮಿಕಶಿಕ್ಷಣದ ಕಡೆ ಈಗ ಹೆಚ್ಚು ಲಕ್ಷ್ಯ ಕೊಡುತ್ತಿರುವದು ಬಹಳ ಆನಂದಕರವಾದ ವಿಷಯವು. ಆದರೆ ಅವರು ಈ ಸಂಬಂಧದಲ್ಲಿ ಸ್ಥಾನಿಕ ಸ್ವರಾಜ್ಯದ ಅಧಿಕಾರಗಳನ್ನು ಹೆಚ್ಚಿಸಲಿಲ್ಲ. ಈ ವಿಷಯದಲ್ಲಿ ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷ ಸಹಾಯವನ್ನು ಕೊಡಲು ಅನೇಕರು ವಚನಕೊಟ್ಟಿರುವುದರಿಂದ ನಾವು ಈ ವಿಚಾರದಲ್ಲಿ ಸುಮ್ಮನಿರದೆ ಪ್ರಪ್ರದಲ್ಲಿಯೇ ಶಿಕ್ಷೆಯ ಶಿಕ್ಷಣದ ಪ್ರಕಾಶವನ್ನು ಹಿಂದುಸ್ಥಾನದ ಮೂಲೆಮೂಲೆಗೂ ತಗೆದುಕೊಂಡು ಹೋಗಬೇಕು. ಹಿಂದುಸ್ಥಾನದ ನಿಜವಾದ ಉನ್ನತಿಯು ಇದರಲ್ಲಿಯೇ ಇರುವುದು. ತಮ್ಮ ದೇಶದ ಸಮಸ್ಯೆಗಳನ್ನು ತಿಳಿದುಕೊಳ್ಳುವುದು ಮತ್ತು ಅದರ ಮೀಮಾಂಸೆ

ಯಲ್ಲಿ ಭಾಗತೆಗೆದುಕೊಳ್ಳುವುದೂ ಸ್ವಲ್ಪ ಮಹತ್ವದಮಾತಲ್ಲ. ಪ್ರಾಥಮಿಕ ಶಿಕ್ಷೆಯು ಅವಶ್ಯಕವೆಂದು ಈಗ ಹೇಳಿಯಾಯಿತಷ್ಟೆ. ಆದರೆ ಅದನ್ನು ರಾಷ್ಟ್ರದ ಇತರ ಅವಶ್ಯಕತೆಗಳಿಂದ ವಿಚ್ಛಿನ್ನಮಾಡಕೂಡದು. ಸಾಮಾನ್ಯ ಶಿಕ್ಷಣ ಮತ್ತು ಔದ್ಯೋಗಿಕ ಶಿಕ್ಷಣಗಳ ಸಂಯೋಗವಿರುವುದು ಸಾತ್ವಿಕದೃಷ್ಟಿಯಿಂದ ಅತ್ಯಾವಶ್ಯಕವೇ ಆಗಿರುವುದು. ಔದ್ಯೋಗಿಕ ಶಿಕ್ಷೆಯು ವಿಸಹ ಆಗುವ ಪರಿಣಾಮವೇನೆಂದರೆ, ಪ್ರಕೃತ ಎಲ್ಲಾ ಕಡೆಗಳಲ್ಲಿಯೂ ಕಾಣುತ್ತಿರುವದು. ಹೇಳುವುದು ಹೆಚ್ಚು,ಮಾಡುವುದು ಸ್ವಲ್ಪ. ಹೇಳುವುದು ಬಂದೊಂದುವೇಳೆ ಅವಶ್ಯಕವಾದರೂ ಈ ಕಾರ್ಯವು ಜನಸಾಮಾನ್ಯರದಲ್ಲ. ವಿಶೇಷ ಶಿಕ್ಷಣ ಹೊಂದಿ ಅನುಭವ ಹೊಂದಿರುವವರು ಮಾತ್ರ ಈ ಕಾರ್ಯಕ್ಕರ್ಹರು. ಬರೀ ಉಪದೇಶಕ್ಕರಿಂದ ಯಾವ ರಾಷ್ಟ್ರದ ಉನ್ನತಿಯೂ ಆಗುವುದಿಲ್ಲ. ಅದಕ್ಕಾಗಿ ಕಾರ್ಯತತ್ಪರರೂ ಇರಬೇಕು. ಆದುದರಿಂದ ಸಾಮಾನ್ಯ ಶಿಕ್ಷಣದ ಜೊತೆಯಲ್ಲಿಯೇ ಕ್ರಮಾನುಸಾರವಾಗಿಯೂ ಮತ್ತು ದೇಶದ ಅವಶ್ಯಾನುಸಾರವಾಗಿಯೂ ಔದ್ಯೋಗಿಕಶಿಕ್ಷೆಯು ಕೊಡಬೇಕಾಗುವುದು.

ಹಿಂದದೇಶದ ಪ್ರಧಾನ ಉದ್ಯೋಗವು ಕೃಷಿಯಾಗಿದೆ. ಇದು ಎಂದೆಂದಿಗೂ ಸ್ಥಿರವಾಗಿ ನಿಲ್ಲತಕ್ಕ ಉದ್ಯೋಗವಾದ್ದರಿಂದ ಗ್ರಾಮಪಾಠಶಾಲೆಗಳಲ್ಲಿ ಕೃಷಿಯು ಪ್ರತ್ಯಕ್ಷಶಿಕ್ಷೆಯು ಸಹಾ ಅತ್ಯಾವಶ್ಯಕವು. ಎಲ್ಲಾ ಗ್ರಾಮಗಳಲ್ಲಿಯೂ ಪ್ರಯೋಗಾತ್ಮಕಶಿಕ್ಷೆಯು ಕೊಡುವುದು ಸಾಧ್ಯವಿಲ್ಲ. ಇದಕ್ಕೆ ಅನೇಕ ಸಲಕರಣೆಗಳು ಬೇಕಾಗಿರುವುದು. ಕೆಲವು ಗ್ರಾಮಗಳಲ್ಲಿ ಬೇರೆ ಉದ್ಯೋಗಗಳ ಶಿಕ್ಷಣವನ್ನು ಸಹ ಕೊಡಬಹುದು. ಎಲ್ಲಿ ಯಾವ ಉದ್ಯೋಗವು ಪ್ರಚಲಿತವಾಗಿರುವುದೋ ಅಥವಾ ಆಗಬಹುದೋ ಅದನ್ನು ಪ್ರಚಾರದಲ್ಲಿ ತರುವುದು ಅತ್ಯಾವಶ್ಯಕವು. ಪಟ್ಟಣಗಳಲ್ಲಿಯೂಕೂಡ ಬಂದಿಲ್ಲದಿದ್ದರೆ ಮತ್ತೊಂದು ಉದ್ಯೋಗವು ದೊರತೇ ದೊರೆಯುವುದು. ದೊಡ್ಡದೊಡ್ಡಕಾರ್ಖಾನೆ ಮತ್ತು ಗಿರಣಿಗಳಿಂದ ಮನೆಯ ಕೈಕಸುಬುಗಳು ನಶಿಸಿಹೋಗುತ್ತಿರುವುದು. ಇವುಗಳ ಅಭಿವೃದ್ಧಿಯು ರಾಷ್ಟ್ರದ ಉನ್ನತಿಗೆ ಮೂಲಕಾರಣವಾಗಿರುವುದು. ಯದ್ಯಪಿ ಈ ಮನೆಯ ಕೈಕಸಬುಗಳು ಆಧುನಿಕವಿಜ್ಞಾನದ ಆಧಾರದಮೇಲೆ ಸ್ಥಾಪಿಸಲ್ಪಟ್ಟರೆ ಸಹ್ಯ ಆರ್ಥಿಕಪರಾಧೀನತೆಯು ಬಹುಮಟ್ಟಿಗೆ ಕಡಮೆ ಆಗು

ವುದು. ಜನಗಳ ನಿಕೃಷ್ಟಾವಸ್ಥೆಯು ದೂರವಾಗುವುದು. ಇದಲ್ಲದೆ ಪಟ್ಟಣಗಳಲ್ಲಿ ಹೆಚ್ಚು ಜನಸಮೂಹವು ಬಂದಾಗಿ ಸೇರುವುದರಿಂದ ಉಂಟಾಗುವ ರೋಗಾದಿಗಳ ಅನರ್ಥಗಳು ಸಹಾ ಕಡಮೆಯಾಗುವವು. ನಾವು ಕೇಳಿರುವಂತೆ ಪಾಶ್ಚಾತ್ಯದೇಶಗಳಲ್ಲಿ ಈ ಮನೆಯ ಕೈ ಕಸಬುಗಳು ತುಂಬಾ ಅಭಿವೃದ್ಧಿಹೊಂದುತ್ತಿರುವುದು ನೂತ್ರವಲ್ಲದೆ ಕೆಲಸಮಾಡತಕ್ಕ ವರಿಗೂ, ಅವರಿಂದ ದೇಶಕ್ಕೂ ಬಹಳ ಲಾಭವುಂಟಾಗಿ ದೇಶವು ಉನ್ನತ ಸ್ಥಿತಿಗೆ ಬರುವುದು. ಅದುದರಿಂದ ಗ್ರಾಮಶಿಕ್ಷಣ (Rural Education) ಮತ್ತು ಮನೆಯ ಕೈಕಸಬು(Home Industries)ಇವುಗಳನ್ನು ಮುಖ್ಯವಾಗಿ ವೃದ್ಧಿಗೊಳಿಸಬೇಕು. ಈ ಶಿಕ್ಷಣಗಳನ್ನು ಸಾಧ್ಯವಾದಮಟ್ಟಿಗೂ ಉಚಿತವಾಗಿಯೇ ಕೊಡಬೇಕು.

ಸಾಮಾನ್ಯಶಿಕ್ಷೆಯು ಔದ್ಯೋಗಿಕಶಿಕ್ಷೆಯ ಜೊತೆಯಲ್ಲಿಯೇ 7—8 ವರ್ಷಗಳು ಕೊಟ್ಟನಂತರ ಬೇಕಾದರೆ ಬೇರೆ ಮಾಡಬಹುದು. ಪ್ರತಿಯೊಂದು ರಾಷ್ಟ್ರದಲ್ಲಿಯೂ ಸಾಮಾನ್ಯಜನರ ಸಂಖ್ಯೆಯು ಹೆಚ್ಚಾಗಿಯೇ ಇರುವುದರಿಂದ ಅವರಿಗಾಗಿ ಕೆಲವುದಿನಗಳ ಮಟ್ಟಿಗೆ ಮೇಲ್ಕಂಡ ಎರಡುವಿಧವಾದ ಶಿಕ್ಷಣಗಳನ್ನೂ ಒಟ್ಟಿಗೇ ಕೊಡಬಹುದು. ನಾವು ಅವರಿಗೆ ಎಲ್ಲ ವಿಧದಲ್ಲಿಯೂ ಉಚ್ಚಶಿಕ್ಷಣವನ್ನು ಕೊಟ್ಟೆವಾದರೆ ಉನ್ನತಿ ಅವನತಿಯು ಅವರನ್ನೇ ಸೇರಿರುವುದು. ರಾಷ್ಟ್ರದ ಮಹತ್ವವು ರಾಷ್ಟ್ರ ಜನರನ್ನವಲಂಬಿಸಿರುವುದರಿಂದ ಪ್ರತಿಯೊಬ್ಬನೂ ತಾನು ಶಿಕ್ಷೆಹೊಂದುವಾಗ ತನ್ನರಾಷ್ಟ್ರಭಿವೃದ್ಧಿಯನ್ನೇ ಮುಖ್ಯಗುರಿಯಾಗಿಟ್ಟುಕೊಳ್ಳಬೇಕು. ಯಾರ ಬುದ್ಧಿಯು ಯಾವ ವಿದ್ಯೆಯಲ್ಲಿ ಪ್ರವೇಶಿಸುವದೋ ಅದನ್ನಭ್ಯಾಸ ಮಾಡಿದರೆ ಅವರ ಬುದ್ಧಿಯು ವಿಕಾಸಹೊಂದುವುದರಮೂಲಕ ರಾಷ್ಟ್ರಾಭಿವೃದ್ಧಿಯಾಗುವುದು.

ಪ್ರಕೃತಶಿಕ್ಷಣದ ಪ್ರಭಾವದಿಂದ ಶಿಕ್ಷಿತ ಮತ್ತು ಅಶಿಕ್ಷಿತ ಸಮಾಜದಲ್ಲೊಂದು ದೊಡ್ಡ ತರ್ಕವೆದ್ದಿರುವುದು. ಇದನ್ನು ಪ್ರತಿಮನೆಗಳಲ್ಲಿಯೂ ನಾವು ನೋಡಬಹುದು. ನೂತನ ವಿದ್ಯಾಭ್ಯಾಸಕ್ರಮವನ್ನು ಅರಿಯದ ತಂದೆಯು ಹೇಳುವುದನ್ನು ಕೇಳಲಿಷ್ಟವಿಲ್ಲದ ಮಗನಿಗೂ ತಂದೆಗೂ ಮನಸ್ತಾಪ ಉಂಟಾಗುವುದು. ವಿದ್ಯಾಭ್ಯಾಸದ ವಿಷಯದಲ್ಲಿ ಈ ಕಾಲಕ್ಕೆ ತಕ್ಕಂತೆ ಸಲಹೆಯನ್ನು ಕೊಡಲು ತಂದೆಯು ಅಸಮರ್ಥನಾಗಿರುವುದರಿಂದ

ಮುಕ್ಕಳಿಗೆ ತಂದೆಯಲ್ಲಿ ಅನಾದರಣೆಯುಂಟಾಗುವುದಕ್ಕೆ ಕಾರಣವಾಗು ವುದು. ಯಾರಿಗೆ ಎಂತಹ ಶಿಕ್ಷಣಬೇಕೋ ಅಂತಹ ಶಿಕ್ಷಣವು ದೊರ ಕದೆ, ಬಾಲಕರಿಗೆ ಪ್ರಯೋಜನವೂ ಆಗದೆ, ಬಹಳ ಶ್ರಮಪಟ್ಟನಂತರ ಕೊನೆಗೆ ವಿಡಲ್ ಸ್ಕೂಲಿನವರೆಗೆ ಮಾತ್ರ ದೇಶಭಾಷೆಯಲ್ಲಿ ಪಾಠವನ್ನು ಕಲಿಸಲ್ಪಡುವುದು. ಆದರೆ ಬೇಕಾದಷ್ಟು ಜ್ಞಾನವು ಇಷ್ಟುಮಾತ್ರದಿಂದಲೇ ದೊರೆಯುವುದೆಂದು ಹೇಳಲಾಗುವದಿಲ್ಲ. ಮಿಡಲ್ ಸ್ಕೂಲಾದನಂತರ ಹೈಸ್ಕೂಲಿನ ತರಗತಿಗಳ ಪಾಠಗಳನ್ನು ಪರಭಾಷೆಯಲ್ಲಿ ಶಿಕ್ಷಣ ಕೊಡುವರು. ಇದರಿಂದಾಗತಕ್ಕ ಪರಿಣಾಮಗಳು ಬಹಳವಿದ್ದಾಗ್ಯೂ ನಮ್ಮ ವಿಷಯಕ್ಕೆ ಸಂಬಂಧಪಡುವಷ್ಟು ಪರಿಣಾಮಗಳನ್ನು ಮಾತ್ರ ನಾವು ಯೋಚಿಸುವ.

ಆಂಗ್ಲಭಾಷೆಯ ಮೂಲಕ ಪ್ರಾಪ್ತವಾದ ಜ್ಞಾನವು ಬಾಲಕನ ಮನೆಯ ಮತ್ತು ಸಮಾಜದವರಿಗೆ ಬರಲಾರದು. ಮಾತೃಭಾಷೆಯ ಜ್ಞಾನವು ಪರಿಪೂರ್ಣವಾಗಿರುವುದಿಲ್ಲ. ಸಮಯವೊದಗಿದಾಗ ಬಾಲ ಕನು ತನ್ನಇಂಗಿತವನ್ನು ಮಾತೃಭಾಷೆಯಮೂಲಕ ಇತರರಿಗೆ ತಿಳಿಸಲೂ ಕೂಡ ಅಶಕ್ತನಾಗುವನು. ಹೀಗಿರುವಲ್ಲಿ ಇತರರಿಗೆ ಉಪದೇಶ ಮಾಡುವುದು ಸಾಧ್ಯವೇ ? ಈ ಕಾರಣದಿಂದ ದೇಶಭಾಷೆಯಮೂಲಕ ಶಿಕ್ಷಣಕೊಡದಿದ್ದಲ್ಲಿ ಹಿಂದೂದೇಶಭಾಷೆಗಳು ಮತ್ತು ಅವುಗಳ ಸಾಹಿ ತ್ಯದ ಉನ್ನತಿಯು ನಿಂತುಹೋಗುವದಲ್ಲದೆ ಅವುಗಳ ಪ್ರಗತಿಯೂಕೂಡ ಮಂದವಾಗುವುದು.

ಸ್ತ್ರೀಯರ ರೂಪ

ಈ ಬಾಹ್ಯಸೌಂದರ್ಯದ ಉತ್ಕಟೇಚ್ಛೆಯಲ್ಲಿ ತಲೆ ಮೇಲಾಗಿ ಬಿದ್ದಿದ್ದ ಯಕ್ಷಸ ದೃಷ್ಟಿಯು ಬಹುಮಟ್ಟಿಗೆ ಏಕೃತವಾಗಿ ಹೋಗಿತ್ತು. ಅವನು ಜಗತ್ಸೃಷ್ಟಿಯಲ್ಲೆಲ್ಲಾ ತನ್ನಂತಹ ಕಾಮಾಂಧ ಸ್ತ್ರೀಪುರುಷ ದ್ವಂದ್ವಗಳನ್ನುಕಾಣಹತ್ತಿದನು. ಮೇಘವು ನದಿಗಳನ್ನು ಹಾಸುಹೋಗು ತ್ತಾ ನೀರನ್ನು ಹೀರುವಳು. ಅದುದರಿಂದ ಅವನ ಸಂದೇಶದಲ್ಲಿ ಮೇಘ

ತವಾಗಿರುವ ನದಿಗಳಿಲ್ಲವೂ ಮೇಘದ ನಾಯಕಿಯರೆ. ಪ್ರಣಯಕುಪಿತಳಾಗಿ, ಹುಬ್ಬುಗಳನ್ನು ಗಂಟುಹಾಕಿಕೊಂಡಿರುವ "ವೇತ್ರವತಿ" ಯನ್ನು ಅವನು ಒಲಾತ್ಕಾರದಿಂದ ಚುಂಬಿಸಿ ಅಧರಪಾನವಮಾಡುವನು. "ನಿರ್ವಿಂಧ್ಯೆ" ಎಂಬ ಚತುರನಾಯಕಿಯು ಅವನನ್ನು ಒಲಿಸುವ ಸಲವಾಗಿ ಎಷ್ಟೋ ಪ್ರಯತ್ನಗಳನ್ನು ಹೂಡುವಳು. ವಿಪ್ರಲಬ್ಧಳಾದ ಸಿಂಧುವು ತನ್ನ ಉತ್ಕಟ ವಿರಹಾಗ್ನಿಯಿಂದ ಬಳಲಿ ಕೃಶಳಾಗಿ ತನ್ನ ಸೌಭಾಗ್ಯವನ್ನು ಪ್ರಕಟಿಸುತ್ತಿರುವಳು; ಇತ್ಯಾದಿ

ಭಗವಾನ್ ಜೇಮೂತನ ಈ ವಿಜೃಂಭಿತ ಮದನಲೀಲೆಯು "ಗಂಭೀರೆ" ಎಂಬ ನಾಯಕಿಯಲ್ಲಿ ತನ್ನ ಪರಾಕಾಷ್ಠತೆಯನ್ನು ಹೊಂದುವುದು. ಆಕೆಯು ಪ್ರಿಯಸಂಗಮದಲ್ಲಿ ಅಷ್ಟೊಂದು ಕಾತರಳು. ಯಕ್ಷನು ಅವಳ ವಿಷಯದಲ್ಲಿ ಮೇಘಕ್ಕೆ ಕೊಡುವ ಆದೇಶವನ್ನು ಕೇಳಿ:—

"ತಸ್ಯಾಸ್ತದಸ್ಯಾ ಕುಮುದವಿಶದಾ ನ್ಯರ್ಹಸಿತ್ವಂ ನಧೈರ್ಯಾನ್।
ಮೋಘೀಕರ್ತುಂ ಚಟುಲಶಫರೋದ್ವರ್ತನಪ್ರೇಕ್ಷಿತಾನಿ॥
ಬಿರಿದಕನ್ನೈದಿಲ್ಗಳಂದ ಸುವಿಶದವಾಗಿ।
ಮೆರೆಯುವಾಕೆಯಕಂಣಸುಳಿವಿಂಗಳಂ ಮೂಡು।
ವರೆನೋಟಮಂ ವ್ಯರ್ಥವಾಗಿಸಿ ಕಳೆವಧೈರ್ಯವಂತಳಿಯದಿಹುದುನೀನು॥

ಇಂತಹ ಪ್ರಲೋಭನವನ್ನು ಸಹಿಸಲು ಸಾಧ್ಯವೆ? ಘೃತಾಹೃತಿ ನ್ಯಾಯದಂತೆ ಜೇಮೂತನು ಒಮ್ಮೆಗೆ ಲಾಲಸಾಗ್ನಿಯಲ್ಲಿ ಜಾರಿಬಿದ್ದನು.

ಯಕ್ಷನ ಈ ವಿಧವಾದ ರೂಪ ತೃಷ್ಣೆ ಹಾಗೂ ವಿಷಯ ವ್ಯಾಮೋಹಕ್ಕೆ ಶಾಂತಿಯು ಬರುವದಾದರೋ ಹೇಗೆ? ಅವಧಿಯು ಮುಗಿಯುವ ಮೊದಲು ಪ್ರೇಯಸಿಯನ್ನು ನೋಡಲು ಸಾಧ್ಯವಿಲ್ಲ. ಮೇಘವು ತನ್ನ ಸಂದೇಶವನ್ನು ತೆಗೆದೊಯ್ಯುವ ಮಾತು ಹಾಗಿರಲಿ.

"ಮಾಭೂದೇವಂ ಕ್ಷಣಮಪಿಚತೇ ವಿದ್ಯುತಾವಿಪ್ರಯೋಗ" ಎಂಬ ತನ್ನ ಅಂತ್ಯ ಆಶಿಷದಂತೆ ವಿದ್ಯುದ್ವಿಯೋಗವನ್ನು ಹೊಂದದೆ, ಸುಳಿ, ಗಾಳಿ, ಗುಡುಗು, ಮಿಂಚುಗಳದ್ವಾರಾ ತನ್ನ ಕೃಪೆಯನ್ನು ತೋರಹತ್ತಿದನು. ಅಂದಿನ ಆ ಪ್ರಳಯೋಪಮ, ಅತಿವೃಷ್ಟಿಯ ಭಯಾನಕ ಕಾಳ

ರಾತ್ರಿಯಲ್ಲಿ ಉನ್ಮತ್ತಪ್ರಾಯನಾದ ಜ್ಞಾನಶೂನ್ಯನಾದ ಆ ಯುಷ್ಮಜಗತಿಯೇನಾಯಿತೆಂಬುದನ್ನು ಹೇಳಬಲ್ಲವರಾರು ?

ಇದೇ ರೂಪೋನ್ಮಾದದ ಪೂರ್ಣಾಹುತಿಯು:—ಯಾವ ಹೆಂಗಸೂ ತನ್ನ ಪತಿಯನ್ನು ಇಂತಹ ರೂಪೋನ್ಮಾದಕದ ಕರಾಳಾಗ್ನಿಯಲ್ಲಿ ಕಯ್ಯಾರೆ ತಳ್ಳಲಾರಳು. ಅದೆಂತಹ ಸರ್ವಭಕ್ಷಕ ಕಾಳರಾಕ್ಷಸನೆಂಬುದನ್ನು ಅವರು ಚನ್ನಾಗಿ ಬಲ್ಲರು. ಅದು ಕೇವಲ ತನ್ನ ಉಪಾಸಕರನ್ನಲ್ಲ, ಸ್ತ್ರೀಯರನ್ನೂ ಹಾಗೂ ಅವರ ನಿಕ್ಷಿಪ್ತೈಶ್ವರ್ಯವೂ ಕಾರ್ಯಕ್ಷೇತ್ರವೂ ಆದ ಗೃಹಜೀವನವನ್ನೂ ಬೆಂಕ್ಕಿಗೆ ಭಸ್ಮೀಭೂತವಾಗಿ ಮಾಡುವುದೆಂಬುದನ್ನು ಅವರು ಬಲ್ಲರು. ಸತಿಪತಿಗಳ ಪ್ರೇಮವು ಚಿರಸ್ಥಾಯಿಯಾಗಿಯೂ, ಸುಖಪ್ರದವಾಗಿಯೂ, ಧರ್ಮಸಂಗತವಾಗಿಯೂ ಇರಬೇಕಾದರೆ ಅವರ ಮಾನಸಿಕಸೌಂದರ್ಯದ ಅವಲಂಬನದಿಂದಲೇ ಹುಟ್ಟಿರಬೇಕು. ಕಾಳಿದಾಸನ ಕುಮಾರಸಂಭವ, ಹಾಗೂ ಶಾಕುಂತಲದಲ್ಲಿ ಇದು ಬಹುಚನ್ನಾಗಿ ವರ್ಣಿತವಾಗಿದೆ ಪಾರ್ವತಿಯು ತನ್ನ ಅಚ್ಚಳಿಯದ ರೂಪರಾಶಿಯಿಂದ ಮಹಾದೇವನನ್ನು ಒಲಿಸಲು ಹೊರಟಳು. ಸಕಲ ದೇವತೆಗಳೂ ಅಕೆಯ ಪ್ರಯತ್ನದಲ್ಲಿ ಜಯಕಾಂಕ್ಷಿಗಳು. ವಸಂತನು ತನ್ನ ಚಿತ್ತಹಾರಕವಾದ ಪರಿಕರಗಳೊಂದಿಗೆ ಸಿದ್ಧನಾಗಿರುವನು. ನವವಿಕಸಿತ ಕುಸುಮಗಳ ಮನೋಜ್ಞವಾದ ಪರಿಮಳದಿಂದ ಮತ್ತನಾಗಿ ಮೆಲ್ಲನೆ ಹಾರಾಡುತ್ತಿರುವ ತುಂಗಾಳಿ ; ವಂಜುಳ ಕುಹೋಲಕಂಠದಿಂದ ಸ್ಥಾಣುವಿನ ತಪೋವನವನ್ನು ಪುಳಕಿತವನ್ನಾಗಿ ಮಾಡುತ್ತಿರುವ ಕೋಗಿಲೆ. ಪಾರ್ಶ್ವದಲ್ಲಿ ಬಿಲ್ಲನ್ನು ಹೆದೆಗೇರಿಸಿ ದಾಸಾನುದಾಸನಂತೆ ರತಿಪತಿಯು ನಿಂತಿರುವನು, ಆದರೂ ಅಕೆಯ ರೂಪವು ವ್ಯರ್ಥ. ಕೋಣನ ಮುಂದೆ ಕಿನ್ನರಿಯಂತೆ ಆಕೆಯಕಡೆ ದೃಷ್ಟಿಹಾಕುವ ಮಾತುಹಾಗಿರಲಿ, ತನ್ನ ಮನೋವಿಕಲ್ಪಕ್ಕೆ ಕಾರಣನಾದ ಮನ್ಮಥನನ್ನು ಬೆಂಕ್ಕಿಗೆ ಉರಿಗಣ್ಣಿನಿಂದ ದಹಿಸಿಬಿಟ್ಟನು. ರೂಪ ಸನ್ಯಾಸ-ಪರ್ಯಾಯದಿಂದ ಕಾಮ ಸನ್ಯಾಸಕ್ಕೆ ಬದಲಾಗಿ ಕಾಮದಹನ. ಭಯಚಕಿತನಾದ ಹಿಮವಂತನು ಲಜ್ಜೆಯಿಂದಲೂ ಭಯದಿಂದಲೂ ಭೀತಳಾದ ಪಾರ್ವತಿಯನ್ನು ಎತ್ತಿಕೊಂಡು ತೀವ್ರಗತಿಯಿಂದ ಪಲಾಯನಮಾಡಿದನು. ಬಳಿಕ ಪಾರ್ವತಿಯು ತನ್ನ ರೂಪ ಯೌವ್ವನಗಳು ಎಷ್ಟೊಂದು ವ್ಯರ್ಥವೆಂದು ತಿಳಿದು

ಉದಾತ್ತಹಲ್ಕಗಳನ್ನು ಧರಿಸಿ ನಿಷ್ಠೆಯಿಂದ ತಪಸ್ಸುಮಾಡಿ ವರಶಿವನನ್ನು ಒಲಿಸಿದಳು.

ಈ ರೂಪಗುಣಗಳ ಮೇಲಾಟವು ಶಾಕುಂತಲದಲ್ಲಿ ಮತ್ತೊಂದು ವಿಧದಿಂದ ವರ್ಣಿತವಾಗಿರುವುದು. ಅದರ ಕಾರಣವು ನಾಯಕನಾಯಕಿಯರ ಅದೂರದರ್ಶಿತೆ ಮತ್ತು ಕಾಮುಕತನವೆಂದು ಹೇಳಬಹುದು. ದುಷ್ಯಂತನು ವಿಲಾಸಲೋಲುಪ್ತನಾದ ಪ್ರಾಪಂಚಿಕ ಪುರುಷನು. ಐಗುಪ್ತದ ರಾಜಪಟ್ಟಣದ "ಹ್ಯಾರಿಮ್" "Hareem" ನ ಕೂಗಿನಂತೆ ಇವನ ಅಂತಃಪುರದಲ್ಲಿಯೂ ವಿಪ್ರಲಬ್ಧರಾದ ಹಂಸಪದಿಕೆಯರ ಹಾರ್ದಿಕ ಉದ್ಗಾರಗಳು. ಅವನು ಶಕುಂತಲೆಯಲ್ಲಿ ಮೊದಲು ಕಂಡದು ಅವಳ ಅಚ್ಛಿಳಿಯದ ಅಸ್ಪೃಷ್ಟವಾದ ರೂಪ ಮತ್ತು ಯೌವನಗಳೇ ಹೊರತು ಅವಳ ಸ್ವಕೀಯವಾದ ಸರಳಗುಣವನ್ನಲ್ಲ. ಶಕುಂತಲೆಯೂ ಹಾಗೆಯೇ. ಮುಗ್ಧಳಾದ ಹೆಂಗಸಿನಂತೆ ತನ್ನ ಸೌಂದರ್ಯದ ಹಾಗೂ ಯೌವನದ ಹೊಳಪಿನಿಂದ ರಾಜನ ಮನಸ್ಸನ್ನು ಸೆಳೆಯುವ ಪ್ರಯತ್ನಮಾಡಿದಳು ಆದರೆ ಎಂದಿಗೆ ಅವಳಾಕನ್ಯಾತ್ವವು ದುಷ್ಯಂತನ ವಿಲಾಸಿತೆಗೆ ಬಲಿಯಾಯಿತೋ, ಅಂದೇ ದುಷ್ಯಂತನ ಹೃದಯವನ್ನಾಳುತಿದ್ದ ಅವಳ ರೂಪಪ್ರತಿಭೆಯೂ ಮಾಯವಾಯಿತು. ಮುನಿಪಾಲಿತವಾದ ಅನಾಗರಿಕಳಾದ ಅಅಡವಿಯ ಹುಡುಗಿಗಿಂತಲೂ ನಗರದ ನೂತನ ಹಂಸಪದಿಕೆಯರು ಅವನಿಗೆ ಚಿತ್ತಾಕರ್ಷಕರಾದರು. ಅವನು ಶಕುಂತಲೆಯನ್ನು ತನ್ನ ರಾಣಿವಾಸದಲ್ಲಿಟ್ಟುಕೊಳ್ಳುವ ಮಾತಿರಲಿ, ಅವಳ ನೆನಪೇ ಇಲ್ಲವೆಂದು ಹೇಳಬಿಟ್ಟನು. ಅರಣ್ಯದಲ್ಲಿ ಅಲೆದ ಮುಗ್ಧಹೃದಯೆಯಾದ ಸರಳಬಾಲಿಕೆಗೆ ಅರಣ್ಯವೇ ಗತಿಯಾಯಿತು. ದುಷ್ಯಂತನ ಈ ರೂಪೋನ್ಮಾದವು ಶಾಂತವಾಗಬೇಕಾದರೆ ಕೆಲವು ವರ್ಷಗಳೇ ಕಳೆಯಿತು. ಅಷ್ಟರಲ್ಲಿ ಶಕುಂತಳೆಯೂ ತನ್ನ ದುಡುಕುತನದ ಫಲವನ್ನು ಚನ್ನಾಗಿ ಉಂಡಿದ್ದಳು. ಅವಳ ರೂಪಯೌವನದ ಪ್ರತಿಭೆಯೂ ನಾಶವಾಗಿ, ಅವಳ ಸರಳತೆಯು ಸ್ವಕೀಯ ಪ್ರೇಮವಾಗಿ ತೋರ್ಪಟ್ಟಿತ್ತು. ತನ್ನ ತಂದೆಯಿಲ್ಲದ ಅಭಾಗ್ಯಪುತ್ರನ ಲಾಲನಪಾಲನಗಳಲ್ಲಿ ಅವಳು ಸುಖಿತಳಾಗಿದ್ದಳು. ಮತ್ತೆ ದುಷ್ಯಂತನು ಅವಳನ್ನು ಕಂಡಾಗ ಅವಳು ಸಂಪೂರ್ಣಗೃಹಿಣೀ. ಅವಳ ಸಮಸ್ತ ಪ್ರಪಂಚವೂ ಅವಳ ಅವಿಶ್ವಾಸಿಯಾದ ಪತಿ ಮತ್ತು ಅಭಾಗ್ಯ ಪುತ್ರನೆಂ

ಟುದನ್ನು ತಪ್ಪೋಪನದ ಮೃಗಪಕ್ಷಿಗಳೂ ಹೇಳುತ್ತಿದ್ದವು. ದುಷ್ಯಂತನು ಅಪ್ಸ್ಯಂದು ಪ್ರೇಮವನ್ನು, ಅಪ್ಸ್ಯಂದು ವಿಶ್ವಾಸವನ್ನು ಮತ್ತೆ ನಿರಾಕರಿಸುವ ಸ್ಥಿತಿಯಲ್ಲಿರಲಿಲ್ಲ. ಅವನಾರೂಢೋನ್ಮಾದದ ಬೇಗೆಯಿಂದ ತೃಷಿತವಾದ ಹೃದಯವು ಅಂತಹ ಪ್ರೇಮವನ್ನೇ ಅಪೇಕ್ಷಿಸುತ್ತಿತ್ತು. ಅವಳ ಹೆರಳುಹಾಕದ ಕೇಶದಲ್ಲಿ, ಮಲಿನವಾದ ವಸ್ತ್ರದಲ್ಲಿ ಅವಳ ಯಥಾರ್ಥ ಸೌಂದರ್ಯವನ್ನು ಕಂಡನು. ಆ ಸೌಂದರ್ಯವು ಅವನ ಸ್ನೇಹಿತಹ ದೀನಾವಸ್ಥೆಗೆ ತಂದಿಕ್ಕಿಂಬುದನ್ನು ಪರಿಹರಿಸುವುದು ಪ್ರಕೃತಕಾರ್ಯವಲ್ಲ. ನಾರಿಯರ ದೈಹಿಕಸೌಂದರ್ಯದಮೇಲೆ, ಅವರ ಮಾನಸಿಕ ಸೌಂದರ್ಯವು ಹೊಂದುವ ವಿಜಯವರ್ಣನೆಯನ್ನು ಸಂಸ್ಕೃತಸಾಹಿತ್ಯದಲ್ಲಿ ಪ್ಪೇಕಡೆ ನೋಡಬಹುದು?

ಒಟ್ಟಿನಲ್ಲಿ, ಸ್ತ್ರೀಯರ ದೈಹಿಕಸೌಂದರ್ಯವು ಮಾನವಜಾತಿಯ ಅಧಃಪತನಕ್ಕೆ ಎಷ್ಟರಮಟ್ಟಿಗೆ ಕಾರಣವಾಗುವ ಸಂಭವವಿರುವದೋ, ಅವರ ಮಾನಸಿಕರೂಪವೂ ಅದೇಪರಿಮಾಣದಲ್ಲಿ ಉದ್ಧಾರಮಾಡುವ ಶಕ್ತಿಯನ್ನುಳ್ಳದ್ದಾಗಿರುವುದು. ಈ ಎರಡುವಸ್ತುಗಳ ಸಂಮಿಳನವು ಯೋಗ್ಯರೀತಿಯಿಂದ ಯಾರಿಹೆಯಲ್ಲಾಗುವದೋ ಆಕೆಯೇ ಧನ್ಯೆ. ಅಂತಹ ರಮಣೀರತ್ನೆಯರಿಂದಲೇ ಈ ಮರ್ತ್ಯಲೋಕವು ವಾಸಯೋಗ್ಯವಾಗಿರುವುದು. ಇಂತಹವರನ್ನು ಉದ್ದೇಶಿಸಿಯೇ ಕವಿಯು ಹೇಳಿರುವನು:—

"ಅಸಾರೇಭೂತೇಸಂಸಾರೇಸಾರಃಸಾರಂಗಲೋಚನಾ" ಎಂದು.

ಅಸ್ತು! ನನ್ನ ಸಂಕಲ್ಪವು ನೆರವೇರಿತು. ಆ ರೂಪನಿಂದೆಯ ಪಾಪದಿಂದುಂಟಾದ ಪಾಪಕ್ಕೂ ಪ್ರಾಯಶ್ಚಿತ್ತವಾಯಿತು.

ಅಂಚೆಯ ಮನೆಯಿಂದ.

(ಹಿಂದಿನಸಂಚಿಕೆಯಿಂದ ಮುಂದರಿಸಿದ್ದು.)

ಪತ್ರಾಂಕ—೨.

ನನ್ನ ಪುಟ್ಟ ತಂಗಿಯರೇ,—

ನನ್ನ ಹಿಂದಿನಪತ್ರದಲ್ಲಿ ಬಾಲ್ಯದೆಸೆಯು ವಿಷಯವಾಗಿಯೂ, ನಿಮ್ಮ ಪ್ರಾಮುಖ್ಯ ಜೀವಿತದವಿಷಯವಾಗಿಯೂ ತಿಳಿಸಿದ್ದನಷ್ಟೆ. ಈ ಪತ್ರದಲ್ಲಿ ನಿಮ್ಮ ಜೀವನಧ್ಯೇಯದ ವಿಷಯವಾಗಿ ಕೆಲವು ಮಾತುಗಳನ್ನು ಹೇಳುವೆನು.

ನಾನೂ ನೀವೂ ನಾನಾವಿಧವಾದ ಅಸ್ಪಷ್ಟವಾದನೇಕ ವಿಚಾರಗಳನ್ನು ಹೊಂದಿರಬಹುದು. ಆದರೆ ನಮ್ಮಲ್ಲಿಪ್ಪತ್ತು ಜನರು ಜೀವನದ ಮುಖ್ಯಧ್ಯೇಯಗಳನ್ನು ಹೊಂದಿರುವೆವು? ಅನೇಕರೀವಿಷಯಕ್ಕೆ ಹಾದೆಂಬ ಉತ್ತರವನ್ನಿತ್ತರೂ ಅಸ್ಪಷ್ಟ ಮತ್ತು ಪರಸ್ಪರ ವಿರೋಧವಾದ ವಿಚಾರಗಳ ಮಧ್ಯೆ ಮೇಲ್ಕಂಡ ವಿಷಯಗಳನ್ನು ಸಂಪೂರ್ಣವಾಗಿ ಮರೆತಿರಬಹುದು.

ನೀವು ಸ್ತ್ರೀಯರೆಂಬುದನ್ನೂ, ಎಂದೆಂದೂ ಸ್ತ್ರೀಯರೇ ಆಗಿರುವಿರೆಂಬುದನ್ನೂ ಮುಂದಿನ ಬಾಲಕಿಯರ ಅಭಿವೃದ್ಧಿಯ ಸೂತ್ರವು ನಿಮ್ಮ ಕೈಯಲ್ಲಿರುವುದೆಂಬುದನ್ನು ಮತ್ತೊಂದಾವರ್ತಿ ನಿಮ್ಮ ಜ್ಞಾಪಕಕ್ಕೆ ತರುವೆನು. ನೀವು ಹೀಗೆಯೇ ಇರಬೇಕೆಂದು ಸಂಕಲ್ಪಗೊಳಿಸಿದುದಾವುದೋ? ಅದೇ ನಿಮ್ಮ "ಧ್ಯೇಯಗಳು". ಅಲ್ಲದೆ ನಿಮ್ಮಲ್ಲಿ ಪ್ರತಿಯೊಬ್ಬರೂ ನಿಮ್ಮಿಷ್ಟಕ್ಕೆ ನೀವೇ ಪರೀಕ್ಷೆನುಡಿಕೊಂಡು ನಿಮ್ಮಲ್ಲಿ ಯಾವುದಾದರೂ ಉತ್ತಮಧ್ಯೇಯವಿರುವುದೇ ಎಂದು ನೋಡಿಕೊಳ್ಳಿ. ಇಲ್ಲದಿದ್ದರೆ ಯಾವವಿಧವಾದ ಜೀವಿತವನ್ನು ನಡೆಸಲು ನಿನಗಿಷ್ಟವಿದೆಯೋ ಅದಕ್ಕೆ ತಕ್ಕಂತೆ ನಿಮ್ಮ ಧ್ಯೇಯವನ್ನು ರಚಿಸಿಕೊಳ್ಳಿರಿ.

ನೀವು ಪ್ರತಿಯೊಬ್ಬರೂ ಶಾರೀರಕ ಮತ್ತು ಮಾನಸಿಕ ಬಲವುಳ್ಳವರಾಗಿರಬೇಕೆಂದು ಇಚ್ಛಿಸುವಿರೆಂದು ನಾನು ಧೈರ್ಯವಾಗಿ ಹೇಳಬಲ್ಲೆನು. "ಶರೀರ ಮತ್ತು ಮಾನಸಿಕಪುಷ್ಟಿಯು" ಎಲ್ಲ ಧ್ಯೇಯಗಳನ್ನೂ ಮೀರಿಸಿದ ಮುಖ್ಯ ಪುರುಷಾರ್ಥವೆನ್ನುವುದು ನೀವರಿತ ವಿಷಯವು. ಆದ್ದರಿಂದ ಇಚ್ಛೆ ಮತ್ತು ಅಗತ್ಯ ಇವುಗಳ ಸಹಾಯದಿಂದ ಈ ಮಾನಸಿಕ ಮತ್ತು ಶಾರೀರಕ ಶುದ್ಧಿಯನ್ನು ಹೊಂದಲೆತ್ನಿಸಬೇಕು.

ಪ್ರಥಮದಲ್ಲಿ ನಿಮ್ಮ ಮನಸ್ಸು ಶುದ್ಧಿಯಾಗಿರುವಂತೆ ಪ್ರಯತ್ನಿಸಬೇಕು, ನಿಮ್ಮ ಮನೋಭಾವಗಳೇ ಇತರ ಎಲ್ಲ ಕಾರ್ಯಗಳನ್ನೂ ಆಳುವುದರಿಂದ ನಿಮ್ಮ ಮನೋಭಾವಗಳು ಪರಿಶುದ್ಧವಾಗಿರಬೇಕಾದದು ಅತ್ಯಾವಶ್ಯಕವು. ಮಲಿನಮನಸ್ಸಿನಿಂದ ಉತ್ತಮ ಜೀವಿತವನ್ನು ಪಡೆಯುವುದು ಅಸಾಧ್ಯವು. ಬರೀ ಅಂಗಸಾಧನೆಮಾತ್ರದಿಂದ ಮನೋವಿಕಾರ ಶುದ್ಧವುಂಟಾಗದು. ನಿಮ್ಮ ಇಂದ್ರಿಯಗಳನ್ನು ವೊಟ್ಟಮೊದಲು ಜೈಸುವ ಪ್ರಯತ್ನ ಮಾಡಬೇಕು. ಆದರೆ ಅಂತಹ ನಿಗ್ರಹವು ಮನೋವಿಕಾರಶುದ್ಧವಿಲ್ಲದೆ ಕೃತ್ರಿಮವಾಗಿ ಪರಿಣಮಿಸುವುದು. ಆದ್ದರಿಂದ ನಿಮ್ಮ ಮನಸ್ಸನ್ನು ಪರಿಶುದ್ಧವಾಗಿಟ್ಟುಕೊಂಡರೆ ನಿಮ್ಮ ಶರೀರವೂ ಶುದ್ಧಿಯಾಗುವುದು. ನಿಮ್ಮ ಮನಸ್ಸು ದುರಾಲೋಚನೆಗಳನ್ನು ಪೂರ್ಣಮಾಡಿಕೊಳ್ಳುವಂತಾಗಲಿ, ಕೆಟ್ಟನಡವಳಿಕೆಗಳಿಗೆ ಪ್ರವೇಶಿಸುವುದಕ್ಕಾಗಲಿ ಎಡೆಗೊಡಬೇಡಿ. ಅದೇಸಮಯದಲ್ಲಿ ನೀವು ಕಲ್ಮಷ ಮನಸ್ಸನ್ನು ಹೊಂದಿರುವಿರೆಂಬ ಭಾವವು ಕೂಡ ನಿಮ್ಮ ಮನಸ್ಸಿನಲ್ಲಿ ಪ್ರವೇಶಿಸಕೂಡದು. "ಸೋಮಾರಿಯಾದ ಮನಸ್ಸು ಸೈತಾನನ ವಾಸಗೃಹ" ಎನ್ನುವ ಗಾದೆಯ ಅರ್ಥವನ್ನು ಮಾತ್ರ ಮರೆಯಬೇಡಿ. ಇಂತಹ ಕೆಟ್ಟಪ್ರವೃತ್ತಿಯಿಂದ ಮನಸ್ಸನ್ನು ದೂರಮಾಡಬೇಕಾದರೆ ನೀವು ಸದಾ ಉತ್ತಮವಾದ ಮತ್ತು ಘನವಾದ ವಿಷಯಗಳ ಚಿಂತನೆ, ಭಗವಂತನ ನಾಮಸ್ಮರಣೆ, ಇವುಗಳ ವಿಷಯವಾಗಿ ಚಿಂತಿಸುತ್ತಿರಬೇಕು ಜ್ಞಾನವನ್ನು ಹುಡುಕಿ, ಸಾಧುಸಂತರ ಮಹಾಪುರುಷರ ಜೀವಸಚರಿತ್ರೆಗಳನ್ನೋದಿದರೆ ಜ್ಞಾನವು ಸುಲಭವಾಗಿ ದೊರೆಯುವುದು ಮಾತ್ರವಲ್ಲದೆ ನಿಮ್ಮ ಮನವು ಸದಾ ಪರಿಶುದ್ಧವಾಗಿರುವಂತೆ ಮಾಡುವುದು. ಯಾವುದಾದರೊಂದು ಉತ್ತಮಮೂರ್ತಿಯನ್ನು

ನಿಮ್ಮಾರಾಧ್ಯದೇವತೆಯಾಗಿ ಮಾಡಿಕೊಳ್ಳಿ. ಅಂತಹ ಆರಾಧ್ಯದೇವತೆಯ ಸೇವೆಯಿಂದ ನಿಮ್ಮ ಉದ್ದೇಶವು ಸಫಲವಾಗುವುದುಮಾತ್ರವಲ್ಲದೆ ಅನೇಕ ದುರಾಲೋಚನೆಗಳು ದೂರವಾಗುವುದು.

ಮನಸ್ಸು ಮುಖ್ಯವಾಗಿ ವಿಷಯಸುಖದ ವಿಷಯದಲ್ಲಿ ದಾರಿತಪ್ಪುವುದು. ಆಗಾಗ್ಯೆ ನೀವು ಇಂತಹ ಲಜ್ಜಾಹೀನವಾದ ಮಾಯೆಯಿಂದ ಭ್ರಮಿಸಿ ಅಂತಹ ಅಲ್ಪ ಸುಖವನ್ನಾಶಿಸಬಹುದು. ಇದರಿಂದ ನಿಮ್ಮ ಭವಿಷ್ಯ ಜೀವಿತವೇ ಹಾಳಾಗಲವಕಾಶವುಂಟಾಗುವುದು. ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟ ಕಾದಂಬರಿಗಳು ಮತ್ತು ನಾಟಕಗಳನ್ನೋದುವುದರಿಂದ ಮನಸ್ಸು ಕೆಡಲು ಕಾರಣವಾಗುವುದು. ಇಂತಹ ಗ್ರಂಥಗಳನ್ನೋದುವುದರಿಂದ ತತ್ಕಾಲ ಸಂತೋಷವುಂಟಾಗುವುದಾದರೂ ಅದರ ಕುಪರಿಣಾಮವು ಅಂತ್ಯದಲ್ಲಿ ಘೋರವಾಗುವುದು. ಆದ್ದರಿಂದ ನೀವು ಇಂತಹ ಗ್ರಂಥಗಳನ್ನೋದುವುದನ್ನು ತ್ಯಜಿಸಿ ನಿಮ್ಮ ಮನಸ್ಸು ಶುದ್ಧವಾಗಿಯೂ ಮತ್ತು ಹತೋಟಿಯಲ್ಲಿರುವಂತೆಯೂ ಎತ್ನಿಸಿರಿ. ನೀವು ಈಗ ಭೋಗ ವಿಷಯವನ್ನು ಆರೋಗ್ಯ ಸಂಬಂಧದಿಂದ ಪರಿಶೀಲಿಸಿ ನೋಡಿ ಪ್ರಾಣಿ ಸಸ್ಯಮಾನವವರ್ಗದ ಜನಾಂಗದಸ್ಥಿರತೆಗೆ ಮೇಲ್ಕಂಡ ವಿಷಯದಲ್ಲಿನ ಜಾಗರೂಕತೆಯೇ ಮುಖ್ಯವೆಂಬುದನ್ನು ತಿಳಿದು ಅದರಂತೆ ನಡೆಯಲೆತ್ನಿಸಿರಿ. ಈಗ ಭೋಗವಿಷಯವು ಭಗವದತ್ತವಾದ ಬಂದು ವರವೆಂದು ತಿಳಿದು ನಡೆಯುವುದು ಉಚಿತವಲ್ಲದೆ ಕೇವಲ ಪಶುವೃತ್ತಿಗೆ ಸಂಬಂಧಿಸಿದ್ದಲ್ಲವೆನ್ನುವುದನ್ನು ಚನ್ನಾಗಿ ನೆನಪಿನಲ್ಲಿಡಿರಿ. ಈ ವಿಷಯವನ್ನು ಮುತ್ತೊಂದು ಸಲ ವಿವರವಾಗಿ ನಿಮಗೆ ತಿಳಿಸುವೆನು. ನಿಮಗೀಗ ನಾನು ಬತ್ತಿ ಬತ್ತಿ ಹೇಳುವುದೇನಂದರೆ, ಈ ವಿಷಯ ಸುಖದವಿಚಾರದಲ್ಲಿ ಮಾತ್ರ ನಿಮ್ಮ ದೇಹ ಮತ್ತು ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳುವಿರೆಂದು ನಂಬುತ್ತೇನೆ.

ನಾನೀಲೇಖನವನ್ನು ಪೂರ್ತಿಮಾಡುವ ಮೊದಲು ಮತ್ತೊಂದಿಷ್ಟು ನಿಮಗೆ ಜ್ಞಾಪಕಗೊಳಿಸುವುದೇನಂದರೆ, ಮುಖ್ಯಧ್ಯೇಯವಾದ "ಶಾರೀರಕ ಮತ್ತು ಮಾನಸಿಕ ಪುಷ್ಟಿಯನ್ನು ಮರೆಯಬೇಡಿ. ಸದಾ ಉತ್ತಮ ನುಡಿಯಿಂದ, ಉತ್ತಮಸುಕಾರ್ಯ, ಉದ್ಯೋಗಳಲ್ಲೇ ಮಗ್ನರಾಗಿ ಕುಮಾರ್ಗಕ್ಕೆ

ಗೊಡದೆ ನಿನ್ನ ಉತ್ತಮಜೀವಿತವನ್ನು ಸಾರ್ಥಕಮಾಡಿಕೊಳ್ಳಿ. ಸದಾ ಈ ಕೆಳಗೆ ಕಂಡುಬರುವ ವಾಕ್ಯವನ್ನು ಜ್ಞಾಪಕದಲ್ಲಿಡಿ -" ' A perfect woman nobly planned".

ಪ್ರೇಮಾಯತನ
ತುಂಗಭದ್ರ

ನಿಮ್ಮ ಪ್ರೇಮಪಾತ್ರಳಾದ
ಸುಮತಿ.

ಸು ಮ ನ ಸಂ ಚ ಯ

ಸ್ತ್ರೀಯರಿಗೆ ಎಂತಹ ಶಿಕ್ಷಣವು ಬೇಕು ?

"ಭಾರತಕೇಸರಿ" ಲಾಲಾ ಲಜಪತ್‌ರಾಯರು ಲಾಹೋರಿನ "ವೈದಿಕ ಕನ್ಯಾಪಾಠಶಾಲೆ" ಯ ವಾರ್ಷಿಕೋತ್ಸವ ಸಮಾರಂಭವಲ್ಲಿ ಸಭಾಧ್ಯಕ್ಷರಾಗಿದ್ದಾಗ ಮಾಡಿದ ಭಾಷಣದ ಸಾರಾಂಶವನ್ನು ಹಿಂದೀದೈನಿಕ "ಆಜ್" ಪತ್ರಿಕೆಯಿಂದ ಸಂಗ್ರಹಿಸಿ ನಮ್ಮ ವಾಚಕರ ಅವಗಾಹನೆಗಾಗಿ ಕೊಡಲ್ಪಟ್ಟಿದೆ.

ಈ ಸಮಯದಲ್ಲಿ ದೇಶಾಭಿವೃದ್ಧಿಗೆ ಸಂಬಂಧಪಟ್ಟ ಅನೇಕ ಕಾರ್ಯಗಳಿಗೆ ಸ್ತ್ರೀಯರ ಸಹಾಯವು ನಮಗತ್ಯಾವಶ್ಯಕವಾಗಿ ಬೇಕಾಗಿರುವುದು. ಅನ್ಯರು ನಮ್ಮನ್ನು ಭೀರುಸ್ವಭಾವದವರೆಂದು ತಿಳಿದುಕೊಳ್ಳದಂತಾ ಶಕ್ತಿಯೇನಮಗೀಗ ಅವಶ್ಯಕವಾಗಿ ಬೇಕಾಗಿದೆ. ಈ ಅವಶ್ಯಕತೆಯು ಸ್ತ್ರೀಯರ ಸಂಪೂರ್ಣ ಸಹಾಯದಹೊರ್ತು ಪೂರ್ಣ ಹೊಂದಲಾರದು. ಸ್ತ್ರೀಯರಿಗೆ ಉತ್ತಮ ಭೋಜನ, ಭೂಷಣ, ವಸನಗಳು ಸರ್ವಾಧಿಕಾರವೂ ಇದೆ; ಅಲ್ಲದೆ ಅವರು ಸ್ವತಃ ಸುಖವಾಗಿದ್ದುಕೊಂಡು ಉತ್ತಮ ಸಂತತಿಯುಳ್ಳವರಾಗಿರುವುದು ಅವರ ಧರ್ಮವು. ಇದರಿಂದ ಅವರು ಉತ್ಸಾಹ, ಪ್ರೋತ್ಸಾಹದೊಡನೆ ಸ್ವದೇಶ, ಸ್ವಜನ ಸೇವೆಯನ್ನು ಮಾಡಬಲ್ಲರು. ಇಂದಿನ ಸ್ತ್ರೀಯರಲ್ಲಿ ಬಟ್ಟೆಬರೆಗೆ ಬೇಕಾದಷ್ಟು ಪೆಚ್ಚಮಾಡಿ, ಆರೋಗ್ಯ ಆರೋಗ್ಯದಕಡೆಗೆ ಹೆಚ್ಚು ಗಮನ ಕೊಡುವದಿಲ್ಲ. ಹೀಗೆ ಹೊಸ್ತು

ವುದು ಸರ್ವಥಾ ಯೋಗ್ಯವಲ್ಲ. ಅವರು ಬಳ್ಳಿಯ ಆಭರಣಗಳನ್ನು ಅಗತ್ಯವಾಗಿ ತೊಟ್ಟುಕೊಳ್ಳಲಿ; ಆದರೆ ಉಷ್ಣಮ ಭೋಜನ ಮತ್ತು ಆರೋಗ್ಯವು ಅದಕ್ಕಿಂತ ಹೆಚ್ಚಿನದೆಂದು ತಿಳಿಯಲಿ ಸ್ತ್ರೀಯರಿಗೆ ಯಾವ ಕೋಮಲತೆಯೂ ಸೌಂದರ್ಯವೂ ಬೇಕೋ ಅದು ನಮ್ಮ ದೇಶದ ಸ್ತ್ರೀಯರಿಗೂ ಇರಬೇಕೆಂಬುದೇ ನನ್ನ ಭಾವನೆ. ಆದರೆ ಅನ್ಯರು ಅವರಕಡೆಗೆ ಕಣ್ಣೆತ್ತಿನೋಡದಂತೆ ಮಾಡುವಷ್ಟು ಶಕ್ತಿಯೂ, ಸಾಮರ್ಥ್ಯವೂ ಅವಶ್ಯವಾಗಿರಲಿ. "ಮೈ ಅಪನೇ ಭಾರತ್ ಕೀ ಜೋಗಿನ್ ಬನೋಂಗಿ" (ಅರ್ಥ-ನಾನು ನಿಜಭಾರತದಯೋಗಿನಿಯಾಗುವೆನು) ಎಂದು ನೀವೀಗ ಹಾಡಿದಿರಿ. ಆದರೆ ನನ್ನ ಅಭಿಪ್ರಾಯದಲ್ಲಿ ಈ ಸಮಯದಲ್ಲಿ ದೇಶಕ್ಕೆ ರೂಸ್ಸಿ, ಲಕ್ಷ್ಮೀಬಾಯಿ ಮತ್ತು ಅಹಲ್ಯಾಬಾಯಿಯವರಂಥಾ ದೃಢಹೃದಯ ಮತ್ತು ಸಬಲಶರೀರ ಸ್ವಾಸ್ಥ್ಯವುಳ್ಳ ಶೂರ ವೀರಮಾತೆಯರೇ ಬೇಕಾಗಿದ್ದಾರೆ.

ಸ್ತ್ರೀಯರಿಗೆ ಇಂಗ್ಲೀಷು ಕಲಿಸಬಾರದೆಂದು ಹೇಳುವವರ ಗುಂಪಿಗೆ ನಾನು ಸೇರಿದವನಲ್ಲ. ವರ್ತಮಾನ ಸಮಯದ ಒಂದು ಅವಶ್ಯಕತೆಯು ಮಾತ್ರವಲ್ಲ, ಇಂಗ್ಲೀಷು ಕಲಿಯುವುದರಿಂದ ಏನೂ ಕೆಟ್ಟದ್ದಿಲ್ಲ; ಕಲಿಯಬೇಕು. ಆದರೆ ಅದು ಅನಿವಾರ್ಯರೂಪದಿಂದಲ್ಲ. ಇಂಗ್ಲೀಷು ಕಲಿಯದೆಯೇ ನಾವು ನಮ್ಮ ಮನೆಯ ಕೆಲಸಕಾರ್ಯಗಳನ್ನು ನಡೆಸಬಲ್ಲೆವು. ನಾವು ಇಂಗ್ಲೀಷನ್ನು ಕಲಿಯೋಣ ಅಥವಾ ಕಲಿಯದಿರೋಣ, ಅದರ ದೋಷದಿಂದ ಮಾತ್ರ ದೂರವಿರೋಣ. ನಮ್ಮ ಜೀವನವನ್ನು ಆಡಂಬರರಹಿತ ಧಾರ್ಮಿಕಸೂತ್ರದಲ್ಲಿ ನಡೆಸಬೇಕು. ಸ್ತ್ರೀಯರಿಗೆ ಅವರ ಜೀವನದಲ್ಲಿ ಯಾವವಿಧವಾದ ಕೆಲಸದ ಅವಶ್ಯಕತೆಯು ಬರುತ್ತದೋ ತದನುಸಾರವಾದ ಶಿಕ್ಷಣವು ದೊರೆಯಬೇಕು. ಆದರೆ ಜೀವನ ಸಂಗ್ರಾಮ (struggle for existence) ದಲ್ಲಿ ಈ ಮಾತಿನ ಲಕ್ಷ್ಯವು ಪೂರ್ತಿಯಾಗಿರುವುದಿಲ್ಲ. ಅನೇಕವೇಳೆ ಸ್ತ್ರೀಯರಿಗೆ ಪುರುಷರ ಪರಾಕ್ರಮವನ್ನೂ, ಪುರುಷರಿಗೆ ಸ್ತ್ರೀಯರ ಸೌಶೀಲ್ಯವನ್ನೂ ವಹಿಸಬೇಕಾಗುತ್ತದಾದರೂ ಸ್ತ್ರೀಯರಿಗೆ ತಕ್ಕಂತಹ ಯೋಗ್ಯಶಿಕ್ಷಣವು ಅನಿವಾರ್ಯವು. ಹೆಣ್ಣುಮಕ್ಕಳಿಗೆ ಸ್ವಲ್ಪಮಟ್ಟಿಗೆ ಹಿಂದೀ (ಅಥವಾ ರಾಷ್ಟ್ರಭಾಷೆ) ಭಾಷೆ ಮತ್ತು ಕಲಿಸಿದರೆ ಸಾಲದು. ಯಾವ ಹುಡುಗಿಯರು ರಾಮಾಯಣ

ಮತ್ತು ಮಹಾಭಾರತವನ್ನು ಓದಲಾರರೋ ಅವರ ಶಿಕ್ಷಣವು ಅಪೂರ್ಣವೂ ಹಾನಿಕರವೂ ಆಗಿದೆ. ರಾಮಾಯಣ, ಮಹಾಭಾರತಗಳಲ್ಲಿ ನಮ್ಮ ಎಲ್ಲ ತಾಯಿ ತಂಗಿಯರೂ ತಿಳಿದುಕೊಳ್ಳಬೇಕಾದ ಅತ್ಯಮೂಲ್ಯ ವಿಚಾರಗಳಿವೆ. ಬಾಲಕಿಯರಿಗೆ ಕನಿಷ್ಠಪಕ್ಷ ರಾಮಾಯಣ-ಮಹಾಭಾರತವನ್ನೋದಿ, ಆನಂದಾತ್ಮಲಾಭವನ್ನು ಪಡೆಯುವಷ್ಟು ಮಾತೃಭಾಷೆಯ ಅವಶ್ಯಕತೆ ಇದೆ.

ಮಾನವ ಸುಖಬೋಧಾಮೃತ

(ಹಿಂದಿನ ಸಂಚಿಕೆಯಿಂದ ಮುಂದರಿಸಿದ್ದು)

೬. ಸುತನಕರ್ತವ್ಯ.

ಧರೆಯಜೀವಿಗಳನ್ನು ನಿಗುಡಿಸಿ |
ತರಳ ನಿನ್ನೊಡಯಮೆಯನುಳಿಯು |
ತ್ತರುವುವಾಸನಾಮಾರ್ಗವೃತ್ತಿಯನಾತು ನಡೆಯುತಿರು ||
ಚರಿಸಿವಿಷಿನಬೆ ಗಳಿತವಪುವಿನೆ |
ಜರೆಯೊಳಿಹ ಬಕಪಿಕನ ಬಿಡದಲೆ |
ಹೊರುತೆಗುಟು ಕಂಕಡುತೆ ಸುತಬಳಿಕನ ಪರಿಪಾಲಿಪುದು ||೧||

ನಿರುತ ಪಿತನಿಗೆ ತೋರ್ದಭಕ್ತಿಯು |
ಸರಸಿಜಾತದ ತೊಟ್ಟಿಂ ದೈ |
ತರುವ ತಮ್ಮೆಲ್ಲರಿಗೆ ಪಾಸಟಿಯಾಗಿ ರಾಜಿಪುದು ||
ತಿರೆಯೊಳಕ್ಷೆಗೆ ಕಾಣಿಸುತ್ತಿಹ |
ವರಗಳೀಯುವ ದೇವನೆನ್ನುತ |
ಲರಿದುಸೇವಿಸೆ ನೈಜಪೊಲವಿಗೆ ಸಾಕ್ಷಿಯಾಗಿಹುದು ||೨||

ಅಪರಿನಿಂ ಕೃತಕೃತ್ಯವಾಗುವ |
ವಿಧದೆ ನೀನೀ ದೇಹವಿತ್ತಿಹ |
ಸದಯನಾಗಿಹ ಪಿತನಿಗುಂ ಪೋಷಿಸಿದ ಮಾತೃವಿಗು ||

ಹದನವರಿಯುತೆ ಸುಕನುನಡೆಯುತೆ |
ಹುದದು ವೃದಿ ಗೆಬರಲುಸಾಧಕ |
ಮತಿರನೆ ಹೃದಯದಾರ್ಢ್ಯದೊಳವರ ಸೇವೆಗ್ಯೆಯುವುದು ||೩||

ನಿನ್ನವೃದ್ಧಿಗೆ ಪೇಳ್ದ ವಚನವ |
ನನ್ನಿಯಿಂ ದವಧರಿಸು ಜಾತನೆ |
ನಿನ್ನ ಮೇಲ್ಮೆಗಳಸಲೊರೆದಿಹಾ ನೀತಿಯಾಲಿಪುದು ||
ನಿನ್ನಸೌಖ್ಯಕೆ ಹಾನಿಯೊದವಿಸ |
ದನ್ನೆಗಂ ತಾಬನ್ನಮಾಂತಿಹು |
ದನ್ನು ಯೋಚಿಸುತವನ ಪಿರಿತನಕಾಗಿ ಮನ್ನಿಪುದು ||೪||

ಮೊದಲು ಶೈಶವದಲ್ಲಿ ವಿಜ್ಞಾ |
ನದೊಳು ಮಲಗಿರ್ದ ಸಮಯದೊಳುಂ |
ಮುದದೆಮುಂದೋರದಲೆ ವರ್ತಿಸುತಿರ್ದ ಯೌವ್ವನದೆ ||
ಹದನವರಿಯುತೆ ಕಾದಿದಾಕಾ |
ಲದೊಳಗಾಂತಳಲನ್ನು ಯೋಚಿಸಿ |
ಮುದದೆ ಸಾಹ್ಯವನೀಡಿ ಜರೆಯೊಳು ಪಿತನಪಾತಿಪುದು ||೫||

ಕರಣಮುಡಗುತೆ ಕರ್ಣವಳಿಯುತೆ |
ಚರಣಬಲನಂದುತೆ ಸುಖತತಿಯು |
ಮರೆಯುತೆ ಸ್ವರಬಲವ ದುಡುಗುತೆ ನಂದಿವೋಗಿರುತೆ ||
ಜರೆಯಚಿತ್ರದ ಮೈಮೆಯೊಳಗೀ |
ಪರಿಪರಿಯ ವೇಷದೊಳಗಿರ್ಪುದ |
ನಾದುಕಾವುದು ಪಿತನಭಕ್ತಿಯು ನಿನ್ನೊಳಿರುವುದಕೆ ||೬||

ಕಂದೆಯಂ ನೀನಿಂತು ಪೊರೆದೊಡೆ |
ಮುಂದೆ ನಿನಗ್ಯೆತರ್ಪ ವೇಷ |
ನಂದನರಪಾಲನೆಯು ನೀನೆಳಸುವೊಡೆ ಪಾತಿಪುದು ||
ನಂದೆಗಮನಾನದಲೆ ನೀ ನೊಲ |
ವಿಂದೆಪಿಂದೆಗೆಯದಲೆ ನೀ ನಿಜ |
ನಂದನನೆಂದು ತೋರ್ಪುದಾನಂದಕರ ಮುಂದಿರದೆ ||೭||

ಸೂರ್ಯಾಸ್ತಮನ

(ಒಂದು ಚಿಕ್ಕದೃಶ್ಯ)

ಮೇವಾಡ ಸೂರ್ಯನಾದ ರಾಣಾ ಪ್ರತಾಪನ ಚರಿತ್ರವನ್ನು ಸಮ್ಮ
ಸರಸ್ವತಿಯ ವಾಚಕರಲ್ಲನೇಕರು ಅರಿತಿರುವರು. ಇವನ ಆಳ್ವಿಕೆಯ
ಕೊನೆಯ ದಿನಗಳಲ್ಲಿ ಕೆಲವುಜನ ರಾಜದ್ರೋಹಿಗಳು ಮಹಮದೀಯರ
ಪಕ್ಷವನ್ನು ಸೇರಿ ಇವನ ರಾಜ್ಯನಾಶಕ್ಕನುವಾದರು. ರಾಣಾಪ್ರತಾಪನು
ಯವನ ಸಂಬಂಧವು ಎಷ್ಟು ಹೇಯವಾದುದೆಂದು ತಿಳಿದಿದ್ದನೋ ಅಷ್ಟೇ
ಪರಮಪಾವನನೆಂದು ತಿಳಿದಿದ್ದ ರಾಜಪುತ್ರರೂ ಇದ್ದರು. ಅವರಲ್ಲಿ
ಈ ಕಥೆಗೆ ಸಂಬಂಧಪಟ್ಟ ರಾಜಾಮಾನಸಿಂಹನೂ ಒಬ್ಬನು. ತನ್ನ
ತಂಗಿಯಾದ ಜೋಧ್‌ಬಾಯಿಯನ್ನು ಅಕ್ಬರನಿಗೆ ವಿವಾಹ ಮಾಡಿಕೊಟ್ಟು
ಅದರಿಂದ ಜತ್ರವರ್ತಿಯ ದಯೆಯನ್ನು ಸಂಪಾದಿಸಿದ್ದನು. ಒಂದುದಿನ
ಸೂರ್ಯಾಸ್ತಮಾನ ಸಮಯದಲ್ಲಿ ಈತನೊಬ್ಬನೇ ರಾಜಾಸ್ಥಾನದ ಆರಾ
ವಳೀಬೆಟ್ಟದ ಉಪಪತ್ರಿಕೆಯಲ್ಲಿ ತನ್ನ ಶೌರ್ಯಪ್ರತಾಪಗಳನ್ನು ತನ್ನ
ಷ್ಟಕ್ಕೆತಾನೇ ಹೊಗಳಿಕೊಳ್ಳುತ್ತ ಕಥಪಥ ತಿರುಗುತ್ತಿದ್ದನು.

ಮಾನಸಿಂಹ:—ಈಗ ನಿನ್ನ ನಕ್ಷತ್ರವು ಅತ್ಯುಚ್ಚಸ್ಥಿತಿಯಲ್ಲಿರು
ವುದು. ನೀನು ಶಕ್ತಿವಂತನೆಂಬುದನ್ನೀಗ ಎಲ್ಲರೂ ಒಪ್ಪಿಕೊಂಡಿರುವರು.
ನಿನ್ನ ಬಾಹುಬಲಕೀರ್ತಿಯು ಕಾಬೂಲಿನಿಂದ ಬಂಗಾಳದವರಿಗೆ ವ್ಯಾಪಿಸಿ
ರುವುದು. ಪ್ರಸಿದ್ಧ ಮೊಗಲ್‌ಸಾಮ್ರಾಜ್ಯದ ಬಲವಾದ ಸ್ತಂಭವು ನೀನು.
ನಿನ್ನಭ್ಯುದಯವನ್ನು ಕಂಡು ಮೊಗಲ ಸಾಮ್ರಾಜನೂ ಭೀತನಾಗುವನು.
ಪ್ರಸಿದ್ಧವಾದ ನಿನ್ನ ಹೆಸರು ಎಲ್ಲರ ಬಾಯಿಯಲ್ಲಿಯೂ ಉಚ್ಚರಿಸಲ್ಪಡು
ತ್ತಿರುವುದು. ಈ ವೈಭವಗಳಿಗಿಂತ ನಿನಗೆ ಬೇಕಾದುದಿನ್ನೇನು? ನೀನು
ಮತ್ತೆ ನನ್ನನ್ನಪೇಕ್ಷಿಸುವಿ? ಅ. ಕ್ರೂರವಾದ ಮಾತು! "ಅಪೇಕ್ಷೆ".
ಅವೆಷ್ಟೋಇವೆ. ನನ್ನಾಶೆಗೆ ಇನ್ನೂ ಅಂತ್ಯವೇ ಇಲ್ಲ. ಇನ್ನೂ ನನ್ನ
ಹಿಂದೆ ಜನರು ಹಿಯ್ಯಾಳಿಸುತ್ತಿರುವರು. ಮೊಗಲನಿಗೆ ನನ್ನ ತಂಗಿ

ಯನ್ನು ಮದುವೆಮಾಡಿಕೊಟ್ಟೆನೆಂದು ಜನರು ಕೈಕಟ್ಟಿ ನಗುತ್ತಿರುವರು. ಪ್ರತಾಪ್, ಪ್ರತಾಪ್! ಇಂದಿಲ್ಲ ನಾಳೆಯಾದರೂ ನಿನ್ನ ಕೀರ್ತಿಲತೆಯು ಜನರ ಕಾಲಕೆಳಗೆ ತುಳಿಯಲ್ಪಡುವುದು. ನೀನು ನನ್ನ ಹೆಸರನ್ನು ಕೆಡಿಸಿದೆ. ನನಗೆ ನೀನು ರಾಹು. ನನ್ನ ತಲೆತಗ್ಗುವಂತೆಮಾಡಲು ನೀನೇ ಮುಖ್ಯಕಾರಣವು. ಆದರೆ ನೀನಿದರ ಫಲವನ್ನು ಕ್ಷಿಪ್ರದಲ್ಲಿಯೇ ಅನುಭವಿಸುವೆ. (ತಲೆಯೆತ್ತಿನೋಡಿ) ಈ ರಮಣಿಯಾರು?

"ಅವಳ ಹೆಜ್ಜೆಯು ಸೊಂಪಾಗಿ ಬೆಳೆದು ಮುಂಜಿನಿಂದತೊಯ್ದು ಗರಿಕೆಹುಲ್ಲಿನಮೇಲೆ ಬಿರುಗಾಳಿಯಿಂದ ಹೊಡೆಯಲ್ಪಟ್ಟು ಬೀಳುವ ಪುಷ್ಪರಾಶಿಯಂತೆ ಮೃದುವಾಗಿರುವುದು. ಅವಳನ್ಮೃದುನಡೆಯು ಸೈನಿಕರ ಒರಟು ಕಾಲ್ನಡಿಗೆಯಿಂದ ಕೆದರಿ ಕಲ್ಲೋಲವಾಗಿರುವೀ. ಅರಣ್ಯದಲ್ಲಿ ನೋಡಲೆಪ್ಪುರಮ್ಯವಾಗಿರುವುದು. ಈಕೆಯು ನನ್ನಬಳಿಗೆ ಬರುವಂತೆ ತೋರುತ್ತದೆ. ಇದೇನಾಶ್ಚರ್ಯ! ಇಲ್ಲ, ಇಲ್ಲ, ವನದೇವತೆಯೇನೋ! ಮತ್ತಾರಿವಳು?

ಅವಳು ದುಃಖದೇವತೆಯಿಂದಾಲಂಗಿಸಲ್ಪಟ್ಟವಳಂತೆ ಕಂಡುಬಂದರೂ ಆ ದುಃಖವೇ ಅವಳ ಸೌಂದರ್ಯವನ್ನಿನ್ನಷ್ಟು ಹೆಚ್ಚಿಸಿತ್ತೆಂದು ಹೇಳಬಹುದು" ಮಾನಸಿಂಹನು ಹೀಗೆಂದು ತನ್ನಲ್ಲಿತಾನೇ ಬಹಳ ಯೋಚಿಸಿದವನಾಗಿ ಕೊನೆಗೆ ಆ ರಮಣಿಯಕೂಡೆ ಸಂಭಾಷಣೆ ಮಾಡತೊಡಗಿದನು.

ಮಾನಸಿಂಹ:—ರಮಣೀ! ಸಮೀಪಕ್ಕೆ ಬಾ. ನಾನೊಬ್ಬ ರಾಜಪೂತನು. ಸ್ತ್ರೀಯರನ್ನುಹೇಗೆ ಗೌರವಿಸಬೇಕೆಂಬುದನ್ನು ರಾಜಪುತ್ರನು ಬಲ್ಲನು. ಆದುದರಿಂದ ನೀನು ಹೆದರಬೇಡ.

ರಮಣಿ:—ಅದು ಕುದ್ಧ ಸುಳ್ಳು.

ಮಾನಸಿಂಹ:—ಏನು! ಅಧಿಕಪ್ರಸಂಗಿಯಾದ ರಮಣಿಯೇ! ಮಾನಸಿಂಹನು ಸುಳ್ಳುಗಾರನೆಂದು ಧೈರ್ಯವಾಗಿ ಹೇಳುವಿಯಾ?

ರ:—ಅಷ್ಟುಮಾತ್ರವೇಕೆ! ಇನ್ನೂ ಹೆಚ್ಚಾಗಿಯೇ ಹೇಳುವೆನು.

ಮಾನಸಿಂಹ:—ನಿನ್ನ ಧೀರತ್ವವು ನನ್ನನ್ನಾಶ್ಚರ್ಯಗೊಳಿಸುವುದು. ಮಾನಸಿಂಹನ ಖಡ್ಗವು ಸ್ತ್ರೀದೇಹವನ್ನು ಸ್ಪರ್ಶಿಸದಾದ್ದರಿಂದ ನೀನು ಹೇಗೂ ಸೌಖ್ಯವಾಗಿರುವೆ.

ರಮಣಿ:—ಸೋದರನ ರಕ್ತವು ಅದಕ್ಕಿಂತಲೂ ನಿಕೃಷ್ಟವೇ? ನಿನ್ನಾಖಡ್ಗವು ಅದರಿಂದ ಕಲುಷಿತವಾಗಿಲ್ಲವೆ?

ಮಾನಸಿಂಹ:—ಸುಂದರಿ, ನೀನು ಬಗಟನಂತೆ ಮಾತನಾಡುವೆ. ಅದರರ್ಥವನ್ನು ತಿಳಿಯುವ ಸಾಮರ್ಥ್ಯವು ನನಗಿಲ್ಲ.

ರಮಣಿ:—(ವೀರಾವೇಶದಿಂದ) ಇಲ್ಲವೇ ಇಲ್ಲ! ನೀನು ಸೋದರರಾದ ರಾಜಪುತ್ರರಮೇಲೆ ಕತ್ತಿಯನ್ನೆತ್ತಿಯೇ ಇಲ್ಲವೇ? ಮೇವಾಡ ಸೂರ್ಯನೂ ಭಾರತೇಯರ ಪರಮಪವಿತ್ರ ಪೂಜ್ಯವಸ್ತುವೂ ಆದ ಪ್ರತಾಪನಿಗೆ ವಿರೋಧವಾಗಿ ಮೊಗಲರೊಡನೆ ಸೇರಿಲ್ಲವೇ? ಇದಕ್ಕಿಂತಲೂ ಮತ್ತೇನುಬೇಕು?

ಮಾನಸಿಂಹ:—ಆ ಹೆಸರನ್ನು ನನ್ನಮುಂದೆ ಎತ್ತಿದೆಯಾದರೆ ನೀನು ಸ್ತ್ರೀಯೆನ್ನುವುದನ್ನೂ ಕೂಡಾ ಮರತೇನು; ಎಚ್ಚರಿಕೆ!

ರಮಣಿ:—(ನಗುತ್ತಾ) ಆಶ್ಚರ್ಯವೇನು? ಮಾತೃದೇಶದ್ರೋಹಿಗೆ ಸ್ತ್ರೀಯು ಪವಿತ್ರವೇನೂ ಪವಿತ್ರವಲ್ಲ.

ಮಾನಸಿಂಹ:—ಅಷ್ಟಕ್ಕೇನಿಲ್ಲಿಸು. ನನ್ನ ಕ್ರೋಧಾಗ್ನಿಯನ್ನು ನಿನ್ನ ವಾಕ್ಯಗಳಿಂದ ಹೆಚ್ಚಿಸಬೇಡ. (ಬರೆಯಿಂದ ಖಡ್ಗವನ್ನು ಸೆಳೆಯುವನು.)

ರಮಣಿ:—ನಿನ್ನ ಖಡ್ಗವು ನನಗೆ ಭೀತಿಯನ್ನುಂಟುಮಾಡಲಾರದು. ಥಳಥಳಿಸುತ್ತಿರುವ ನಿನ್ನ ಖಡ್ಗದಕಡೆ ನೋಡು. ಅದರಲ್ಲಿ ನಿನ್ನ ಮಾತೃ ರಕ್ತದ ಕಲೆಯು ಹಾಗೆಯೇ ಇದೆ.

ಮಾನಸಿಂಹ:—ಹುಚ್ಚಿ! ಹುಚ್ಚಿ! ಏನಂದೆ?

ರಮಣಿ:—ಏನಂದೆನೇ? ಮೊಗಲರಿಗಾಗಿ ನೀನು ತೋರಿಸುವ ಪ್ರತಿಯೊಂದು ಶೌರ್ಯಕಾರ್ಯವೂ, ಪ್ರತಿಯೊಂದು ಉಪಕಾರವೂ ನಿನ್ನ ಜನ್ಮಭೂಮಿಗೆ ತೋರಿಸುವ ಕೃತಘ್ನತೆಯನ್ನು ತಾಯಿಯು ಎಂದಾದರೂ ಮರೆಯುವಳೇ?

ಮಾನಸಿಂಹ:—ರಮಣೀ! ಬಾಯಿಮುಚ್ಚು. ನಿನ್ನ ಸೌಂದರ್ಯವು ನಿನ್ನ ಪ್ರಾಣವನ್ನುಳಿಸಲಾರದೆಂದು ತಿಳಿ. ನಿನ್ನ ರೂಪಕ್ಕೆ ಮರುಳಾಗಿ ವಿಷ್ಣುವು ದಂಡಿಸದೆ ಬಿಡಲು ನಾನು ಯವನನಲ್ಲ.

ರಮಣಿ:—(ಆಶ್ಚರ್ಯದಿಂದ) ಹಾ ! ನೀನು ಯವನರನ್ನು ದ್ವೇಷಿಸುವೆಯಾ ? ಹಾಗಿದ್ದಲ್ಲಿ ನಿನ್ನ ತಂಗಿಯನ್ನು ಯವನನಿಗದೇಕೆ ವಿವಾಹ ಮಾಡಿಕೊಟ್ಟೆ ? ಮೊಗಲರಿಗದೇಕೆ ಸಹಾಯಮಾಡಿದೆ ? ಹೀಗೆ ಮಾಡಲು ಪ್ರತಾಪನು ನಿನಗೇನನ್ಯಾಯಮಾಡಿದನು ? ನಿನ್ನಲ್ಲಿ ನೆಲಸಿರುವ ಕಾಪಟ್ಯವೂ, ದ್ರೋಹವೂ ಅವನಲ್ಲಿಲ್ಲದಿರುವುದರಿಂದಲೇನೋ ?

ಮಾನಸಿಂಹ:—(ಖಡ್ಗವನ್ನೆತ್ತಿ ರಮಣಿಯಕಡೆಗೆ ತಿರುಗಿ) ಏಕಾಜಿ! ಸಾಯಲು ಸಿದ್ಧಳಾಗು?

ರಮಣಿ:—(ಧೈರ್ಯದಿಂದ) ರಾಜಪುತ್ರರಮಣಿಯು ಎಂದಿಗೂ ಸಾವಿಗೆ ಹೆದರಳು.

ಮಾನಸಿಂಹ:—(ಆಶ್ಚರ್ಯದಿಂದ) ಏನು ! ರಾಜಪುತ್ರಿಯೇ !

ರಮಣಿ:—ಅಯ್ಯೋ ! ಬಂದುಕಾಲದಲ್ಲಿ ನಾನಾಗಿಬ್ಬೆನು.

ಮಾನಸಿಂಹ:—ಆಗಿದ್ದೆ ; ಅದೇಕೆ ? ಈಗಿಲ್ಲವೇನು ? ಮುಂದೆ ಬಾ ; ನಿನ್ನ ಅಧಿಕಪ್ರಸಂಗವನ್ನು ಕ್ಷಮಿಸಿದೆ. ನಿನ್ನ ರಹಸ್ಯಗರ್ಭಿತವಾದ ಮುಖಬಿಂಬವನೊಮ್ಮೆಂದುಸಲ ನೋಡುವೆನು, ಬೆಳಕಿಗೆ ಬಾ. ನಿನ್ನ ಧ್ವನಿಯು ನನಗೆ ಪರಿಚಯವಾದದ್ದಾಗಿ ತೋರುವುದು. ಅಕ್ಬರನು ಕೂಡ ಕಂಡಂ ಜುವಂತಹ ಮಾನಸಿಂಹನನ್ನು ಮರುಳುಗೊಳಿಸುವಂತಹ ಸುಂದರ ರಮಣಿಯಾದ ನೀನಾರು ?

ರಮಣಿ:—(ಭೀತಿಯಿಂದ) ಹಾ ! ಹಾ ! "ಅಕ್ಬರನು ಕೂಡ ದ್ವೇಷಿಸುವ" ಎಂದು ಹೇಳು.

ಮಾನಸಿಂಹ:—ಅವನಿಗಷ್ಟು ಧೈರ್ಯವೆಲ್ಲಿಯದು ? ಅವನ ಸಿಂಹಾಸನದ ಆಧಾರವು ನಾನೆಂಬುದನ್ನು ಅವನು ಚನ್ನಾಗಿ ಬಲ್ಲನು. ಹೀಗಿರು ವಾಗ ಅವನ್ಯಾರಿಗೆ ಮರ್ಯಾದೆ ಮಾಡಬೇಕು ?

ರಮಣಿ:—ಜಯಹೊಂದಿದ ರಾಜನು ತಾನು ಜೈಸಿದವನನ್ನೆಂದಿಗೂ ಗೌರವಿಸನು. ತನ್ನ ಅಂಬಿಗೆ ತಪ್ಪಿದವನನ್ನು ಗೌರವವಾಗಿ ಕಾಣುವನೆಂದು ನೀನಂದುಕೊಳ್ಳುವುದು ಕುದ್ಧ ತಪ್ಪು. ಅವನು ನಿನ್ನ ಬೆನ್ನು ಕಟ್ಟಿದರೂ ಅವನ ವೀರನಾದ ಶತ್ರುವನ್ನೇ ಅಂತರ್ಯದಲ್ಲಿ ಗೌರವಿಸುವನು;

ಮಾನಸಿಂಹ:—(ರೋಷದಿಂದ) ನಿಲ್ಲು, ನಿಲ್ಲು. ಮನುಷ್ಯನ ಸಹನಕ್ಕೂ ಎಲ್ಲೆಯುಂಟು. ನೀನು ನಿಜವಾಗಿಯೂ ಪ್ರತಾಪನ ಗೂಢಚಾರಳು. ನ್ಯಾಯಶಾಸ್ತ್ರಾನುಸಾರವಾಗಿ ನೀನು ಶಿಕ್ಷೆಗರ್ಹಳು. (ಹೀಗೆಂದು ಹೇಳಿ ಖಡ್ಗದಿಂದ ಹೊಡೆಯಲುದ್ಯುಕ್ತನಾದಾಗ, ರಮಣಿಯು ತನ್ನ ಮೇಲು ಹೊದಿಕೆಯನ್ನು ತೆಗೆಯುವಳು.)

ಮಾನಸಿಂಹನು (ಆಶ್ಚರ್ಯದಿಂದ!) ಏನು? ಜೋಧಪುರಿ! ನನ್ನ ತಂಗಿ! ಇದೇನು ಮಾಯೆಯೋ? ಕನಸೋ?

ರಮಣಿ:—ಹೌದು; ನಾನು ನಿನ್ನ ತಂಗಿಯಾದ ಜೋಧಪುರಿ. (ಇನ್ನಾ ರಮಣಿಯನ್ನು ನಾವೂ ಜೋಧಪುರಿಯೆಂದೇ ಕರೆಯೋಣ.)

ಮಾನಸಿಂಹ:—ತಂಗೀ! ದಿಲ್ಲಿಯ ರಾಣಿ! ಭವಿಷ್ಯ ಭಾರತಚಕ್ರವರ್ತಿಯ ಮಾತೆ! ನನ್ನನ್ನು ಕ್ಷಮಿಸು. ಅದಿರಲಿ, ದುಃಖಿತಳಂತೆ ನೀನು ತೋರುವ ಕಾರಣವೇನು?

ಜೋಧ್‌ಬಾಯಿ:—ನಿನಗಾವಿಷಯವು ಗೊತ್ತಿಲ್ಲವೇನು?

ಮಾನಸಿಂಹ:—ತಂಗಿ! ನಿನ್ನ ಮಾತು ನನಗೆ ಭ್ರಮೆಯುಂಟುಮಾಡುವುದು. ಯಾವಳ ಅಜ್ಞಾಚಕ್ರದಿಂದೀ ಭಾರತವರ್ಷವು ಜಲಿಸುತ್ತಿರ್ವುದೋ, ಯಾವಳು ಐಶ್ವರ್ಯ, ಸುಖ, ಭೋಗಾದಿಗಳ ಸಮುದ್ರದಲ್ಲಿ ಮುಳುಗೇಳುತ್ತಿರುವಳೋ ಅಂಥವಳ ಬಾಯಿಂದೀಮಾತು ಹೊರಟತೆಂದರೆ ಅದು ನನಗೆಷ್ಟು ಭ್ರಮೆಯುಂಟುಮಾಡಬಹುದು?

ಜೋಧ್‌ಬಾಯಿ:—ನೀನು ನನ್ನನ್ನು ಅಗ್ನಿಗಾಹುತಿ ಇತ್ತೆ.

ಮಾನಸಿಂಹ:—ಅಸ್ಥಿರಳಾಗಬೇಡ; ತಂಗಿ! ಶಾಂತಿಹೊಂದು. ನಿನ್ನ ಮನಸ್ಸು ದುಃಖಗೊಂಡಿರುವದು, ಸಮಾಧಾನ ಹೊಂದು. ನಿನ್ನ ಮಾತುಗಳು ನನಗರ್ಥವಾಗುವುದಿಲ್ಲ, ತಿಳಿಯುವಂತೆ ಹೇಳು.

ಜೋಧ್‌ಬಾಯಿ:—ಅರ್ಥವೇ! ಹೇಳುವೆನು ಕೇಳು; ನನ್ನನ್ನು ಮುಸನನಿಗೇಕೆ ವಿವಾಹಮಾಡಿಕೊಟ್ಟೆ?

ಮಾನಸಿಂಹ:—ತಂಗಿ! ನಿನ್ನ ಸುಖಕ್ಕಾಗಿ.

ಜೋದ್‌ಬಾಯಿ:—(ಸಿಟ್ಟಿನಿಂದ) ನನ್ನ ಸುಖಕ್ಕಾಗಿಯೇ? ಈ ವಿವಾಹದಿಂದ ನಿನ್ನ ಸ್ಥಿತಿಯನ್ನು ಉನ್ನತಿಗೊಳಿಸಲು ನೀನು ಪ್ರಯತ್ನಿಸಲಿಲ್ಲವೇ?

ಮಾನಸಿಂಹ:—ಸವಾಲಿಗೆ ತಕ್ಕ ಜವಾಬು. ತಂಗೀ, ನಾನಿದಕ್ಕಹ್ಹಾನೇ?

ಜೋದ್‌ಬಾಯಿ:—ನಿನ್ನ ಸ್ವಪ್ರಯೋಜನವನ್ನು ಮಾತ್ರ ನೋಡಿದೆ. ನಿನ್ನ ಬಡತಂಗಿಯ ಸುಖದ ಕಡೆ ಲಕ್ಷ್ಯವಿಟ್ಟೆಯಾ? ನಿನ್ನ ಸ್ವಾರ್ಥತೆಗೆ ಧಿಕ್ಕಾರವಿರಲಿ!

ಮಾನಸಿಂಹ:—(ವ್ಯಂಗದಿಂದ) ಭಾಪು! ಡಿಲ್ಲಿಯ ರಾಣಿ ಬಡವಳು, ಅಲ್ಲವೇ?

ಜೋದ್‌ಬಾಯಿ:—ಯಾಕೆ? ಎಲ್ಲಕ್ಕಿಂತಲೂ ಐಶ್ವರ್ಯವೇ ಪ್ರಧಾನವೇ? ಆ ಶಿಕ್ಷಣವನ್ನು ಬಾಲ್ಯದಲ್ಲೇ ನನಗೇಕೆ ಕೊಡಲಿಲ್ಲ? ಐಶ್ವರ್ಯವನ್ನು ಧಿಕ್ಕರಿಸುವ ಹಿಂದೂಕುಲದಲ್ಲಿ ನಾನೇಕೆ ಜನ್ಮವೆತ್ತಿದೆ?

ಮಾನಸಿಂಹ:—ಎಲ್ಲಮತಗಳ ಸಾರಾಂಶವೂ ಬಂದೇ. ತಂಗಿ, ಚಕ್ರವರ್ತಿಯೇ ಸ್ವತಃ ಈ ಪದ್ಧತಿಯನ್ನು ಧಾರಾಳವಾಗಿ ಅನುಷ್ಟಿಸುತ್ತಿರುವನು.

ಜೋದ್‌ಬಾಯಿ:—ನಾನು ವಿದ್ಯಾರ್ಥಿಯಲ್ಲ, ಈ ವಿಷಯವಾಗಿ ನಿನ್ನೊಡನೆ ಚರ್ಚಿಸಲಾರೆ. ಆದರೆ ನನ್ನ ಮೊದಲಿನಧ್ಯೇಯಗಳು ಪ್ರಕೃತ ಸ್ಥಿತಿಯನ್ನೆಳ್ಳಷ್ಟೂ ಅನುಸರಿಸಲಾರದ್ದಾಗಿದೆ. ನೀನು ಈಗ ಅತ್ಯಂತ ಸುಖವೆಂದು ಯಾವುದಕ್ಕೆ ಹೇಳುವೆಯೋ ಆ ಸುಖವೇ ನನ್ನನ್ನು ಗೆದ್ದಲುಹುಳದಂತೆ ದಿವಾರಾತ್ರಿಯೂ ತಿನ್ನುತ್ತಿರುವುದು. ನೀನು ನನ್ನನ್ನು ನಿನ್ನ ರಾಜ್ಯದಲ್ಲಿರುವ ಒಬ್ಬ ಬಡರಾಜಪುತ್ರನಿಗೇಕೆ ಕೊಟ್ಟು ಮದುವೆಮಾಡದೆಹೋದೆ? ರಾಜಪುತ್ರಕುಲದಲ್ಲಿ ಹುಟ್ಟಿ, ಮಾತೃಭೂಮಿಯ ಚರಣಸೇವೆಯಲ್ಲಿ ಮಗ್ನಳಾದ ವೈಕುಂಠವಾಸಿಯ ಪೂಜೆಗೆ ಯುಕ್ತಳಾದ ರಮಣಿಯನ್ನು ಕೇವಲ ಸ್ವರ್ಣಮೊಹರೆಗಳಾಸೆಗಾಗಿ ಯವನನಿಗೆ ಪಾಣಿದುದಾಪಣ್ಯಾಯ? ಆ ಸ್ಪರ್ಶವು ನನ್ನನ್ನೆಷ್ಟು ದಹಿಸುತ್ತಿದೆ ನೆನ್ನು ವ್ಯಥೆಯನ್ನು ನೀನೇನುಬಲ್ಲೆ?

ಮಾನಸಿಂಹ:—ತಂಗೀ, ನನಗೀಗ ಜ್ಞಾನೋದಯವಾಯಿತು. ಈ ವಿಷಯವನ್ನು ನೀನದೇಕೆ ಮೊದಲೇ ಹೇಳದೇಹೋದೆ?

ಜೋದ್‌ಬಾಯಿ—ಈಗಲಾದರೂ ನಿನ್ನ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು ಕ್ಷಮಿಸುವಂತೆ ಭಗವಂತನನ್ನು ಪ್ರಾರ್ಥಿಸು.

ಮಾನಸಿಂಹ:—ತಂಗೀ, ನನ್ನನ್ನು ಕ್ಷಮಿಸು (ಮೊಣಕಾಲೂರಿ ಕುಳಿತು ಪ್ರಾರ್ಥಿಸುವನು).

ಜೋದ್‌ಬಾಯಿ:—ನಾನೇನೋ ಕ್ಷಮಿಸುವೆನು ; ಆದರೆ ನಿನ್ನ ರಾಜ್ಯವು ನಿನ್ನಪರಾಧವನ್ನು ಕ್ಷಮಿಸುವುದೇ ?

ಮಾನಸಿಂಹ :—(ಕಣ್ಣೀರುತುಂಬಿ) ಹಾಗಾದರೆ ನಾನೇನು ಮಾಡಲಿ ? ನಾನು ಮರಳಿನಲ್ಲಿ ನನ್ನ ಹೆಸರನ್ನು ಚಿತ್ರಿಸಿರುವೆನೇ ?

ಜೋದ್‌ಬಾಯಿ:—ಹೌದು ; ಪ್ರತಾಪನ ಪವಿತ್ರನಾಮವು ಪ್ರತಿಯೊಂದು ಬಂಡೆಯಮೇಲೆ

ಮಾನಸಿಂಹ :—(ತಲೆಯಮೇಲೆ ಕೈಯ್ಯನಿಟ್ಟುಕೊಂಡು ಖಿನ್ನತೆಯಿಂದ) ಹಾ ! ದುರ್ವಿಧಿಯೇ ! ನನ್ನ ಸಹತ್ಕಾರ್ಯಗಳೆಲ್ಲವೂ ಈರೀತಿ ಪರಿಣಮಿಸಿದವೇ ?

ಜೋದ್‌ಬಾಯಿ;—ಆ ಪ್ರಶ್ನೆಗೆ ನಾನದೇಕೆ ಉತ್ತರ ಕೊಡಲಿ ? ಚರಿತ್ರೆಯು ವಿಸ್ತಾರವಾಗಿ ಹೇಳುವುದು.

ಮಾನಸಿಂಹನು ಮೌನನಾಗಿ ಅಲ್ಲಿಂದಿಲ್ಲಿಗೆ ಕಥಪಥ ತಿರುಗಲಾರಂಭಿಸಿದನು. ಜೋದ್‌ಪುರಿಯು ಸದ್ದಿಲ್ಲದೆ ಪಶ್ಚಿಮಭಾಗದಾಕಾಶವನ್ನು ನೋಡುತ್ತಾ, " ಹಾ ! ಎಂತಹ ರಮ್ಯವಾದಛಾಯೆಯು ಪೃಥ್ವಿಗಿಳಯುತ್ತಿದೆ. ಆ ಛಾಯೆಯು ರಾಜಪುತಾಣದ ಪ್ರತಿಯೊಂದು ಗುಡ್ಡದಲ್ಲಿಯೂ ಎಷ್ಟು ಸುಂದರವಾದ ಬಣ್ಣದಿಂದ ಚಿತ್ರಿಸುತ್ತಿದೆ. ಅಂತ್ಯರಾತ್ರಿಯು ಇದರ ಮೇಲೆ ಮುಳುಗುವಂತಿದ್ದ ಮೇರವಾಡ ಸೂರ್ಯನಾದ ಪ್ರತಾಪನ ಕೀರ್ತಿಯೊಂದೇ ಬರುವ ರಾತ್ರಿಯಲ್ಲಿ ಬೆಳಗುವನು. ಪ್ರಾಜ್ಞೇನಪ್ರಾಕಸ್ಯ ವನ್ನು ಮರಳಿ ಪಡೆಯುವುದೇ ? " ಎಂದು ತಗ್ಗಿದ ಸ್ವರದಿಂದ ಹೇಳಿ

ದ್ದನ್ನು ಕೇಳಿದ ಪೂನಸಿಂಹನು, "ಅಯ್ಯೋ! ತಂಗೀ, ಅದು ಪ್ರಳಯ ವಸ್ತುಗಳಲ್ಲಿಲ್ಲ. ಜ್ವಾಜ್ವಲ್ಯಮಾನವಾದ ಪ್ರಾತಃಕಾಲವು ಹಗಲಾಗಿಯೂ ಸಾಯಂಕಾಲವಾಗಿಯೂ ಆದುದು ಪುನಃ ಸೂರಾಸ್ತಮನವಾಗುವವರೆಗೂ ಹಿಂತಿರುಗುವುದಿಲ್ಲ. ಅದು ಅಂಧಕಾರಾವೃತವಾದ ಹೃದಯದಲ್ಲಿ ನಂದಿ ಹೋಗುವ ಪ್ರತಿ ಛಾಯೆಯನ್ನು ಅಂತ್ಯನಿರಾಶೆಯಲ್ಲಿ ತಲ್ಲೀನವಾಡು ವುದು. ಆಹಾ! ವೃಥಾಲಾಪ, ವೃಥಾ ಆಶೆ ಆದರೂ ಎಷ್ಟು ಮಧುರ ಎಷ್ಟು ರಮಣೀಯ!"

(ರಾಜಪುತ್ರರಮಣಿಯರು ತಮ್ಮ ಸ್ಥೈರ್ಯದಿಂದ ತಮ್ಮ ತಮ್ಮ ಸಹೋದರರು, ತಂದೆ ಮತ್ತು ಪುತ್ರರನ್ನು ಅವರ ತಪ್ಪುನೆಪ್ಪುಗಳನ್ನು ತಿದ್ದಿ, ಸರಿಯಾದ ಮಾರ್ಗಕ್ಕೆ ತರುತ್ತಿದ್ದರೆನ್ನುವುದು ಮೇಲ್ನೋಟಕ್ಕೆ ಜೆಕ್ಕ ದೃಷ್ಯದಿಂದ ತಿಳಿಯುವುದು. ನಾವೂ ಇವರಂತೆ ಸ್ತ್ರೀಯರೇ ಆದರೂ ಭಯದೇವತೆಯು ನಮ್ಮನ್ನಾವರಿಸಿ ನಮ್ಮಲ್ಲಿರುವ ಅಲ್ಪಸ್ವಲ್ಪ ಸ್ಥೈರ್ಯ ವನ್ನೂ ನಾಶಗೊಳಿಸಿ ಆಟದಬೊಂಬೆಗಳಾಗಿರುವೆವು. ಪುರುಷರಾದರೂ ನಮ್ಮಿ ಭಯದೇವತೆಗೆ ಸಹಾಯಕರಾಗಿ ನಮ್ಮನ್ನು ಪತ್ತಿಷ್ಟು ಮೂಲೆ ಗೊತ್ತಿರುವರು. ನಾವು ಪೂರ್ವ ರಮಣಿಯರ ಧೈರ್ಯ ಸ್ಥೈರ್ಯವನ್ನು ಪಡೆದಿದ್ದರೆ ಮೇವಾಡದ ಸೂರ್ಯನಾದ ರಾಣಾಪ್ರತಾಪನಂತಹ ವೀರರು ಈ ಇಪ್ಪತ್ತನೆಯ ಶತಮಾನದಲ್ಲಿಯೂ ಬೇಕಾದಷ್ಟು ಜನರು ಹುಟ್ಟು ತಿದ್ದರು. ಪುರುಷರಾದರೂ ಸ್ತ್ರೀಯರನ್ನು "ನಸ್ತ್ರೀಸ್ವಾತಂತ್ರ್ಯಮರ್ಹತಿ" ಎಂಬ ಮನುವಿನಾಧಾರವನ್ನು ಮುಂದಿಟ್ಟುಕೊಂಡು ಹೆಣ್ಣಾಳಿಸಿ ತಾದೆ ಅವರ ಜ್ಞಾನಶಕ್ತಿಯನ್ನು ಅಭಿವೃದ್ಧಿಗೊಳಿಸಿ ರಾಜಪುತ್ರವಂಶಗಳಂತಹ ಧೈರ್ಯ ಸ್ಥೈರ್ಯವನ್ನು ನೆಲಗೊಳಿಸಿದರೆ ಅವರಿಂದ ರಾಣಾಪ್ರತಾಪ, ಶಿವಾಜಿ ಮೊದಲಾದವರಂತಹ ವೀರರೂ, ಅಹಲ್ಯಾಬಾಯಿಯರೂ ಸ್ಸಿ ಲಕ್ಷ್ಮೀಬಾಯಿ, ತಾರಾಬಾಯಿ ಮೊದಲಾದವರಂತಹ ವೀರವನಿತೆಯರು ಜನಿಸಿ, ನಮ್ಮೀ ಭಾರತಕೀರ್ತಿಯನ್ನು ಮತ್ತೆ ಗಾನಮಾಡುವರು. ಅಂತಹ ಭಾಗ್ಯವು ನನಗೆ ಹ್ಲಿಸ್ಪದಲ್ಲಿಯೇ ಉಂಟಾಗಲೆಂದು ಜಗತಿಯನ್ನು ಜೋಡಿಸಿ ಹಸ್ತ ರಾಗಿ ಪ್ರಾರ್ಥಿಸೋಣ.)



श्रीमती सौ० ताईबाई दीक्षित.

ಸರಸ್ವತೀ

ಸಂಪುಟ ೫. | ಫಿಬ್ರವರಿ—ಮಾರ್ಚಿ ೧೯೨೬. | ಸಂಚಿಕೆ ೧೦-೧೧

ಹೂವುಗಳು.

—: ಪೂಜಾರಿ :—

ಪರಶಿವನಡಿದಾವರೆಗಿಡೆ ಪೂವಂ
ತರಿಯುವೆನೆಲೆ ತರುಲತೆಗಳೆ ನೀವುಂ
ಹರುಷದೊಳರ್ಪಿಸಿ ನಿಮ್ಮ ಕಾಣ್ಕೆಯಂ.

—: ತರು :—

ಆಂದಮಿಲ್ಲದೆನ್ನೀಬರಿ ಬಾಳ್ವಿಗೆ
ಚಂದಮನಿತ್ತಪುದೀ ಕುಸುಮಂ ಮಿಗೆ
ತಂದೆ ಕೀಳ್ಬೇಡದ ನೀಂ ಬೇಡುವೆ.

—: ಲತೆ :—

ಎನ್ನಮನದ ಆನಂದದ ಗಾನವ
ಬಣ್ಣಿಸುವೀ ಬಹುವರ್ಣದ ಕುಸುಮವ
ನನ್ಯಾಯದೆ ನೀಂ ಕೀಳ್ವೆಯೋ ಛಿ! ಛೀ!

—: ಭೂಮಿ :—

ಅರಸಿಕೆಯಾದೆನ್ನೆರ್ದೆಗೀ ಸೊಗಸಿನ
ಮುರಲಿನತೊಲ್ಮೆಯ ನೀವುದೊ ಕಾಣೆನು
ಅರಿಯದೆ ನೀನದ ಕೀಳ್ವೆಯೊ ಮಾನವ?

—: ಹೂವು :—

ಪುಟ್ಟಿದುದೇತಕೆ? ಬಳಿಯಿಹ ಸುರಭಿಯ
ದಿಟ್ಟಿಯೊಳೆರಚಿ ಕೊಡುವ ಮುನ್ನೆನ್ನಯ
ಹುಟ್ಟುಗೆಡಿಸಬೇಡ್ವೆ ನೀಂ ಸೋದರ.

—: ಒಟ್ಟುಗೂಡಿ :—

ತರಿಯಂ ಸೃಷ್ಟಿಸಿದಾ ಘನಮಹಿಮನ
ಚರಣಸೇವೆಗೊದಗಲ್ಕೀ ಚಲ್ವಿನ
ವರಪರಿಮಳಮಂ ಶಿರದೆ ಪೊತ್ತಿಹೆವು.

—: ಪೂಜಾರಿ :—

ತಿಳಿದೇಂ ನಿಮ್ಮಯ ಸರಳಹೃದಯಮುಂ
ನಲಿಸುವೆನಾ ಘನ ಮಹಿಮನ ಪದಮುಂ
ಲಲಿತಮಾದ ನಿಮ್ಮೀ ಮುಗಳ್ನಗೆಯಿಂ.

'ಭಾರತೀಸುತ'

ರಾಷ್ಟ್ರೀಯ ಮಹಾಸಭೆಯೂ ಶ್ರೀಮತಿ ಸರೋಜಿನಿ ದೇವಿಯವರೂ

ಅಖಿಲ ಭಾರತೀಯ ರಾಷ್ಟ್ರ ಮಹಾ ಪರಿಷದವ ಅಧ್ಯಕ್ಷ ಸ್ಥಾನವನ್ನು ಶ್ರೀಮತಿ ಸರೋಜಿನಿ ದೇವಿಯವರಿಗೆ ಕೊಟ್ಟು ಸಮಸ್ತ ಸ್ತ್ರೀ ಸಮುದಾಯವನ್ನೂ ಮನ್ನಿಸಿದ್ದಕ್ಕಾಗಿ ನಾವು ದೇಶೀಯ ಮುಂದಾಳುಗಳನ್ನು ಬಾರಿಬಾರಿ ಕೊಂಡಾಡುತ್ತೇವೆ. ಸ್ತ್ರೀಯರ ಉನ್ನತಿಯಾಗದೆ ಯಾವುದೊಂದು ರಾಷ್ಟ್ರವೂ ಉನ್ನತಿಯ ಶಿಖರಕ್ಕೇರುವುದಿಲ್ಲವೆಂಬ ಅನುಭವಸಿದ್ಧವಾದ ಮಾತನ್ನು ಈಗಲೀಗ ಎಲ್ಲಾ ಜನರೂ--ಅದರಲ್ಲಿಯೂ ಭಾರತೀಯರು ಮನಗಂಡಿರುವುದನ್ನು ನೋಡಿದರೆ ನಮ್ಮಗಳ ಭಾವಿ ಭಾಗ್ಯೋದಯವು ಸಮೀಪಿಸುತ್ತಲಿದೆಯೆಂದು ಧಾರಾಳವಾಗಿ ಹೇಳಬಹುದು. ಎಂದೋ ಆಗಬೇಕಾಗಿದ್ದ ಇಂತಹ ಸ್ತುತ್ಯ ಸುಧಾರಣೆಯು ಇಂದಾದರೂ ಆಯಿತೆಂದು ಹೇಳಲು ಅತ್ಯಂತಾನಂದವೆನಿಸುವುದು. ಭಾರತೀಯ ಇತಿಹಾಸದಲ್ಲಿ ಒಬ್ಬಾಕೆ ಮಹಿಳೆಯನ್ನು ಮನ್ನಿಸಿದ ಈ ವಿಚಾರವು ಸುವರ್ಣಾಕ್ಷರಗಳಿಂದ ಚಿತ್ರಿಸಲ್ಪಡಬೇಕಾದುದು. ರಾಷ್ಟ್ರನಿರ್ಮಾಣದಲ್ಲಿ ಮಹಿಳೆಯರಿಗೆ ಯಾವ ಸ್ಥಾನವಿದೆ ಮತ್ತು ಇರಬೇಕು ಎಂಬುದನ್ನು ಲೋ|| ತಿಲಕ, ದೇ|| ದಾಸ, ಮ|| ಗಾಂಧಿ, ಸ್ವಾಮಿಶ್ರದ್ಧಾನಂದ ಮೊದಲಾದ ದೇವತುಲ್ಯ ಧುರೀಣರು ಸಂಸಾರಕ್ಕೆ (ಪ್ರಪಂಚಕ್ಕೆ) ಸಾರಿ ಸಾರಿ ಸಂದೇಶವನ್ನು ಕೊಟ್ಟಿರುತ್ತಾರೆ. ಅದು ಮಾತ್ರವಲ್ಲ. ಕಾರ್ಯಕ್ಷೇತ್ರಕ್ಕಿಳಿದ ತನ್ನ ಪತಿದೇವನ ಬೆಂಬಲವಾಗಿ ಪತ್ನಿಯು ಯಾವತರದ ಕಷ್ಟನಷ್ಟಗಳನ್ನು ಸಹಿಸಬೇಕು ಎಂಬುದನ್ನು ನಮ್ಮ ಪೂರ್ವ ಇತಿಹಾಸಗಳು ಸಾರಿ ಹೇಳುತ್ತಿವೆ. ಭಗವಂತನ ದಿವ್ಯ ಸಂಕಲ್ಪದಿಂದ ಪರಿಸ್ಥಿತಿಯ ಪರಮಾವಶ್ಯಕತೆಯನ್ನನುಸರಿಸಿ, ಇದೀಗ ನಮ್ಮಕ್ಕ ತಂಗಿಯರು ದೇಶಸೇವೆಯೆಂಬ ಪುಣ್ಯಕಾರ್ಯದಲ್ಲಿ ತಮಗಿರುವ ಪಾಲಿನ ಪಂಚಾಮೃತವನ್ನು ಸ್ವೀಕರಿಸುತ್ತಿರುವರು. ಅಂದರೆ ಪುರುಷರ ಪ್ರಯತ್ನಕ್ಕೆ ಸ್ತ್ರೀಯರ ಸಹಾಯವು ಅತ್ಯಾವಶ್ಯಕವೆಂದು ಜನತೆಗೆ ತಿಳಿದಿದೆ. ಶ್ರೀಮತಿ ಸರೋಜಿನಿ ದೇವಿಯವರು ಈ ರಾಷ್ಟ್ರೀಯ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿದ್ದು ರಾಜಕೀಯ ದೃಷ್ಟಿಯಿಂದ ಎಷ್ಟರಮಟ್ಟಿನ ಮಹತ್ವವುಳ್ಳದ್ದೆಂದು ಹೇಳಲು ನಮ್ಮಿಂದಾಗುವುದಿಲ್ಲ. ಆದರೆ ಅವರ ವಿಚಾರ, ವಿನಯ, ವಿದ್ಯೆ ಮೊದಲಾದವುಗಳಿಂದ ಅವರ ವಿಶುದ್ಧ ಹೃದಯವನ್ನು ನಾವರಿತುಕೊಂಡರೆ ರಾಜಕೀಯ ಕ್ಷೇತ್ರದಲ್ಲಿಯೂ ಕೂಡ ಅವರಿಗೆ ಉತ್ತಮ ಸ್ಥಾನವಿದೆಯೆಂದು ತೋರುತ್ತದೆ. ಸ್ವರಾಜ್ಯದ ಮಾತನ್ನೆತ್ತುವಾಗ ನಾವನೇಕವೇಳೆ

''ಸ್ವಗೃಹ ಸಾಮ್ರಾಜ್ಯ''ವನ್ನೇ ನಂಬಿತು ಬಿಡುತ್ತೇವೆ. ಇದಕ್ಕೆ ಕಾರಣವೊಂದಿದೆ. ಗೃಹಸಾಮ್ರಾಜ್ಯದ ವ್ಯವಹಾರ ವಿಚಾರಗಳನ್ನು ಆಮೂಲಾಗ್ರವಾಗಿ ತಿಳಿದವರು ಗೃಹಿಣಿಯರಲ್ಲದೆ ಗೃಹಸ್ಥರಲ್ಲ. ಹೀಗಿರುವಲ್ಲಿ ಗೃಹಿಣಿಯರು ಗೌರವಿಸದ ಗೃಹ ಸಾಮ್ರಾಜ್ಯವು ಹೇಗಿರಬೇಕೋ ಬಲ್ಲವರು ಯೋಚಿಸಲಿ! ಗೃಹಸಾಮ್ರಾಜ್ಯವು ಸ್ವರಾಜ್ಯ ಸಾಂಮ್ರಾಜ್ಯಕ್ಕೆ ಪ್ರಥಮ ಸೋಪಾನವಾಗಿದೆ. ಆ ಕಾರಣದಿಂದಲೇ ನಾವು ಸ್ವರಾಜ್ಯ (ರಾಜಕೀಯ) ಸಂಗ್ರಾಮದಲ್ಲಿ ಸುಶೀಲೆಯರಿಗೆ ಸ್ಥಾನವಿರಬೇಕೆನ್ನುತ್ತೇವೆ. ಈ ದೃಷ್ಟಿಯಿಂದ ನೋಡಿದರೆ ಶ್ರೀಮತಿಯವರು ರಾಷ್ಟ್ರೀಯ ಸಭೆಯ ಅಧ್ಯಕ್ಷರಾಮದು ಮಾನ್ಯವು, ಸರ್ವಮಾನ್ಯವು. ಇನ್ನು ಸಾಮಾಜಿಕ ದೃಷ್ಟಿಯಿಂದಂತೂ ಇದೊಂದು ಸ್ವರ್ಗೀಯ ಸುಯೋಗವೆಂದೇ ಹೇಳಬೇಕು. ಧಾರ್ಮಿಕ ರೀತಿ ನೀತಿಗಳು ಮಡಿಮೈಲಿಗೆಯಲ್ಲಿ ಉಚ್ಚ ನೀಚತನದಲ್ಲಿ ಅಡಕವಾಗಿರುವ ಈ ಆಡಂಬರದ ಅವಸರದಲ್ಲಿ ಸ್ತ್ರೀ ಸ್ವಾತಂತ್ರ್ಯದ ಮಾತು ಅನೇಕ ಹಿರಿಯರ ಮುಖದಿಂದ ಹೊರಡುವುದೇ ಇಲ್ಲ. ಇಂತಹ ಸಂದರ್ಭದಲ್ಲಿ ಸಭ್ಯ ಸುಧಾರಣೆಯಾಗುತ್ತಿರುವುದು ಕೇವಲ ಸಮಾಜಕ್ಕಲ್ಲ, ಸಮಾಜಾಂತರ್ಗತವಾದ ದೇಶಕ್ಕೂ ಸಹ ಒಳ್ಳೆಯದನ್ನು ಮಾಡುವಂಥದೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಆದ್ದರಿಂದ ಸಾಮಾಜಿಕ ದೃಷ್ಟಿಯಿಂದಲೂ ಶ್ರೀಮತಿಯವರ ಸಭಾಧ್ಯಕ್ಷತನವು ಶ್ಲಾಘನೀಯವಾದುದೆಂದಾಯಿತು.

ಪ್ರಕೃತ ಶ್ರೀಮತಿಯವರಿಗೆ ಆ ಸ್ಥಾನವನ್ನು ಕೊಟ್ಟುದಕ್ಕಾಗಿ ದೇಶದ ಯಾವತ್ತು ಜನರೂ ಮತ್ತು ಪತ್ರಿಕೆಗಳೂ ಹರ್ಷಾತಿರೇಕದಿಂದ ಅವರನ್ನು—ಅದರಲ್ಲಿಯೂ ರಾಷ್ಟ್ರೀಯ ಮಹಾ ಸಭೆಯನ್ನು ಕೊಂಡಾಡುತ್ತಲಿರುವರು. ಆದರೆ ಅವರಲ್ಲಿ ಅಭಿಪ್ರಾಯ ಬೇಧವುಳ್ಳ ಕೆಲವರು ಮಾತ್ರ ವಿಮರ್ಶಿಸುತ್ತಿರುವರು. ಹಾಗೆ ವಿಮರ್ಶಿಸಿದವರಲ್ಲಿ ನಮ್ಮ ''ಕರ್ನಾಟಕ'' ಜನಸಾಮಾನ್ಯರ ಪ್ರೀತಿಗೆ ಪಾತ್ರರಾದವರೂ, ವಿದ್ವನ್ಮಣಿಗಳೊಬ್ಬರೂ, ಪೂಜ್ಯ ಬುದ್ಧಿಯುಳ್ಳವರೂ ಆದ ಶ್ರೀಯುತ ಡಿ. ವಿ. ಗುಂಡಪ್ಪನವರೊಬ್ಬರು. ಅವರ ಹೇಳಿಕೆಯಂತೆ ಶ್ರೀಮತಿಯವರು ಒಬ್ಬ ''ಒಂಗಾಲಿ'' ''ಸ್ತ್ರೀ'' ಮತ್ತು ''ಕವಯಿತ್ರಿ'' ಯೆಂದೂ ರಾಷ್ಟ್ರೀಯ ಮಹಾಸಭೆಗೆ..... ತಿಳಿದುಬರುತ್ತದೆ. ಸ್ತ್ರೀಯರಲ್ಲಿ ಮಾತೃಭಾವವುಳ್ಳ ಈ ಮಹನೀಯರು ಈ ರೀತಿಯ ಮಾತುಗಳನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದು ನಿಜವಾಗಿಯೂ ಖೇದವೆನಿಸುತ್ತದೆ. ಅಭಿಪ್ರಾಯ ಬೇಧಗಳಿದ್ದರೂ ಅವಸ್ಥಾ ಬೇಧಗಳಿರುವುದಿಲ್ಲ; ವೃಷ್ಟಿ ಮೋಷವಿದ್ದರೂ ಹೃದಯ ಪರಿವರ್ತನವಾಗುವುದಿಲ್ಲ; ಗೌರವಾನ್ವಿತರಿದ್ದರೂ ಗೃಹಿಣಿಯರನ್ನು ಅಲ್ಲಗಳೆಯುವುದಿಲ್ಲ. ಆದರೆ ರಾಷ್ಟ್ರದ ಪುರೋಭಿವೃದ್ಧಿಗಾಗಿ, ಸಮಾಜದ

ಉನ್ನತಿಗಾಗಿ, ದಯೆಯುಳ್ಳ ಮತ್ತು ದಾಕ್ಷಿಣ್ಯವುಳ್ಳ ಮಾತನ್ನೇ ಅವರಾಡುವರು. ಶ್ರೀಮಾ ಗುಂಡಪ್ಪನವರ ಈ " ವಿಮರ್ಶಾವೈಶಿಷ್ಟ್ಯ "ವು ನಿಜವಾಗಿ ರಾಷ್ಟ್ರಹಿತಕ್ಕೆ ಮತ್ತು ಸಮಾಜಹಿತಕ್ಕೆ ಘಾತಕವೆಂದು ಅದಾಗಲೇ ಅನೇಕ ಪತ್ರಿಕೆಗಳು ಸಾರಿ ಹೇಳಿವೆ. ನಾವಾದರೂ ಆ ರೀತಿಯ ಖಂಡನೆಯನ್ನು ಸ್ತ್ರೀಸಮುದಾಯಕ್ಕೇನೇ ಬಿಟ್ಟು ಕೊಟ್ಟಿರುವೆವು. ಮತ್ತು ಸಮಾಜಕ್ಕೆ ಘಾತಕವಾದ ಮಾತುಗಳಿದ್ದರೆ ಅವನ್ನು ಹಿಂತೆಗೆಯಬೇಕೆಂದು ಅವರಲ್ಲಿ ಸವಿನಯ ವಿನಂತಿಮಾಡಿಕೊಳ್ಳುತ್ತೇವೆ. ಸಂ|| ಸ||

ಗೃಹವೂ ಗೃಹಿಣಿಯೂ.

ಜಗದ್ವಿಖ್ಯಾತ ಕವಿಗಳ ಪವಿತ್ರವಾದ ಹೃದಯ ಮಂದಿರದಲ್ಲಿ ಜಾಗರಿತವಾದ ಹಾಗೂ ಅವರ ಪರಮ ಪಾವನವಾದ ಲೇಖಣಿಯಿಂದ ಅನಾಯಾಸವಾಗಿ ಸುರಿಯುವ ಕಾವ್ಯರಸದಿಂದ ಗೃಹಸ್ಥಾಶ್ರಮವೆಂಬ ಸಾಮ್ರಾಜ್ಯವಕ್ಕೆ ರಮಣಿಯೇ ರಾಣಿಯೆಂದು ವೃಥವಾಗುವುದು. ಗೃಹಸ್ಥಾಶ್ರಮವೇ ಸರ್ವಾಶ್ರಮಗಳ ಉತ್ಪತ್ತಿಸ್ಥಾನವು. ಏಕೆಂದರೆ ಈ ಪುಣ್ಯಾಶ್ರಮದಲ್ಲಿ ಮನುಷ್ಯನು ಜನ್ಮಧಾರಣೆಮಾಡಿ, ಜಗತ್ತಿನ ವೈಚಿತ್ರ್ಯವನ್ನು ತೃಂಗರಿಸುವನು; ಇಪ್ಪತ್ತುನಾಲ್ಕು ವರ್ಷಗಳ ಬ್ರಹ್ಮಚರ್ಯೆಯೆಂಬ ತಪಸ್ಸನ್ನು ಪೂರ್ತಿ ಮಾಡುವನು. ತನ್ನ ಪ್ರೇಮ ಪುಷ್ಪಗಳಂತೆ ಇರುವ ಪುತ್ರರ ವಿಮಲ ಮುಖಾರವಿಂದವನ್ನು ದರ್ಶನಮಾಡಿ ತಮ್ಮ ಜೀವನ ವೃಕ್ಷದ ಮೂಲವನ್ನು ದೃಢಪಡಿಸುವನು. ಮತ್ತು ಇದೇ ಸೌಂದರ್ಯಮಯ ಸರೋವರದ ಶೀತಲ ಕಮಲಗಳ ಶ್ರೇಷ್ಠ ಸುಗಂಧದಿಂದ ತನ್ನ ಮನೋಮಂದಿರದ ಇಷ್ಟದೇವತೆಯ ಆರಾಧನೆಯನ್ನು ಮಾಡಿ ಹೃದಯವನ್ನು ಪವಿತ್ರವನ್ನಾಗಿ ಮಾಡಿಕೊಳ್ಳುವನು. ರಮಣಿಯು ಈ ಆಶ್ರಮದ ಆದ್ಯದೇವಿಯು; ಪುರುಷನು ಹೊರಗಿನ ಆಡಂಬರಗಳಿಂದ ಅವನ್ನು ಸಂತೋಷಪಡಿಸುವ ಪೂಜಾರಿಯು. ವಿಗ್ರಹವಿಲ್ಲದ ದೇವಾಲಯವು ಹೇಗೆ ಶೂನ್ಯವಾಗಿರುವುದೋ ಹಾಗೆಯೇ ಗೃಹಿಣಿ ಇಲ್ಲದ ಗೃಹವು ಸ್ಮಶಾನೋಪಮವಾಗಿರುವುದು. ಗೃಹಸ್ಥಾಶ್ರಮದ ರಥವನ್ನೆಳೆಯಲು ರಮಣಿಯರ ಆವಶ್ಯಕತೆಯು ಅನಿವಾರ್ಯವಾಗಿರುವುದು. ಅವರ ಮಧುರವಾಣಿಯಿಂದ ದೂರವಾದ ಗೃಹವು ಭೂತಪಿಶಾಚಿಗಳ ಬೀಡಾಗಿಬಿಡುವುದು ನಮಗೆ ಪ್ರತ್ಯಕ್ಷವಾಗಿ ತೋರುವುದೇನೆಂದರೆ: ಯಾವ ಮನೆಯಲ್ಲಿ ರಮಣಿಯ

ಪ್ರಭಾತವಾಗುವುದಿಲ್ಲವೋ, ಅಲ್ಲಿನ ಮಾಧುರ್ಯ, ಸಂತೋಷ, ಸುಖ, ಸರ್ವಪ್ರಿಯತೆಯು ಎಲ್ಲಿ ಓಡಿಹೋಗುವುದೋ ತಿಳಿಯದು. ಪತ್ನಿ ವಿಹೀನನಾದ ಪತಿಯು ಸಂಧ್ಯಾಕಾಲದ ನಕ್ಷತ್ರದಂತೆ ಕಾಂತಿಹೀನನೂ ಸುಖಭ್ರಷ್ಟನೂ ಆಗುವನು.

ಪರಂತು ಅಧುನಿಕ ಸಮಯದ ಮಹಾ ದುರ್ದೆಶೆಯನ್ನು ನೋಡಿನೋಡಿ ಸರ್ವರೂ ಸ್ತ್ರೀಯರ ಮೂರ್ಖತೆಯನೆಂಬಲೆ ಕಣ್ಣೀರು ಸುರಿಸಹತ್ತಿರುವರು. ನಾರಿಯರ ಪಕ್ಕತ ಸ್ಥಿತಿಯ ಅತಾಂತಿಯು ಭಯಂಕರ ರೂಪವನ್ನು ಧರಿಸಿ ಭಾರತಭೂಮಿಯ ಮೂಲೆಮೂಲೆಗಳಲ್ಲಿಯೂ ಹಾಹಾಕಾರದ ಚೀತ್ಕಾರವನ್ನು ಸುರಿಸುತ್ತಿರುವುದು. ನಮ್ಮ ಸೌಭಾಗ್ಯದ ಚಂದ್ರನು ಘೋರವಾದ ಮೇಘಗಳಿಂದ ಆಚ್ಛಾದಿಸಲ್ಪಟ್ಟಿರುವನು. ನಾರೀರತ್ನಗಳ ಅಸಮಾಧಾನದಿಂದಲೇ ಗೃಹಸ್ಮಾಶ್ಯಮಕ್ಕೆ ಈ ದುರ್ದಶೆಯು ಪ್ರಾಪ್ತಿಸುತ್ತಲಿದೆ. ಏತಕ್ಕೆಂದರೆ ಈ ಪುಣ್ಯಭೂಮಿಯಲ್ಲಿ ಪೂರ್ವದಲ್ಲಿದ್ದಂತೆ ಆದರ್ಶ ಮಹಿಳೆಯರ ಸಂಖ್ಯೆಯು ಬೇಕಾವಷ್ಟಿಲ್ಲ.

ಪ್ರಾಚೀನ ಭಾರತ ರಮಣಿಯರಂತೆ ತಮ್ಮ ಧರ್ಮಕರ್ಮಗಳನ್ನರಿತು ಇತರರಿಗೆ ಸದ್ಬೋಧೆಯನ್ನು ಮಾಡಲು ಈಗಿನ ಮಹಿಳೆಯರಿಂದ ತಿಲಮಾತ್ರವೂ ಸಾಧ್ಯವಿಲ್ಲ. ಈಗಿನ ಕಾಲದ ನೈಸರ್ಗಿಕ ಸ್ಥಿತಿಯು ತುಂಬಾ ಕೆಟ್ಟಿರುವುದು. ಇದರಿಂದಲೇ ಹಿಂದೂ ಸಮಾಜವು "ಸ್ತ್ರೀ ಶಿಕ್ಷಣ" ವೆಂಬ ಶಬ್ದೋಚ್ಚಾರ ಮಾತ್ರದಿಂದ ಕಂಪಿತವಾಗುವುದು; ಪುರುಷರು ಸ್ತ್ರೀಯರನ್ನು ಕೇವಲ ದಾಸೀಭಾವದಿಂದ ನೋಡಲಾರಂಭಿಸಿರುವರು; ಕಾರಣ ದಾಸಿಯ ಯೋಗ್ಯತೆಯಿಂದ ಗೃಹಕೃತ್ಯವು ಯಾವ ರೀತಿಯಲ್ಲಾಗುವುದೋ ಹಾಗೆಯೇ ಆಗುತ್ತಲಿರುವದು.

ವರ್ತಮಾನ ಕಾಲದ ಸ್ತ್ರೀ ಶಿಕ್ಷಣವು ಸ್ತ್ರೀಯರನ್ನು ಎರಡು ಪಂಗಡಗಳನ್ನಾಗಿ ವಿಭಾಗಿಸಿರುವುದು. ಒಂದು ಪಂಗಡದವರು ಕೇವಲ ನಿರಕ್ಷರಕುಕ್ಷಿಗಳು; ಮತ್ತೊಂದು ಪಂಗಡದವರು ನವೀನ ವಿದ್ಯಾಭ್ಯಾಸದ ಸಂಸ್ಕಾರಕ್ಕೊಳಗಾಗಿ ತಮ್ಮನ್ನು ತಾವೇ ಬುದ್ಧಿವಂತರೆಂತಲೂ, ಸರ್ವಜ್ಞರೆಂತಲೂ ಭಾವಿಸಿ, ಮೊದಲಿನ ಪಂಗಡದವರಾದ ತಮ್ಮ ಸಹೋದರಿಯರಿಗೆ ಸದ್ಬೋಧೆಯನ್ನು ಮಾಡುವದಕ್ಕೆ ಬದಲಾಗಿ ಅವರೊಡನೆ ಮಾತನಾಡುವುದು ಕೂಡ ಅವಮಾನಾಸ್ಪದವೆಂದರಿತು ಅವರೊಡನೆ ದ್ವೇಷಾಸೂಯೆಯಿಂದ ವರ್ತಿಸುವವರು ನಿರಕ್ಷರಕುಕ್ಷಿಗಳಾಗಿ ಕೇವಲ ಮೂರ್ಖರಾದವರು ಹೀಗೋ ಹಾಗೋ ತಮ್ಮ ಗೃಹಕೃತ್ಯಗಳನ್ನು ನಿರ್ವಹಿಸಿಕೊಳ್ಳುವರು. ಪರಂತು ಯಾರು ವರ್ತಮಾನ ಕಾಲದ ವಿದುಷೀಮಣಿಯರೆಂದೆನ್ನಿಸಿಕೊಳ್ಳುವರೋ, ಅವರು ಗೃಹಕೃತ್ಯ ಶಿಕ್ಷಣಾಭಾವದಿಂದ ಗೃಹಕೃತ್ಯಗಳನ್ನು ನಿಂದನೀಯವಾಗಿಯೂ, ತುಚ್ಛವಾಗಿ

ಯೂ ಲೆಕ್ಕಿಸುವರು. ಗೃಹಕೃತ್ಯದ ಭಾರವನ್ನೆಲ್ಲಾ ಅಳುಗಳ ತಲೆಯಮೇಲೆ ಹಾಕಿ ತಾವು ಆನಂದೈಶ್ವರ್ಯ ಸಾಗರದಲ್ಲಿ ಮುಳುಗಿ ತೇಲುತ್ತಿರುವರು. ಆದರೆ ಇದರ ಲಾಭ ನಷ್ಟಗಳ ಮೇಲೆ ಈಗಿನ ಸುಶಿಕ್ಷಿತ ವಿದುಷೀಮಣಿಯರೆಂದು ಭಾವಿಸುವ ಭಾರತ ಭಗಿನಿಯರ ಕರುಣಾದೃಷ್ಟಿಯು ಬೀಳುವುದು ತುಂಬಾ ಕಷ್ಟವಾಗಿದೆ. ಆದ್ದರಿಂದ ಅಳುಗಳು ತಮ್ಮ ಮನಸ್ಸಿಗೆ ಬಂದಂತೆ ಕಾರ್ಯಸಾಧನೆಯನ್ನು ಮಾಡುವರು. ಆಳುಗಳ ಪ್ರಭಾವದಿಂದ ಖರ್ಚು ಹೆಚ್ಚಾಗುವುದಲ್ಲದೆ, ಊಟ ಉಪಚಾರಗಳಲ್ಲಿ ನಿಜವಾದ ಆನಂದ ಸೌಖ್ಯವು ದೊರೆಯುವುದೂ ಅಸಂಭವಾಗುವುದು. ಗೃಹಿಣಿಯರಿಗೆ ಪೇಳ್ಕಂಡ ವಿಷಯದಲ್ಲಿ ತುಂಬಾ ಲಕ್ಷ್ಯವಿರಬೇಕು. ಗೃಹಕೃತ್ಯದ ಎಲ್ಲಾ ಕೆಲಸಗಳನ್ನೂ ತಮ್ಮ ಕೈಯಿಂದ ಮಾಡುವುದು ಸರ್ವೋತ್ತಮವು. ಒಂದುವೇಳೆ ಪರಿಚಾರಕರಿಂದ ಕೆಲಸಮಾಡಿಸುವ ಸಂದರ್ಭದಲ್ಲಿ ಅವರ ಕಾರ್ಯಕ್ರಮದಲ್ಲಿ ಯಾವ ವಿಧವಾದ ಕೊರತೆಯೂ ಬಾರದಂತೆ ನೋಡಿಕೊಳ್ಳಬೇಕು. ಗೃಹಕೃತ್ಯದ ಸರ್ವಭಾರವೂ ಗೃಹಿಣಿಯನ್ನವಲಂಬಿಸಿರುವುದು. ಯಾವ ಸಾಧ್ವಿಯು ಆ ಭಾರವನ್ನು ವಹಿಸಲು ಸಮರ್ಥಳೋ, ಅವಳೇ ಗೃಹಿಣಿಯ ಪದವಿಯನ್ನು ಅಲಂಕರಿಸಲು ಯೋಗ್ಯಳು. ಆಕೆಯ ಕಾರ್ಯದ ಗಣನೆಯನ್ನು ಯಾರಿಂದ ತಾನೇ ಮಾಡಲಾದೀತು? ಆದರೆ ಮುಖ್ಯವಾದ ಕಾರ್ಯಗಳು—ಅಂದರೆ ಭಕ್ಷ್ಯಭೋಜ್ಯಗಳನ್ನು ತಯಾರಿಸುವುದು, ಶಿಲ್ಪವಿದ್ಯೆ ತಮ್ಮ ಮಕ್ಕಳಿಗೆ ಯೋಗ್ಯಪೋಷಣೆ, ಶಿಕ್ಷಣ ಕೊಡುವುದು, ಮನೆಯ ಲೆಕ್ಕಗಳನ್ನಿಡುವುದು ಇತ್ಯಾದಿ ಕಾರ್ಯಗಳಿರುವುವು. ಇವುಗಳನ್ನೆಲ್ಲಾ ಇಲ್ಲಿ ಸ್ಥಳಾಭಾವದಿಂದ ವರ್ಣಿಸಲಾರೆವು.

ಬಾಲಕರ ಭವಿಷ್ಯವು ಮಾತೆಯ ಕೈಯಲ್ಲಿರುವುದು. ಬೇಕಾದರೆ ಅವನನ್ನು ವಿಭೀಷಣನಂತೆ ಭಗವದ್ಭಕ್ತನನ್ನಾಗಿ ಮಾಡಬಹುದು ಅಥವಾ ರಾವಣನಂತೆ ದುಷ್ಟನನ್ನಾಗಿ ಮಾಡಬಹುದು. ಮದಾಲಸೆಯ ಹೆಸರನ್ನು ಭಾರತೀಯರಿಲ್ಲರೂ ಬಲ್ಲರು. ಮಧುರಾಮೃತದಿಂದ ತುಂಬಿದ್ದ ಆಕೆಯ ವಾಕ್ಯಗಳ ಗಾನವನ್ನು ಮಾಡುತ್ತಾ ಈ ಹೊತ್ತಿಗೂ ಭಾರತೀಯರು ಆ ಸಾಧ್ವೀಮಣಿಯನ್ನು ಮರೆತಿಲ್ಲ. ಆಹಾ! ಮದಾಲಸೆಯು ಎಷ್ಟು ಮಧುರಸ್ವರದಿಂದ ಗಾನಮಾಡುತ್ತಿರುವಳು!

"ಶುದ್ಧೋಸಿ ಬುದ್ಧೋಸಿ ನಿರಂಜ ನೋಸಿ |
ಸಂಸಾರ ಮಾಯಾಪರಿವರ್ಜಿತೋಸಿ ||
ಸಂಸಾರ ಸೌಖ್ಯಾತಜಮೋಹನಿದ್ರಾ |
ಮದಾಲಸಾ ವಾಕ್ಯಮುವಾಚ ಪುತ್ರಾ ||"

ಎಷ್ಟು ಮಧುರ! ಈ ಸಂಸಾರ ಸ್ವಪ್ನದಿಂದ ನಿವೃತ್ತರನ್ನಾಗಿ ಮಾಡುವ ಈ ಮನೋಹರ ವಾಕ್ಯವು! ಏನು? ಈಗಿನ ಕಾಲದಲ್ಲಿ ನಾವೇ ಸುಶಿಕ್ಷಿತ ವಿದುಷಿಯರೆಂದು ಭಾವಿಸುವ ನಾರಿಯರಲ್ಲಿ ಯಾರಾದರೂ ಮದಾಲಸೆಗೆ ಸರಿತೂಗುವ ಯೋಗ್ಯತೆಯನ್ನು ಸಂಪಾದಿಸಿರುವರೋ? ಮಂಡನಮಿಶ್ರರಂತಹ ಪಂಡಿತಾಗ್ರೇಸರರೊಡನೆ ವಾದಮಾಡುವ ಸಾಮರ್ಥ್ಯವು ಮದಾಲಸೆಗಲ್ಲದೆ ಇನ್ನಾರಿಗಿರುವುದು? ಇಂಥಾ ವಿಚಾರಗಳು ಈಗಿನ ನಮ್ಮ ಭಾರತ ಸ್ತ್ರೀ ಸಮಾಜವನ್ನು ಬಿಟ್ಟು ಸಾವಿರಾರು ಯೋಜನಗಳಷ್ಟು ದೂರ ಓಡಿಹೋಗಿರುವುವು. ಈಗಿನ ಕಾಲದಲ್ಲಿ ಇಬ್ಬರಿಂದ ಮೂವರು ಸ್ತ್ರೀಯರು ಒಂದುಕಡೆ ಪರಸ್ಪರ ಕಲೆತರೆ, ಪರನಿಂದೆಯ ಬಾಗಿಲು ತೆರೆಯಲ್ಪಡುವುದು. ಹೊಟ್ಟೆಯ ಪಾಡಿಗಾಗಿ ಬೆಳಗಿನಿಂದ ಸಾಯಂಕಾಲದವರಿಗೂ ಪಡಬಾರದ ಕಷ್ಟಗಳನ್ನು ಪಟ್ಟು, ಸೋತು, ಸಾಕಾಗಿ ಬಂದಿರುವ ಪತಿಯನ್ನು ಶಾಂತಸ್ವಭಾವದಿಂದ ಉಪಚರಿಸುವುದಕ್ಕೆ ಬದಲಾಗಿ ತಮ್ಮ ಅತ್ತೆ—ನಾದುನಿಯರ ಮೇಲೆ ದೂರು ಹೇಳಿಕೊಳ್ಳುವರು. ಇದರಿಂದ ಗೃಹದಲ್ಲಿ ಸಂತೋಷಾನಂದಗಳುಂಟಾಗುವುದಕ್ಕೆ ಬದಲಾಗಿ ಕೋಪ-ತಾಪ-ದುಃಖಗಳುಂಟಾಗುವುವು.

ಭಾರತ ಭಗಿನಿಯರೇ, ಈಗಿನ ನಿಮ್ಮ ವೇಷಧಾರಣೆಯನ್ನು ಬಿಟ್ಟು, ನಿಮ್ಮ ಧರ್ಮ-ಕರ್ಮಗಳನ್ನರಿತುಕೊಳ್ಳಿ; ತಮ್ಮ ಸಂಬಂಧಿಗಳಲ್ಲಿ ದ್ವೇಷಾಸೂಯೆಗಳನ್ನು ಕಟ್ಟಿಕೊಳ್ಳುವುದಕ್ಕೆ ಬದಲಾಗಿ ಅವರಲ್ಲಿ ಪ್ರೇಮದ ಬೀಜವನ್ನು ಬಿತ್ತಿರಿ. ನೀವು ನಿಮ್ಮ ಪರಕು ಮುರುಕು ಗುಡಿಸಲಿನಲ್ಲಿಯೇ ಸ್ವರ್ಗಸುಖವನ್ನು ಪಡೆಯಬಹುದು. ಅಥವಾ ನಿಮ್ಮ ಆನಂದ ಭವನವನ್ನು ಭೂತಬೇತಾಳಗಳು ವಾಸಿಸುವ ಸ್ಮಶಾನವನ್ನಾಗಿ ಯಾದರೂ ಮಾಡಬಹುದು. ಆದ್ದರಿಂದ ನೀವು ನಿಮ್ಮ ಕಾರ್ಯದಲ್ಲಿ ಸದಾ ತತ್ಪರರಾಗಿರಿ; ನಿಮ್ಮ ಧರ್ಮಕರ್ಮಗಳನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳಿರಿ. ನಿಮ್ಮೀ ಕಾರ್ಯ ತತ್ಪರತೆಯಿಂದ ಭಾರತವರ್ಷದ ಮೂಲೆ ಮೂಲೆಯಲ್ಲಿಯೂ ಸುಖ ಸಮುದ್ರದ ತರಂಗಗಳೇಳುವುವು; ಮತ್ತು ಭಾರತವು ತನ್ನ ಪೂರ್ವ ವಿಸ್ಮೃತ ಸ್ವತಂತ್ರವನ್ನು ಪುನಃ ಪಡೆಯುವುದು.

ಸ್ವೀಕಾರ.

ಆಯುರ್ವೇದ, ಮಾಸಪತ್ರಿಕೆ, ತೀರ್ಥಹಳ್ಳಿ--'ಶರೀರಮಾದ್ಯಂ ಖಲು ಧರ್ಮಸಾಧನಂ' ಎಂದಿರುವ ಕಾರಣ ಸಂಸಾರಿಯೇ ಆಗಲಿ, ಸನ್ಯಾಸಿಯೇ ಆಗಲಿ ಆರೋಗ್ಯವನ್ನು ಕಾಪಾಡಿಕೊಂಡು ಶರೀರಸುಖವನ್ನು ಹೊಂದಲೇಬೇಕಾಗಿದೆ. ಅದಕ್ಕೆ ನಮ್ಮ ಆಚಾರ ವ್ಯವಹಾರಕ್ಕನುಸರಿಸಿದ ಆಯುರ್ವೇದವೊಂದೇ ಮೂಲಕಾರಣವು. ಇತ್ತೀಚಿಗೆ ನಮ್ಮ ಕರ್ನಾಟಕದಲ್ಲಿಯೂ ಆಯುರ್ವೇದ ವಿದ್ಯಾಪ್ರಚಾರವಾಗುತ್ತಿರುವುದು ಶ್ಲಾಘನೀಯವಾಮದು. ಇತರ ಭಾಷೆಗಳಲ್ಲಿರುವಂತೆ ಕನ್ನಡದಲ್ಲಿಯೂ ಆಯುರ್ವೇದ ಸಂಬಂಧವಾದ ಒಂದು ಮಾಸಪತ್ರಿಕೆಯ ಅವಶ್ಯಕತೆಯಿದ್ದಿತು; ಅದೀಗ ಪೂರ್ಣವಾಯಿತು. ಶ್ರೀಮರ್ಮಾ ಪಂಡಿತ ಸೂರ್ಯನಾರಾಯಣಶಾಸ್ತ್ರಿಗಳವರು ಈ ಪತ್ರಿಕೆಯ ಸಂಪಾದಕರಾಗಿರುವುದರಿಂದ ತತ್ಸಂಬಧೀಯ ವಿಚಾರ ವಿಮರ್ಶೆಯು ಉತ್ತಮ ಹಾಗೂ ಉನ್ನತಸ್ಥಾನವನ್ನು ಪಡೆದೀತೆಂದು ಬೇರೆ ಹೇಳಬೇಕಾದುದಿಲ್ಲ ಪತ್ರಿಕೆಯು ಸಂಗ್ರಹಿಸಲು ತಕ್ಕುದು; ವಾರ್ಷಿಕ ವರ್ಗಣಿಯು ಹೆಚ್ಚಾಗಿಲ್ಲ; ರೂ. ೩-೦-೦ ಮಾತ್ರವೆ. ಸಮಸ್ತರೂ ಈ ಪತ್ರಿಕೆಯ ಚಂದಾದಾರರಾಗಿ ಸಂಪಾದಕರು ಕೈಗೊಂಡಿರುವ ಮಹತ್ಕಾರ್ಯದಲ್ಲಿ ಸಹಾಯಕರಾಗಬೇಕಾಗಿ ಪ್ರಾರ್ಥನೆ.

ಈಗ ಇದರಲ್ಲಿ 'ಮಾಧವನಿಧಾನ, ಶಾರ್ಙ್ಗಧರಸಂಹಿತ' ಮೊದಲಾದ ಪ್ರಾಚೀನ ಪ್ರಮಾಣಗ್ರಂಥಗಳು ಅನುವಾದಿಸಲ್ಪಡುತ್ತಿವೆ. ಇದರಂತೆ ಮುಂದಕ್ಕೂ ಸಂಸ್ಕೃತದಲ್ಲಿರುವ ಸಮಸ್ತ ಗ್ರಂಥಗಳನ್ನೂ ಸರಳ ಕನ್ನಡದಲ್ಲಿ ಅನುವಾದಿಸಿ ಪ್ರಕಟಿಸಿದರೆ ಕರ್ನಾಟಕ ವೈದ್ಯಕೀಯ ಸಾಹಿತ್ಯಕ್ಕೆ ಅಪಾರ ಲಾಭವುಂಟಾಗುವುದೆಂಬುದರಲ್ಲಿ ತಿಲಮಾತ್ರವೂ ಸಂದೇಹವಿಲ್ಲ. ಮತ್ತು ಸಂಗಡಲೇ ಕರ್ನಾಟಕ ಹಸ್ತಲಿಖಿತ ವೈದ್ಯಕೀಯ ಗ್ರಂಥಗಳನ್ನು ಸಂಗ್ರಹಿಸುವ ಸತ್ಕಾರ್ಯವನ್ನು ಕೈಗೊಂಡರೆ ಮತ್ತಿಷ್ಟು ಹಿತವು. ಈ ಮಧ್ಯೆ ಒಂದು ಮಾತನ್ನು ನಿಜವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕಾಗಿದೆ. ಅದಾವುದೆಂದರೆ-'ಧನ್ವಂತರಿ' ಯಂತೆ (ಶೃಂಗೇರಿಯಿಂದ ಹೊರಡುವ ಪಾಕ್ಷಿಕ ವೈದ್ಯಕೀಯ ಪತ್ರಿಕೆ) ಸಾಮಾಜಿಕ ವಿಷಯಗಳಿಗೆ ಅಗ್ರಸ್ಥಾನವನ್ನು ಕೊಡದೆ, ಅಧಿಕಾಧಿಕವಾಗಿ ವೈದ್ಯಕೀಯ ವಿಚಾರಗಳನ್ನೇ ಸಂಗ್ರಹಿಸಬೇಕು.

ಪುಣೆಯ ಕರ್ನಾಟಕ ಸೋಷಿಯಲ್ ಕ್ಲಬ್-ಈ ಹೆಸರಿನದೊಂದು ಸಂಸ್ಥೆಯು ಸುಮಾರು ಒಂದೂವರೆ ವರ್ಷದಿಂದ ಮೇಲ್ಕಂಡ ಪಟ್ಟಣದ ವಾಸಿಗಳಾದ ಕೆಲವು

ಜನ ಕನ್ನಡಿಗರಿಂದ ಸ್ಥಾಪಿಸಲ್ಪಟ್ಟು ನಡೆಯುತ್ತಿರುವುದು. ಮಹಾರಾಷ್ಟ್ರನಾಡಿನಲ್ಲಿಯೂ ಕನ್ನಡಿಗರು ತಮ್ಮ ನಿಜ ಭಾಷಾಭಿವೃದ್ಧಿಗಾಗಿ ಪ್ರಯತ್ನಿಸುತ್ತಿರುವುದು ಸ್ತೋತ್ರಾರ್ಹವೇ ಸರಿ. ಇದರ ವಾರ್ಷಿಕ ವರದಿಯು ನಮಗೆ ತಲ್ಪಿದೆ. ಇದಕ್ಕೆ ಸಹಾಯಕರು ತೀರ ಕಡಮೆಯಾಗಿರುವುದರಿಂದ ಸಂಘದ ಅನೇಕ ಕಾರ್ಯಗಳು ನಡೆಯದೆ ಅಡಚನೆಯಿದೆ. ಆದುದರಿಂದ ಪುಣೆಯಲ್ಲಿರುವ ಕನ್ನಡಿಗರೆಲ್ಲರೂ ಒಂದುಗೂಡಿ ಈ ಸಂಘವನ್ನು ಉನ್ನತಸ್ಥಿತಿಗೆ ತರಬೇಕಾಗಿ ಪ್ರಾರ್ಥನೆ. ಇದರಲ್ಲಿ ವಾಚನಾಲಯವೊಂದಿದ್ದು ಅದಕ್ಕೆ ಅನೇಕ ಸುಹೃದಯ ಕನ್ನಡ ಮಾಸ ವೃತ್ತ ಪತ್ರಿಕಾಕರ್ತರು ಪತ್ರಿಕೆಯನ್ನು ವಿನಾಮೂಲ್ಯ ಕಳುಹಿಸುತ್ತಿರುವರು. ಇಷ್ಟುಮಾತ್ರವಲ್ಲದೆ ಕರ್ನಾಟಕದ ಇತರ ಭಾಗದಿಂದ ಪುಣೆಗೆ ಕಾರ್ಯನಿಮಿತ್ತವಾಗಿಯಾಗಲಿ, ನೋಟದ ಸಲುವಾಗಿಯಾಗಲಿ ಹೋಗುವ ಕನ್ನಡಿಗರು ಭಾಷೆ ತಿಳಿಯದ ನಿಮಿತ್ತ ತೊಂದರೆಗೊಳಗಾಗದಂತೆ ಮೇಲ್ಕಂಡ ಕ್ಲಬ್ಬಿನವರು ಬೇಕಾದ ಸೌಕರ್ಯಗಳನ್ನೊದಗಿಸಿಕೊಡುತ್ತಿರುವುದು ಸ್ತೋತ್ರಾರ್ಹವಾದ ಸುಸಂಗತಿಯೇ ಸರಿ. ಕನ್ನಡಿಗರು ಈ ಸಂಘದವರ ಸದುದ್ದೇಶವನ್ನು ಸಾರ್ಥಕಗೊಳಿಸುವುದು ಮಾತ್ರವಲ್ಲದೆ ತಮಗಗತ್ಯವಾದಾಗ ಸಂಘದ ಉಪಯೋಗವನ್ನು ಮಾಡಿಕೊಳ್ಳಬೇಕು. ಅವಶ್ಯಬಿದ್ದಾಗ ಈ ವಿಳಾಸಕ್ಕೆ ಬರೆದು ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು:—ವ್ಯವಸ್ಥಾಪಕ, ಕರ್ನಾಟಕ ಸೋಷಿಯಲ್ ಕ್ಲಬ್, ಕಾರ್ಲೇಸ್ ಬಿಲ್ಡಿಂಗ್ಸ್, ೬೪೩, ಬುಧವಾರ ಪೇಟೆ, ಪುಣೆ ಪಟ್ಟಣ.

ಪ್ರೇಮಮಹಿಳಾ ಸಮಾಜ ಬಳ್ಳಾರಿ:—ಈ ಮಹಿಳಾ ಸಮಾಜದ ಪ್ರಥಮ ವಾರ್ಷಿಕೋತ್ಸವವು ಬಳ್ಳಾರಿಯ ಶ್ರೀಯುತ ವೆಂಕಟರಾಯರ ಪುರಸೌಧದಲ್ಲಿ ಈ ಪತ್ರಿಕಾ ಸಂಪಾದಕಿಯವರ ಅಧ್ಯಕ್ಷತೆಯಲ್ಲಿ ಕಳೆದ ತಿಂಗಳು ಜರಗಿತು. ಕಾರ್ಯವರ್ತಿಯರಾದ ಶ್ರೀಮತಿ ರಂಗನಾಯಕಮ್ಮನವರು ವಾರ್ಷಿಕ ವರದಿಯನ್ನೋದಿದರು. ವರದಿಯಲ್ಲಿ ದಿವಂಗತ ದೇಶಬಂಧುಗಳ ಮರಣದ ಸ್ಮರಣಾರ್ಥ ಮಾಡಿದ ಅನ್ನದಾನ ಚಳಿಗಾಲದಲ್ಲಿ ಬಡವರಿಗೆ ಮಾಡಿದ ವಸ್ತ್ರದಾನ ಮೊದಲಾದವುಗಳು ಸ್ತೋತ್ರಾರ್ಹವು. ಈ ಸಮಾಜವು ಇನ್ನೂ ಬಾಲ್ಯಾವಸ್ಥೆಯಲ್ಲಿರುವುದರಿಂದ ಬಳ್ಳಾರಿಯ ಮಹಿಳೆಯರೆಲ್ಲರೂ ಇದನ್ನು ಅತ್ಯುತ್ತಮ ಸ್ಥಿತಿಗೆ ತಂದು ಸಂಘದ ಸದುದ್ದೇಶವನ್ನು ಸಾರ್ಥಕಗೊಳಿಸಬೇಕು. (ವರದಿಯು ತಲಪಿದೆ. ಸ್ಥಳ ಸಂಕೋಚದಿಂದ ಪ್ರಕಟಿಸಲಾಗಲಿಲ್ಲ).

ಕರ್ನಾಟಕ ಸಭೆ, ಮುಂಬಯಿ—ಈ ಹೆಸರಿನದೊಂದು ಸಂಸ್ಥೆಯು ಮುಂಬೈ ಪಟ್ಟಣದಲ್ಲಿ ಕಾರ್ಯಾಂತರದಿಂದ ವಾಸಮಾಡುತ್ತಿರುವ ಕನ್ನಡಿಗರಿಂದ ಸ್ಥಾಪಿಸಲ್ಪಟ್ಟಿರು

ವುದು. ಮದರಾಸ್ ಕರ್ನಾಟಕ ಸಭೆಗೆ ಸುಪ್ರಸಿದ್ಧ ಡಾಕ್ಟರ್ ಯು. ರಾಮರಾಯರು ಅಧ್ಯಕ್ಷರಾಗಿರುವಂತೆ ಈ ಸಭೆಗೆ ಮುಂಬಯಿಯ ಪ್ರಸಿದ್ಧ ವೈದ್ಯರಾದ ಡಾಕ್ಟರ್ ನಾಡಿಗೇರವರು ಅಧ್ಯಕ್ಷರಾಗಿಯೂ, ಪ್ರಸಿದ್ಧ ವಕೀಲ ಶ್ರೀ. ಆರ್. ಎ. ಜಹದೀನ್ ಬಿ. ಎ. ಬಿ. ಎಲ್., ಯವರು ಉಪಾಧ್ಯಕ್ಷರಾಗಿಯೂ, ಬಿ. ಎಸ್. ತಂತ್ರಿಯವರು ಕಾರ್ಯದರ್ಶಿಗಳಾಗಿಯೂ ಇರುವರು. ಈ ಸಭೆಯು ಕೆಲವು ದಿನಗಳ ಕೆಳಗೆ ಕರ್ನಾಟಕ ಏಕೀಕರಣದ ವಿಷಯವನ್ನು ಅನುಮೋದಿಸಿ ತಾರಾವಿಗೆ ತಂದ ವಿಷಯವು ನಮ್ಮ ಕಾರ್ಯಾಲಯಕ್ಕೆ ತಲಪಿದೆ. (ಸ್ಥಳ ಸಂಕೋಚದಿಂದ ಇಲ್ಲಿ ಪ್ರಕಟಿಸಲಾಗಲಿಲ್ಲ) ಮಹಾರಾಷ್ಟ್ರದ ಕೇಂದ್ರಸ್ಥಾನವಾದ ಮುಂಬೈ ಪಟ್ಟಣದಲ್ಲಿಯ ಕನ್ನಡಿಗರು ತಮ್ಮ ನಾಡಿನ ಪುರೋಭಿವೃದ್ಧಿಗಾಗಿ ಇಂತಹ ಸಂಸ್ಥೆಯನ್ನು ಸ್ಥಾಪಿಸಿ ನಡೆಸುತ್ತಿರುವ ವಿಷಯವು ಆವ ಕನ್ನಡಿಗರಿಗೆ ಸಂತಸವನ್ನುಂಟುಮಾಡದು? ಈ ಸಂಘದ ಉದ್ದೇಶವು ಸಫಲವಾಗಲೆಂದೂ, ಸಂಘವು ಚಿರಸ್ಥಾಯಿಯಾಗಿರಲೆಂದೂ ಹಾರೈಸುವೆವು.


ಭಕ್ತಾಮೃತ:—ಲೇಖಕರು: ಬಿ. ಭೀಮರಾಜು, ಚಿತ್ರದುರ್ಗ. ಇದು ಶ್ರೀಯುತ ಆದಿಪೋಡಿ ಸೋಮನಾಥರಾಯರು ತೆಲುಗಿನಲ್ಲಿ ಬರೆದಿರುವ ಸರ್ವಮಾನಸಿ ಶತಕದ ಕರ್ನಾಟಕ ಅನುವಾದವು. ಸಮಗ್ರಕಾವ್ಯವೂ ಸೀಸಪದ್ಯಗಳಿಂದ ಬರೆಯಲ್ಪಟ್ಟಿದೆ. ಭಾಷೆಯು ಸರಳವಾಗಿ ಸಾಮಾನ್ಯ ಜನರಿಗೂ ಸುಲಭವಾಗಿ ಅರ್ಥವಾಗುವಂತಿದೆ. ಪ್ರಪಂಚದ ಎಲ್ಲಾ ಜನಾಂಗಗಳಲ್ಲಿ ಪ್ರಸಿದ್ಧರಾದ ತತ್ವಜ್ಞಾನಿಗಳ ಹಾಗೂ ದೇಶಸೇವಕರ ಜೀವನ ರಹಸ್ಯದ ಲಲಿತಪ್ರವಾಹವೇ ಭಕ್ತಾಮೃತವು. ಈ ವಿಧವಾದ ನೂತನ ಭಾವಗಳಿಂದ ತುಂಬಿದ ಸರಳವಾದ ಕಾವ್ಯಗಳ ಅಭಾವವು ಕನ್ನಡದಲ್ಲಿ ಬಹಳವಿರುವುದು. ಅನುವಾದಕರ್ತರಾದ ಕರ್ನಾಟಕಾಂಧ್ರ ಕವಿ ಶ್ರೀಯುತ ಭೀಮರಾಜುಯವರು ಕಾವ್ಯವನ್ನು ಕನ್ನಡಿಸಿ, ನಮ್ಮ ನೆರೆಯ ನಾಡಿನವರಾದ ತೆಲುಗರ ಕಾವ್ಯಾಭಿರುಚಿಯು ಯಾವ ಕಡೆಯಿರುವುದೆಂದು ಕನ್ನಡಿಗರಿಗೆ ತೋರಿಸಿರುವ ದೊಂದು ಸಂತೋಷದ ಸುದ್ದಿ. ವಿದ್ಯಾರ್ಥಿಗಳೂ, ಕಾವ್ಯಪ್ರಿಯರೂ ಗ್ರಂಥವನ್ನು ಆದರಿಸುವರೆಂದು ನಂಬಿದ್ದೇವೆ. ಪುಸ್ತಕವು ಬೆಂಗಳೂರು ಅಕ್ಕಿಪೇಟೆ ಚೌಕದಲ್ಲಿರುವ ಮಾಡಲ್ ಮುದ್ರಾಕ್ಷರಶಾಲೆಯಲ್ಲಿ ಮುದ್ದಾಗಿಯೂ, ಶುದ್ಧವಾಗಿಯೂ ಮುದ್ರಿಸಲ್ಪಟ್ಟಿದೆ. ಬೆಲೆ ೮ ಆಣೆಗಳು ಮಾತ್ರ.

॥ ಶ್ರೀ ॥

ಸರಸ್ವತೀ

ಸಂಪುಟ ೫. | ಏಪ್ರೆಲ್ ೧೯೦೬ | ಸಂಚಿಕೆ ೧೨.

ಕ್ಷಯ ಸಂವತ್ಸರವು



ನಿವೇದನ.

ಕಲಿ ರಕ್ಷಕನಾದ, ಆನ್ಯಾಜಕರುಣಾಮೂರ್ತಿಯಾದ ಭಗವಂತನ ಕೃಪಾ ಕಟಾಕ್ಷದಿಂದಲೂ, ಕರ್ನಾಟಕ ಸೋದರ ಸೋದರಿಯರ ಉದಾರಪೋಷಕತ್ವದಿಂದಲೂ ಸರಸ್ವತಿಯು ೫ ವರ್ಷಗಳನ್ನು ಕಳೆದು ಈಗ ೬ನೆಯ ವರ್ಷಕ್ಕೆ ತೊಡಗಿರುವಳು. ಇಷ್ಟು ದಿವಸವೂ ಯುಕ್ತಾಯುಕ್ತ ಪರೀಕ್ಷಾನವಿಲ್ಲದೆ ಕೇವಲಹಸುಳೆಯಾಗಿದ್ದ ಈಬಾಲಕಿಯು ಈಗ ತನ್ನ ಕರ್ತವ್ಯಕಾರ್ಯಗಳ ಜವಾಬ್ದಾರಿಯನ್ನು ತಿಳಿದವಳಾದಳು. ಇಷ್ಟು ದಿನವೂ ಇವಳನ್ನು ಪೀಡಿಸುತ್ತಿದ್ದ ಬಾಲಗ್ರಹಾದಿ ರೋಗಗಳು ಮುಂದಿವಳನ್ನು ಬಾಧಿಸದಿರಬೇಕೆಂದು ಜಗತಿಯನ್ನು ಪ್ರಾರ್ಥಿಸುವೆವು. ಪತ್ರಿಕಾಭಿಮಾನವಿಲ್ಲದ ಈ ದೇಶದಲ್ಲಿ—ಅದರಲ್ಲೂ ಕರ್ನಾಟಕದಲ್ಲಿ ಒಂದು ಪತ್ರಿಕೆಯನ್ನು ನಡೆಸುವುದೆಂದರೆ ಇರತಕ್ಕ ಕಷ್ಟನಿಷ್ಠುರಗಳನ್ನು ವಾಚಕರು ಮನಗಂಡೇ ಇರುವರು. ಪತ್ರಿಕೆಯು ಕ್ರಮವಾಗಿ ನಡೆಯಬೇಕಾದರೆ ಸಂಪಾದಕರು ಶ್ರೀಮಂತರಾಗಿರಬೇಕು; ಅಥವಾ ಧನವಂತರೂ, ಭಾಷಾಭಿಮಾನಿಗಳೂ ಪತ್ರಿಕೆಗೆ ಪೋಷಕರಾಗಿಯೂ, ಚಂದಾದಾರರಾಗಿಯೂ ಇರತಕ್ಕದ್ದು ಅತ್ಯಾವಶ್ಯಕವು. ಕಡಮೆ ಜನಸಂಖ್ಯೆಯುಳ್ಳ ಇಂಗ್ಲೆಂಡಿನಲ್ಲಿ ಸ್ತ್ರೀಯರ ಅಭಿವೃದ್ಧಿಗೆಂದೇ ಅಸಂಖ್ಯಾತ ಪತ್ರಿಕೆಗಳು ನಡೆಸಲ್ಪಡುತ್ತಿರುವವು. ಆದರೆ ನಮ್ಮಾ ಭರತಖಂಡದಲ್ಲಿ ಸ್ತ್ರೀಯರಿಗೆ ಸಂಬಂಧಪಟ್ಟ ಪತ್ರಿಕೆಗಳೇ ಅತಿ ವಿರಳ. ಏಕೆಂದರೆ-ಪತ್ರಿಕಾ ವಾಚನಾಭಿರುಚಿಯು ನಮ್ಮಲ್ಲಿಲ್ಲ. ವಿದ್ಯಾಭ್ಯಾಸವ ಸೋಂಕೇ

ಅನೇಕ ಕಡೆ ಇಲ್ಲವೆಂದಮೇಲೆ ವಾಚನಾಭಿರುಚಿಯೆಲ್ಲಿಂದ ಬರಬೇಕು! ವಾಚನಾಭಿರುಚಿಯು ದೇಶಾಭಿಮಾನದೊಂದಂಗವೆಂದರೂ ಸಲ್ಲುವುದು. ಮಾತೃದೇಶದ ಅಭಿವೃದ್ಧಿಯನ್ನು ಕೋರತಕ್ಕವರು, ಸ್ತ್ರೀಯರ ಪುರೋಭಿವೃದ್ಧಿಯನ್ನು ಬಯಸತಕ್ಕವರು ಪ್ರತಿಯೊಬ್ಬರೂ ತಾವು ಮಾತ್ರ ಚಂದಾದಾರರಾಗುವುದಲ್ಲದೆ, ತಮ್ಮ ಸೋದರ ಸೋದರಿಯರನ್ನೂ ಚಂದಾದಾರರಾಗುವಂತೆ ಪ್ರೇರೇಪಿಸಿ ಪತ್ರಿಕೆಯು ಮತ್ತಿಷ್ಟು ಉತ್ತಮ ಮತ್ತು ಉನ್ನತರೀತಿಯಿಂದ ನಡೆಯುವಂತೆ ಮಾಡಬೇಕೆಂದು ವಿನಯದಿಂದ ಪ್ರಾರ್ಥಿಸುವೆವು. ಪ್ರವಾಸದಲ್ಲಿದ್ದುದರಿಂದಲೂ, ಅನಾರೋಗ್ಯದ ದೆಸೆಯಿಂದಲೂ, ಬೇರೊಬ್ಬ ಸಹಾಯಕರಿಲ್ಲದ್ದರಿಂದಲೂ ಪತ್ರಿಕೆಯು ಸ್ವಲ್ಪ ಅಕ್ರಮವಾಗಿ ನಡೆದರೂ ಚಂದಾದಾರರಿಗೆ ಹನ್ನೆರಡು ಸಂಚಿಕೆಗಳು ತಲಪಿಸಿದೆ. ಇನ್ನುಮುಂದೆ ಇಂತಹ ಅಕ್ರಮವು ನಡೆಯದಂತೆ ನೋಡಿಕೊಳ್ಳಲಾಗುವುದು. ಕರ್ನಾಟಕದ ಪ್ರತಿಯೊಬ್ಬ ಸೋದರಿಯೂ ತನ್ನನ್ನು ಪೋಷಿಸಬೇಕೆಂದು ಸರಸ್ವತಿಯು ಪ್ರಾರ್ಥಿಸುವಳು.

ಮುಂದಿನ ಸಂಪುಟದಿಂದ ಕೆಲವು ಬದಲಾವಣೆಗಳನ್ನು ಮಾಡಲು ಯತ್ನಿಸಿದೆ. ಕುಸುಮಕುಂಜ, ಗೃಹವಿಜ್ಞಾನ, ವನಿತಾವಿನೋದ, ಮುತ್ತಿನಮಾಲೆ, ಚಾರುಚರಿತಾವಳಿ, ಸಾಹಿತ್ಯಸರೋಜ, ಕನ್ಯಾಕೈಪಿಡಿ, ಸ್ತ್ರೀಸಂಸಾರ ಎನ್ನುವ ಶಿರೋಲೇಖಗಳನ್ನು ಪ್ರಾರಂಭಿಸಲಿರುವೆವು. ಇನ್ನು ೪೦ ಪುಟಗಳಷ್ಟು ಓದತಕ್ಕ ಭಾಗವನ್ನೇ ಕೊಡಲಿರುವೆವು. ಕೊಚ್ಚಿಯ ಲೆಜಿಸ್ಲೇಟಿವ್ ಕೌನ್ಸಿಲ್ ಸದಸ್ಯರಾದ ಶ್ರೀಮತಿ ಮಾಧವಿ ಅಮ್ಮನವರೂ, ಮದ್ರಾಸ್ 'ಚಿಂತಾಮಣಿ'ಯ ಸಂಪಾದಕರಾದ ಶ್ರೀಮತಿ ಬಾಲಮ್ಮಾಳ್‌ಯವರೂ, ಪ್ರೇಮಾಯತನದ ಪಂಡಿತ ತಾರಾನಾಥ ಯೋಗಿಗಳವರೂ, ಶ್ರೀಯುತರುಗಳಾದ ದೇವುಡು ನರಸಿಂಹಶಾಸ್ತ್ರಿ, ಎಂ.ಎ.,ಯವರೂ, ವಿಶ್ವಕರ್ನಾಟಕದ ಸಂಪಾದಕರಾದ ಶ್ರೀ ತಿರುಮಲೆ ತಾತಾಚಾರ್ಯ ಶರ್ಮರವರೂ, ರಂಗಭೂಮಿಯ ಸಂಪಾದಕರಾದ ದತ್ತಾತ್ರೇಯ ಕೃಷ್ಣಭಾರದ್ವಾಜರೂ, ಜಯಕರ್ನಾಟಕದ ಸಂಪಾದಕರಾದ ಆಲೂರ್ ವೆಂಕಟರಾವ್, ಬಿ.ಎ., ಎಲ್‌ಎಲ್.ಬಿ., ಯವರೂ, ಶ್ರೀಯುತ ಗವಾನಂದ ಕೆರೋಡಿ ಸುಬ್ಬರಾವ್ ಬಿ.ಎ., ಯವರೂ, ಪ್ರಸಿದ್ಧನಟ ಟಿ.ಪಿ. ಕೈಲಾಸಂ ಯವರೂ, ಶ್ರೀಮತಿ ಟಿ. ಕನಕಲಕ್ಷ್ಮಮ್ಮ, ಎಂ. ಎ., ಯವರು, ಶ್ರೀಯುತ ಆರ್. ರಾಘವೇಂದ್ರರಾವ್ ಚಾಕಲಬ್ಬಿ, ಬಿ.ಎ., ಬಿ.ಎಲ್., ಗುಲ್ಬರ್ಗ, ಶ್ರೀಯುತ ಮಾಸ್ತಿ ವೆಂಕಟೇಶೈಂಗಾರ್ ಎಂ.ಎ., ಯವರು, ಶ್ರೀಯುತ ವಿ.ಬಿ. ಪುರಾಣಿಕ ಬಿ.ಎ., ಯವರು ಲೇಖನಗಳನ್ನು ಬರೆಯಲೊಪ್ಪಿರುವರು. ಸಹೋದರಿಯರನೇಕರು ಲೇಖನಗಳನ್ನು ಬರೆಮಕೊಡುವುದಾಗಿ ವಾಗ್ದಾನಮಾಡಿರುವರು. ಉತ್ತರದೇಶದ ಕೆಲವು

ಪ್ರಸಿದ್ಧ ಹಂದಿ ಪತ್ರಿಕೆಗಳ ಅತ್ಯುತ್ತಮವಾದ ಸ್ತ್ರೀ ಸಂಬಂಧ ಲೇಖನಗಳನ್ನು ಪರಿವ ೀಕ್ಷಿಸಿ ಹಾಕುವ ವ್ಯವಸ್ಥೆಯಾಗಿದೆ. ಸಾಧ್ಯವಾದಷ್ಟು ಸಚಿತ್ರವಾಗಿಯೇ ಪತ್ರಿ ಕೆಯು ನಡೆಸಲ್ಪಡುವದು. ಮೇಲೆ ಹೇಳಿದ ಲೇಖನಗಳಲ್ಲದೆ 'ಸುಖಲತೆ' ಎನ್ನು ವ್ಯಮೊಂದು ಕಾದಂಬರಿಯೂ, 'ಷಹಜಹಾನ್' ಎನ್ನುವುದೊಂದು ನಾಟಕವೂ ಕ್ರಮಶಃ ಪ್ರಕಟಿಸಲ್ಪಡುವವು. ಚಂದಾದಾರರೂ ಪೋಷಕರೂ ತಮ್ಮ ಉದಾರ ಆಶ್ರಯದಿಂದ ಸರಸ್ವತಿಯ ಮುಂದಿನ ಜೆಳವಳಿಗೆಗೆ ಪಾತ್ರರಾಗಬೇಕೆಂಬುದು ನಮ್ಮ ವಿನಂತಿ.

ಶುಭಪ್ರದ ಕ್ಷಯಸಂವತ್ಸರವು ಈಗ ನಮ್ಮ ಸಕಲ ಚಂದಾದಾರರಿಗೂ ಶುಭ ಸಂದೇಶವನ್ನು ಬೀರುತ್ತ ಬಂದಿರುವುದು. ಹೆಸರು ಕೇಳಲು ಕ್ರೂರವಾಗಿದ್ದಲ್ಲಿ ಮೂರ್ತಿಯು ಸೌಮ್ಯ ಮತ್ತು ಆನಂದದಾಯಕವಾಗಿರುವುದು ಸಹಜವಷ್ಟೆ! ಅದರಂತೆ ಹೆಸರು ಕ್ಷಯವಾಗಿದ್ದರೂ, ಫಲಗಳು ಅಕ್ಷಯವಾಗಿರುವುವೆಂಬುದು ನಮ್ಮ ನಂಬುಗೆ. ಈ ನೂತನವರ್ಷವು ರಾಜವರ್ಗಕ್ಕೂ, ಪ್ರಜಾಕೋಟಿಗೂ, ಈ ಪತ್ರಿಕೆಯ ಪೋಷಕರು ಚಂದಾದಾರರು, ಲೇಖಕರು-ಸರ್ವರಿಗೂ ಶುಭವನ್ನುಂಟುಮಾಡಲೆಂದು ಹಾರೈಸುವೆವು.

ಜಗತ್ತಿಯು ಸರ್ವರಿಗೂ ಸರ್ವ ಮಂಗಳವನ್ನೂ ಉಂಟುಮಾಡಲಿ;
ಓಂ ಶುಭಂ ಶುಭಂ ಶುಭಂ.

ಕುಸುಮಕುಂಜ.

ಕೊ ರ ತಿ .

—:೧:—

ಜೋಳಿಗೆಯು ಬಗಲಲ್ಲಿ ಕರದೆ ಮುಕ್ತಾಹಾರ
ತೋಳಿನಲಿ ತೂಗಾಡುವಚ್ಚ ಪವಳಗಳು
ಕೇಳಿ ಮನಮೆಚ್ಚಿಸುವ ಬಿನದದಿನಿಕೂಗೆಸೆಯೆ
ಮೇಲಾದುದಿದು ನಿಮ್ಮ ವದನವನು ತೋರುವುದು
ಕನ್ನಡಿಯೆ ಕನ್ನಡವು ಕೊಳ್ಳಿರೆಂದು
ಚನ್ನೆ ಸರಸತಿ ಕೊರತಿ ವೇಷದಲಿ ಬಂದಿಹಳು

—: ೨ :—

ಹಿಂದಿಯಾ ಸಂದರತೆ ಸಂಸ್ಕೃತದ ಸೌಷ್ಠವವು
ಒಂದಾಗಿ ತೆಗೆದೊಂದು ಮಣಿಯ ತೆರದೆ
ಹಿಂದಿನಾರ್ಯ ಸಂಸ್ಕೃತಿಯನಿಂದು ನಿಮ್ಮೆಡೆಗೆ ಬೇ-
ರೊಂದು ರೂಪವನಿತ್ತು ತಂದು ತೋರುವಚ್ಚರಿಯ
ಕನ್ನಡಿಯೆ ಕನ್ನಡವು ಕೊಳ್ಳಿರೆಂದು
ಚನ್ನೆ ಸರಸತಿ ಕೊರತಿ ವೇಷದಲಿ ಬಂದಿಹಳು

—: ೩ :—

ವಂಗ ಮಹಾರಾಷ್ಟ್ರಾದಿ ಸುತರನ್ನ ಬಳಿಗೈದಿ
ಭೃಂಗಗಳ ತೆರದೆ ಚರಣಾಬ್ಜ ರಜನ
ಸಿಂಗರಿಸಿಕೊಳ್ಳುವರು ಶಿರದೆ ಕನ್ನಡಿಗ ನೀಂ
ಭಂಗಗೈವೆಯೊ ಮಮತೆಯಿಂದೆ ಬರೆ ನಿನ್ನೆಡೆಗೆ
ಕನ್ನಡಿಯೆ ಕನ್ನಡವು ಕೊಳ್ಳಿರೆಂದು
ಚನ್ನೆ ಸರಸತಿ ಕೊರತಿ ವೇಷದಲಿ ಬಂದಿಹಳು

—: ೪ :—

ತೊರೆದು ಬೀಡೆಯನುಳಿದು ಚಲ್ವ ಮಣಿಮುಕುಟವನು
ಧರಿಸದೆ ಸುರತ್ನದಾಭರಣಗಳನು
ಮರುಕದಲಿ ನಿಮಗೆ ಶುಭವಾದವನು ಮಾಡುತೀ
ಪರಿಯ ವೇಷದೆ ನಿಮ್ಮ ಬಾಗಿಲಲಿ ನಿಂದಿಹೆನು
ಕನ್ನಡಿಯೆ ಕನ್ನಡವು ಕೊಳ್ಳಿರೆಂದು
ಚನ್ನೆ ಸರಸತಿ ಕೊರತಿ ವೇಷದಲಿ ಬಂದಿಹಳು

—: ೫ :—

ಸಕಲ ವಸ್ತುಗಳಿರ್ದೊಡೇನು ಮನೆಯೊಳಗೆನೆನ
ಮುಕುರವೊಂದಿಲ್ಲದಿರೆ ಶೋಭಿಸುವುದೆ ?
ಅಕಳಂಕಮಾದ ನಿಮ್ಮೀ ಮುಖದ ಚಲ್ವಿಕೆಯ
ಸುಕರಮೇ ಕಾದಿಡಲು ಪರರ ದೋಷಗಳಿಂದೆ ?
ಕನ್ನಡಿಯೆ ಕನ್ನಡವು ಕೊಳ್ಳಿರೆಂದು
ಚನ್ನೆ ಸರಸತಿ ಕೊರತಿ ವೇಷದಲಿ ಬಂದಿಹಳು

—:೬:—

ಅಲಸತೆಯ ಮಾಲಿನ್ಯವನ್ನು ಕಳೆದುವ್ಯಮದ
ಬಲುಮೆಯೊಂದುಬ್ಬರವಿಸುತ್ತು ನೊಗಕೆ
ನಲಿಸಿ ''ನಾವ್ ಕನ್ನಡಿಗರೆ''ಂಬುದಕೆ ಗುರುತಾಗಿ
ಜಲುವ ಬೊಬ್ಬೆಂದ ನಿಡಲಾವಗುಂ ಅಣಿಯಿಸಿಪ
ಕನ್ನಡಿಯ ಕನ್ನಡವು ಕೊಳ್ಳಿರೆಂದು
ಚನ್ನೆ ಸರಸತಿ ಕೊರತಿ ವೇಷದಲಿ ಬಂದಿಹಳು

ಭಾರತೀಸುತ

ಪ್ರಾಚೀನ ಭಾರತವರ್ಷದ ರವಣಿಯರು.

ಆರ್ಯಮಹಿಳೆಯರು ವಿದುಷಿಯರಾಗಿಯೂ, ವೇದೋಪಾಧ್ಯಾಯಿನಿಯರಾಗಿಯೂ ಶಾಸ್ತ್ರಪ್ರಕಾಶಕರಾಗಿಯೂ, ಯೋಗ ಮತ್ತು ಪವಿತ್ರ ಕರ್ತವ್ಯಗಳಲ್ಲಿ ಭಾಗಸ್ಥರಾಗಿಯೂ ಇದ್ದರು. ಅವರು ರಾಜಾಸ್ಥಾನದಲ್ಲಿ ಗೌರವಿಸಲ್ಪಡುತ್ತಿದ್ದರು. ನ್ಯಾಯ ಶಾಸ್ತ್ರದ ಪಾಠ ಪುಸ್ತಕಗಳನೇಕ ಇವರಿಂದ ಬರೆಯಲ್ಪಟ್ಟದ್ದುವು. ಇವರು ಸಾರಥಿಗಳಾಗಿಯೂ, ಯೋದ್ಧೆಯರಾಗಿಯೂ, ಕವಯಿತ್ರಿಗಳಾಗಿಯೂ, ಆಸ್ಥಾನದ ಸದಸ್ಯರಾಗಿಯೂ ಇರುತ್ತಿದ್ದರು.

ಹಿಂದುಗಳ ಧ್ಯೇಯವು ಪಾಶ್ಚಾತ್ಯ ಸುಪ್ರಸಿದ್ಧ ಕವಿಯಾದ ''ಟೆನ್ನಿಸ್ಸ'' ಮಹಾಕವಿವಾಕ್ಯದ ಪ್ರತಿಚ್ಛಾಯೆಯಾಗಿದೆ. A woman's cause is Man's—if she be small, slight natured, miserable, how shall men grow? ಸ್ತ್ರೀಯ ಧರ್ಮವೇ ಪುರುಷನ ಧರ್ಮವು; ಅವಳು ಚಿಕ್ಕವಳೂ, ಅಲ್ಪಪ್ರಕೃತಿಯೂ, ನೀಚಳೂ ಆಗಿದ್ದರೆ ಪುರುಷನು ಮಾತ್ರ ಹೇಗೆ ದೊಡ್ಡವನಾಗಿ ಬೆಳೆದಾನು? ಪ್ರಾಚೀನ ಭಾರತವರ್ಷದ ಮಹಾತ್ಮರು ಈ ವಾಕ್ಯದ ಅರ್ಥವನ್ನು ಗಣನೆಗೆ ತಂದು ಅನುಭವಕ್ಕೆ ತಂದಿದ್ದರು. ಆದರೆ ಈಗ? ವೇದಗಳ ಕಾಲದಲ್ಲಿ ಸ್ತ್ರೀಯರು ತಾವು ಆರ್ಯ ಸಂಗತಿಯವರೆಂದು ಸಾರಿಹೇಳುತ್ತಿದ್ದುದು ಮಾತ್ರವಲ್ಲದೆ ಧಾರಾಳವಾಗಿ ಆ ಕಾಲದ ಸಾಮಾಜಿಕ ಸುಧಾರಣೆಯಲ್ಲಿ ಮುಗ್ಧೆಯರಾಗಿದ್ದರು. ಅವರು ಕೆಲವು ವೇದಗೀತಗಳ ರಚನಾಕಾರ್ಯದಲ್ಲಿ ಪುರುಷರಿಗೆ ಸಹಾಯಕರಾಗಿದ್ದರು. ಋಗ್ವೇದದ ಪ್ರಾರಂಭಪದ್ಯಗಳನೇಕಗಳಲ್ಲಿ ಕವಿತೆಯ ಮತ್ತು ಕವಿಗಳ ಹೆಸರುಗಳು ವಿಶೇಷವಾಗಿ ಬರೆ

ಯಲ್ಪಟ್ಟವೆ. ಹೀಗೆ ಋಗ್ವೇದದ ೫ನೆಯ ಅಧ್ಯಾಯದಲ್ಲಿ ಅತ್ರಿವಂಶದಲ್ಲಿ ಹುಟ್ಟಿದ 'ವಿಶ್ವವರಾ' ಎಂಬ ಹೆಸರುಳ್ಳ ರಮಣಿಯಿಂದ ಒಂದೆರಡು ಋಕ್ಕುಗಳು ರಚಿಸಲ್ಪಟ್ಟಿರುವುದಾಗಿ ತಿಳಿದುಬರುವುದು. ಅಗಸ್ತ್ಯಋಷಿಯ ಪತ್ನಿಯಾದ ಲೋಪಾಮುದ್ರೆಯೂ ಕವಯಿತ್ರಿಯಾಗಿದ್ದಳು. ಲೋಪಾಮುದ್ರೆಯ ಚರಿತ್ರೆಯು ರಾಮಾಯಣದಲ್ಲಿನ ಪ್ರತಿಯೊಬ್ಬ ರಮಣಿಗೂ ಉದಾಹರಣೆಯಾಗಿ ಹೇಳಲ್ಪಟ್ಟಿರುವುದಲ್ಲದೆ ಅವಳು ವಿದ್ವತ್ತಿನಲ್ಲಿಯೂ, ದಾಂಪತ್ಯ ಧರ್ಮರಕ್ಷಣೆಯಲ್ಲಿಯೂ ಇತರರಿಗೆ ಮೇಲ್ಪಂಙ್ತಿಯಾಗಿದ್ದಳೆಂದು ಕಂಡುಬರುವದು. ಲೋಪಾಮುದ್ರೆಯು ಋಗ್ವೇದದ ೧೭೯ನೆಯ ಋಕ್ಕನ್ನು ರಚಿಸಿದಳು. 'ಅಂಬರಿ' ಯೆನ್ನುವ ಮಹಾತ್ಮನ ಕುಮಾರಿಯು ರಚಿಸಿದ ಮತ್ತೊಂದು ಋಕ್ಕು ವೇದಾಂತಶಾಸ್ತ್ರದ ಮುಖ್ಯಾರ್ಥಗಳನ್ನೆಲ್ಲ ಒಳಗೊಂಡಿರುವುದೆಂದು ನಿಶ್ಚಿತಪಲ್ಪಟ್ಟಿದೆ. ಬೃಹದಾರಣ್ಯಕ ಉಪನಿಷತ್ತಿನಲ್ಲಿ ''ಮೈತ್ರೇಯಿ''ಯ ಚರಿತ್ರೆಯಿದೆ.

ಬೌದ್ಧಸ್ತ್ರೀಯರು ಸನ್ಯಾಸದೀಕ್ಷೆಯನ್ನು ವಹಿಸುವ ಅಧಿಕಾರವನ್ನು ಪಡೆದಿದ್ದರು. ಅವರಲ್ಲನೇಕರು ವಿದ್ಯಾವತಿಯರಾಗಿ ತಮ್ಮ ಮತವನ್ನು ಹರಡಲು ಬಹಳ ದೂರದೇಶಕ್ಕೆ ಹೋಗುತ್ತಿದ್ದರು. ಅಶೋಕನ ಕಾಲದ ಸಂಗಮಿತ್ರನ ದಾಯಾದಿಯೊಬ್ಬಳು ಸಿಂಹಳದ್ವೀಪಕ್ಕೆ ಹೋಗಿ ಅಲ್ಲೊಂದು ಕಲಾಶಾಲೆಯನ್ನು ಸ್ಥಾಪಿಸಿದಳೆಂದೂ, ಅಲ್ಲಿನ ಮಹಿಳೆಯರನೇಕರು ಈ ಕಲಾಶಾಲೆಯಲ್ಲಿ ಅಭ್ಯಸಿಸಿದರೆಂದೂ ತಿಳಿದುಬರುತ್ತದೆ. ಮತ್ತು ಮಂಡನಮಿಶ್ರನ ಸತಿಯಾದ 'ಭಾರತಿ' ಎಂಬಾಕೆಯ ಚರಿತ್ರೆಯ ವಿಷಯವಾಗಿ ಅರಿಯದವರು ಅತಿ ವಿರಳ. ಮಂಡನಮಿಶ್ರ ಮತ್ತು ಶಂಕರಾಚಾರ್ಯರು ಸಮಕಾಲೀನರಾಗಿಯೂ ಮತ್ತು ಸಮಾನ ಪಾಂಡಿತ್ಯವುಳ್ಳವರಾಗಿಯೂ ಇದ್ದರು. ಶಂಕರಾಚಾರ್ಯನು ತಾನು ಶಾಸ್ತ್ರವಾದದಲ್ಲಿ ಗೆದ್ದರೆ ಮಂಡನಮಿಶ್ರನ ಶಿಷ್ಯನಾಗುವುದಾಗಿಯೂ, ಮಂಡನಮಿಶ್ರನು ತಾನು ಸೋತರೆ ಸಂಸಾರವನ್ನು ತ್ಯಜಿಸಿ ಶಂಕರನ ಶಿಷ್ಯನಾಗುವುದಾಗಿಯೂ ಶಪಥ ಮಾಡಿಕೊಂಡರು. ತಮ್ಮ ವಾದಕ್ಕೆ ಆ ಕಾಲದ ಪಂಡಿತಶಿರೋಮಣಿಗಳಲ್ಲಿ ಪಕ್ಷಪಾತವಿಲ್ಲದವಳೆಂದೂ ಹೆಚ್ಚಾದವಳೆಂದೂ ಗಣಿಸಲ್ಪಟ್ಟಿದ್ದ ಮಂಡನಮಿಶ್ರನ ಸತಿಯಾದ ಭಾರತಿಯನ್ನೇ ನ್ಯಾಯಕ್ಕಾಗಿ ಏರ್ಪಡಿಸಿಕೊಂಡರು. ಅನೇಕ ದಿನಗಳವರೆಗೂ ಇಬ್ಬರಿಗೂ ವಾದವುಂಟಾಗಲು ಕೊನೆಗೆ ಮಂಡನಮಿಶ್ರನು ಸೋತುಹೋದನೆಂದು ಭಾರತಿಯು ಹೇಳಲು ಮೊದಲಿನ ಶಪಥದಂತೆ ಮಂಡನಮಿಶ್ರನು ಸಂಸಾರ ತ್ಯಾಗಮಾಡಿ ಶಂಕರನ ಶಿಷ್ಯನಾದನು. ಭಾರತಿಯೂ ಶಂಕರಾಚಾರ್ಯನಿಗೆ ಶಿಷ್ಯೆಯಾದಳು. ಭಾರತಿಯು ಸರಸ್ವತಿಯ ಅವತಾರವೆಂದು ಹೇಳುವರು. ಅದು ಹೇಗಾದರೂ ಇರಲಿ; ಶಂಕರಾಚಾರ್ಯನ ಅನೇಕ ದಿಗ್ವಿಜಯಗಳಲ್ಲಿ ಆತನಿಗೆ

ಇವಳು ಸಹಾಯಕಳಾಗಿದ್ದಳೆಂಬುದು ಮಾತ್ರ ನಿಶ್ಚಯವು. ಹಿಂದೂ ವಿದ್ಯಾರ್ಥಿಗಳಿಗೆ ಭಾಸ್ಕರಾಚಾರ್ಯ (ಗಣಿತಶಾಸ್ತ್ರಸ್ಥಾಪಕ)ನ ಮಗಳಾದ ಲೀಲಾವತಿಯ ಚರಿತ್ರೆಯು ಹೊಸದಲ್ಲ. ಅವಳು ಚಿಕ್ಕಂದಿನಲ್ಲಿಯೇ ವಿಧವೆಯಾಗಿದ್ದರೂ ತಂದೆಯು ಗಣಿತ ಮತ್ತು ವೇದಾಂತಶಾಸ್ತ್ರದಲ್ಲಿ ನಿಪುಣಳನ್ನಾಗಿ ಮಾಡಿದನು. ಲೀಲಾವತಿ ಯೆನ್ನುವದೊಂದು ಮಹಾಗ್ರಂಥವೇ ಅವಳ ಪಾಂಡಿತ್ಯದ ಚಿಹ್ನೆಯಾಗಿ ಇಂದೂ ಇದೆ. ಇದರಿಂದ ಅವಳು ಎಷ್ಟೋ ಗೌರವಿಸಲ್ಪಡುತ್ತಿದ್ದಳೆನ್ನುವದು ಕಂಡುಬರುವುದು. ನಾವು ನಮ್ಮ ದೇಶದ ವಿಧವೆಯರನ್ನಾವ ದುಸ್ಥಿತಿಯಲ್ಲಿಟ್ಟಿದ್ದೇವೆ?

'ವರಾಹಮಿಹಿರ'ಎನ್ನುವ ಜ್ಯೋತಿಶ್ಶಾಸ್ತ್ರಜ್ಞನು ಜ್ಯೋತಿಶ್ಶಾಸ್ತ್ರದ ಮೂಲವನ್ನು ಸಿಂಹಳದ್ವೀಪದ ಆದಿಪುರುಷರಿಂದರಿತವಳೂ, ಮತ್ತು ವಿಜ್ಞಾನದ ವಿಷಯ ನನ್ನರಿತವಳೂ ಆದ 'ಖಾನ' ಎಂಬ ರಮಣಿಯಿಂದ ಕಲಿತನು. ಕೊನೆಗೆ ಇಬ್ಬರೂ ತಮ್ಮ ತಮ್ಮ ಆನ್ವೇಷಣವನ್ನು ಪೂರೈಸಿದನಂತರ ಒಬ್ಬರನ್ನೊಬ್ಬರು ಮದುವೆಯಾದರು. ಖಾನಳ ವಿದ್ಯಾನೈಪುಣ್ಯ ಮತ್ತು ಜ್ಯೋತಿಶ್ಶಾಸ್ತ್ರನೈಪುಣ್ಯದ ವಿಷಯವಾಗಿಷ್ಟೋ ಕಥೆಗಳು ಹೇಳಲ್ಪಟ್ಟಿವೆ. ಒಂದುದಿನ ಸಾಯಂಕಾಲ ವಿಕ್ರಮಾದಿತ್ಯನು ತನ್ನ ಗೆಳೆಯನಾದ ವರಾಹನೊಡನೆ ಉದ್ಯಾನವನದಲ್ಲಿ ಸಂಚರಿಸುತ್ತಿರುವಾಗ ಆಕಾಶದಲ್ಲೆಷ್ಟು ನಕ್ಷತ್ರಗಳಿವೆಯೆಂದು ವರಾಹನನ್ನು ಕೇಳಿದನು. ಪ್ರಶ್ನೆಗೆ ತಕ್ಕ ಉತ್ತರವನ್ನು ಕೊಡಲಾರದೆ ವರಾಹನು ತಬ್ಬಿಬ್ಬಾಗಿ ಮನೆಗೆ ಬಂದು ಚಿಂತಿಸುತ್ತಿರುವದನ್ನು ಕಂಡು ಪತ್ನಿಯಾದ ಖಾನಳು ಸ್ವಲ್ಪವೂ ಆಲಸ್ಯಮಾಡದೆ ಉತ್ತರ ಕೊಟ್ಟಿದ್ದನ್ನು ಕೇಳಿ ಸಭೆಗೆ ಬಂದು ತಿಳಿಸಿದನು. ವಿಕ್ರಮಾದಿತ್ಯನು ಜೆರಗಾಗಿ ನಕ್ಷತ್ರಗಳನ್ನು ಲೆಕ್ಕ ಮಾಡುವುದು ಹೇಗೆಂದು ವರಾಹನನ್ನು ಕೇಳಲು, ವರಾಹನು ಲಜ್ಜೆಯಿಂದ ನಕ್ಷತ್ರವನ್ನೆಣಿಸುವ ಯುಕ್ತಿಯು ತನಗೆ ತಿಳಿಯದೆಂದೂ, ತನ್ನ ಪತ್ನಿಯಾದ ಖಾನದೇವಿಯು ಹೇಳಿದವಳೆಂದೂ ಒಪ್ಪಿಕೊಂಡನು. ತನ್ನ ದೇಶದಲ್ಲಿ ಅಂತಹ ಗಣಿತಶಾಸ್ತ್ರನಿಪುಣಳಿರುವುದು ತನಗೊಂದು ಗೌರವವೆಂದು ರಾಜನು ಆನಂದಿತನಾಗಿ ಅವಳನ್ನು ತನ್ನ ಆಸ್ಥಾನಕ್ಕೆ ಹತ್ತನೆಯ ರತ್ನವಾಗಿ ಮಾಡಿದನು. ಕವಿರಾಜನಾದ ಭೋಜನ ಆಸ್ಥಾನದಲ್ಲಿ ಇಬ್ಬರು ವನಿತಾಮಣಿಯರು ಕವಿತಿಖಾಮಣಿಗಳಲ್ಲಿ ಅಗ್ರಗಣ್ಯರಾಗಿದ್ದರು. ಅವರಲ್ಲೊಬ್ಬಳು ಕುಂಬಾರಳು; ಮತ್ತೊಬ್ಬಳು ರೈತಳು. ಇದರಿಂದ ವಿದ್ಯೆಗೆ ಯಾವ ಪ್ರಾಮುಖ್ಯವಾದ ಜಾತಿಯಾಗಲಿ ಕುಲವಾಗಲಿ ಅವಶ್ಯಕವಿಲ್ಲವೆಂದಾಯಿತು. ಮಹಾಭಾರತದಲ್ಲಿ ಪ್ರಧಾನರಾಜನ ಪುತ್ರಿಯಾದ 'ಸುಲಭಾ' ಎನ್ನುವ ಕನ್ಯೆಯ ವಿದ್ಯಾಪ್ರೌಢಿಮೆಗೀಡು ಜಗತ್ತಿನಲ್ಲೇ ಇರಲಿಲ್ಲವೆಂದು ಹೇಳಲ್ಪಟ್ಟಿದೆ. 'ಮಲಯವತಿ' ಯೆನ್ನುವ

ರಮಣಿಯು ದೂರ್ವಾಸಮಹಾಮುನಿಯ ಶಿಷ್ಯೆಯಾಗಿ ಅನೇಕ ಕಲೆಗಳನ್ನಭ್ಯಾಸಮಾಡಿ ತನ್ನನ್ನು ಮೀರಿಸಿದವರು ಯಾರೂ ಇಲ್ಲವೆಂದು ಹೆಸರುಗೊಂಡಿದ್ದಳೆಂದು ಸ್ಕಾಂದವು ರಾಣದಲ್ಲಿ ಹೇಳಲ್ಪಟ್ಟಿದೆ. ಶಕಸ್ಥಾಪಕನಾದ ಸುಪ್ರಸಿದ್ಧ ಶಾಲಿವಾಹನನ ಸತಿಯಾದ ಮಲಯವತಿ ಎಂಬ ಹೆಸರಿನ ಮತ್ತೊಬ್ಬ ರಮಣಿಯು ವ್ಯಾಕರಣ ಮತ್ತು ವಿಜ್ಞಾನ ಶಾಸ್ತ್ರಗಳನ್ನು ಸಂಪೂರ್ಣವಾಗಿ ಕಲಿತಿದ್ದಳೆಂದು ಕಂಡುಬರುತ್ತದೆ. ಕಥಾಸರಿತ್ಸಾಗರದಲ್ಲಿ ರಾಜಾ ಅನಂತದೇವನ ಮಡದಿಯಾದ ಸೂರ್ಯವತಿ ಯೆನ್ನುವ ನಾರೀಮಣಿಯು ಸಕಲ ಕಲಾಕೋವಿದಳಾಗಿದ್ದಳೆಂದು ಕಂಡುಬರುವುದು. ಭಕ್ತವಿಜಯದಲ್ಲಿ ರಮಣಿಯರು ಕೇವಲ ಕವಿಗಳಾಗಿದ್ದುದು ಮಾತ್ರವಲ್ಲದೆ ರಸಾಯನಶಾಸ್ತ್ರ, ಅರ್ಥಶಾಸ್ತ್ರ, ಖನಿಜಶಾಸ್ತ್ರ ಇವುಗಳಲ್ಲಿಯೂ ಕೂಡ ನೈಪುಣ್ಯವನ್ನು ಹೊಂದಿದ್ದರೆಂದು ತೋರಿಬರುವುದು. ಮಧ್ಯಕಾಲದಲ್ಲಿ ಅಂದರೆ (ಕ್ರಿಸ್ತಶಕ ೮- ೧೫ನೆಯ ಶತಾಬ್ದದಲ್ಲಿ) ಇಬ್ಬರು ರಮಣಿಯರು ಸಾಹಿತ್ಯದಲ್ಲಿ ಅತ್ಯದ್ಭುತ ಪಾಂಡಿತ್ಯವನ್ನು ಪಡೆದಿದ್ದರು. ೧೪ನೆಯ ಶತಮಾನದಲ್ಲಿ ರಾಜಾ ನರಸಿಂಹನ ಮೊಮ್ಮಗನ ಹೆಂಡತಿಯಾದ ಲಕ್ಷ್ಮೀದೇವಿಯು ವಿವಾದಚಂದ್ರ ಎನ್ನುವ ಗ್ರಂಥವನ್ನು ರಚಿಸಿದಳು. ಆ ಗ್ರಂಥವು ಈಗಲೂ ಮಿಥಿಲಾಪಟ್ಟಣದ ಮುಖ್ಯ ನ್ಯಾಯಾಧಾರಗ್ರಂಥವಾಗಿರುವದು. ಭರತಖಂಡದ ಇತರ ಪ್ರಾಂತ್ಯದ ಮಹಿಳೆಯರಿಗಿಂತ ಮಿಥಿಲಾ ಪಟ್ಟಣದ ರಮಣಿಯರಿಗೆ ಹೆಚ್ಚು ಅಧಿಕಾರವಿರುವುದಕ್ಕೆ ಕಾರಣವನ್ನು ಕಂಡು ಹಿಡಿಯುವುದು ಕಷ್ಟವಲ್ಲ. ಇಂಡಿಯದ ಅನೇಕ ಭಾಗಗಳಲ್ಲಿ ವಾಸವಾಗಿರುವ ಜನಗಳ ನ್ಯಾಯಗ್ರಂಥ (ಮದರಾಸಾಧಿಪತ್ಯವೂ ಸೇರಿದೆ) ವಾದ ಮಿತಾಕ್ಷರವೆನ್ನುವ ಗ್ರಂಥವು ಲಕ್ಷ್ಮೀದೇವಿಯೆನ್ನುವ ಮತ್ತೊಬ್ಬ ಮಹಿಳೆಯಿಂದ ರಚಿಸಲ್ಪಟ್ಟಿದ್ದು. ಈ ಗ್ರಂಥದ ವಿಮರ್ಶೆಯು ಬಾಲಂಭಟ್ಟ ಎಂಬ ಹೆಸರಿನಿಂದ ಕರೆಯಲ್ಪಟ್ಟಿದೆ. ಇದರಲ್ಲಿ ನಂದಪಂಡಿತನ ನ್ಯಾಯಶಾಸ್ತ್ರದ ಗುಣದೋಷವಿಮರ್ಶೆಯು ಅದೇ ಲಕ್ಷ್ಮೀದೇವಿಯಿಂದ ಬರೆಯಲ್ಪಟ್ಟಿರುವುದು. ಈಕೆಯು ೧೭ನೆಯ ಶತಮಾನದ ಅಂತ್ಯಭಾಗದಲ್ಲಿದ್ದುದಾಗಿ ತಿಳಿದುಬರುವುದು.

[ಈ ಲೇಖನವು ಮದ್ರಾಸಿನ ಶ್ರೀಯುತ ಸಿ. ಪಿ. ರಾಮಸ್ವಾಮಯ್ಯರ್‌ರವರು ಅಲ್ಲಿನ ಪ್ರೆಸಿಡೆನ್ಸಿ ಕಾಲೇಜ್ ಸಂಸ್ಕೃತಸಭೆಯ ವಾರ್ಷಿಕೋತ್ಸವದಲ್ಲಿ ಅಧ್ಯಕ್ಷರಾಗಿದ್ದಾಗ ಮಾಡಿದ ಭಾಷಣದ ಪರಿವರ್ತನವು. ಇದರಿಂದ ನಮ್ಮ ಪ್ರಾಚೀನ ರಮಣಿಯರು ಎಷ್ಟು ವಿದ್ಯಾವತಿಯರಾಗಿದ್ದರೆನ್ನುವುದೂ, ಆ ಕಾಲದ ಈ ಕಾಲದ ವಿದ್ಯಾಭ್ಯಾಸಕ್ರಮದ ನ್ಯತ್ಯಾಸವೂ ವಿಶದವಾಗಿ ತಿಳಿದುಬರುವುದರಿಂದ ಅದನ್ನಿಲ್ಲಿ ಪ್ರಕಟಿಸಿದೆ.

[ಸಂ। ಸ॥

ಮುತ್ತಿನ ಸರ.

ಸ್ತ್ರೀಯು ಯಾವದಿನ ಮೊದಲನೆಯ ಸಾರಿ ಕಣ್ಣೀರನ್ನು ಸುರಿಸುವಳೋ, ಆದಾಕೆಗೆ ಬಹು ಆನಂದದ ದಿನವು; ಏಕೆಂದರೆ ಆ ದಿನ ಆಕೆಗೆ ಅಬಲೆಯಾದ ತನ್ನ ನಿಕೃಷ್ಟತ್ವ ಬಲದ ಪರಿಚಯ ವಾಗುವದು.

೦ ೦ ೦

ಹೆಂಗಳೆಯರ ಮೂರ್ಛಾರೋಗವು ಪುರುಷರ ಮನಸ್ಸನ್ನು ಸೆಳೆಯುವದಕ್ಕೊಂದುಪಾಯ ಮಾತ್ರವೆ.

೦ ೦ ೦

ಸ್ತ್ರೀಯರು ರೂಪವತಿಯರಾದರೆ ನಾಲ್ಕು ದಿಕ್ಕುಗಳಲ್ಲೂ ಅವರ ಗುಣಗಾನವನ್ನು ಕೇಳಬ ಹುದು. ಯಾರಿಗೆ ರೂಪವಿಲ್ಲವೋ ಅವರ ಗುಣಗಳನ್ನು ಹುಡುಕುವವರು ತಾನೇ ಯಾರು?

೦ ೦ ೦

ಏಳುವರ್ಷ ವಯಸ್ಸಾವಮೇಲೆ ಸ್ತ್ರೀಯರು ವಿಶ್ವಾಸಯೋಗ್ಯರಲ್ಲ; ಪುರುಷರಾದರೊ ಜೀವನದ ಯಾವ ಅವಸ್ಥೆಯಲ್ಲಿಯೂ ವಿಶ್ವಾಸಯೋಗ್ಯರಲ್ಲ.

೦ ೦ ೦

ಸ್ತ್ರೀಯರ ಹಾಗೂ ವಿದ್ಯಾವತಿಯರ ಜೀವನದ ಧ್ಯೇಯವು ಪ್ರೇಮಶಾಂತಿಯಲ್ಲಿ; ಅದರವಸಂಧಾ ನವು ಕಾಮತೃಪ್ತಿಯಲ್ಲಿ. ಪುರುಷರ ವಿಷಯವು ಇದಕ್ಕೆ ಸಂಪೂರ್ಣ ವಿರುದ್ಧ.

೦ ೦ ೦

ಕಣ್ಣಿನ ನೋಟವೇ ಸ್ತ್ರೀಯರ ಅಂತಿಮಸೌಂದರ್ಯ.

೦ ೦ ೦

ಗಂಡನು ಎಷ್ಟೇ ಚತುರನಾಗಲಿ, ಅವನ ದೋಷಗಳನ್ನು ಹೆಂಡತಿಯಿಂದ ಮುಚ್ಚಿಡುವುದು ಅಸಾಧ್ಯ.

೦ ೦ ೦

ಸ್ತ್ರೀಯರು ಮಾಯಾವಿಗಳು; ಆದರೆ ಪುರುಷರೋ ?

೦ ೦ ೦

ನಾರಿಯ ಜೀವನವೆಂದರೆ ತ್ಯಾಗವು ಮೂರ್ತೀಭವಿಸಿದಂತೆ.

೦ ೦ ೦

ಪ್ರೇಮವು ಸ್ತ್ರೀಯರ ಒರೆಗಲ್ಲು; ಅದರಿಂದವರ ಜೀವನದ ಹೊನ್ನಿನಲ್ಲಿ ಸ್ವಾರ್ಥದ ತಾಮ್ರವಿ ಪ್ರಮಾಣವೆಷ್ಟಿದೆ ಯೆಂಬುದನ್ನು ಕಂಡುಹಿಡಿಯಬಹುದು.

೦ ೦ ೦

ಪುರುಷರು ಸ್ತ್ರೀಯರಲ್ಲಿ ಯಾವವಿಧವಾದ ಸೌಂದರ್ಯವನ್ನು ಅಪೇಕ್ಷಿಸುವರೊ, ಆಂತಹ ಸೌಂದ ರ್ಯವನ್ನು ಸ್ತ್ರೀಯರು ಪುರುಷರಲ್ಲಿ ಅಪೇಕ್ಷಿಸುವದಿಲ್ಲ. ಇದೇ ಪುರುಷರ ಸೌಭಾಗ್ಯ.

೦ ೦ ೦

ಪುರುಷರಿಗಿಂತಲೂ ಸ್ತ್ರೀಯರ ಕಲ್ಪನಾಶಕ್ತಿಯು ಹೆಚ್ಚು.

೦ ೦ ೦

ಸ್ತ್ರೀಯರನ್ನು ಒಲಿಸುವ ಏಕಮಾತ್ರ ಸಾಧನವು ಪ್ರೇಮವೆ. ಪ್ರೇಮಸುರೆಯಿಂದ ಮತ್ತರಾದರೆಂದರೆ ಅವರಿಂದಾಗದ ಕಾರ್ಯವೇ ಇಲ್ಲ.

೦ ೦ ೦

ಪುರುಷನು ಸ್ತ್ರೀಯರಲ್ಲಿ ದೈವೀಗುಣದ ಅನುಸಂಧಾನಮಾಡಿ ನಿರಾಶನಾಗುವನು. ಮಾನವೀಕೃತೇ ಅವರಲ್ಲಿ ಯಥೇಷ್ಟ. ಏಕೆಂದರೆ ಸ್ಥೂಲಜಗತ್ತಿನ ಅನಿವಾರ್ಯ ಭಾರಗಳು ಅವರ ಮೇಲಿಲ್ಲ.

೦ ೦ ೦


ಯಾರು ಹೆಂಗಸರ ಮನಸ್ಸನ್ನು ತಿಳಿಯಲಿಚ್ಛಿಸುವರೋ ಅವರು ಕೇವಲ ನಿಬ್ಬೆರಗಾಗುವರು. ಹೆಂಗಸು ತನ್ನ ಮನಸ್ಸನ್ನು ತಾನೇ ತಿಳಿಯಲಾರಳು; ಮತ್ತೊಬ್ಬರಿಗೆ ತಿಳಿಸಬಲ್ಲಳು ಹೇಗೆ?

೦ ೦ ೦

ಪುರುಷನು ಅಜೀವವೂ ಸ್ತ್ರೀಯನ್ನು ವಂಚಿಸುವನು—ಪ್ರೇಮದಲ್ಲಿ, ವಿವಾಹಬಂಧನದಲ್ಲಿ, ಹಾಗೂ ನಿತ್ಯವ್ಯವಹಾರದಲ್ಲಿ.

೦ ೦ ೦

ಸ್ತ್ರೀಯ ಸಮಸ್ತ ಅತ್ಯಾಚಾರಗಳನ್ನು ಪುರುಷನು ಸಹಿಸಬಲ್ಲನು; ಅವರವಳ ಬೈಗಳು ಮಾತ್ರ ಅವನಿಗೆ ಅಸಹ್ಯ.



ಮಾನವಜನ್ಮದ ಶ್ರೇಷ್ಠತೆಯೂ ಕರ್ತವ್ಯವೂ.

(ಲೇಖಕಿ—ಶ್ರೀಮತಿ ಕೃಷ್ಣವೇಣಿ ಅಮ್ಮ, ಬಳ್ಳಾರಿ.)

ಎಲ್ಲಾ ಜನ್ಮಗಳಲ್ಲಿಯೂ ಮಾನವಜನ್ಮವೇ ಶ್ರೇಷ್ಠವಾದುದೆಂದು ಎಲ್ಲಾ ಶಾಸ್ತ್ರಗಳೂ ಮೊರೆಯಿಡುತ್ತಿರುವವು. ಹಿಂದೂ ಶಾಸ್ತ್ರ ಗ್ರಂಥಗಳು ಮಾತ್ರವಲ್ಲದೆ, ಇತರ ಶಾಸ್ತ್ರಗಳೆಲ್ಲವೂ ಕೂಡ ಭಗವಂತನ ಸೃಷ್ಟಿಯಲ್ಲಿ ಮಾನವಸೃಷ್ಟಿಯೇ ಉತ್ತಮವೆಂದು ಒಪ್ಪಿಕೊಳ್ಳುವವಷ್ಟೆ. ಉಳಿದ ಮೃಗ, ಪಶು, ಪಕ್ಷಿ ಜಂತುಗಳೆಲ್ಲಕ್ಕಿಂತಲೂ ಮಾನವನೇ ಎಲ್ಲಾ ವಿಷಯಗಳಲ್ಲಿಯೂ ಶ್ರೇಷ್ಠವೆನ್ನುವ ವಿಷಯವು ಎಲ್ಲರಿಗೂ ತಿಳಿದದ್ದೇ ಆಗಿರುವುದು. ಹಾಗಿರುವಲ್ಲಿ ಮಾನವಜನ್ಮದ ಪ್ರಯೋಜನವೇನು? ಜನ್ಮದ ಉದ್ದೇಶವಾವುದು? ಜನ್ಮವೆತ್ತಿದನಂತರ ಯಾವ ವಿಧವಾಗಿ ಈ ಜನ್ಮದ ಸಾರ್ಥಕತೆಯನ್ನು ಮಾಡಿಕೊಳ್ಳುವುದು? ಎನ್ನುವ ವಿಷಯವನ್ನು ಪ್ರತಿಯೊಬ್ಬ ಮಾನವನೂ ಅಂತ

ದೃಷ್ಟಿಯಿಂದ ತಿಳಿದು, ಬಹಿರಂಗದಲ್ಲಿ ಹಿರಿಯರಿಂದಲೋ, ಸತ್ಸಂಗದಿಂದಲೋ, ಸದ್ಗುರುವಿನ ಮುಖಾಂತರವೋ ತಿಳಿದು, ಆ ಜ್ಞಾನದ ಮೂಲಕ ತನ್ನ ಸ್ವಗುಣವನ್ನು ತಿದ್ದಿಕೊಳ್ಳಬೇಕು. ಪಶುವಿಗೂ, ಮಾನವನಿಗೂ ಇರತಕ್ಕ ಬೇಧವೇನು? ನೋಡಿದ ಕೂಡಲೇ ತಿಳಿಯುವ ವ್ಯತ್ಯಾಸವನ್ನೆಲ್ಲರೂ ಅರಿತಿರುವರು. ಆದರೆ ವಿಚಾರಿಸಿನೋಡಿದರೆ ಇಬ್ಬರಲ್ಲೂ ಹೆಚ್ಚು ಬೇಧವೇನೂ ಇರುವುದಿಲ್ಲ. ಮಾನವನಿಗಿರುವಂತೆಯೇ ಇತರ ಪ್ರಾಣಿಗಳಿಗೆ ಶರೀರವಿಲ್ಲವಷ್ಟೆ. ಆದರೆ ಜನನ, ಮರಣ, ಸ್ವಪ್ನ, ಜಾಗ್ರತಿ, ಸುಷುಪ್ತಿ ಮೊದಲಾದ ಅವಸ್ಥೆಗಳೆಲ್ಲವೂ ಇಬ್ಬರಿಗೂ ಒಂದೇ. ಇನ್ನು ಆಹಾರ, ನಿದ್ರೆ, ಭಯ, ಮೈಥುನಗಳ ವಿಷಯದಲ್ಲೋ ಎಂದರೆ-ಪಶುಪಕ್ಷಿಗಳಿಗಿಂತ ಮಾನವನೇ ಅಗ್ರಸ್ಥಾನದ ಲ್ಲಿರುವನು. ಹೇಗಂದರೆ—ಮೃಗ ಪಕ್ಷಿಗಳು ಹಸಿವಾದಾಗ ಮಾತ್ರ ಆಹಾರವನ್ನು ತೆಗೆದುಕೊಳ್ಳುವುವೇ ಹೊರ್ತು ಉಳಿದಕಾಲದಲ್ಲಿ ಆ ಕಾಳುಕಡ್ಡಿಗಳು ಕಣ್ಣಿಗೆ ಬಿದ್ದರೂ ಜಿಹ್ವಾಚಾಪಲ್ಯದಿಂದ ತಿನ್ನುವುದಿಲ್ಲ. ಮಾನವನು ಹೊಟ್ಟೆ ತುಂಬಿದ್ದರೂ ರುಚಿಯಾದ ಪದಾರ್ಥವು ಕಣ್ಣಿಗೆ ಬಿದ್ದಾಗ ಜಿಹ್ವಾಚಾಪಲ್ಯವನ್ನು ನಿಗ್ರಹಿಸುವ ಶಕ್ತಿಯಿಲ್ಲದೆ ಅದನ್ನು ಮತ್ತೆ ರುಚಿನೋಡಿತಿಂದು ಅಜೀರ್ಣವ್ಯಾಧಿಯನ್ನು ಬರಮಾಡಿಕೊಳ್ಳುವನು. ಪಶುವು ನಿದ್ರೆಬಂದಾಗ ಮಲಗುವುದು; ಉಳಿದಕಾಲದಲ್ಲೆಲ್ಲಾ ಚಟುವಟುಕೆಯಿಂದಿರು ವುದು. ಮಾನವನು ಮಿತಿಮೀರಿ ಭೋಜನಮಾಡುವುದರಲ್ಲಿಯೂ, ಕೆಲಸವಿಲ್ಲದೆ ಸೋಮಾರಿಯಾಗಿರುವುದರಲ್ಲಿಯೂ, ತಾಮಸಗುಣ-ಆಲಸ್ಯದಲ್ಲಿಯೂ, ಮಲಗಲು ಸುಖವಾದ ಸ್ಥಳವನ್ನು ಕಂಡಾಗ ನಿದ್ರೆಬಾರದಿದ್ದರೂ ಸುಮ್ಮನಾದರೂ ಹೊರಳಾಡು ವುದರಲ್ಲಾದರೂ ಕಾಲಕಳೆಯುವನು. ಪ್ರಾಣರಕ್ಷಣೆಗೆಮಾತ್ರ ಮೃಗಗಳು ಭಯಪಡು ವುದು ಮಾತ್ರವಲ್ಲದೆ, ಉಳಿದಕಾಲದಲ್ಲೆಲ್ಲಾ ಸ್ವೇಚ್ಛೆಯಾಗಿ ಸ್ವತಂತ್ರವಾಗಿ ಆನಂದ ದಿಂದ ವಿಹರಿಸುತ್ತಿರುವುವು. ಮಾನವನು ಪ್ರಾಣರಕ್ಷಣೆಗೆ ಭಯಪಡುವುದೂ ಅಲ್ಲದೆ, ಭೂತಪಿಶಾಚಿಗಳಿಗೂ, ಲಕ್ಷಣ ಅವಲಕ್ಷಣಗಳಿಗೂ, ಕಡೆಗೆ ಜನರಿಗೂ ಕೂಡ ದಿವಾ ರಾತ್ರಿಯೂ ಭಯಪಡುತ್ತಲೇ ಇರುವನು. ಪಶುಗಳು (ಮೃಗಗಳು) ಋತುಕಾಲದಲ್ಲಿ ಮಾತ್ರ ಮೈಥುನವನ್ನಪೇಕ್ಷಿಸುವುವಲ್ಲದೆ ಉಳಿದಕಾಲದಲ್ಲಿ ತನ್ನ ಸ್ತ್ರೀಯೊಡನೆ ಸೇರಿ, ವಿಹರಿಸಿ, ಭೋಗಿಸಿ, ಆನಂದದಿಂದ ಮೈಮರೆಯುವುದಿಲ್ಲ. ಪಶುವಿಗಿಂತ ಜ್ಞಾನವಂತ ನೆಂದು ಹೆಮ್ಮೆ ಕೊಚ್ಚಿಕೊಳ್ಳುವ ಮಾನವನಾದರೋ ಸತ್ಸಂತಾನವನ್ನು ಹೊಂದುವ ಉದ್ದೇಶದಿಂದಲ್ಲದೆ ಸ್ವಜ್ಞಾನವನ್ನು ಬಿಟ್ಟು, ಕಾಲ-ಅಕಾಲವೆನ್ನುವದನ್ನು ಮರೆತು, ಅಮಾವಾಸ್ಯ ಏಕಾದಶಿ ಮೊದಲಾದವುಗಳನ್ನು ಪಂಚಾಂಗದಿಂದ ಹೊರಗೆ ಹಾಕಿ, ರಾತ್ರಿ ಹಗಲೆನ್ನುವುದನ್ನೇ ವಿಚಾರಮಾಡದೆ, ಸ್ತ್ರೀಯರು ಜನಿಸಿರುವುದೇ ಪುರುಷರ

ಮೈಥುನಕ್ಕಾಗಿ ಎಂದು ಸಿದ್ಧಾಂತಮಾಡಿಕೊಂಡು, ಅವರ ಕಷ್ಟ, ಸುಖ, ಆರೋಗ್ಯ ಸ್ಥಿತಿಯಕಡೆ ಸ್ವಲ್ಪವೂ ಲಕ್ಷ್ಯಕೊಡದೆ ಅವರು ಕ್ಷಯವಾಗುವವರೆಗೂ (ಅವರಿಗೆ ಕ್ಷಯರೋಗವುಂಟಾಗುವವರೆಗೂ) ಬಿಡನು. ಮೃಗಗಳು ತಮ್ಮ ಸ್ತ್ರೀ ಜಾತಿಗೆ ಕೊಟ್ಟರುವಷ್ಟು ವಿರಾಮ, ವಿಶ್ರಾಂತಿ, ಆನಂದಸುಖವನ್ನು ಕೊಡಲು ಇವರಿಂದಾಗದು. ಅವರು ಸ್ತ್ರೀಯರಿಗೆ ಕೊಡುವ ಸುಖವು ಮೈಥುನವೇ! ಸ್ತ್ರೀಯರನ್ನೀರೀತಿ ನಡೆಸಿದರೂ ಕೂಡ ಅವರು ಯಾವುದಕ್ಕೂ ಅನರ್ಹರೆಂದು ಹೇಳುವುದು ಬೇರೆ. ಆಹಾ! ಎಂತಹ ಅಜ್ಞಾನ ಪ್ರಪಂಚವು! ಆ ಪರಮಾತ್ಮನಾದ ಶ್ರೀ ಕೃಷ್ಣನಿಗೆ ನಾವೆಲ್ಲರೂ ಸಂತಾನವೇ. ಅದರಲ್ಲಿ ಇಂದಾವರೂ ಸ್ತ್ರೀಪುರುಷ ಬೇಧಗಳು ಅಲ್ಲದೆ ಜ್ಞಾನದವಿಷಯದಲ್ಲೇನಾದರೂ ಬೇಧವಿರುವುದೇ? ಇದನ್ನೆಲ್ಲಾ ದೀರ್ಘವಾಗಿ ವಿಚಾರಿಸಿ ನೋಡಿದರೆ ಪಶುಪಕ್ಷಿಗಳಿಗಿಂತಲೂ ಮಾನವನೇ ಶ್ರೇಷ್ಠನೆಂದು ತಿಳಿದುಬರುವುದಲ್ಲವೇ? ಇವೆಲ್ಲಕ್ಕಿಂತ ಮಾನವನಿಗೆ ಜ್ಞಾನವು ವಿಶೇಷವಾಗಿರುವುದು. ಈ ಜ್ಞಾನದ ಸಹಾಯದಿಂದ ಧರ್ಮವನ್ನಾಚರಿಸುವುದು ಮಾನವನ ಕರ್ತವ್ಯವು.

ಆಹಾರ ನಿದ್ರಾಭಯ ಮೈಥುನಾದಿ
ಸಾಮಾನ್ಯಮೇತತ್ ಪಶುಭಿರ್ನರಾಣಾಂ
ಧರ್ಮೋವಿಶೇಷಃ ಖಲುಮಾನುಷಾಣಾಂ
ಧರ್ಮೇಣಹೀನಾ ಪಶುಭಿಸ್ಸಮಾನಾ ||

ಅಂದರೆ ಜ್ಞಾನರೂಪವಾದ ಧರ್ಮವನ್ನಾಚರಿಸದ ಮಾನವನು ಪಶುವಿಗಿಂತ ಹೀನನಾದವನೆಂದು ಭಾವವು. ಜ್ಞಾನವೆಂದರೇನು? ಧರ್ಮವೆಂದರೇನು? ಸದ್ಗುರುವಿನಿಂದ ಸದ್ವಿವೇಚನೆಯಿಂದ ತಾನೆಂಬುದನ್ನು ತಿಳಿದುಕೊಂಡು, ಸರ್ವಭೂತದಲ್ಲಿಯೂ ತನ್ನಲ್ಲಿಯೂ ನೆಲಸಿರುವ ಪರಮಾತ್ಮನೊಬ್ಬನೇ ಎಂದು ತಿಳಿದು, ಸುಖದುಃಖಕ್ಕೆ ಕಾರಣವು ನಾನಲ್ಲ; ನಾನೊಂದುನಿಮಿತ್ತಮಾತ್ರವೆಂದು ವಿಮರ್ಶೆಯಿಂದ ತಿಳಿದು, ತನ್ನ ಬುದ್ಧಿ ಬಲದಿಂದ ಸ್ವಧರ್ಮ ಕಾರ್ಯಗಳನ್ನಾಚರಿಸುವುದೇ ಧರ್ಮವು. ಜ್ಞಾನಭರಿತವಾದ ಮನಸ್ಸಿನಿಂದ ಸ್ವಧರ್ಮವನ್ನು ಯಾವಾಗಲೂ ಬಿಡದೆ ನಡೆಸುತ್ತಿರಬೇಕು. 'ಸ್ವಧರ್ಮಂ ನಿಧನಂಶ್ರೇಯಃ ಪರಧರ್ಮೋಭಯಾವಹಃ ||' ಸ್ವಧರ್ಮವೆಂದರೇನು? ಸ್ವಧರ್ಮವೆಂದರೆ-ನೋಕ್ಷಧರ್ಮವೆಂದರ್ಥವಲ್ಲ. ಸ್ವ-ಅಂದರೆ ತಾನು. ತಾನುಯಾರು?'ಜೀವನು' ಜೀವನು ಮಾಡಬೇಕಾದ ಧರ್ಮಕ್ಕೇ ಸ್ವಧರ್ಮವೆಂದು ಅರ್ಥವು. ಜೀವನುಮಾಡಬೇಕಾದ ಧರ್ಮವ್ಯಾವುದು? ಚಾತುರ್ವರ್ಣ ವ್ಯವಸ್ಥಾನುಸಾರವಾಗಿ ಶಾಸ್ತ್ರದಲ್ಲಿ

ಟಾರ್ಚ್‌ಲೈಟ್. (TORCH LIGHT)—

ಇದು ಮುಂಬೈಯಿಂದ ಹೊರಡುವ ಆಂಗ್ಲಭಾಷೆಯ ಸಾದಾತರದ ಒಂದು ಮಾಸಿಕವು. ಸಾಮಾಜಿಕ, ಸಾಹಿತ್ಯ, ಶಿಲ್ಪ ಮತ್ತು ವಿಜ್ಞಾನ ವಿನೋದಾದಿ ವಿವಿಧ ವಿಷಯಗಳಿಂದ ವಿಭೂಷಿತವಾದ ಈ ಪತ್ರಿಕೆಯು ಹಿರಿಯರಿಗಂತಲ್ಲ, ಕಿರಿಯರಿಗೂ ಪ್ರಯೋಜನೀಯವೆಂದು ಹೇಳಬಹುದು. ಶಾಲಾವಿದ್ಯಾರ್ಥಿಗಳು ವ್ಯರ್ಥವಾಗಿ ಕಾಲ ಕಳೆಯುವ ವೇಳೆಯಲ್ಲಿ ಇದನ್ನೋದಿಕೊಂಡರೆ ಸ್ವಲ್ಪ ಮನಸ್ಸಂತೋಷವಾಗದಿರದು. ಯತ್‌ಕಿಂಚಿತ್ ಲಾಭಾಂಶವೂ ಲಭಿಸಬಹುದು. ನಾವು ಈ ಪತ್ರಿಕೆಯ ಉತ್ತರೋತ್ತರ ವೃದ್ಧಿಯನ್ನಿಚ್ಛಿಸುತ್ತೇವೆ. ಅಚ್ಚು ಆಚ್ಚುಕಟ್ಟಾಗಿದೆ. ವಾರ್ಷಿಕಚಂದಾ ೩ ರೂ ಮಾತ್ರ. ಸಿಗುವಸ್ಥಳ:—

Mr. C. S. Narayana Row, M.A.,
Hornby House, Hornby Road, Fort, Bombay.

---

೧ ಕಾಲಿದಾಸನೂ ಅಧ್ಯಾತ್ಮಿಕ ವಿಚಾರಗಳೂ—ಈ ಚಿಕ್ಕ ಪ್ರಬಂಧವು ಬೆಂಗಳೂರು ಆರ್ಯ ಲೋವರ್‌ಸೆಕೆಂಡರೀ ಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀಯುತ ದೇವುಡು ನರಸಿಂಹಶಾಸ್ತ್ರಿ, ಎಂ.ಎ., ಯವರಿಂದ ಬರೆಯಲ್ಪಟ್ಟುದು. ಜಯಕರ್ನಾಟಕದಲ್ಲಿ ಮುದ್ರಿತವಾದ ಲೇಖನವು ಈಗ ಪುಸ್ತಕರೂಪದಲ್ಲಿ ಪ್ರಕಟಿತವಾಗಿದೆ. ಕಾಲಿದಾಸನ ಅರ್ಥಕ್ಕೆ ಲೇಖಕರು ನವೀನಾರ್ಥವನ್ನು ಕಲ್ಪಿಸಿರುವುದು ಮಾತ್ರವಲ್ಲದೆ, ವಾಚಕರ ಮನಸ್ಸಿಗೆ ಮಂದಟ್ಟಾಗುವಂತೆ ವಿವರಿಸಿ ಬರೆದಿರುವುದು ಅವರ ನೈಪುಣ್ಯವನ್ನು ವಿಶದಗೊಳಿಸುತ್ತದೆ. ನಮ್ಮ ಕನ್ನಡಿಗರಲ್ಲಿ ಇಂತಹ ರಚನಾಭಿರುಚಿಯಿರತಕ್ಕವರು ಕಡಮೆ. ಈ ಸಂದರ್ಭದಲ್ಲಿ ಮೇಲ್ಕಂಡ ಲೇಖಕರು ಈವಿಷಯದಲ್ಲಿ ಮುಂದರಿಯುತ್ತಿರುವುದು ಕನ್ನಡಿಗರ ಸುದೈವವೆಂದೇ ಹೇಳಬೇಕು. ಕನ್ನಡಿಗರು ಇವರ ಶ್ರಮವನ್ನರಿತು ಇವರನ್ನು ಉತ್ತೇಜನಗೊಳಿಸಿದರೆ ಇಂತಹ ಎಷ್ಟೋ ಮುತ್ತುಗಳು ಕರ್ನಾಟಕ ಕಾವ್ಯಮಾಲೆಗೆ ಪೋಣಿಸಲ್ಪಡಲು ಅವಕಾಶವಾಗುವುದು. ಕನ್ನಡಿಗರು ಲೇಖಕರಿಗೆ ಹುರುಪನ್ನುಂಟುಮಾಡುವರೆಂದು ನಂಬಿಕೆ. ಇದರ ಬೆಲೆ ತಿಳಿಸಿಲ್ಲ.

ಒಣಗಿಸಿದ ತೇಯೆಲೆ (ಟೀ)ಯನ್ನು ಧಗಧಗಿಸುವ ಕೆಂಡದಲ್ಲಿ ಉರಿಸುವುದರಿಂದ ಸೊಣ, ಸೊಳ್ಳೆಗಳು ಓಡಿಹೋಗುತ್ತವೆ.

* * *

ಗೃಹವಿಜ್ಞಾನ.

ನಿಂಬೆಹಣ್ಣನ್ನು ತುಂಡುಮಾಡುವ ಮೊದಲು ಸ್ವಲ್ಪಹೊತ್ತಿನವರೆಗೆ ಬಿಸಿನೀರಿನಲ್ಲಿಟ್ಟರೆ ಅದರಿಂದ ಹೆಚ್ಚು ರಸವು ಸಿಗುವುದು.

* * *

ತಲೆದಿಂಬನ್ನು ತುಂಬಿಸುವಾಗ ಚಿಂದಿ ಯಾ ಹತ್ತಿಯಲ್ಲಿ ಸ್ವಲ್ಪ ಕರ್ಪೂರ ಪೆರಿಕೆ ಮಾಡಿಟ್ಟರೆ ಅದು ಬೇಸಿಗೆ ಕಾಲದಲ್ಲಿ ತಂಪನ್ನುಂಟುಮಾಡುವುದು. ಮತ್ತು ಅದರಲ್ಲಿ ತಗಣಿಗಳೂ ಸೇರುವುದಿಲ್ಲ.

* * *

ಉಪ್ಪನ್ನು ಯಾವಾಗಲೂ ಮುಚ್ಚಿಡಬೇಕು. ಹಲ್ಲಿ (ಗೌಳಿ) ಕೂತುಕೊಂಡ ಉಪ್ಪನ್ನು ತಿಂದವನು ಕುಷ್ಠರೋಗಿಯಾಗುವನು.

* * *

ಬುದ್ಧಿವಂತೆಯರು ನಿಂಬೆಹಣ್ಣನ್ನು ಹಿಂಡಿದನೆಲೆ ಉಳಿದ ಸಿಪ್ಪೆಯನ್ನು ಬಿಸಾಡುವುದಿಲ್ಲ; ಅದನ್ನು ಉಪ್ಪಿನೊಂದಿಗೆ ಸೇರಿಸಿ, ಒತ್ತಾಕಿ ತಾಮ್ರದ ಪಾತ್ರೆಗಳನ್ನು ಬೆಳಗಲು ಉಪಯೋಗಿಸುತ್ತಾರೆ.

* * *

ನೀರಿನಲ್ಲಿ ಅದ್ದಿಹಿಂಡಿದ ಬಟ್ಟೆಯನ್ನು ಶೀಶೆಯ ಅಡಿಗೆ ಸುತ್ತಿ ಶೀಶೆಯೊಳಗೆ ಬಿಸಿ ಪದಾರ್ಥವನ್ನು ಹಾಕಿದರೆ ಅದು ಒಡೆಯುವುದಿಲ್ಲ.

* * *

ಕಾಯಿಪಲ್ಯಗಳನ್ನು ಬೇಯಿಸುವ ಕಾಲಕ್ಕೆ ಅದರಲ್ಲಿ ೧ ಚಮಚೆ ಸಕ್ಕರೆ ಸೇರಿಸಿದರೆ ಕಾಯಿಪಲ್ಲೆಯ ರಂಗು ಹಸುರಾಗಿಯೇ ನಿಲ್ಲುವುದು; ಮತ್ತು ರುಚಿಯೂ ಹೆಚ್ಚಾಗುವುದು.

* * *

ರೇಷ್ಮೆಬಟ್ಟೆಯನ್ನು ಉಟ್ಟುಕೊಂಡು ತಿರುಗಿ ತೆಗೆದಿಡುವಾಗ ಅದರ ನಿರಿಯನ್ನು ಬಿಡಿಸಿ, ಹಳೆಯ ಮಖ್‌ಮಲ್ಲಿನ ತುಂಡಿನಿಂದ ಉಜ್ಜುತ್ತಿದ್ದರೆ ರೇಷ್ಮೆವಸ್ತ್ರವು ಬಹು ಕಾಲ ಬಾಳುವುದು.

೦ ೦ ೦

ಮೃದುವಾದ ಫ್ರೆಂಚ್‌ಚಾಕ್ (ಸೀಮೆಸುಣ್ಣ)ದಿಂದ ತಿಕ್ಕಿದರೆ ಹಾರ್ಮೋನಿಯಂ ಪಿಯಾನ ಮೊದಲಾದವುಗಳ ಪರದೆ (ದಡಿ) ಯು ಸ್ವಚ್ಛವಾಗುತ್ತದೆ.

೦ ೦ ೦

ವಿಧಿಸಿರುವ ವ್ಯಾಪಾರಗಳೇ ಪ್ರತಿ ಜೀವನ ಧರ್ಮವು. ಚಾತುರ್ವರ್ಣ ವ್ಯವಸ್ಥಾನುಸಾರವಾಗಿಯೇ ಅಲ್ಲದೆ ಸ್ವಬುದ್ಧಿಪೂರ್ವಕವಾಗಿ ಯಾವ ಕರ್ಮವನ್ನೇ ಆಗಲಿ ಒಂದು ಕಾರ್ಯ ಯದವರೆಗೂ ಅನಲಂಬಿಸಿದರೆ ಅದೇ ಧರ್ಮವಾಗುವುದು. ಹಾಗಿಲ್ಲದೆ ತನ್ನ ಮನಬಂದಂತೆ ನಡೆದು, ತನ್ನ ಕರ್ತವ್ಯವನ್ನು ಬಿಟ್ಟು ನಡೆಯುವುದು ಒಂದು ಧರ್ಮವಲ್ಲ.

ಮಾನವನು ನಿದ್ರೆಯಲ್ಲಿಯೂ, ಎಚ್ಚರ್ತಿರುವಾಗಲೂ ತನ್ನ ಮತ್ತು ಇತರರ ಹಿತಸಾಧನೆಯಲ್ಲಿಯೇ ಇರುವುದನ್ನು ಅಭ್ಯಾಸಮಾಡಬೇಕು. ಇಷ್ಟೇ ಅಲ್ಲದೆ ರಾತ್ರಿ ಮಲಗಿರುವಾಗ ನನ್ನಿಂದ ಎಷ್ಟು ಜನಕ್ಕೆ ಹಿತವಾಯಿತು, ಎಷ್ಟು ಜನರಿಗೆ ಅಹಿತವಾಯಿತು, ಎಷ್ಟು ಮಂದಿಗೆ ಜ್ಞಾನವುಂಟುಮಾಡಿದೆನು, ಎಷ್ಟು ಜನರಿಗೆ ಮೂಢವುಂಟುಮಾಡಿದೆನು. ನಾನು ನಿನ್ನೆಯಿದ್ದ ಸ್ಥಿತಿಯಲ್ಲಿಯೇ ಇದ್ದೇನೆಯೇ ಅಥವಾ ನಿನ್ನೆಗಿಂತ ಉತ್ತಮಸ್ಥಿತಿಗೆ ಬಂದಿರುನೆನೇ ಎಂದು ಯೋಚಿಸಿ ತನ್ನಲ್ಲುಂಟಾಗುವ ತಾರತಮ್ಯವನ್ನರಿತುಕೊಂಡು ಇಂದಿಗಿಂತ ನಾಳೆ ಉತ್ತಮಸ್ಥಿತಿಗೆ ಬರಲು ಪ್ರಯತ್ನಿಸುವುದು ಮಾನವನ ಪ್ರಥಮ ಧರ್ಮವು. ಸ್ವಧರ್ಮದಿಂದಲೇ ಜೀವನಿಗೆ ತನ್ನ ಆತ್ಮವನ್ನುದ್ಧರಿಸುವ ಶಕ್ತಿಯುಂಟಾಗುವುದು.

"ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್
ಆತ್ಮೈವ ಹ್ಯಾತ್ಮನೂ ಬಂಧುರಾತ್ಮೈವರಿಪುರಾತ್ಮನಃ"

ಎಂದು ಶ್ರೀ ಕೃಷ್ಣ ಭಗವಂತನು ಅರ್ಜುನನಿಗೆ ಹೇಳಿದಂತೆ ತನ್ನ ಸ್ವಧರ್ಮವೇ ತನ್ನ ಆತ್ಮವನ್ನುದ್ಧರಿಸುವ ಬಂಧುವಾಗುವದು. ಇದನ್ನು ಬಿಟ್ಟರೆ ತನ್ನಾತ್ಮಕ್ಕೆ ತಾನೇ ಶತ್ರುವಾಗುವನು. ಪ್ರತಿ ನಿಮಿಷದಲ್ಲಿಯೂ ತನ್ನ ಪ್ರಗತಿಯನ್ನೂ, ತನ್ನಿಂದ ಇತರರಿಗೆ ಹಿತವಾಗುವುದೇ ಎನ್ನುವುದನ್ನೂ ಚಿಂತಿಸುತ್ತಿರಬೇಕು. ಮತ್ತೊಬ್ಬರ ಹಿತವನ್ನು ಉಪದೇಶದ ಮೂಲಕವಾಗಿಯೂ, ಕಾರ್ಯದ ಮೂಲಕವಾಗಿಯೂ, ಸೇವೆಯ ಮೂಲಕವಾಗಿಯೂ ಮಾಡಬೇಕು. ಈ ಮೂರು ಉಪಾಯದಿಂದಲೂ ಜನರಿಗೆ ಹಿತವುಂಟುಮಾಡಲಾರದೇ ಹೋದಾಗ ಇನ್ನೂ ತನ್ನನ್ನು ತಾನೇ ತಿದ್ದಿಕೊಳ್ಳಬೇಕಾಗಿರುವುದೆಂದು ತಿಳಿದು ಅದಕ್ಕೆ ತಕ್ಕ ಪ್ರಯತ್ನವನ್ನು ಶಿಕ್ಷೆ, ಅಪೇಕ್ಷೆ, ಪ್ರೇಮ ಈ ಮೂರು ಉಪಾಯಗಳಿಂದ ಮಾಡಿ, ತನ್ಮೂಲಕ ಜನರ ತಿದ್ದುವಿಕೆಯನ್ನು ಮಾಡಬೇಕು. ಮಹಾತ್ಮಾ ಗಾಂಧಿಯವರು ಹೇಗೆ ತನ್ನನ್ನು ತಾನು ಯಾವ ವಿಧವಾಗಿ ಉಪವಾಸೇತ್ಯಾದಿ ನೇಮ ನಿಷ್ಠಾ ದೀಕ್ಷೆಗಳಿಂದ ತಿದ್ದಿಕೊಳ್ಳುವರೋ, ಹಾಗೆಯೇ ಪ್ರತಿಯೊಬ್ಬ ಮಾನವನೂ ತನ್ನನ್ನು ತಾನೇ ತಿದ್ದಿಕೊಂಡು ಧರ್ಮಕಾರ್ಯದಲ್ಲುದ್ಯುಕ್ತ

ನಾಗಬೇಕು. ಜನ್ಮವೆತ್ತಿದಂದಿನಿಂದ ಮೇಲ್ಕಂಡ ಗುಣಗಳು ಪೂರ್ತಿಯಾಗಿದ್ದರೆ ಅವರನ್ನು ಅವತಾರ ಪುರುಷರೆಂದು ಕರೆಯುತ್ತಾರೆ. ಕೆಲವರಿಗೆ ಮೇಲ್ಕಂಡವುಗಳು ಹುಟ್ಟುಗುಣಗಳಾಗಿರುವವು. ಕೆಲವರಿಗೆ ಸ್ಥಿತಿ ಪರಿಸ್ಥಿತಿಗಳ ಮೂಲಕ ಉಂಟಾಗುವುದು. ಮೇಲ್ಕಂಡ ಎರಡು ವಿಧವಾಗಿಯೂ ಬಾರದಿದ್ದವರಿಗೆ ಅಭ್ಯಾಸ ಬಲದಿಂದ ಖಂಡಿತ ಉಂಟಾಗುವುದು. ಮನಸ್ಸು ಚಂಚಲವಾದರೆ ಅದನ್ನು ನಿಗ್ರಹಿಸಿದರೆ ಎಂತಹ ದುರ್ಘಟ ವಿಷಯಗಳೂ ಸಾಧ್ಯವಾಗುವುದರಲ್ಲಿ ಸಂದೇಹವಿಲ್ಲ. ಅಲ್ಲದೆ,

"ಅಭ್ಯಾಸೇನತು ಕೌಂತೇಯ ವೈರಾಗ್ಯೇಣಚ ಗೃಹ್ಯತೇ" ಅಭ್ಯಾಸದಿಂದಲೂ, ವೈರಾಗ್ಯದಿಂದಲೂ, ಮನಸ್ಸನ್ನು ಸ್ವಾಧೀನಪಡಿಸಿಕೊಳ್ಳುವುದರಿಂದಲೂ ತನ್ನ ಧರ್ಮವನ್ನು ಸುಲಭವಾಗಿ ಮಾಡಬಹುದು. ತಾನಪೇಕ್ಷಿಸಿದ ಒಂದು ವಸ್ತುವು ತನಗೆ ದೊರಕದೇ ಹೋದಾಗ ಹೇಡಿತನದಿಂದ ತಾಮಸಬುದ್ಧಿಯುಳ್ಳವನಾಗಿ ತಾನಪೇಕ್ಷಿಸಿದ ವಸ್ತುವನ್ನೇ ಚಿಂತಿಸುತ್ತ ಬಾಹ್ಯದಲ್ಲಿ ವೈರಾಗ್ಯವನ್ನು ಅಭಿನಯಿಸುವುದು ನಿಜವಾದ ವೈರಾಗ್ಯವಲ್ಲ. ಕೌರವ ಯುದ್ಧದಲ್ಲಿದ್ದ ಸೇನಾವ್ಯೂಹದ ಮಧ್ಯೆ ಕೃಷ್ಣಭಗವಂತನು ಅರ್ಜುನನ ರಥವನ್ನು ನಿಲ್ಲಿಸಿದಾಗ ಅರ್ಜುನನು ಎರಡು ಕಡೆಯ ಸೇನೆಯನ್ನೂ ನೋಡಿ ಭ್ರಮಿಸಿದವನಾಗಿ

"ನಕಾಂಕ್ಷೇ ವಿಜಯಂ ಕೃಷ್ಣ ನಚರಾಜ್ಯಂ ಸುಖಾನಿಚ |
ಕಿಂನೋರಾಜ್ಯೇನ ಗೋವಿಂದ ಕಿಂಭೋಗೈರ್ಜೀವಿತೇನವಾ"

ಎಂದು ಮನೋಬಲವಿಲ್ಲದೆ ಹೇಡಿತನದಿಂದ ವೈರಾಗ್ಯವನ್ನು ತಾಳಿದ್ದರ ಹೆಸರು ವೈರಾಗ್ಯವಲ್ಲ. ವೈರಾಗ್ಯದ ಶ್ರೇಷ್ಠಾರ್ಥವು:—

"ಅಂತರ್‌ತ್ಯಾಗ ಬಹಿರ್‌ಭೋಗ ಅಂತರೇಕೋ ಬಹಿರ್‌ನಾನಾ
ಅಂತರ್ ಬಾಲಾ ಬಹಿರ್ ಯುವಃ"

ಎಂದು ಹೊರಗೆ ಎಷ್ಟೇ ಭೋಗಿಯಾಗಿದ್ದರೂ ಅಂತರಂಗದಲ್ಲಿ ತ್ಯಾಗಿಯಾಗಿರುವುದೇ ವೈರಾಗ್ಯವು. ತಾನು ಮಾಡುವ ಕಾರ್ಯದಲ್ಲುಂಟಾಗುವ ಜಯಾಪಜಯಗಳನ್ನು ಸಮವಾಗಿ ಭಾವಿಸಿ ತನ್ನ ಕರ್ತವ್ಯ ಕಾರ್ಯವು ಮಾತ್ರ ತನಗೆ ಸೇರಿದ್ದೆಂದೂ, ಅದರ ಫಲಾಫಲಗಳು ತನ್ನದಲ್ಲವೆಂದೂ ತಿಳಿದು ಅಷ್ಟಕ್ಕೇ ಆನಂದಪಟ್ಟು ತನ್ನ ಕಾರ್ಯವನ್ನು ನೆರವೇರಿಸುವುದೇ ವೈರಾಗ್ಯವು.

"ಆತ್ಮ ಒಂದೇ ಎಂದು ತಿಳಿದುಕೊಳ್ಳಲುಬೇಕು.
ದ್ವಂದ್ವಮಯ ಪ್ರಗತಿಯೋಳ್ ತಾರತಮ್ಯವು ಬೇಕು.

ಬಹು ಜನರ ಹಿತವೊಂದೆ ಧರ್ಮವಾಗಲು ಬೇಕು.
ಕಾಮಕ್ರೋಧವ ಗೆದ್ದು ಧರ್ಮ ಯೋಚಿಸಬೇಕು.
ದಶಗುಣಂಗಳನೆಲ್ಲ ಅರಿತು ನಡೆಸಲುಬೇಕು.
ಯೋಗ್ಯಾಗತ್ಯವನೇ ಭೋಗ್ಯವಾಗಿಡಬೇಕು.
ದೇಶ ಕಾಲವನರಿತು ಕಾರ್ಯ ಹೊಂದಿಸಬೇಕು.
ಈ ತೆರದಿ ಜಗಹಿತವ ಮಾಡದವನೇ ಷಂಡ ಕಲಿಯುಗದೋಳ್''

ಮಾನವನು ಯಾವಾಗಲೂ ತನ್ನ ತನುವಿಗೆ ಯೋಗ್ಯ ಮತ್ತು ಅಗತ್ಯವಾದ ಆಹಾರವನ್ನೇ ಭುಜಿಸಬೇಕು. ಆಹಾರದಲ್ಲಿ ನಿಯಮವಿಲ್ಲದಿದ್ದರೆ ಮನಸ್ಸನ್ನು ನಿಗ್ರಹಿಸುವುದು ಅತಿ ಕಷ್ಟವು. ಬಾಹ್ಯೇಂದ್ರಿಯಗಳೆಲ್ಲಕ್ಕಿಂತಲೂ ನಾಕ್ಕು ಶ್ರೇಷ್ಠವು. ಮಾತನ್ನು ನಿಗ್ರಹಿಸುವುದು ಮಾನವನ ಪ್ರಥಮ ಕರ್ತವ್ಯವು. ವಾಕ್‌ನಿಗ್ರಹದಿಂದ ತನುಮನಗಳು ಕೂಡ ಆರೋಗ್ಯಸ್ಥಿತಿಯನ್ನು ಹೊಂದುವುವು. ದೇಹದಂತೆಯೇ ಮನಸ್ಸನ್ನೂ ಕೂಡಾ ಆರೋಗ್ಯಸ್ಥಿತಿಯಲ್ಲಿಟ್ಟುಕೊಂಡು ಅನೇಕ ಮಹಾತ್ಮರ ಮತ್ತು ಸಾಧುಪುರುಷರ ಆದರ್ಶಗಳನ್ನು ನಮ್ಮ ಜೀವಿತದ ಧ್ಯೇಯವನ್ನಾಗಿಟ್ಟುಕೊಂಡು ಅವರಂತೆ ನಾವೂ ಆಗಬೇಕೆನ್ನುವ ದೃಢಸಂಕಲ್ಪದಿಂದ, ಧ್ಯಾನದಿಂದ, ಅಭ್ಯಾಸದಿಂದ ಜೀವಿತವನ್ನು ಕಳೆಯಲೆತ್ನಿಸಬೇಕು.

'' ಯದ್ಭಾವಂ ತದ್ಭವತಿ ''

ಮಾನವನು ಹೇಗಾಗಬೇಕೆಂದು ಭಾವಿಸಿದರೆ ಅದು ನಿಶ್ಚಯವಾಗಿಯೂ ಸಿದ್ಧಿಸುವುದು. ಮಾನವನಿಗೆ ಯೋಚಿಸಲು ಜ್ಞಾನವಿದೆ, ವಿವೇಕವಿದೆ. ಪಶುವಿಗೀ ಜ್ಞಾನವಿಲ್ಲ. ಮಾನವನು ಈ ಜ್ಞಾನದಿಂದಲೇ ಜನ್ಮ ಸಾರ್ಥಕಮಾಡಿಕೊಳ್ಳುವನು. ಆದುದರಿಂದಲೇ '' ಉತ್ತಮಂ ಮಾನುಷಂ ಜನ್ಮ ಜಂತೂನಾಂ ನರಜನ್ಮ ದುತ್ತಮಂ '' ಎಂದು ಶಾಸ್ತ್ರಗಳು ಸಾರುತ್ತಿರುವವು.

ಸಾಹಿತ್ಯ ಸಮಾಲೋಚನೆ.

ಶ್ರೀ ತುಲಸೀದಾಸ ರಾಮಾಯಣ:—ಅನುವಾದಕ: ಶ್ರೀ. ದ. ಕೃ. ಭಾರದ್ವಾಜರು, "ಆನಂದಾಶ್ರಮ", ಬಸವನಗುಡಿ, ಬೆಂಗಳೂರು.

ವಿಷಯ:—ತುಲಸೀದಾಸ ರಾಮಾಯಣವು ಹಿಂದೀ ಭಾಷೆಯ ಶ್ರೇಷ್ಠತಮ ಗ್ರಂಥಗಳಲ್ಲೊಂದಾಗಿದೆ. ಇದು ಸಾಮಾಜಿಕ ಸುಖಸಾಧನದ ಮಾರ್ಗ ದರ್ಶಕವು. ಮತ್ತು ಸಾಧುಸಂತರ ಪಠ್ಯ ಗ್ರಂಥವು. ಧಾರ್ಮಿಕ ಪವಿತ್ರಾಚರಣೆಗಳು ಮೂಲೆ ಗೊತ್ತಲ್ಪಟ್ಟು ಬಾಹ್ಯಾಡಂಬರದ ಬೆಡಗು ದಿನೇದಿನೇ ಬೆಳೆಯುತ್ತಿರುವ ಕಾಲದಲ್ಲಿ ರಚಿತವಾದುದರಿಂದ ಈ ಪವಿತ್ರ ಗ್ರಂಥವು ಯಾವತ್ತೂ ಸಾಮಾಜಿಕ ನೀತಿ ರೀತಿಗಳನ್ನು ಒಳಗೊಂಡಿದೆ. ಜಗದ್ವಂದ್ಯ ಮಹಾತ್ಮಾ ಗಾಂಧಿಯವರನ್ನು ಹಿಂದೂ ಧರ್ಮವನ್ನು ಬಿಟ್ಟು ಅನ್ಯಧರ್ಮಾವಲಂಬಿಗಳಾಗದಂತೆ ಮಾಡಿದ ಪರಮೋತ್ಕೃಷ್ಟ ಗ್ರಂಥವೇ ತುಲಸೀ ರಾಮಾಯಣವು; ಎಂದಮೇಲೆ ಇನ್ನಿದರ ಮಾಹಾತ್ಮ್ಯವನ್ನು ವಾಚಕರೇ ಊಹಿಸಲಿ. ಸಾಹಿತ್ಯದ ವೃಷ್ಟಿಯಿಂದಂತೂ ಇದರ ಉತ್ಕೃಷ್ಟತೆಯು ಅನ್ಯಾನ್ಯ ಭಾಷೆಗಳಲ್ಲಾಗುತ್ತಿರುವ ಇದರ ಭಾಷಾಂತರಗಳಿಂದಲೇ ವ್ಯಕ್ತವಾಗುತ್ತದೆ. ದೇಶೀಯ ಭಾಷೆಗಳಲ್ಲಲ್ಲದೆ ಇಂಗ್ಲೀಷು ಮೊದಲಾದ ಪಾಶ್ಚಾತ್ಯ ಭಾಷೆಗಳಲ್ಲೂ ಇದರ ತರ್ಜುಮೆಯಾಗಿದೆ. ಪ್ರಕೃತ ಕನ್ನಡದಲ್ಲಿಯೂ ಅದರ ಭಾಷಾಂತರವಾದದ್ದು ನೋಡಿದರೆ ನಮ್ಮ ಸಾಹಿತ್ಯದಲ್ಲಿದೊಂದು ಅಭಾವವು ದೂರವಾಯಿತೆಂದು ಧಾರಾಳವಾಗಿ ಹೇಳಬಹುದು. ಕರ್ನಾಟಕ ಸಾಹಿತ್ಯ ನಂದನವನದಲ್ಲಿ ತುಲಸೀರಾಮಾಯಣದ ಭಾಷಾಂತರದಿಂದ ತುಲಸಿಯ ಪರಿಮಳವು ಬೀರಿತೆಂದು ನಮ್ಮ ಅಭಿಮತವು. ಅದರ ಸುಗಂಧವನ್ನು ಸೇವಿಸಿ ಕೃತಾರ್ಥರೆನಿಸುವ ಕನ್ನಡಿಗರ ಸಂಖ್ಯೆಯು ದಿನೇದಿನೇ ಹೆಚ್ಚಲೆಂದು ಹಾರೈಸುವೆವು. ದಯಾಳುಗಳಾದ ನಮ್ಮ ಸರ್ಕಾರದವರು ಕೂಡ ವಿದ್ಯಾಲಯ, ವಾಚನಾಲಯಗಳಿಗೆ ಈ ಗ್ರಂಥವನ್ನು ಶಿಪಾರಸ್ ಮಾಡಿರುವುದು ಪರಮ ಶ್ಲಾಘನೀಯವು. ಇದರಂತೆ ಮುಂಬಯಿ, ಮದರಾಸ್ ವಿದ್ಯಾಖಾತೆಯವರು ಮಾಡಿದರೆ ಒಳ್ಳೆಯದು.

ಸರಸ್ವತಿಯ ಭಕ್ತರೆಲ್ಲರೂ ತುಲಸೀರಾಮಾಯಣದ ಗ್ರಾಹಕರಾಗಬೇಕೆಂಬುದೇ ನಮ್ಮ ಪ್ರಾರ್ಥನೆ.

ವಾರ್ಷಿಕಚಂದಾ—ಸಾಧಾರಣಕಾಗದ ರೂ. ೪-೦-೦

ಉತ್ತಮಕಾಗದ ೫-೦-೦, ಬಿಡಿಸಂಚಿಕೆ ೦-೮-೦

ನೀರಿನಲ್ಲಿ ಜೇನಿನ ಒಂದು ತೊಟ್ಟು ಹಾಕಲು ಅದು ಕರಗದೆ ಇವಕ್ಕಿದ್ದಂತೆ ಇದ್ದರೆ ಉತ್ತಮ ಜೇನುತುಪ್ಪವು; ಕರಗಿದರೆ ಅದು ಬೆರಿಕೆಯೆಂದರ್ಥವು.

೦ ೦ ೦

ಸ್ವಲ್ಪ ಹಾಲಿನಲ್ಲಿ ಮೂರುತೊಟ್ಟು ನೈಟ್ರಿಕ್ ಆಸಿಡ್ ಹಾಕಿದರೆ ಹಾಲು, ನೀರು ಬೇರೆ ಬೇರೆಯಾಗುವುದು. ಇದರಿಂದ ಒಳ್ಳೆಯ ಹಾಲನ್ನು ಗೊತ್ತುಹಚ್ಚಬಹುದು.

೦ ೦ ೦

ಒಂದು ಶೀಶೆಯಲ್ಲಿ ಶುದ್ಧ ಹಾಲನ್ನೂ, ಮತ್ತೊಂದರಲ್ಲಿ ನೀರು ಬೆರಸಿದ ಹಾಲನ್ನೂ ತುಂಬಿಸಿ ತೂಕಮಾಡಿದರೆ ಹಗುರವಾದ ಬಾಗವು ನೀರು ಬೆರೆತ ಹಾಲಿನ ವೆಂದು ತಿಳಿಯಬೇಕು.

೦ ೦ ೦

ಭಂಗಾರದ ಆಭರಣಗಳ ಮೇಲೆ ಎರಡು ತೊಟ್ಟು ನೈಟ್ರಿಕ್ ಆಸಿಡ್ ಹಾಕಿದ ಕೂಡಲೆ ಅಲ್ಲಿ ಬಿಳೀಕಳೆ ಬಂದರೆ ಅದು ಬೆಟ್ಟಿ ಭಂಗಾರವೆಂದರ್ಥವು.

೦ ೦ ೦

ಬಿಳಿಕಾಗದದಮೇಲೆ ಪನ್ನೀರನ್ನು, ಅತ್ತರನ್ನು ಎರಡು ತೊಟ್ಟು ಚಿಮುಕಿಸಿ ಅದನ್ನು ಬೆಂಕಿಯ ಏರಿಯಲ್ಲಿ ಹಿಡಿದಾಗ ಕಳೆ ಹಾರಿಹೋದರೆ ಅದು ತಾಜಾ ಅತ್ತರ್

೦ ೦ ೦

ಬೆಂಕಿಯಲ್ಲಿ ಹಾಕುತ್ತಲೇ ಗಮಗಮಿಸುವ, ವಾಸನೆಕೊಡುವ ಹಿಂಗು ಶುದ್ಧವಾದುದು.


ಸುಮನ ಸಂಚಯ.

ವಿವಾಹ ಸಂಬಂಧವಾದ ಕೆಟ್ಟ ಕಟ್ಟಳೆಗಳ ಸುಧಾರಣೆಯಾಗುವುದು ಹೇಗೆ? ವ್ಯಾಖ್ಯಾನಗಳಿಂದ ಎಷ್ಟು ಕಾರ್ಯವಾಗಬಹುದು? ನೀತಿಶಿಕ್ಷಣದಲ್ಲಿ ಈ ತರದ ಸುಧಾರಣೆಯ ಮೂಲವಿದೆ. ನೀತಿಶಿಕ್ಷಣವೆಂದರೆ ಯಾರಿಗೆ ತಿಳುವಳಿಕೆಯಿದೆಯೋ ಅವರು ಅದನ್ನು ಅನುಷ್ಠಾನದಲ್ಲಿ ಕಾರ್ಯರೂಪಕ್ಕೆ ತರುವುದು ಮತ್ತು ಹಾಗೆ ಮಾಡುವುದರಿಂದ ಉಂಟಾಗುವ ಕಷ್ಟಗಳನ್ನು ಸಹಿಸುವುದು.

ವಿಧವಾ ವಿವಾಹವು ಅವಶ್ಯಕವು. ಯುವಕವರ್ಗವು ಶುದ್ಧಿಯಾದಾಗಲೇ ಇದು ಸಾಧ್ಯವಾಗುವುದು. ಆದರೆ ಯುವಕರಲ್ಲಿ ಅಂತಹ ಶುದ್ಧಿಯೆಲ್ಲಿದೆ? ಅವರು ತಮ್ಮ ಶಿಕ್ಷಣದ ಸದ್ವಿನಿಯೋಗವನ್ನು ಮಾಡುತ್ತಿರುವರೆ?.....ಶಿಕ್ಷಿತರೆನಿಸಿದವರೆಷ್ಟು

ತಮ್ಮಲ್ಲಿಯ ಬಾಲವಿಧವೆಯರ ಜೀವನವನ್ನು ಸುಧಾರಿಸಿರುವರು. ಸ್ತ್ರೀಜಾತಿಯನ್ನು ಮಾತೃ ಹಾಗೂ ಭಗಿನೀವರ್ಗವೆಂದು ತಿಳಿದು, ಅವರ ರಕ್ಷಣೆಯನ್ನು ಎಷ್ಟು ಜನರು ಮಾಡಿರುವರು? ತಮಗೆ ಸತ್ಯವೆಂದು ತಿಳಿದುದನ್ನು ಎಷ್ಟು ಜನರು ಆಚರಿಸಿರುವರು ಯಾರ ಬಳಿಗೆ ಹೋಗಿ ವಿಧವೆಯು ತನ್ನ ಕಷ್ಟ ನಿಷ್ಠೂರಗಳನ್ನು ವಿವರಿಸಬಲ್ಲಳು ನಾನು ವಿಧವೆಯರ ವಕಾಲತ್ತನ್ನಾದರೂ ಯಾರಮುಂದೆ ವಹಿಸಲಿ? ಯಾರು ಪ್ರೋತ್ಸಾಹಕೊಡಲಿ? ಎಷ್ಟು ಮಂದಿ ಬಾಲವಿಧವೆಯರು 'ನವಜೀವನ' ವನ್ನು ಓದುತ್ತಾರೆ? ಓದಿದವರಲ್ಲೆಷ್ಟುಮಂದಿ ಅದರಂತೆ ಆಚರಿಸಿರುವರು? ಆದರೂ ಅವಶ ಬಿದ್ದಾಗ 'ನವಜೀವನ' ದಲ್ಲಿ ವಿಧವೆಯರ ಆರ್ತನಾದವನ್ನು ಪ್ರಕಟಪಡಿಸುತ್ತೇನೆ (ಆದ್ದರಿಂದ ಹಿಂದೀ ಭಾಷೆಯನ್ನು ಕಲಿತರೆ ಮಹಾತ್ಮರ ದಿವ್ಯ ವಾಣಿಯನ್ನು ಓದಬಹುದು. ಪ್ರಕೃತ ಸೌಭಾಗ್ಯವಶದಿಂದ ನವಜೀವನದ ಭಾಷಾಂತರವು ಉಡು ಪಿಯ ಸಾಪ್ತಾಹಿಕ 'ಸತ್ಯಾಗ್ರಹ' ಯಲ್ಲಿ ಮಾತ್ರ ಪ್ರಕಟವಾಗುತ್ತಿದೆ.) ಸುಸಮಯ ಬಂದರೆ ಇನ್ನೂ ಹಾಗೆ ಮಾಡುವೆನು. ಅದುತನಕ ದೃಢತೆಯಿಂದ ಇಷ್ಟುಮಾತ್ರ ಹೇಳಲಿಚ್ಛಿಸುತ್ತೇನೆ: ಯಾರ ಆಶ್ರಯದಲ್ಲಿ ಬಾಲವಿಧವೆಯವರಿರುವರೋ, ಅವರು ಅವರಿಗೆ ವಿವಾಹಮಾಡಿಕೊಡುವುದು ನಿಜಧರ್ಮವೆಂದು ತಿಳಿಯಬೇಕು.

'ಭಾರತ ಭಾಗ್ಯವಿಧಾತಾ' ಮಹಾತ್ಮ ಗಾಂಧಿ



ಹಿಂದೂ ಜಾತಿಯ ಕೋಶದಲ್ಲಿ ಮೂರು ದೊಡ್ಡದೊಡ್ಡ ಛಿದ್ರಗಳಿವೆ. ಅದರಿಂದ ಜೀವನವು ತಡೆಯಿಲ್ಲದೆ ಹೊರಸೂಸುತ್ತದೆ. ಅದು ಖಾಲಿಯಾಗದಂತೆ ಭರ್ತಿಯನ್ನು ಪೂರ್ತಿಮಾಡುವ ಉಪಾಯವೊಂದೂ ಕಾಣುವುದಿಲ್ಲ. ಬರಿದಾಗುವ ಸ್ಥಳವು ಬರಿದಾಗಿಯೇ ಉಳಿಯುತ್ತದೆ. ಬರಿದಾಗುವ ಅಂಶವು, ಭರ್ತಿಯಾಗದಂಥಾ ಸ್ಥಿತಿಯು ಯಾವ ಕೋಶಕ್ಕಿದೆಯೋ ಅದು ಇಂದಲ್ಲವಾದರೆ ನಾಳೆ ಬರಿದಾಗಿಯೇ ಹೋಗುತ್ತದೆ ಕಡಿನೆಯಾಗುತ್ತಲೇ ಇದ್ದರೆ ಕುಬೇರನ ಖಜಾನೆಯೂ ಖಾಲಿಯಾಗುವುದು ನದಿಗಳು ಸಮುದ್ರಕ್ಕೆ ಸೇರದಿದ್ದರೆ ಒಂದು ದಿನ ಅವೂ ಬತ್ತಿಹೋಗಬಹುದು. ಸೃಷ್ಟಿಯ ನಿಯಮವು ಹಿಂದೂಜಾತಿಗೊಂದುರೀತಿ ಬೇರೆಯಾಗುವುದಿಲ್ಲ. ಅಸ್ಪೃಶ್ಯ, ವಿಧವಾರ್ಯರ ಹಾವಳಿ ಮತ್ತು ವಿಧವೆಯರ ದುರವಸ್ಥೆ ಇವೇ ಮೇಲೆಕಂಡ ಮೂರು ಛಿದ್ರಗಳು. ಈ ಮೂರು ಮಾತುಗಳ ಕಡೆಗೆ ಧರ್ಮಧುರೀಣರೆನಿಸಿದವರು ಸಮಾಜ ಸುಧಾರಣೆಮಾಡಲು ಮುಂದುವರಿದು ಬರುವ ದಿನವೇ ಸುದಿನ. ಶಾಸ್ತ್ರವೇತ್ತರೆಂಬವರ ಗೊಡ್ಡು ಸಿದ್ಧಾಂತಗಳನ್ನು ಇನ್ನಾದರೂ ಬಿಡಲಿ!

'ಪತಿತಪಾವನ' ಸ್ವಾಮಿ ಶ್ರದ್ಧಾನಂದ